ಧರ್ಮಾರ್ಥ ಸಾಹಿತ್ಯ

ಯೋಗವಾಸಿಷ್ಠದ ಸಾರ

ಭಗವತೀ
ಚೂಡಾಲಾ ಆಖ್ಯಾನ

ಲೇಖಕರು :
ಶ್ರೀ ಮೂರ್ತಿ

ಪ್ರಕಾಶಕರು :
ಶ್ರೀ ದತ್ತಾಶ್ರಮ, ಆರ್. ನುಲೇನೂರು
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲಾ

ಧರ್ಮಾರ್ಥ ಸಾಹಿತ್ಯ

ಯೋಗವಾಸಿಷ್ಠದ ಸಾರ

ಭಗವತೀ ಚೂಡಾಲಾ ಆಖ್ಯಾನ

ಲೇಖಕರು :

ಶ್ರೀ ಮೂರ್ತಿ

ಪ್ರಕಾಶಕರು :

ಶ್ರೀ ದತ್ತಾತ್ರೇಯ, ಆರ್. ನುಲೇನೂರು

ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲಾ

OPINION OF SWAMI RAMA TIRTHA

"One of the greatest books, the most wonderful according to me, ever written under the Sun, is 'Yogavasista', which nobody on the earth can read without realizing God-Consciousness, nobody can read through without becoming One with the All."

And in another lecture in the same country (America) viz., " World's Spiritual Debt to India" Swami Rama said, "So all your new thought is the old, antiquated thought of Hindus ....Such as the Yogavasistha which deals with all the new thought of America. This work is clear, comprehensive and is written in real and true poetry.

ಸ್ವಾಮಿ ರಾಮತೀರ್ಥರ ಅಭಿಪ್ರಾಯ

"ಸೂರ್ಯನಿಂದ ಪೋಷಿತವೂ ಸೂರ್ಯನೇ ಸಮಸ್ತಕ್ಕೂ ಸಾಕ್ಷಿಯೂ ಆತ್ಮನೂ (ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ) ಆಗಿರುವ ಈ ಜಗತ್ತಿನಲ್ಲಿ ನನ್ನ ಅಭಿಪ್ರಾಯದಂತೆ ಅತ್ಯಂತ ಶ್ರೇಷ್ಠವೂ ಅತ್ಯಂತ ಅದ್ಭುತವೂ ಆದ ಗ್ರಂಥವೆಂದರೆ **ಯೋಗವಾಸಿಷ್ಠವು.** ಈ ಜಗತ್ತಿನಲ್ಲಿ ಅದನ್ನು ಯಾರೇ ಓದಲಿ, ಅವರಿಗೆ ಪರಮಾತ್ಮಜ್ಞಾನವಾಗದೇ ಇರುವದಿಲ್ಲ. ಅವರಿಗೆ 'ಸರ್ವೋಽಹಂ' 'ಸರ್ವವೂ ನಾನೇ' ಎಂಬ ಅನುಭವವಾಗದೇ ಇರುವದಿಲ್ಲ."

ಸ್ವಾಮಿ ರಾಮತೀರ್ಥರು ಅಮೆರಿಕಾದಲ್ಲಿ ಮಾಡಿದ ಇನ್ನೊಂದು "ಇಂಡಿಯಾ ದೇಶದ ವಿಷಯದಲ್ಲಿ ಜಗತ್ತು ಹೊತ್ತಿರುವ ಆಧ್ಯಾತ್ಮಿಕ ಋಣ" ಎಂಬ ಉಪನ್ಯಾಸ ದಲ್ಲಿ, "ನೀವು ಹೊಸದೆಂದು ತಿಳಿದಿರುವ ವಿಚಾರಗಳೆಲ್ಲಾ ಹಿಂದೂಗಳ ಅತ್ಯಂತ ಪ್ರಾಚೀನವಾದ ಗತಕಾಲೀನ ವಿಚಾರಗಳೇ.........ಅಮೆರಿಕಾದ ಎಲ್ಲಾ ಆಧುನಿಕ ವಿಚಾರಗಳನ್ನೂ 'ಯೋಗವಾಸಿಷ್ಠ' ಎಂಬ ಗ್ರಂಥವು ನೂರಾರು ವರ್ಷಗಳ ಹಿಂದೆಯೇ ತಿಳಿಸಿದೆ. ಈ ಗ್ರಂಥವು ಸ್ಪಷ್ಟವೂ ಪ್ರಸನ್ನವೂ ಆಗಿದೆ; ಇದು ವಿಸ್ತಾರವಾಗಿ ಸಮಸ್ತವನ್ನೂ ಒಳಗೊಂಡಿದೆ; ಇದು ನೈಜವೂ ಸ್ವಾಭಾವಿಕವೂ ಆದ ಪದ್ಯಕಾವ್ಯವಾಗಿದೆ." ಎಂದು ಹೇಳಿದ್ದಾರೆ.

ಈ ಲೇಖಕರ ಇತರ ಗ್ರಂಥಗಳು

---

1. ಶ್ರೀ ಬನವಸಿಯ ದತ್ತಾತ್ರೇಯ ಯೋಗೀಂದ್ರ—ಸದ್ಗುರು ಚರಿತಾಮೃತ (ಪದ್ಯ ಮತ್ತು ಗದ್ಯ)
2. ದೇವರು ಯಾರು? (ವಿಜ್ಞಾನವೂ ವೇದಾಂತವೂ)
3. ದೈವ ಮತ್ತು ಪೌರುಷ (Fate and Freewill)
4. ಸಮಗ್ರಸಾಧನ (೨ ಭಾಗಗಳು)
5. ಚಿಚ್ಛಕ್ತಿ ಪ್ರಭಾವ [ಇದೊಂದು ಮಹಾಗ್ರಂಥ—ಸಂಯುಕ್ತ ಕರ್ನಾಟಕ]
6. ಶ್ರೀ ಸ್ವಾಮಿ ರಾಮತೀರ್ಥರ ಜೀವನ ಚರಿತ್ರೆ
7. In Woods of God Realization (The complete works of Swami Rama Tirtha) (in 3 Volumes)

   ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ (ಸ್ವಾಮಿ ರಾಮತೀರ್ಥರ ಸಂಪೂರ್ಣ ಕೃತಿಗಳು (3 ಭಾಗಗಳು)
8. ಹೊಸ ಮನಸ್ಸು (Fresh Mind)
9. ರಾಮ ಹೃದಯ (Heart of Rama)
10. ಬಿಡುಗಡೆ (ವಿಮೋಚನೆ)

    (Instantaneous Inner Radical Revolution)

    (ಕ್ಷಣಮಾತ್ರದಲ್ಲಿಯೇ ಅಂತಃಕರಣದ ಸಮೂಲ ಪರಿವರ್ತನೆ)
11. ಚಿದಾಕಾಶ ಗೀತಾ

ವಿಷಯಾನುಕ್ರಮಣಿಕೆ

ಯೋಗವಾಸಿಷ್ಠದ ಸಾರ

ಯೋಗವಾಸಿಷ್ಠವು ಅನೇಕ ವಿಚಿತ್ರ ಕಥೆಗಳ ಮೂಲಕವಾಗಿ ದೃಷ್ಟಾಂತಗಳ ಸಹಾಯದಿಂದ ಅದ್ವೈತ ಸಿದ್ಧಾಂತವನ್ನು ಸುಲಭವಾಗಿಯೂ ಸುಂದರವಾಗಿಯೂ ಬೋಧಿಸುವ ಪ್ರಸಿದ್ಧ ಗ್ರಂಥ. ಇದಕ್ಕೆ ವಾಸಿಷ್ಠ ರಾಮಾಯಣವೆಂದೂ ಜ್ಞಾನ ಯೋಗ ತರಂಗಿಣಿಯೆಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಪ್ರಪ್ರಥಮ ಮೂರ್ಧನ್ಯರಾದ, ಬ್ರಹ್ಮವಿದ್ವರಿಷ್ಠರಾದ ವಸಿಷ್ಠ ಮಹರ್ಷಿಗಳು "ಸೃಷ್ಟಿಯ ಆದಿಯಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತು ರ್ಮುಖನು ಉಪದೇಶಿಸಿದ ಜ್ಞಾನವಿದ್ಯೆಯನ್ನು" ಶ್ರೀರಾಮನ ಚಿತ್ತಶಾಂತಿಗೆಂದು,

ಶ್ರೀ ವಸಿಷ್ಠ ಉವಾಚ :

ಪೂರ್ವಮುಕ್ತಂ ಭಗವತಾ ಯಜ್ಜ್ಞಾನಂ ಪದ್ಮಜನ್ಮನಾ ।
ಸರ್ಗಾದೌ ಲೋಕಶಾಂತ್ಯರ್ಥಂ ತದಿದಂ ಕಥಯಾಮ್ಯಹಂ ॥

(ಮುಮುಕ್ಷುಪ್ರಕರಣ, ತೃ. ಸ. ಶ್ಲೋ. ೧)

ಹೀಗೆ ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ತಮ್ಮ ಜೀವನ್ಮುಕ್ತಿ ವಿವೇಕದಲ್ಲಿಯೂ, ಸಾಧು ನಿಶ್ಚಲದಾಸರು, ನಿಜಗುಣ ಶಿವಯೋಗಿಗಳು ಮೊದಲಾ ದವರು ತಮ್ಮ ತಮ್ಮ ಗ್ರಂಥಗಳಲ್ಲಿಯೂ ಈ ಗ್ರಂಥದ ಅನೇಕಾಂಶಗಳನ್ನು ಸಂಗ್ರಹಿಸಿ ದ್ದಾರೆ. ವಾಸಿಷ್ಠ ಸಿದ್ಧಾಂತವೂ ಶಾಂಕರ ಸಿದ್ಧಾಂತವೂ ಕೆಲವು ಕಡೆಗಳಲ್ಲಿ ಭಿನ್ನವಾಗಿವೆ ಯೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯದ ಆಚಾರ್ಯರೂ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರ ದಿಂದ ಉಪಯೋಗಿಸುತ್ತಾರೆ.

ಇದರಲ್ಲಿ ಲಘುಯೋಗವಾಸಿಷ್ಠವೆಂದೂ ಬೃಹದ್ಯೋಗವಾಸಿಷ್ಠವೆಂದೂ ಎರಡು ರೂಪಗಳಿವೆ. ಯೋಗವೆಂಬ ಹೆಸರಿದ್ದರೂ ಈ ಗ್ರಂಥದಲ್ಲಿ ಮುಖ್ಯವಾಗಿ ತತ್ತ್ವ

ಜ್ಞಾನವನ್ನೇ ಹೇಳಿದೆ. ಎರಡು ಕಥೆಗಳಲ್ಲಿ ಮಾತ್ರ ಯೋಗಸಾಧನೆಯನ್ನು ಹೇಳಿದೆ. ಅಲ್ಲಿಯಾದರೂ ಯೋಗವೆಂದರೆ ಹಠಯೋಗವಲ್ಲವೆಂದೂ ಶುದ್ಧವಾದ ರಾಜಯೋಗವೆಂದೂ ಸ್ಪಷ್ಟವಾಗಿ ಹೇಳಿದೆ. ಭಗವದ್ಗೀತೆಯಲ್ಲಿರುವಂತೆ ಇಲ್ಲಿ ಯೋಗ ಶಬ್ದದಿಂದ ಜ್ಞಾನಯೋಗ ಮೊದಲಾದ ಎಲ್ಲಾ ಯೋಗಗಳೂ ಹೇಳಲ್ಪಟ್ಟಿವೆ.

ಬೃಹದ್ಯೋಗವಾಸಿಷ್ಠದಲ್ಲಿ 36,000 ಶ್ಲೋಕಗಳಿವೆ; ಆದರೆ ಇದಕ್ಕೆ 64,000 ಶ್ಲೋಕಗಳ ವ್ಯಾಖ್ಯಾನವಿದೆ. ಆದ್ದರಿಂದ ಇದರಲ್ಲಿ ಒಟ್ಟು ಒಂದು ಲಕ್ಷ ಶ್ಲೋಕಗಳು ಇವೆ. ಮೂಲಗ್ರಂಥದಲ್ಲಿರುವ ವಿಸ್ತಾರ ವರ್ಣನೆಗಳನ್ನೆಲ್ಲಾ ಬಿಟ್ಟು ಸಾರಭೂತವಾದ 6,000 ಶ್ಲೋಕಗಳನ್ನು ಆರಿಸಿ ಸಂಗ್ರಹಿಸಿದ ಸಣ್ಣ ಗ್ರಂಥವೇ ಲಘುಯೋಗವಾಸಿಷ್ಠವಾಗಿದೆ. ಕಾಶ್ಮೀರ ದೇಶದ ಮಹಾ ವಿದ್ವಾಂಸರಾದ ಅಭಿನಂದನ ಎನ್ನುವವರು ಈ ಸಾರಸಂಗ್ರಹದ ಕಾರ್ಯವನ್ನು ಮಾಡಿದ್ದಾರೆ. ಶ್ರೀರಾಮನಿಗೆ ವಸಿಷ್ಠ ಮಹರ್ಷಿಗಳು ಮೂಲ ಯೋಗವಾಸಿಷ್ಠ ಗ್ರಂಥದಲ್ಲಿರುವ ವಿಚಾರವನ್ನು ಉಪದೇಶಿಸಿದರೆಂದು ರಾಮಾಯಣ ಕರ್ತರಾದ ವಾಲ್ಮೀಕಿಗಳು ಭರದ್ವಾಜ ಋಷಿಗಳಿಗೆ ಎಲ್ಲವನ್ನೂ ಬೋಧಿಸುತ್ತಾರೆ.

ಈ ಗ್ರಂಥದ ಅಧ್ಯಯನಕ್ಕೆ ಕೆಲವು ಪಕ್ವಜೀವರು ಮಾತ್ರ ಅಧಿಕಾರಿಗಳೆಂದು ಜ್ಞಾನಿಗಳ ಮತ. ಈ ಗ್ರಂಥವು ಸಂಸಾರ ಸಮುದ್ರದಲ್ಲಿ ಮುಳುಗಿರುವ ಅಜ್ಞಾನಿಗಳಿಗೂ ಪ್ರಯೋಜನವಿಲ್ಲ; ಯಾವ ಉಪದೇಶದ ಅಗತ್ಯವೂ ಇಲ್ಲದಿರುವ ಪೂರ್ಣಸ್ಥಿತಿಯನ್ನು ಪಡೆದಿರುವ ಜ್ಞಾನಿಗಳಿಗೂ ಇದರ ಉಪಯೋಗವಿಲ್ಲ. ಆದ್ದರಿಂದ ವೈರಾಗ್ಯಸಂಪನ್ನರಾದ ತೀವ್ರಮೋಕ್ಷಾಪೇಕ್ಷಿಗಳು ಮಾತ್ರ ಇದಕ್ಕೆ ಅಧಿಕಾರಿಗಳೆಂದು ಈ ಗ್ರಂಥದಲ್ಲಿಯೇ ಹೇಳಿದೆ. ಜೀವಾತ್ಮ, ಪರಮಾತ್ಮ, ಜಗತ್ತು ಮೊದಲಾದುವುಗಳ ಸ್ವರೂಪವನ್ನೂ ಸಂಸಾರ ದುಃಖದಿಂದ ಬಿಡುಗಡೆಯನ್ನು ಪಡೆಯುವದಕ್ಕೆ ಸಾಧನೆಯನ್ನೂ ತಿಳಿಯಬೇಕೆನ್ನುವ ನಿಜವಾದ ವಿರಕ್ತರಿಗೆ ಈ ಗ್ರಂಥವು ಜ್ಞಾನದ ಖನಿಯಾಗಿದೆ.

ಸಂಸ್ಕೃತ ಭಾಷೆಯಲ್ಲಿರುವ ಬೇರೆ ಅಧ್ಯಾತ್ಮ ಗ್ರಂಥಗಳಿಗಿಂತಲೂ ಇದು ವಿಲಕ್ಷಣವಾಗಿದೆ. ವೇದ, ವೇದಾಂತಗಳು ಬಹಳ ಗೂಢವಾಗಿರುವುದರಿಂದ ಬಗೆಬಗೆಯಾಗಿ ಅರ್ಥ ಮಾಡುತ್ತಾರೆ. ಪುರಾಣಗಳು ಕಲ್ಪಿತ ಕಥೆಗಳೆಂದೂ ಅಸಂಬದ್ಧಪ್ರಲಾಪಗಳೆಂದೂ ಅವುಗಳಲ್ಲಿ ಅನಾದರವುಂಟಾಗಿದೆ. ಇತಿಹಾಸಗಳಾದ ರಾಮಾಯಣ–ಮಹಾಭಾರತಗಳು ಬರೀ ಉತ್ಪ್ರೇಕ್ಷಿತವಾದ ಕಥೆಗಳೆನಿಸಿವೆ. ವೇದಾಂತವು ಬೌದ್ಧಿಕವಾದ ಕಸರತ್ತೂ ದ್ವೈತಾದ್ವೈತ ವಿಶಿಷ್ಟಾದ್ವೈತವಾದಿಗಳ ಕುಸ್ತಿಯ ಕಣವೂ ಆಗಿದೆ.

(1) ಆದರೆ ಯೋಗವಾಸಿಷ್ಠವು ಹೊಸದೊಂದು ವಿಶಿಷ್ಟ ಪಥವನ್ನು ಹಿಡಿದಿದೆ. ಅದು ಮೊದಲು ಒಂದು ಸಿದ್ಧಾಂತವನ್ನು ಅದರ ಅನೇಕ ಮುಖಗಳಿಂದ ನಿರೂಪಿಸಿ, ಅದನ್ನೇ ಸ್ವಾರಸ್ಯವಾದ ಕಥೆಗಳ ಮೂಲಕ ವಿವರಿಸುತ್ತದೆ. ಸಾಧಕನು ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ನಿಯಮುಗಳನ್ನೂ ಅದು ನಿದರ್ಶನಗಳಿಂದ ತಿಳಿಸುತ್ತದೆ. ಇದನ್ನೆಲ್ಲಾ ತಿಳಿಯಲು ನಾವು ಮಿದುಳನ್ನು ಹಿಂಡಿ ಹೆಚ್ಚು ಕ್ಲೇಶಪಡಬೇಕಾದುದಿಲ್ಲ.

ಪತಂಜಲಿ ಋಷಿಗಳ ಯೋಗಸೂತ್ರಗಳಲ್ಲಿ ಹೇಳಿರುವ ಈಶ್ವರನ ಸಗುಣ–ಸಾಕಾರಧ್ಯಾನದಿಂದ ವೇದಾಂತಿಗಳ ನಿರ್ಗುಣ – ನಿರಾಕಾರವಾದ ಬ್ರಹ್ಮಜ್ಞಾನಕ್ಕೆ ಕ್ರಮವಾಗಿ ಏರುವದಕ್ಕೆ ಯೋಗವಾಸಿಷ್ಠದಲ್ಲಿ ಸಾಧನವಾದ ಸೋಪಾನ ಶ್ರೇಣಿಯನ್ನು ಹೇಳಿದೆ. ಪಾತಂಜಲಿ ಯೋಗಸೂತ್ರದಲ್ಲಿ

ದ್ರಷ್ಟೃದೃಶ್ಯಯೋಃ ಸಂಯೋಗೋ ಹೇಯಹೇತುಃ ।
ಹೇಯಂ ದುಃಖಂ........ [2-17-16]

ನೋಡುವವನು ಕಾಣುವವುಗಳಲ್ಲಿ ಕೂಡಿ ಒಂದಾಗುವದೇ ಸರ್ವ ದುಃಖಗಳಿಗೂ ಕಾರಣವೆಂದು ಹೇಳಿದೆ. ದ್ರಷ್ಟೃವು ದೃಶ್ಯದಲ್ಲಿ, ಜ್ಞಾತೃವು ಜ್ಞೇಯದಲ್ಲಿ, ಪುರುಷನು ಪ್ರಕೃತಿಯಲ್ಲಿ, ವಿಷಯಿಯು ವಿಷಯದಲ್ಲಿ ಸೇರಿ ತನ್ಮಯನಾಗುವದೇ ದುಃಖಕ್ಕೆ ಕಾರಣವೆಂದು ಹೇಳಿದೆ. ಪುರುಷನ ಸಾಕ್ಷಾತ್ಕಾರದಿಂದ ದೃಶ್ಯವೂ ಜ್ಞೇಯವೂ ವಿಷಯವೂ ಆದ ಪ್ರಕೃತಿಯು ಸುಳ್ಳಾಗುತ್ತದೆ. ಶುಕನ ಚರಿತ್ರೆಯಲ್ಲಿ ಇದನ್ನೇ ತಿಳಿಸಿದೆ.

ನಿತ್ಯಮುಕ್ತವೂ ಅಪ್ರಮೇಯವೂ ಅಮೃತಸ್ವರೂಪವೂ ಅಜವೂ ನಿಷ್ಕಳಂಕವೂ ಮಾತಿಗೂ ಮನಸ್ಸಿಗೂ ಮೀರಿದುದೂ ಆದ ಪರಬ್ರಹ್ಮವು ಕರ್ತೃವೂ ಭೋಕ್ತೃವೂ ಅಲ್ಲವಾದ್ದರಿಂದ ಹಿರಣ್ಯಗರ್ಭ ಬ್ರಹ್ಮನ ಅಥವಾ ಈ ಜಗತ್ತಿನ ಸೃಷ್ಟಿಗೆ ಕಾರಣವಲ್ಲವೆಂದು ಹೇಳಿದೆ. ಇನ್ನೊಂದು ಕಾರಣವಾಗಲೀ ತನಗೆ ತಾನೇ ಕಾರಣವಾಗಲೀ ಇಲ್ಲದ ಜಗತ್ತು ಇಲ್ಲವೇ ಇಲ್ಲ. ಪರಮಾತ್ಮನ ಜ್ಞಾನತರಂಗವಾದ ಪರಮಸಂಕಲ್ಪವೇ ಬ್ರಹ್ಮನೂ ಅವನ ಸಕಲ ಸೃಷ್ಟಿಯೂ ಆಗಿರುವದರಿಂದ ಜಗತ್ತೆಲ್ಲಾ ಜ್ಞಾನರೂಪವೇ ಚಿನ್ಮಾತ್ರಸ್ವರೂಪವೇ ಆಗಿದೆ. ಎರಡನೆಯದಿಲ್ಲದ ಹುಟ್ಟು ಸಾವುಗಳೂ ಇಲ್ಲದ ಕರ್ತೃ-ಭೋಕ್ತೃವೂ ಅಲ್ಲದ ಪರಮಾತ್ಮನೇ ಸಕಲವೂ ಆಗಿರುವದೆಂಬ ಜ್ಞಾನದಿಂದ ಅಜ್ಞಾನವು ನಾಶವಾದರೆ (ತಾನು ನಿತ್ಯಮುಕ್ತನೆಂಬ) ಮೋಕ್ಷವು ಲಭಿಸುತ್ತದೆ —ಎಂಬ ತತ್ತ್ವವು ಶಿಖಿಧ್ವಜನ ವೃತ್ತಾಂತದಿಂದ ತಿಳಿದುಬರುತ್ತದೆ.

2. ದೇವತೆಗಳು ಮತ್ತು ಅಸುರರು ಪರಸ್ಪರ ವಿರುದ್ಧವಾದ ಕೇವಲ ಚೇತನಾತ್ಮಕವಾದ ಶಕ್ತಿಗಳು; ಅಥವಾ ಪ್ರಕೃತಿಯಲ್ಲಿರುವ ಋಣ-ಧನರೂಪವಾದ

ಎರಡು ಧ್ರುವಗಳು. ಇವುಗಳಲ್ಲಿ ಒಂದು ಅಳಿದರೆ ಇನ್ನೊಂದೂ ಉಳಿಯುವುದಿಲ್ಲ. ಈ ತತ್ತ್ವವು ಪ್ರಹ್ಲಾದನ ಚರಿತ್ರೆಯಿಂದ ಬೋಧೆಯಾಗುತ್ತದೆ. ದೇವತೆಗಳು ತಟಸ್ಥರು ; ನಿಷ್ಕ್ರಿಯರು, ಜಡರು, ಅನಾಸಕ್ತರು. ಅವರಿಗೆ ವಿರುದ್ಧರಾದ ಅಸುರರೂ ರುದ್ರರೂ ಕ್ರಿಯಾಶೀಲ ಶಕ್ತಿಗಳು. ಅವರು ತಾವಾಗಿಯೇ ಮೊದಲು ದೇವತೆಗಳ ಮೇಲೆ ಏರಿ ಹೋಗಿ ಧಾಳಿಮಾಡಿ ಅವರಲ್ಲಿ ಚಟುವಟಿಕೆಯನ್ನು ಹುಟ್ಟಿಸುವರು. ಇದು ಶುಕ್ರನ ಮತ್ತು ನೂರು ಜನ ರುದ್ರರ ಕಥೆಗಳಲ್ಲಿ ನಿದರ್ಶಿಸಲ್ಪಟ್ಟಿದೆ.

3. ಕುಂಡಲಿನೀ ಶಕ್ತಿಯನ್ನು ಸ್ವಾಧೀನಪಡಿಸಿಕೊಳ್ಳುವದರಿಂದ ಇಚ್ಛೆ ಬಂದ ರೂಪವನ್ನು ತಳೆಯುವ ಸಿದ್ಧಿಯನ್ನು ಪಡೆಯಬಹುದೆಂಬುದು ಚೂಡಾಲಾ ಶಿಖಿಧ್ವಜರ ವೃತ್ತಾಂತದಿಂದ ತಿಳಿಯುತ್ತದೆ.

4. ಜ್ಞಾನ ಮತ್ತು ಅಜ್ಞಾನ ಇವುಗಳ ಏಳು ಅವಸ್ಥೆಗಳನ್ನು ಉತ್ಪತ್ತಿ ಮತ್ತು ನಿರ್ವಾಣ ಪ್ರಕರಣಗಳಲ್ಲಿ ಹೇಳಿದೆ. ಇದು ಬೇರೆ ಯಾವ ಗ್ರಂಥದಲ್ಲಿಯೂ ಬಂದಿಲ್ಲ.

5. ಸದ್ಗುರು ಸಚ್ಛಿಷ್ಯರ ಸಂಬಂಧವು ಹೇಗಿರಬೇಕೆಂಬುದು ಶಿಖಿಧ್ವಜನ ಇತಿಹಾಸದಲ್ಲಿ ಬಂದಿದೆ.

6. ಅವಾಂತರಪ್ರಳಯದ ಅನಂತರ ಚಂದ್ರಗ್ರಹದಿಂದ ಎಲ್ಲಾ ವಸ್ತುಗಳೂ ಉತ್ಪತ್ತಿಯಾಗುವವೆಂದು ಹೇಳಿದೆ.

ಯೋಗದ ಮೂಲಕ ಸಾಧಕನು ತನ್ನ ಸಚ್ಚಿದಾನಂದ ಸ್ವರೂಪದ ಅನುಭವ ಪಡೆಯುತ್ತಾನೆ. ತುರೀಯವೆಂಬ ಹೆಸರಿನ–ತನ್ನ–ಪರಮ ಆತ್ಮನಲ್ಲಿ ಅಚಲವಾಗಿ ನೆಲೆಗೊಳ್ಳುವದೇ ಯೋಗದ ಉದ್ದೇಶವಾಗಿದೆ. ಅದರಲ್ಲಿ ಎಚ್ಚರ, ಕನಸು, ನಿದ್ರೆಗಳ ಅನುಭವವಿಲ್ಲದೆ ನಿರಂತರವಾಗಿ ಪರಮಾನಂದದ ಅನುಭವವೇ ಇರುತ್ತದೆ ;—ಹೀಗೆ ಈ ಗ್ರಂಥದಲ್ಲಿ ಹೇಳಿದೆ.

ಯೋಗಸಾಧನೆಯಲ್ಲಿ ಮೂರು ಪ್ರಕಾರಗಳಿವೆ. (1) ಒಂದು ತತ್ತ್ವದ ದೃಢವಾದ ಭಾವನೆ, (2) ಮನಸ್ಸಿನ ಉಪಶಾಂತಿ, (3) ಪ್ರಾಣನಿರೋಧ. ಈ ಮೂರರಲ್ಲಿ ಯಾವದೊಂದನ್ನು ಅಭ್ಯಾಸಮಾಡಿದರೂ ಮೂರರ ಫಲವೂ ಬರುತ್ತದೆ. ಒಬ್ಬೊಬ್ಬರ ಸಂಸ್ಕಾರ–ಸ್ವಭಾವಕ್ಕೆ ಒಂದೊಂದು ಸಾಧನ ಸುಲಭವಾಗುತ್ತದೆ. ಯಾರಿಗಾದರೂ ಪ್ರಾಣನಿರೋಧಕ್ಕಿಂತಲೂ ಮಿಕ್ಕ ಎರಡು ಸಾಧನಗಳು ಹೆಚ್ಚು ಸುಲಭವಾದವು – ಎಂದು ಯೋಗವಾಸಿಷ್ಠಕಾರರು ಹೇಳುತ್ತಾರೆ. [*6(1)–69–27, 40, 29 ; 6(1)–13–8.]

* ಪ್ರಕರಣ-ಸರ್ಗ-ಶ್ಲೋಕ, (ಪ್ರಕರಣಗಳು : 1. ವೈರಾಗ್ಯ; 2. ಮುಮುಕ್ಷು ; 3. ಉತ್ಪತ್ತಿ ; 4. ಸ್ಥಿತಿ ; 5. ಉಪಶಾಂತಿ ; 6. ನಿರ್ವಾಣ.)

I. ಒಂದು ತತ್ತ್ವದ ದೃಢ ಅಭ್ಯಾಸ : ಒಂದು ತತ್ತ್ವದ ದೃಢ ಭಾವನೆಯಿಂದ ಮನಸ್ಸು ಶಾಂತವಾಗಿ ಲೀನವಾಗುತ್ತದೆ. ಅದರಿಂದ ಪ್ರಾಣಗತಿಯೂ ಸ್ತಬ್ಧವಾಗುತ್ತದೆ. ಒಂದು ತತ್ತ್ವದ ದೃಢ ಅಭ್ಯಾಸವು ಮೂರು ಬಗೆಯಾಗಿದೆ. [6(1)-68-48.]

1. ಬ್ರಹ್ಮಭಾವನಾ : ಚಿನ್ಮಾತ್ರಸ್ವರೂಪವಾದ (ಶುದ್ಧ ಅರಿವಿನ ರೂಪವಾದ) ಬ್ರಹ್ಮ ಒಂದೇ ಸತ್ಯ ; ಅದೇ ಅಜ್ಞಾನದಿಂದ ಬಗೆಬಗೆಯ ನಾಮರೂಪವಾದ ಜಗತ್ತಾಗಿ ತೋರುತ್ತಾ ಇದೆ–ಎಂಬಿದನ್ನು ಮೊದಲು ವಿಚಾರದಿಂದ ನಿಶ್ಚಯಮಾಡಿಕೊಳ್ಳಬೇಕು. ಇದೇ ಭಾವನೆಯಲ್ಲಿ ಮನಸ್ಸು ತನ್ಮಯವಾಗುವಂತೆ ನಿರಂತರ ಅಭ್ಯಾಸ ಮಾಡಬೇಕು. ಇದರಿಂದ ಮನಸ್ಸು ಶಾಂತವಾಗಿ ವಿಲೀನವಾಗುತ್ತದೆ ; ಬ್ರಹ್ಮಾಕಾರವಾಗುತ್ತದೆ. ಬ್ರಹ್ಮಕ್ಕೆ ಆಕಾರವೇ ಇಲ್ಲ ; ಅದು ನಿರ್ಗುಣ–ನಿರಾಕಾರ. ಆದ್ದರಿಂದ ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ಬಿಟ್ಟು ಸುಮ್ಮನಾದರೆ ನಿರಾಕಾರವೂ ನಿರ್ಮಲವೂ ಆದ ಅರಿವು (ಬ್ರಹ್ಮವು) ತಾನೇತಾನಾಗಿ ಸ್ಫುರಿಸುತ್ತದೆ. ಇದರಿಂದ ಪ್ರಾಣಗತಿಯೂ ಕೂಡ ತಾನಾಗಿಯೇ ನಿಲ್ಲುತ್ತದೆ. ಯಾರು ಯಾವದನ್ನು ದೃಢವಾಗಿ ಭಾವಿಸುತ್ತಾರೋ ಅವರು ಆ ರೂಪವೇ ಆಗುತ್ತಾರೆಂಬುದು ಪ್ರಬಲವಾದ ಪ್ರಕೃತಿ ನಿಯಮ. [6(1)-69-49, 52 ; 4-11-58.]

2. ಅಭಾವಭಾವನಾ : "ಬ್ರಹ್ಮೈವ ಸತ್ಯಂ" ಬ್ರಹ್ಮ ಒಂದೇ ಸತ್ಯ ; ಅದೇ ಜಗತ್ತಾಗಿ ತೋರುತ್ತಿದೆ. ಆದ್ದರಿಂದ ತೋರುವ ರೂಪದಿಂದ ಜಗತ್ತು ನಿಜವಲ್ಲ ; "ಜಗನ್ಮಿಥ್ಯಾ". ವ್ಯವಹಾರ ದೃಷ್ಟಿಯಿಂದ ನಾಮರೂಪಾತ್ಮಕವಾದ ಜಗತ್ತು ತೋರುತ್ತಿದ್ದರೂ ಪರಮಾರ್ಥದೃಷ್ಟಿಯಲ್ಲಿ ಪದಾರ್ಥಗಳು ಇಲ್ಲವೇ ಇಲ್ಲ ; ಜಗತ್ತಿನ ಅತ್ಯಂತ ಅಭಾವವೇ ಇದೆ. ಎಲ್ಲವೂ ಬ್ರಹ್ಮವೇ–ಆತ್ಮವೇ–ಆಗಿವೆ. ಬೇರೆ ಬೇರೆಯಾಗಿ ತೋರುವದು ಕೇವಲ ಭ್ರಮೆ. ಚಿನ್ಮಾತ್ರಸ್ವರೂಪವಾದ ಬ್ರಹ್ಮ ಒಂದೇ ಸತ್ಯ—ಎಂಬ ನಿಶ್ಚಯಜ್ಞಾನದ ಅಭ್ಯಾಸವೇ ಬ್ರಹ್ಮಭಾವವೆನಿಸುತ್ತದೆ. ಇದರಿಂದ ಮನಸ್ಸು ಶಾಂತವಾಗುವುದರಿಂದ ಅಹಂಭಾವವೂ ಜಗತ್ತಿನ ಅನುಭವವೂ ಲೋಪವಾಗಿ ಆತ್ಮನಲ್ಲಿಯೇ ಸುಸ್ಥಿತಿ ಉಂಟಾಗುತ್ತದೆ. ಇದರಲ್ಲಿ ದೃಶ್ಯದ ಪೂರ್ಣ ಅಭಾವವಾಗುವದರಿಂದ ಅಭಾವಭಾವನಾ ಎನಿಸುತ್ತದೆ [*3-22-27 ; 3-7-27, 28 ; 3-21-12].

---

*ಅತ್ಯಂತಾಭಾವ ಸಂಪತ್ತೌ ಜ್ಞಾತೃಜ್ಞೇಯಸ್ಯ ವಸ್ತುನಃ ।
ಯುಕ್ತ್ಯಾ ಶಾಸ್ತ್ರೈರ್ಯತನ್ತೇ ಯೇ ತೇ ಬ್ರಹ್ಮಾಭ್ಯಾಸಿನಃ ಸ್ಮೃತಾಃ ॥ (3-22-27)

3. **ಕೇವಲೀಭಾವ** : ಅಜ್ಞಾನದಶೆಯಲ್ಲಿ ದೃಶ್ಯವನ್ನು ಸತ್ಯವೆಂದು ಭ್ರಮಿಸಿ ಅದರಲ್ಲಿ ತನ್ಮಯತೆಯನ್ನು ಪಡೆಯುತ್ತಿದ್ದುದನ್ನು ತಪ್ಪಿಸುವದಕ್ಕಾಗಿ ಮೊದಲು ತಾನು ದ್ರಷ್ಟಾ (ನೋಡತಕ್ಕವನು) ಸಾಕ್ಷೀ ಎಂಬ ಭಾವವನ್ನು ಅಭ್ಯಾಸಮಾಡಬೇಕು. ಅನಂತರ ನೋಡುವ ದ್ರಷ್ಟಾ ಭಾವವೂ ಸುಳ್ಳೆಂದು ಎರಡನೆಯದೇನೂ ತೋರದೆ ಆತ್ಮನಲ್ಲಿಯೇ ನಿಲ್ಲುವದು ಕೇವಲೀಭಾವ.

ಯದ್ದ್ರಷ್ಟುರಸ್ಯಾದ್ರಷ್ಟೃತ್ವಂ ದೃಶ್ಯಾಭಾವೇ ಭವೇದ್ಬಲಾತ್ ।
ತದ್ವಿದ್ಧಿ ಕೇವಲೀಭಾವಂ ತತ ಏವಾಸತಃ ಸತಃ ॥ [3-4-53]

ದೃಶ್ಯವೇ ಇಲ್ಲದಿದ್ದ ಮೇಲೆ ಬಲಾತ್ಕಾರವಾಗಿ ಈ ದ್ರಷ್ಟೃವಿಗೆ (ನೋಡತಕ್ಕವನಿಗೆ) ದ್ರಷ್ಟೃತ್ವವೇ ಇಲ್ಲದಂತಾಗುತ್ತದೆ. ಹೀಗೆ ಅಸತ್ಯವಾದ ದೃಶ್ಯದ ದೆಸೆಯಿಂದ ಈ ಸತ್ಪದಾರ್ಥವಾದ ಚೈತನ್ಯಕ್ಕೆ ದ್ರಷ್ಟೃತ್ವವೇ ಹುಸಿಯಾಗಿದೆ. ಅದೇ ಕೇವಲತ್ವವೆಂದು ತಿಳಿ.

II. **ಮನೋಲಯ :** ಯೋಗವಾಸಿಷ್ಠಕ್ಕೆ ಅನುಸಾರವಾಗಿ ಸಂಸಾರದ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಮನಸ್ಸೇ ಕಾರಣ. ಮನಸ್ಸು ಶಾಂತವಾದರೆ ಸಂಸಾರದ ಅನುಭವವು ಕ್ಷೀಣವಾಗಿ ಜೀವನದಲ್ಲಿ ಪರಮಶಾಂತಿ ಲಭಿಸುತ್ತದೆ. ಘಟವು ನಾಶವಾದರೆ ಘಟಾಕಾಶವೂ ನಾಶವಾಗುವಂತೆ, ಮನಸ್ಸು ನಾಶವಾದರೆ ಸಂಸಾರವೂ ಲಯವಾಗುತ್ತದೆ. ಮನಸ್ಸು ಸಂಸಾರರೂಪೀ ಮಾಯಾಚಕ್ರಕ್ಕೆ ನಾಭಿಯಾಗಿದೆ. ಈ ನಾಭಿಯು ಬಲದಿಂದಲೂ ಬುದ್ಧಿಯ ಮೂಲಕವೂ ತಿರುಗುವದು ನಿಂತಿತೆಂದರೆ ಸಂಸಾರಚಕ್ರವೂ ತಿರುಗುವದು ನಿಲ್ಲುತ್ತದೆ; ಬ್ರಹ್ಮವು ಪ್ರಾಪ್ತಿಯಾಗುತ್ತದೆ. ಚಿತ್ತವು ಲಯವಾದರೆ ದ್ವೈತ–ಅದ್ವೈತ ಮೊದಲಾದ ಭಾವನೆಗಳೆಲ್ಲಾ ಲಯವಾಗಿ ಆತ್ಮಾನುಭವ ಉಂಟಾಗುತ್ತದೆ. ಸಂಸಾರ ದುಃಖದಿಂದ ಮುಕ್ತರಾಗುವುದಕ್ಕೆ ಮನೋನಿಗ್ರಹ–ಮನೋಲಯ ಒಂದೇ ಸಾಧನ. [5–49–40 ; 5–50–7 ; 6(1)–29–5, 6, 7, 8 ; 5–24–14, 15, 17-19 ; 5–50–14 ; 6(1)–69–44 ; 3–111–2(1)–9, 15.]

ಮನಸ್ಸು ದೇಹಭಾವನೆಯಿಂದ ಸ್ಥೂಲವಾಗಿ ಪರಿಮಿತ ಜೀವವಾಗುತ್ತದೆ; ಮನಸ್ಸೇ ಸೂಕ್ಷ್ಮವಾಗಿಯೂ ವಿಶಾಲವಾಗಿಯೂ ಬ್ರಹ್ಮವಾಗುತ್ತದೆ. ಭೋಗದಲ್ಲಿ ಸುಖವಿದೆಯೆಂಬ ಕಲ್ಪನೆಯನ್ನು ಬಿಟ್ಟು ಸಂಸಾರವಾಸನೆಯನ್ನು ತ್ಯಾಗಮಾಡಿ, ಮನಸ್ಸು ಪರಮಶುದ್ಧ ಆತ್ಮನಲ್ಲಿ ನಿಲ್ಲಬೇಕು [3–98–2 ; 3–97–10, 11 ; 3–100–2 ; 5–55–2].

ಉಚಿತವಾದ ಯುಕ್ತಿ ಇಲ್ಲದೆ ಮನಸ್ಸನ್ನು ಜಯಿಸುವದು ಕಠಿಣವಾಗುತ್ತದೆ [5–91–34]. ಶಾಸ್ತ್ರೀಯವಾದ ಯುಕ್ತಿಗಳನ್ನು ಬಿಟ್ಟು ಯಾರು ಹಠಯೋಗ

ದಿಂದ ಮನಸ್ಸನ್ನು ಜಯಿಸುವುದಕ್ಕೆ ಪ್ರಯತ್ನ ಮಾಡುವರೋ ಅವರು ಅನೇಕ ಕ್ಲೇಶಗಳನ್ನು ಅನುಭವಿಸುವರು [5-91-40]. ಮನೋಲಯಕ್ಕೆ ಅನೇಕ ಯುಕ್ತಿಗಳಿವೆ.

1. **ಜ್ಞಾನಯುಕ್ತಿ :** ಜ್ಞಾನದ ಮೂಲಕ ಮನಸ್ಸನ್ನು ನಿರೋಧಮಾಡುವ ದೆಂದರೆ ಕಣ್ಣು ಮುಚ್ಚಿಬಿಡುವುದಕ್ಕಿಂತಲೂ ಸುಲಭವಾಗಿದೆ. ಇದರಲ್ಲಿ ಸ್ವಲ್ಪವೂ ಕಷ್ಟವಿಲ್ಲ. ಅಜ್ಞಾನದಿಂದಲೇ ಮನಸ್ಸಿನ ಇರುವಿಕೆಯಾದ್ದರಿಂದ ಜ್ಞಾನದಿಂದ ಅದರ ನಾಶವಾಗುವದು ಸ್ವಾಭಾವಿಕ. ಹಗ್ಗದ ಜ್ಞಾನದಿಂದ (ಅದರಲ್ಲಿ ತೋರುತ್ತಿದ್ದ) ಹಾವೂ ಮರುಭೂಮಿಯ ಜ್ಞಾನದಿಂದ (ಅದರಲ್ಲಿ ಭ್ರಮೆಯಿಂದ ತೋರುತ್ತಿದ್ದ) ಜಲವೂ ಕಾಣದಾಗುವಂತೆ ಆತ್ಮಜ್ಞಾನದಿಂದ ಮನಸ್ಸೂ ಜಗತ್ತೂ ಸುಳ್ಳಾಗುತ್ತವೆ. [4-11-27.]

2. **ಸಂಕಲ್ಪತ್ಯಾಗ :** ಸಂಕಲ್ಪದಿಂದಲೇ ಮನಸ್ಸಿಗೆ ಬಂಧವೂ, ಅದರ ಅಭಾವದಿಂದಲೇ ಮನಸ್ಸಿಗೆ ಮುಕ್ತಿಯೂ ಉಂಟಾಗುತ್ತದೆ [6(2)-1-27]. ಸಂಕಲ್ಪ ಶಾಂತವಾದರೆ ಮನಸ್ಸೂ ಶಾಂತವಾಗಿ ಸಂಸಾರದುಃಖವೆಲ್ಲಾ ನಾಶವಾಗುತ್ತದೆ. [5-13-80 ; 54-19.]

3. **ಭೋಗವಿರಕ್ತಿ :** ಸಂಸಾರ ನಾಶಮಾಡುವಂಥ ಭೋಗವಿರಾಗ ಉಂಟಾ ಗುವವರೆಗೂ ದುಃಖವನ್ನು ಜಯಿಸತಕ್ಕಂಥ ಪರಮನಿವೃತ್ತಿಯೂ ಅನುಭವವಾಗುವ ದಿಲ್ಲ [5-24-37-38]. ವಿಷಯವಿರಕ್ತಿಯಿಂದ ಮನಸ್ಸು ಸೂಕ್ಷ್ಮವಾಗಿ ಆತ್ಮ ಭಾವದಲ್ಲಿ ನಿಲ್ಲುತ್ತದೆ [5-24-43].

4. **ವಾಸನಾತ್ಯಾಗ :** ಮನಸ್ಸು ವಾಸನಾ ರೂಪವಾಗಿದೆ. ವಾಸನಾ (ಇಚ್ಛಾ) ಎಂದರೆ ಮನಸ್ಸು ; ಮನಸ್ಸು ಎಂದರೆ ವಾಸನಾ [6(1)-94-5].

ಕ್ಷೀಣಾಯಾಂ ವಾಸನಾಯಾಂ ತು ಚೇತೋ ಗಲತಿ ಸತ ರಂ।

ವಾಸನೆಯು ಕ್ಷೀಣವಾಗುತ್ತಾ ಹೋದಂತೆ ಚಿತ್ತವೂ ಬೇಗ ಬೇಗ ಕರಗುತ್ತಾ ಬರುವುದು [1-3-9].

ಅಶೇಷೇಣ ಪರಿತ್ಯಾಗೋ ವಾಸನಾಯಾಂ ಯ ಉತ್ತಮಃ।
ಮೋಕ್ಷ ಇತ್ಯುಚ್ಯತೇ ಬ್ರಹ್ಮನ್ಸ ಏವ ವಿಮಲಕ್ರಮಃ॥ [1-3-8]

ವಾಸನೆಗಳನ್ನು ಸಂಪೂರ್ಣವಾಗಿ ಬಿಡುವದೇ ಮೋಕ್ಷವು ......[4-57-20 ; 21, 22 ; 6(1)-87-25 ; 5-74-21].

5. **ಅಹಂಭಾವದ ತ್ಯಾಗ:** ಅಹಂಭಾವವು ದೃಢವಾದರೇನೇ ಸಂಸಾರ ಭ್ರಮೆ ಉದಯವಾಗುತ್ತದೆ; ಅಹಂಭಾವವು ಕ್ಷೀಣವಾದರೆ ನಿರಂತರ ಶಾಂತಿ ಇರುವ ಸ್ವರೂಪದಲ್ಲಿ ಸ್ಥಿತಿಯಾಗುತ್ತದೆ [6(2)-26-29]. ಅಹಂಭಾವರೂಪ ಮೇಘವು ಕ್ಷೀಣವಾಗುವದರಿಂದ ಚಿದಾಕಾಶವು ನಿರ್ಮಲವಾಗಿ ಆತ್ಮಾನುಭವರೂಪ ಸೂರ್ಯನು ಪ್ರಚಂಡವಾಗಿ ಪ್ರಕಾಶಿಸುತ್ತಾನೆ. [5-13-11]. ಈ ಸರ್ವ ಸಂಸಾರವೂ ಇಂದ್ರಜಾಲದಂತೆ ಸುಳ್ಳಾಗಿದೆ. ಇದರಲ್ಲಿ ರಾಗವನ್ನಾಗಲೀ ದ್ವೇಷವನ್ನಾಗಲೀ ಮಾಡುವದರಿಂದ ಪ್ರಯೋಜನವಿಲ್ಲ—ಹೀಗೆ ವಿಚಾರ ಮಾಡುವದರಿಂದ ಅಹಂಭಾವವು ಬೆಳೆಯುವದಿಲ್ಲ [4-33-44, 46].

6. **ಸಂಗತ್ಯಾಗ:** ಯಾವ ಪುರುಷನು ಕರ್ಮತ್ಯಾಗವನ್ನೂ ಮಾಡದೇ ಕರ್ಮಾಸಕ್ತನೂ ಆಗದೇ ಕರ್ಮಫಲವನ್ನೂ ಬಯಸದೇ ಎಲ್ಲಾ ಅವಸ್ಥೆಗಳಲ್ಲಿಯೂ ಸಮನಾಗಿರುವನೋ ಅವನೇ ಸಂಗರಹಿತನಾದವನು [5-68-6]. ಯಾವನ ಹೃದಯವು ಸಂಸಾರದ ವಿಷಯಗಳಲ್ಲಿ ಆಸಕ್ತವಾಗಿದೆಯೋ ಅವನೇ ಸಂಸಾರಸಾಗರದಲ್ಲಿ ಮುಳುಗಿದವನು; ಯಾವನ ಮನಸ್ಸು ಆಸಕ್ತವಾಗಿಲ್ಲವೋ ಅವನೇ ಮುಕ್ತನಾದವನು [5-67-30]. ಈ ಸರ್ವವೂ ಆತ್ಮನೇ ಆಗಿರುವಾಗ ಯಾವದನ್ನು ತ್ಯಾಗ ಮಾಡಬೇಕು? ಯಾವದನ್ನು ಗ್ರಹಿಸಬೇಕು? ಈ ಭಾವವೇ ಅಸಂಗವೆನಿಸುತ್ತದೆ [5-68-4].

7. **ಕರ್ತೃತ್ವ-ಭೋಕ್ತೃತ್ವ ಭಾವನಾತ್ಯಾಗ:**

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ನ ಕರ್ತಾಸಿ ನ ಭೋಕ್ತಾಸಿ ತತ್ರ ಮುಕ್ತಮತಿಃ ಶಮೀ ॥

ಯಾವುದನ್ನೇ ಮಾಡು, ಯಾವುದನ್ನೇ ತಿನ್ನು, ಯಾವುದನ್ನೇ ಹೋಮಮಾಡು, ಯಾವುದನ್ನೇ ದಾನಮಾಡು, ನೀನು ಕರ್ತನಲ್ಲ, ಭೋಕ್ತನಲ್ಲ ಎಂಬುದನ್ನು ದೃಢಪಡಿಸಿಕೊಂಡರೆ ನೀನು ಮುಕ್ತಾತ್ಮನಾಗುವೆ, ಶಾಂತನಾಗುವೆ.

ಸಂಕಲ್ಪತ್ವಂ ಹಿ ಬಂಧಸ್ಯ ಕಾರಣಂ ತತ್ಪರಿತ್ಯಜ ।
ಮೋಕ್ಷಸ್ತು ನಿಸ್ಸಂಕಲ್ಪತ್ವಂ ತದಭ್ಯಾಸ ಪರೋಭವ ॥ [6-124-6]

ಸಂಕಲ್ಪವೇ ಬಂಧವು; ಅದನ್ನು ಬಿಡು; ನಿಸ್ಸಂಕಲ್ಪವೇ ಮೋಕ್ಷವು; ಅದನ್ನು ಅಭ್ಯಾಸ ಮಾಡು.

8. ಸರ್ವತ್ಯಾಗ : ಎಲ್ಲವನ್ನೂ ಬಿಡುವವರೆಗೆ ಆತ್ಮಲಾಭವಾಗುವದಿಲ್ಲ; ಎಲ್ಲಾ ಅವಸ್ಥೆಗಳನ್ನೂ ಬಿಟ್ಟಮೇಲೆ ಉಳಿಯುವದೇ ಆತ್ಮ [5-58-44]. ಸರ್ವತ್ಯಾಗವೇ ಸರ್ವದುಃಖವನ್ನೂ ನಾಶಮಾಡುವ ಚಿಂತಾಮಣಿಯಾಗಿದೆ[6(1)-90-5]. ಯಾವನು ಬುದ್ಧಿಯ ಮೂಲಕ ಸರ್ವಶಂಕೆಗಳನ್ನೂ ಸಕಲ ಇಚ್ಛೆಗಳನ್ನೂ ಸಮಸ್ತ ನಿಶ್ಚಯಗಳನ್ನೂ ತ್ಯಾಗಮಾಡಿದ್ದಾನೋ ಅವನೇ ಮಹಾತ್ಯಾಗಿಯು.

ಸರ್ವೇಚ್ಛಾಃ ಸಕಲಾಃ ಶಂಕಾಃ ಸರ್ವೇಹಾಃ ಸರ್ವನಿಶ್ಚಯಾಃ ।
ಧಿಯಾ ಯೇನ ಪರಿತ್ಯಕ್ತಾ ಮಹಾತ್ಯಾಗೀ ಸ ಉಚ್ಯತೇ ॥
[6(1)-115-34]

9. ಸಮಾಧಿಯ ಅಭ್ಯಾಸ :
ಯದಿ ವಾಪಿ ಸಮಾಧಾನೇ ನಿರ್ವಿಕಲ್ಪೇ ಸ್ಥಿತಿಂ ವ್ರಜೇತ್ ।
ತದಕ್ಷಯ ಸುಷುಪ್ತಾಭಂ ತನ್ಮನ್ಯೇ ಽಮಲಂ ಪದಮ್॥ [3-1-36]

ಹಾಗಲ್ಲದೆ, ನಿರ್ವಿಕಲ್ಪವಾದ ಸಮಾಧಿಯಲ್ಲಿಯೇ ನಿಶ್ಚಲವಾದ ಸ್ಥಿತಿಯನ್ನು ಪಡೆಯುವ ಪಕ್ಷದಲ್ಲಿ, ಆಗ ಅಕ್ಷಯವಾದ ಸುಷುಪ್ತಿಗೆ ಸಮಾನವಾದ ಆ ಅವಸ್ಥೆಯನ್ನು ಪರಮಪದವನ್ನಾಗಿ ತಿಳಿಯಬಹುದು. ಎಲ್ಲಾ ಬಗೆಯ ಆಶೆಗಳ ರೂಪವಾದ ಹುಲ್ಲನ್ನೂ ಬೂದಿ ಮಾಡಬಲ್ಲ ತತ್ತ್ವಜ್ಞಾನರೂಪ ಅಗ್ನಿಯೇ ಸಮಾಧಿ ಆಗಿದೆ [5-62-8]. ಯಾವದರಲ್ಲಿ ಚಿತ್ತವು ಸ್ಥಿರವಾಗಿ ನಿಂತು ನಿತ್ಯತೃಪ್ತಿ ಪಡೆಯುತ್ತದೆಯೋ ಆ ಪ್ರಜ್ಞೆಗೇ ಸಮಾಧಿ ಎನ್ನುತ್ತಾರೆ [5-62-9]. ಯಾವ ಬಗೆಯಾದ ವಿಷಯದ ತೃಷ್ಣೆಯೂ (ಬಯಕೆಯೂ) ಇಲ್ಲದಿರುವದೇ ಸಮಾಧಿ ಎನ್ನುತ್ತಾರೆ [6(1)-45-46].

10. ಲಯಕ್ರಿಯಾ :
ದೇಹೇಂದ್ರಿಯಮನೋಬುದ್ಧಿ ಕ್ಷೇತ್ರಜ್ಞಾನಾಂ ಚ ಸಂಭವಃ ।
ಯಸ್ಮಾದ್ಭವತಿ ತಜ್ಜ್ಞಾತ್ವಾ ತೇಷು ಪಶ್ಚಾದ್ವಿಲಾಪಯೇತ್ ॥
[6(1)-128-4]

ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಕ್ಷೇತ್ರಜ್ಞ—ಇವುಗಳು ಹೇಗೆ ಉತ್ಪತ್ತಿಯಾದವು ? ಎಲ್ಲಿಂದ ಹುಟ್ಟಿ ಬಂದವು ಎಂಬುದನ್ನು ತಿಳಿದು, ಅವವುಗಳಲ್ಲಿ ಇವುಗಳನ್ನು ವಿಲಾಪನ ಮಾಡಬೇಕು. (ವಿಲಾಪನ=ಕರಗುವದು, ಲಯ ಮಾಡುವದು.)

ವಿರಾಜಿ ಪ್ರಥಮಂ ಸ್ಥಿತ್ವಾ ತತ್ರಾತ್ಮನಿ ತತಃ ಪರಂ ।
ಅವ್ಯಾಕೃತೇ ಸ್ಥಿತಃ ಪಶ್ಚಾತ್ ಸ್ಥಿತಃ ಪರಮಕಾರಣೇ ॥
[6(1)-128-5....25]

(ಭೂತಗಳು ಜಡಗಳು; ದೇವತೆಗಳು ಚೇತನರು. ದೇವತೆಗಳೆಲ್ಲ ಪ್ರಾಣಾಂಶ ಸಂಭೂತರು. ಪ್ರಾಣವು ಎಲ್ಲೆಲ್ಲಿದ್ದರೂ, ಖಂಡಖಂಡವಾಗಿ ವ್ಯವಹಾರದಲ್ಲಿ ಕಂಡರೂ ಅದೆಲ್ಲವೂ ಅಖಂಡವೇ. ಈ ಅಖಂಡವಾದ ಪ್ರಾಣವು ಆತ್ಮನ ಛಾಯೆ. ಈ ಭೂತಗಳೆಲ್ಲವೂ ಆಕಾಶದಿಂದ ಉತ್ಪತ್ತಿಯಾದುವು. ಆಕಾಶವು ಆತ್ಮನಿಂದ ಬಂದುದು. ಆಕಾಶ ಮತ್ತು ಪ್ರಾಣ ಈ ಎರಡರಿಂದಲೇ ಎಲ್ಲಾ ಸೃಷ್ಟಿಯೂ ಆಗಿರುವುದು. ಇವೆರಡೂ ಆತ್ಮನಿಂದ ಬಂದಿವೆಯಾದ್ದರಿಂದ ಆತ್ಮನಲ್ಲಿ ವಿಲೀನ ವಾಗುತ್ತವೆ.) ವಿರಾಟ್‌ನಲ್ಲಿ ಮೊದಲು ನಿಲ್ಲಬೇಕು; ಆ ಮೇಲೆ ಆತ್ಮ (ಹಿರಣ್ಯಗರ್ಭ) ನಲ್ಲಿ ನಿಲ್ಲಬೇಕು. ಅನಂತರ ಅವ್ಯಾಕೃತ (ಆಕಾಶ) ದಲ್ಲಿ ನಿಂತು, ಅಲ್ಲಿಂದ ಅದಕ್ಕೂ ಕಾರಣವಾದ ಪರಮಕಾರಣದಲ್ಲಿ ನಿಲ್ಲಬೇಕು. (ಹೀಗೆ ಆಧ್ಯಾತ್ಮಿಕವಾದ ದೇಹೇಂದ್ರಿಯಾದಿಗಳು ನಾನು ಎಂಬ ಭಾವವನ್ನು ಬಿಟ್ಟು, ಇವಕ್ಕೆಲ್ಲಾ ಕಾರಣಭೂತ ದೇವತಾ ಸಮಷ್ಟ್ಯಾತ್ಮವಾದ (ಓಂಕಾರದಲ್ಲಿ) ಅಕಾರಾರ್ಥವಾದ ವಿರಾಟ್‌ಪುರುಷನೇ ನಾನು ಎಂಬ ಭಾವನೆಯಿಂದ ಮೊದಲು ವಿರಾಟ್‌ನಲ್ಲಿ ನಿಂತು, ಅನಂತರ ಅದಕ್ಕೆ ಕಾರಣವಾದ, ಉಕಾರಾರ್ಥದ ಸೂಕ್ಷ್ಮಭೂತ ಲಿಂಗಸಮಷ್ಟ್ಯಾತ್ಮನಾದ ಹಿರಣ್ಯಗರ್ಭನಲ್ಲಿ ವಿರಾಜನನ್ನು ಪ್ರವಿಲಾಪ (ಲಯ) ಮಾಡಿ ಆ ಹಿರಣ್ಯಗರ್ಭನನ್ನು ಅವನಿಗೆ ಕಾರಣನಾದ ತ್ರಿಗುಣಾತ್ಮಕ ಮಾಯೆಯಿಂದ ಉಪಹಿತವಾದ, ಮಕಾರಾರ್ಥವಾದ, ಅವ್ಯಾಕೃತ-ಈಶ್ವರನಲ್ಲಿ ಪ್ರವಿಲಾಪ ಮಾಡಿ ನಿಲ್ಲಬೇಕು; ಅನಂತರ ಅವ್ಯಾಕೃತ ಈಶ್ವರನನ್ನೂ ಸರ್ವಾಧಿಷ್ಠಾನವಾದ—ಜಗನ್ಮೂಲ ಪರಮ ಕಾರಣವಾದ—ಅರ್ಥಮಾತ್ರ ಲಕ್ಷಿತವಾದ—ಶುದ್ಧಬ್ರಹ್ಮದಲ್ಲಿ ವಿಲಾಪನ (ಲಯ) ಮಾಡಿ ತಾನು ಪರಬ್ರಹ್ಮನಾಗಿ ನಿಲ್ಲಬೇಕು.

ಸ್ಥಾನತ್ರಯವನ್ನೂ ಸಮಷ್ಟಿ ಜಾಗ್ರದಾದ್ಯವಸ್ಥಾತ್ರಯವನ್ನೂ ಸ್ಥೂಲ ಸೂಕ್ಷ್ಮ ಕಾರಣರೂಪ ವಿರಾಟ್, ಹಿರಣ್ಯಗರ್ಭ, ಅವ್ಯಾಕೃತರನ್ನೂ "ನಾಂತಃಪ್ರಜ್ಞಂ, ನ ಬಹಿಃಪ್ರಜ್ಞಂ, ನೋಭಯತಃ ಪ್ರಜ್ಞಂ, ನ ಪ್ರಜ್ಞಂ, ನಾಪ್ರಜ್ಞಂ, ನ ಪ್ರಜ್ಞಾನ ಘನಂ", (ಮಾಂ. ಉ.). ಇವನ್ನೆಲ್ಲಾ ಬಿಟ್ಟು ಸಮಸ್ತಕ್ಕೂ ಅಧಿಷ್ಠಾನವಾದ ಚಿನ್ಮಾತ್ರೈಕರಸವಾದ "ಅದೃಶ್ಯಂ, ಅವ್ಯವಹಾರ್ಯಂ, ಅಗ್ರಾಹ್ಯಂ, ಅಲಕ್ಷಣಂ, ಅಚಿಂತ್ಯಂ, ಅವ್ಯಪದೇಶ್ಯಂ, ಏಕಾತ್ಮಪ್ರತ್ಯಯಸಾರಂ ಪ್ರಪಂಚೋಪಶಮಂ ಶಿವಂ ಶಾಂತಂ ಅದ್ವೈತಂ ಚತುರ್ಥಂ ಮನ್ಯಂತೇ" ಪರಮಾತ್ಮನನ್ನು ಧ್ಯಾನಿಸಬೇಕು.

ಅಭೇದಾತ್ ಪರಮಾತ್ಮಾಸ್ಮಿ ಸರ್ವೋಪಾಧಿ ವಿವರ್ಜಿತಃ ।
ಕೂಟಸ್ಥಃ ಕೇವಲೋ ವ್ಯಾಪೀ ಚಿದಚಿಚ್ಛಕ್ತಿಮಾನಹಂ ॥
[6(1)-128-27]

ಭೇದಗಳೆಲ್ಲವೂ ನಿರ್ಮೂಲವಾದ್ದರಿಂದ ಪರಮಾತ್ಮನೇ ಆಗಿರುವೆನು. ಸರ್ವೋಪಾಧಿಗಳಿಂದಲೂ ಬಿಡಲ್ಪಟ್ಟಿರುವೆನು. ಕೂಟಸ್ಥನಾಗಿ, ಕೇವಲನಾಗಿ, ವ್ಯಾಪಿಯಾಗಿ

ಚಿತ್-ಅಚಿತ್ ಶಕ್ತಿಗಳಿಂದ ಕೂಡಿರುವೆನು. (ಚಿದಹಂ ನ ತು ಚಿಚ್ಛಕ್ತಿಮಾನ್ ಅಹಂ—ತಾ. ಪ್ರ.) ಚಿಚ್ಛಕ್ತಿಯಿಂದ ಕೂಡಿದವನಲ್ಲ; ನಾನು ಚಿನ್ಮಾತ್ರಸ್ವರೂಪನೇ ಇದ್ದೇನೆ.

ಯಥಾ ಜಲೇ ಜಲಂ ನ್ಯಸ್ತಂ ಕ್ಷೀರೇ ಕ್ಷೀರಂ ಘೃತೇ ಘೃತಂ।
ಅವಿನಷ್ಟಾ ಭವಂತ್ಯೇತೇ ಗೃಹ್ಯಂತೇ ನ ವಿಶೇಷತಃ॥
[6(1)-128-32]

ನೀರಿನಲ್ಲಿ ಹಾಕಿದ ನೀರು, ಹಾಲಿನಲ್ಲಿ ಹಾಕಿದ ಹಾಲು, ತುಪ್ಪದಲ್ಲಿ ಹಾಕಿದ ತುಪ್ಪ—ಇವು ವಿನಾಶವಾಗದೆ, ತಮ್ಮ ಬೇರೆಯತನವನ್ನು ಮಾತ್ರ ಕಳೆದುಕೊಂಡು ಬೆರೆತು ಒಂದಾಗುವಂತೆ.

ತಥಾಹಂ ಸರ್ವಭಾವೇನ ಪ್ರವಿಷ್ಟಶ್ಚೇತನೇ ಸತಿ।
ನಿತ್ಯಾನಂದೇ ಸಮಸ್ತಜ್ಞೇ ಪರೇ ಪರಮಕಾರಣೇ॥ [33]
ನಿತ್ಯಂ ಸರ್ವಗತಂ ಶಾಂತಂ ನಿರಂಜನಂ।
ನಿಷ್ಕಲಂ ನಿಷ್ಕ್ರಿಯಂ ಶುದ್ಧಂ ತತ್ ಬ್ರಹ್ಮಾಸ್ಮಿ ಪರಂ ಪರಂ॥ [34]

ಹಾಗೆ ನಾನೂ ಸರ್ವಭಾವದಿಂದ ಚೇತನವನ್ನು ಪ್ರವೇಶಿಸಿದೆನು. ನಿತ್ಯಾನಂದವೂ ಸರ್ವಜ್ಞವೂ ಪರವೂ ಪರಮಕಾರಣವೂ ಆದ ಚೇತನವನ್ನು ಪ್ರವೇಶಿಸಲು, ನಿಷ್ಕಲನೂ ನಿಷ್ಕ್ರಿಯನೂ ಶುದ್ಧನೂ ಆಗಿ ಆ ಬ್ರಹ್ಮವೇ ನಾನಾದೆನು.

III. ಪ್ರಾಣನಿರೋಧ: ಬೀಸಣಿಗೆ ಬೀಸುವದನ್ನು ನಿಲ್ಲಿಸಿದರೆ ಹೇಗೆ ಗಾಳಿ ಬೀಸುವದೂ ನಿಲ್ಲುತ್ತದೆಯೋ ಹಾಗೆ ಪ್ರಾಣಗತಿಯನ್ನು ನಿಲ್ಲಿಸಿದರೆ ಮನೋಗತಿಯೂ ಶಾಂತವಾಗುತ್ತದೆ [6(1)-69-41].

ಪ್ರಾಣದ ಸ್ಪಂದನವು ನಿಂತರೆ ಮನಸ್ಸೂ ಶಾಂತವಾಗುತ್ತದೆ; ಮನಸ್ಸು ಶಾಂತವಾದರೆ ಸಂಸಾರವು ಲಯವಾಗುತ್ತದೆ [5-78–15, 16].

ಪ್ರಾಣವೆಂದರೆ ಏನು? ಪ್ರಾಣದ ಚಲನೆ ಹೇಗೆ ಆಗುತ್ತದೆ? ಪ್ರಾಣಾಯಾಮವನ್ನು ಹೇಗೆ ಮಾಡಬೇಕು? ಈ ವಿಷಯಗಳನ್ನು ಯೋಗವಾಸಿಷ್ಠದಲ್ಲಿ ವಿಸ್ತಾರವಾಗಿ ವಿಚಾರಮಾಡಿದೆ. [6(1)-24-8, ...38 ; 6(1)-25–3,......60.]

ಪ್ರಾಣನಿರೋಧದ ಅಭ್ಯಾಸದಿಂದ ಪ್ರಾಣಲಯವಾದರೆ ಮನಸ್ಸಿನ ಕ್ರಿಯೆಯೂ ಶಾಂತವಾಗುತ್ತದೆ; ಆ ಸ್ಥಿತಿಯಲ್ಲಿ ನಿರ್ವಾಣಪದವೇ ಉಳಿಯುವದು. [5–78–18,......46.]

ಪ್ರಾಣವಿದ್ಯೆಯನ್ನಲ್ಲದೆ ಕುಂಡಲಿನೀ ವಿದ್ಯೆಯನ್ನೂ ಆ ಗ್ರಂಥದಲ್ಲಿ ವಿವರವಾಗಿ ಹೇಳಿದೆ. [6-80-36,......48 ; 6(1)81-1,.....9 ; 6(1)-81-62-73 ; 6(1)-81-45,......56 ; 6(1)-82-29,....33]. ಕುಂಡಲಿನೀ ವಿದ್ಯೆಯ ಜ್ಞಾನದಿಂದ ಕುಂಡಲಿನೀ ಶಕ್ತಿಯನ್ನು ಎಚ್ಚರಗೊಳಿಸುವದರಿಂದ ಯೋಗಿಗೆ ಅನೇಕ ವಿಧವಾದ ಸಿದ್ಧಿಗಳು ಪ್ರಾಪ್ತವಾಗುತ್ತವೆ.

ಯೋಗದ ಏಳು ಭೂಮಿಕೆಗಳು

ಪರಮಾನಂದಾನುಭವದಿಂದ ಮುಕ್ತಿಯನ್ನು ಪಡೆಯುವ ಯೋಗಕ್ಕೆ, ಯೋಗ ವಾಸಿಷ್ಠಕ್ಕೆ ಅನುಸಾರವಾಗಿ ಏಳು ಭೂಮಿಕೆಗಳು ಅಥವಾ ಸಪ್ತಸೋಪಾನಗಳು ಇವೆ.

ಮನುರುವಾಚ :

ಶಾಸ್ತ್ರ ಸಜ್ಜನ ಸಂಪರ್ಕೈಃ ಪ್ರಜ್ಞಾಮಾದೌ ವಿವರ್ಧಯೇತ್ ।
ಪ್ರಥಮಾ ಭೂಮಿಕೈಷೋಕ್ತಾ ಯೋಗಸ್ಯೈವ ಚ ಯೋಗಿನಃ ॥

ವಿಚಾರಣಾ ದ್ವಿತೀಯಾ ಸ್ಯಾತ್ ತೃತೀಯಾಸಂಗಭಾವನಾ ।
ವಿಲಾಪನೀ ಚತುರ್ಥೀ ಸ್ಯಾತ್ ವಾಸನಾ ವಿಲಯಾತ್ಮಿಕಾ ॥
[6(1)-120-1, 2]

ಶುದ್ಧಸಂವಿನ್ಮಯಾನಂದರೂಪಾ ಭವತಿ ಪಂಚಮೀ ।
ಅರ್ಧಸುಪ್ತ ಪ್ರಬುದ್ಧಾಭೋ ಜೀವನ್ಮುಕ್ತೋತ್ರ ತಿಷ್ಠತಿ ॥
ಸ್ವಸಂವೇದನರೂಪಾ ಚ ಷಷ್ಠೀ ಭವತಿ ಭೂಮಿಕಾ ।
ಆನಂದೈಕ ಘನಾಕಾರಾ ಸುಷುಪ್ತ ಸದೃಶಸ್ಥಿತಿಃ ॥
ತುರ್ಯಾವಸ್ಥೋಪಶಾಂತಾಥ ಮುಕ್ತಿರೇವೇಹ ಕೇವಲಂ ।
ಸಮತಾ ಸ್ವಚ್ಛತಾ ಸೌಮ್ಯಾ ಸಪ್ತಮೀ ಭೂಮಿಕಾ ಭವೇತ್ ॥
ತುರ್ಯಾತೀತಾ ತು ಯಾವಸ್ಥಾ ಪರಾ ನಿರ್ವಾಣರೂಪಿಣೀ ।
ಸಪ್ತಮೀ ಸಾ ಪರಿಪ್ರೌಢಾ ವಿಷಯೋ ನ ಸ್ಯಾನ್ನ ಜೀವತಾಂ ॥
[6(1)-120-6]

ಶಾಸ್ತ್ರ–ಸಜ್ಜನ ಸಂಪರ್ಕಗಳಿಂದ ಮೊದಲು ಪ್ರಜ್ಞೆಯು ಬೆಳೆಯುವಂತೆ ಮಾಡಿಕೊಳ್ಳ ಬೇಕು. ಇದು ಪ್ರಥಮ ಭೂಮಿಕೆ. ಇದರಿಂದ ಸಜ್ಜನ–ಸದ್ಗುರು ಮುಖದಿಂದ ಶಾಸ್ತ್ರಾರ್ಥಶ್ರವಣವೇ ಮೊದಲನೆಯ ಭೂಮಿಕೆ ಆಗಿದೆ. ಎರಡನೆಯದು

ವಿಚಾರಣೆಯು—ಇದು ಮನನ; ಮೂರನೆಯದು ಅಸಂಗಭಾವನೆ—ಇದು ಅದ್ವಿತೀಯಾತ್ಮಭಾವನ್ಮ ನಿದಿಧ್ಯಾಸನ. ನಾಲ್ಕನೆಯದು ವಿಲಾಪನಿಯು–ಇದೇ ವಾಸನೆಯನ್ನು ವಿಲಯನವಮಾಡುವ ಭೂಮಿಕೆಯು. ಐದನೆಯದು ಶುದ್ಧಸಂವಿನ್ಮಯ ಆನಂದರೂಪವು. ಈ ಭೂಮಿಕೆಯಲ್ಲಿರುವ ಜೀವನ್ಮುಕ್ತನು ಅರ್ಧ ನಿದ್ರೆ–ಎಚ್ಚರಗಳಲ್ಲಿ ಇರುವಂತೆ ಇರುವನು. ಸ್ವಸಂವೇದನರೂಪವೆಂಬುದು ಆರನೆಯ ಭೂಮಿಕೆಯು; ಅದು ಆನಂದವು ಏಕಘನವಾಗಿ, ಒಂದೇ ಮುದ್ದೆಯಾಗಿ, ಸುಷುಪ್ತಿಗೆ ಸದೃಶವಾದ ಸ್ಥಿತಿಯು. ತುರ್ಯಾವಸ್ಥೆಯನ್ನು ಪಡೆದು ಉಪಶಾಂತವಾದ ಸಮತಾ, ಸ್ವಚ್ಛತಾ, ಸೌಮ್ಯಾ, ಆದುದು ಸಪ್ತಮೀ ಭೂಮಿಕೆಯು. ಇದನ್ನೇ ಮುಕ್ತಿಯೆಂದೂ ಕೈವಲ್ಯವೆಂದೂ ಹೇಳುವರು. ತುರ್ಯಾತೀತವಾದ ಅವಸ್ಥೆಯು ಯಾವುದುಂಟೋ ಅದು ಪರಮೋತ್ತಮವಾದುದು; ನಿರ್ವಾಣರೂಪವಾದುದು; ಸಪ್ತಮ ಭೂಮಿಕೆಯೇ ಬಲಿತುದು ಅದು. ಅದು ಜೀವಂತವಾಗಿರುವವರೆಗೆ ಸಾಧ್ಯವಲ್ಲವು.

ಮೊದಲಿನ ಮೂರು ಅವಸ್ಥೆಗಳಲ್ಲಿ ಜಗತ್ತು ಇರುವದು. ಅವು ಎಚ್ಚರ. ನಾಲ್ಕನೆಯದು ಸ್ವಪ್ನದಂತಿದ್ದು ಜಗತ್ತೆಲ್ಲವೂ ಸ್ವಪ್ನದಲ್ಲಿ ಕಂಡಂತೆ ಇರುವದು. ಐದನೆಯದರಲ್ಲಿ ಆನಂದವು ಏಕಘನವಾಗಿರುವುದರಿಂದ ಅದು ಸುಷುಪ್ತವೆನ್ನಿಸಿಕೊಳ್ಳುವುದು. ಆರನೆಯದು ಜಗತ್ತಿನ ಸಂವೇದನೆಯು ಇಲ್ಲದೆ ಇರುವದರಿಂದ ಅಸಂವೇದನವೆನ್ನಿಸಿಕೊಳ್ಳುವದು. ಅದನ್ನೇ ತುರ್ಯವೆನ್ನುವರು. ಉತ್ತಮವಾದ ಸಪ್ತಮ ಭೂಮಿಕೆಯು ತುರ್ಯಾತೀತವೆನ್ನಿಸಿಕೊಳ್ಳುವದು. ಮನಸ್ಸು ವಾಕ್ಕುಗಳಿಂದ ಇದು ಅಗ್ರಾಹ್ಯವು. ಇದನ್ನು ಸ್ವಪ್ರಕಾಶಪದವೆನ್ನುವರು.

1. **ಶುಭೇಚ್ಛೆ:** ಸಂಸಾರದಲ್ಲಿ ವೈರಾಗ್ಯ ಉಂಟಾಗಿ ತನ್ನನ್ನು ಅಜ್ಞಾನಿ ಎಂದು ತಿಳಿದು, ಸಜ್ಜನ ಸಂಗದಿಂದ ಶಾಸ್ತ್ರಗಳನ್ನು ಪರಿಶೀಲನೆಮಾಡಿ ಸತ್ಯಸ್ವರೂಪವನ್ನು ತಿಳಿಯಲು ಇಚ್ಛೆಸುತ್ತಾನೆ. ಈ ಅವಸ್ಥೆಯೇ ಶುಭೇಚ್ಛಾ [3–118–8].

2. **ವಿಚಾರಣಾ:** ಶಾಸ್ತ್ರ ಮತ್ತು ಸಜ್ಜನರ ಸಂಪರ್ಕದಿಂದಲೂ ವೈರಾಗ್ಯ ಮತ್ತು ಅಭ್ಯಾಸಗಳಿಂದಲೂ ಸದ್ವಿಚಾರ–ಸದಾಚಾರಗಳಲ್ಲಿ ಪ್ರವೃತ್ತಿಯಾಗುವದೇ ವಿಚಾರಣಾ [3–118–9].

3. **ತನುಮಾನಸ:** ಶುಭೇಚ್ಛಾ ಮತ್ತು ವಿಚಾರಗಳ ಅಭ್ಯಾಸದಿಂದ ಇಂದ್ರಿಯಗಳಿಗೆ ವಿಷಯಗಳಲ್ಲಿ ಆಸಕ್ತಿ ಉಂಟಾಗದೆ ಮನಸ್ಸು ಸೂಕ್ಷ್ಮವಾಗುವದೇ ತನುಮಾನಸವಾಗಿದೆ [3–118–10].

4. **ಸತ್ತ್ವಾಪತ್ತಿ**: ಹಿಂದಿನ ಮೂರು ಭೂಮಿಕೆಗಳ ಅಭ್ಯಾಸದಿಂದಲೂ ದೃಢವಾದ ವೈರಾಗ್ಯದಿಂದಲೂ ಸತ್ಯಸ್ವರೂಪವಾದ ಆತ್ಮನಲ್ಲಿ ನೆಲೆ ನಿಲ್ಲುವದೇ ಸತ್ತ್ವಾಪತ್ತಿ [3–118–11].

5. **ಅಸಂಸಕ್ತಿ**: ಹಿಂದಿನ ನಾಲ್ಕು ಭೂಮಿಕೆಗಳ ಅಭ್ಯಾಸವು ಪರಿಪಕ್ವವಾಗಿ ಪೂರ್ಣ ಅನಾಸಕ್ತಿಯಿಂದ ಮನಸ್ಸು ಆತ್ಮತತ್ತ್ವದಲ್ಲಿ ದೃಢವಾಗಿ ನಿಲ್ಲುವ ಅವಸ್ಥೆಯೇ ಅಸಂಸಕ್ತಿ [3-118-12].

6. **ಪದಾರ್ಥಾಭಾವನೀ**: ಹಿಂದಿನ ಐದು ಭೂಮಿಕೆಗಳ ಅಭ್ಯಾಸಬಲದಿಂದ ಆತ್ಮನಲ್ಲಿ ನಿಶ್ಚಲವಾಗಿ ನಿಂತ ಮನಸ್ಸಿಗೆ ಒಳಗಾಗಲೀ ಹೊರಗಾಗಲೀ ಪದಾರ್ಥಗಳು ಇಲ್ಲವೆನ್ನುವ ಭಾವವು ದೃಢವಾಗಿ ಬೆಳೆಯುವದೇ ಪದಾರ್ಥಾಭಾವನೀ [3-118-13, 14]. ಇದರಿಂದ ಪರಮಾತ್ಮ ಒಬ್ಬನೇ ಸತ್ಯವಾಗಿ ತೋರುವದರಿಂದ ಪದಾರ್ಥಗಳು ಮಿಥ್ಯೆಯಾಗುತ್ತವೆ.

7. **ತುರ್ಯಗಾ**: ಹಿಂದಿನ ಆರು ಭೂಮಿಕೆಗಳ ಅಭ್ಯಾಸದಿಂದ ಪದಾರ್ಥಗಳ ಅನುಭವವಾಗದೆ ತನ್ನ ನಿಜಸ್ವರೂಪದಲ್ಲಿ ನಿರಂತರ ನೆಲೆ ನಿಲ್ಲುವದೇ ತುರ್ಯಗಾ. ಇದೇ ಜೀವನ್ಮುಕ್ತಿ. ವಿದೇಹಮುಕ್ತಿಯು ಇದಕ್ಕಿಂತಲೂ ಹೆಚ್ಚಿನದು [3–118-16].

ನ ಮ್ರಿಯೇ ನ ಚ ಜೀವಾಮಿ ನಾಹಂ ಸನ್ನಾಪ್ಯಸನ್ಮಯಂ ।
ಆತ್ಮಾರಾಮೋ ನರಸ್ತಿಷ್ಠೇತ್ ತನ್ಮುಕ್ತತ್ವಮುದಾಹೃತಂ ॥
[6(1)-120–12]

ವ್ಯವಹಾರ್ಯುಪಶಾಂತೋ ವಾ ಗೃಹಸ್ಥೋ ವಾಥವೈಕಕಃ ।
ಅಹಂ ನ ಕಿಂಚಿಚ್ಚಿದಿತಿ ಮತ್ವಾ ಜೀವೋ ನ ಶೋಚತಿ ॥ [121]

ನಾನು ಸತ್ತಿಲ್ಲ; ನಾನು ಬದುಕಿಲ್ಲ; ನಾನು ಸತ್ ಅಲ್ಲ; ಅಸತ್ತೂ ಅಲ್ಲ—ಎಂಬ ಭಾವನೆಯನ್ನು ಹಿಡಿದು ಆತ್ಮಾರಾಮನಾಗಿ ಇರಬೇಕು. ಅದನ್ನೇ ಮುಕ್ತತ್ವವೆನ್ನುವರು. ವ್ಯವಹಾರದಲ್ಲಿರಲಿ, ಉಪಶಾಂತನಾಗಿರಲಿ, ಗೃಹಸ್ಥನಾಗಿರಲಿ, ಏಕಾಕಿಯಾಗಿರಲಿ, ನಾನು ಏನೂ ಅಲ್ಲ; ಚಿನ್ಮಾತ್ರನು ಎಂದು ತಿಳಿದ ಜೀವನು ದುಃಖಪಡುವುದಿಲ್ಲ.

ಸ್ವಾಮಿ ರಾಮತೀರ್ಥರು ಅಮೇರಿಕಾದಲ್ಲಿ ಮಾಡಿದ ಒಂದು ಉಪನ್ಯಾಸದಲ್ಲಿ: "The Ancient Spirituality of India" "ಇಂಡಿಯಾ ದೇಶದ ಪ್ರಾಚೀನ ಅಧ್ಯಾತ್ಮ" ಎಂಬುದರಲ್ಲಿ, "One of the greatest books, the most

wonderful according to me, ever written under the Sun, is 'Yogavasista', which nobody on the earth can read without realizing God-consciousness, nobody can read through without becoming one with the All." "ಸೂರ್ಯನಿಂದ ಪೋಷಿತವೂ ಸಮಸ್ತಕ್ಕೂ ಸೂರ್ಯನೇ ಸಾಕ್ಷಿಯೂ ಆತ್ಮನೂ (ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ) ಆಗಿರುವ ಈ ಜಗತ್ತಿನಲ್ಲಿ ನನ್ನ ಅಭಿಪ್ರಾಯದಂತೆ ಅತ್ಯಂತ ಶ್ರೇಷ್ಠವೂ ಅತ್ಯಂತ ಅದ್ಭುತವೂ ಆದ ಗ್ರಂಥವೆಂದರೆ ಯೋಗವಾಸಿಷ್ಠವು. ಈ ಜಗತ್ತಿನಲ್ಲಿ ಅದನ್ನು ಯಾರೇ ಓದಲಿ, ಅವರಿಗೆ ಪರಮಾತ್ಮಜ್ಞಾನವಾಗದೇ ಇರುವದಿಲ್ಲ; ಅವರಿಗೆ 'ಸರ್ವೋಽಹಂ' 'ಸರ್ವವೂ ನಾನೇ' ಎಂಬ ಅನುಭವವಾಗದೇ ಇರುವದಿಲ್ಲ". ಎಂದು ಹೇಳಿದ್ದಾರೆ.

And in another lecture in the same country, viz., "World's Spiritual Debt to India." ಅಮೇರಿಕೆಯಲ್ಲಿಯೇ ಮಾಡಿದ, "ಇಂಡಿಯಾ ದೇಶದ ವಿಷಯದಲ್ಲಿ ಜಗತ್ತು ಹೊತ್ತಿರುವ ಅಧ್ಯಾತ್ಮಿಕ ಋಣ" ಎಂಬ ಉಪನ್ಯಾಸದಲ್ಲಿ "So, all your new thought is the old, antiquated thought of Hindus. The genuine centre, the whole truth and all the new thought were known to them. Blessed ones, in order to get to that, you have yet to wait a little, and get more knowledge from India, because most of those wonderful writings have not yet been translated into your language. Such as the Yogavasistha which deals with all the new thought of America. This work is clear, comprehensive and is written in real and true poetry." "ನೀವು ಹೊಸದೆಂದು ಹೇಳಿಕೊಳ್ಳುವ ವಿಚಾರಗಳೆಲ್ಲಾ ಹಿಂದೂಗಳ ಅತ್ಯಂತ ಪುರಾತನವಾದ, ಹಳೆಯ ಓಬೀರಾಯನ ಕಾಲದ ವಿಚಾರಗಳೇ. ಎಲ್ಲಕ್ಕೂ ನೈಜ ಕೇಂದ್ರವಾದ ಪೂರ್ಣಸತ್ಯವೂ ಮತ್ತು ಎಲ್ಲಾ ಹೊಸ ವಿಚಾರಗಳೂ ಅವರಿಗೆ ತಿಳಿದಿತ್ತು. ದಿವ್ಯಾತ್ಮರೆ! ನೀವು ಆ ಜ್ಞಾನವನ್ನು ಪಡೆಯುವುದಕ್ಕೆ ಕೆಲವು ಕಾಲ ಕಾಯಬೇಕು. ನೀವು ಹೆಚ್ಚಿನ ಜ್ಞಾನವನ್ನು ಇಂಡಿಯಾದಿಂದ ಪಡೆಯಬೇಕು. ಆ ಆಶ್ಚರ್ಯಕರವಾದ ಗ್ರಂಥಗಳು ಇನ್ನೂ ನಿಮ್ಮ ಭಾಷೆಗೆ ಅನುವಾದವಾಗಿಲ್ಲ; ಆದ್ದರಿಂದ ನೀವು ಕಾಯಬೇಕಾಗಿದೆ. ಅಮೇರಿಕಾದ ಎಲ್ಲಾ ಹೊಸ ವಿಚಾರಗಳನ್ನೂ 'ಯೋಗವಾಸಿಷ್ಠ' ಎಂಬ ಗ್ರಂಥವು ನೂರಾರು ವರ್ಷಗಳ ಹಿಂದೆಯೇ ತಿಳಿಸಿದೆ.

ಈ ಗ್ರಂಥವು ಸ್ಪಷ್ಟವಾಗಿದೆ; ವಿಶ್ವಗ್ರಾಸಿಯಾಗಿದೆ ; ಇದು ನೈಜವಾದ, ಸ್ವಾಭಾವಿಕವಾದ ಪದ್ಯಕಾವ್ಯದಲ್ಲಿ ಬರೆಯಲ್ಪಟ್ಟಿದೆ.''

ಸ್ವಾಮಿ ರಾಮತೀರ್ಥರು ಯೋಗವಾಸಿಷ್ಠವನ್ನು ಚೆನ್ನಾಗಿ ಅಧ್ಯಯನ ಮಾಡಿದವರಾದ್ದರಿಂದ ಅದರಲ್ಲಿ ಅತ್ಯಂತ ಗೌರವವುಳ್ಳವರಾಗಿದ್ದರು. ಅವರ ಅತಿ ಮೆಚ್ಚಿನ 'Practical Vedanta' "ವ್ಯವಹಾರಯೋಗ್ಯ ವೇದಾಂತ"ವು ಅಥವಾ "ವ್ಯವಹಾರ ಸಾಧ್ಯ ವೇದಾಂತ"ವು ಈ ಅತ್ಯಂತ ಶ್ರೇಷ್ಠ ಕೃತಿಯಾದ ಯೋಗವಾಸಿಷ್ಠವನ್ನು ಆಧರಿಸಿದ್ದಾಗಿತ್ತು. ಭಾರತೀಯ ಪ್ರತಿಭೆಯ ಅತ್ಯಂತ ಅದ್ಭುತ ಸೃಷ್ಟಿಯಾದ ಈ ಗ್ರಂಥವು ಜಗತ್ತಿನ ಸಾಹಿತ್ಯದಲ್ಲಿಯೇ-ತತ್ತ್ವಶಾಸ್ತ್ರಗಳಲ್ಲಿಯೇ-ವಿರಳವಾದ ಮೇರು ಕೃತಿಗಳಲ್ಲಿ ಇದೊಂದು ಎಂದು ಹೇಳಬಹುದು. ಜೀವನದ ರಹಸ್ಯಗಳಲ್ಲಿ ಆಳವಾಗಿ ಭೇದಿಸಿ ಪಾರಮಾರ್ಥಿಕವಾಗಿಯೂ ವ್ಯಾವಹಾರಿಕವಾಗಿಯೂ ಮಾರ್ಗದರ್ಶನ ಮಾಡಬಲ್ಲ ಶಾಸ್ತ್ರಗಳಲ್ಲಿ ಯೋಗವಾಸಿಷ್ಠವು ಪರಮೋಚ್ಚ ವರ್ಗಕ್ಕೆ ಸೇರಿದ್ದೆಂದು ಪರಿಗಣಿಸಲ್ಪಟ್ಟಿದೆ. ಕೆಲವರು ತತ್ತ್ವಜ್ಞಾನಿಗಳು ಈ ಗ್ರಂಥವು ಉಪನಿಷತ್ತುಗಳಿಗಿಂತಲೂ ಭಗವದ್ಗೀತೆಗಿಂತಲೂ ಮೇಲಿನ ಮಟ್ಟಕ್ಕೆ—ವರ್ಗಕ್ಕೆ—ಸೇರಿದ್ದೆಂದು ಅಭಿಪ್ರಾಯ ಪಡುತ್ತಾರೆ.

"The sayings about it, among the Vedantins" writes Dr. Bhagavandas, "is that it is a work of the Siddhavastha, that is for the philosopher yogin, who having mastered the theory, is passing on to the practice of it, while the other well-known works, even the Gita, the Upanishads and the Brahma Sutras are works of the Sadhanavastha, i.e., for those who are yet trying to master the theory". (Mystic Experience, Prefatory Note)

ಪ್ರಸಿದ್ಧರಾದ ಡಾಕ್ಟರ್ ಭಗವಾನ್‌ದಾಸ್ ಹೇಳುವದೇನೆಂದರೆ, "ವೇದಾಂತಿಗಳ ಅಭಿಪ್ರಾಯವೇನೆಂದರೆ, ಯೋಗವಾಸಿಷ್ಠವು ಸಿದ್ಧಾವಸ್ಥೆಗೆ ಉಪಯೋಗವಾದ ಕೃತಿ; ಯಾವ ವೇದಾಂತಿಯಾದ ಯೋಗಿಯು ತತ್ತ್ವವಿಚಾರವನ್ನೆಲ್ಲಾ ಚೆನ್ನಾಗಿ ಸ್ವಾಧೀನ ಮಾಡಿಕೊಂಡು ಅದರ ಸಾಧನೆಗಾಗಿ ತೊಡಗಿದ್ದಾನೋ ಅವನಿಗೆ ಈ ಗ್ರಂಥವು ಉತ್ತಮ ಸಹಾಯಕವಾದುದು. ಆದರೆ, ಪ್ರಸಿದ್ಧವಾದ ಗೀತಾ ಉಪನಿಷತ್ತುಗಳ ಬ್ರಹ್ಮಸೂತ್ರಗಳೂ ಸಹ ಸಾಧನಾವಸ್ಥೆಯ ಗ್ರಂಥಗಳು ; ತತ್ತ್ವವಿಚಾರವನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಮಾಡತಕ್ಕವರಿಗೆ ಉಪಯೋಗವಾದುವು." (ಗೂಢವಾದ ಯೌಗಿಕ—ಆಧ್ಯಾತ್ಮಿಕ ಅನುಭವ—ಪೀಠಿಕೆ.)

ಬೇರೆ ಯಾವ ಗ್ರಂಥಗಳಲ್ಲಿಯೂ ಹೇಳದೇ ಇರುವಷ್ಟು ವೀರ ಸ್ವಾವಲಂಬನೆಯನ್ನು ಯೋಗವಾಸಿಷ್ಠದಲ್ಲಿ ಹೇಳಿದೆ. ಮತ್ತು ಶಾಸ್ತ್ರೀಯವಾದ ಪ್ರಯತ್ನದಿಂದ ಸಾಧ್ಯವಿಲ್ಲದಿರುವುದು ಯಾವದೂ ಇಲ್ಲ; "I am the master of my own Destiny" "ನಮ್ಮ ಅದೃಷ್ಟಕ್ಕೆ ನಾವು ನಾವೇ ಒಡೆಯರು". ನಮ್ಮ ಸುಖ ದುಃಖಗಳಿಗೆ ನಮ್ಮ ಕರ್ಮವು ಕಾರಣವೇ ಹೊರತು ಬೇರೆ ಯಾವ ಹೊರಗಿನ ಶಕ್ತಿಯೂ ಕಾರಣವಲ್ಲ.....ಎಂದು ಮೊದಲಾಗಿ ಈ ಗ್ರಂಥದಲ್ಲಿ ಹೇಳಿರುವ ಹಾಗೆ ಬೇರೆ ಯಾವ ಗ್ರಂಥಗಳಲ್ಲಿಯೂ ಹೇಳಿಲ್ಲ. [II. 4-8; 5-9; 10, 11, 12, 29, II 6-27; 2, 35, 99; II. 7-19, 3; III. 6-14; 92-8, 19; VI^{b}. 162-18; 157-29.]

ವ್ಯಕ್ತವೂ ಅವ್ಯಕ್ತವೂ ಆದ ಸಮಸ್ತ ವಿಶ್ವವೂ ನಾನೇ ಎಂಬದೇ ಸ್ವಾಮಿ ವಿವೇಕಾನಂದರ ಮತ್ತು ಸ್ವಾಮಿ ರಾಮತೀರ್ಥರ "Practical Vedanta" 'ವ್ಯವಹಾರ ವೇದಾಂತ'ದ 'ಅನುಷ್ಠೇಯ ವೇದಾಂತ'ದ ಭದ್ರವಾದ ಅಸ್ತಿಭಾರವಾಗಿದೆ. [V. 17-17; 26-12; 73-3; 7-34; 34-42; IV. 22-33; 33; 35—51.] ಯೋಗವಾಸಿಷ್ಠದ ಪ್ರಕಾರ 'Practical Vedantist' ವ್ಯವಹಾರ ವೇದಾಂತಿಯು ಮಹಾಕರ್ತಾ, ಮಹಾಭೋಕ್ತಾ, ಮಹಾತ್ಯಾಗೀ ಎನಿಸುತ್ತಾನೆ. [VI^{a}. 115, 12, 34, VI^{b}. 115-21].

ಯೋಗವಾಸಿಷ್ಠದಲ್ಲಿ ಆತ್ಮಾನುಭವದ ಸಾಧನವನ್ನು ಹೀಗೆ ಹೇಳಿದೆ: ಅಹಂಕಾರದ ಮೇಘವು ಚದರಿದಾಗ ನಿರ್ಮಲವಾದ ಅನಂತ ಚಿದಾಕಾಶದಲ್ಲಿ ಆತ್ಮಾನುಭವದ ಸೂರ್ಯನು ಪ್ರಕಾಶಿಸುತ್ತಾನೆ. [IV. 33-28]. ಮನಸ್ಸಿರುವದರಿಂದ ಪ್ರಪಂಚವಿದೆ. ಇವುಗಳಲ್ಲಿ ಯಾವದಾದರೂ ಒಂದು ನಾಶವಾದರೆ ಇನ್ನೊಂದೂ ನಾಶವಾಗುತ್ತದೆ. ಸತ್ಯಸ್ವರೂಪವನ್ನು ಧ್ಯಾನ ಮಾಡುವುದರ ಮೂಲಕ ಇದು ಸಾಧ್ಯವಾಗುತ್ತದೆ. [IV. 17-19]. ಸರ್ವವೂ ತಾನೇ ಎನ್ನುವುದನ್ನು ನಿರಂತರವಾಗಿ ಧ್ಯಾನಮಾಡುವುದರಿಂದ ಮನೋಲಯವಾಗಿ ವಿಶ್ವಾತ್ಮ ಭಾವವು ಅನುಭವಕ್ಕೆ ಬರುತ್ತದೆ. [V. 55-2].

ಯೋಗವಾಸಿಷ್ಠಕಾರರು ಇಡೀ ಯೋಗಸಾಧನಾ ಕ್ರಮವನ್ನು ಒಂದೇ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ: (1) ಸತ್ಯವು (ಎರಡನೆಯದಿಲ್ಲದ) ಒಂದೇ ಎನ್ನುವ ದೃಢ ಜ್ಞಾನ. (2) ಪ್ರಾಣವಾಯುಗಳನ್ನು ಸ್ವಾಧೀನವಲ್ಲಿಯೂ ಸಮತೆಯಲ್ಲಿಯೂ ಇಟ್ಟುಕೊಳ್ಳುವದು. (3) ಮನಸ್ಸನ್ನು ಸುಮ್ಮನಾಗಿಸುವದು; ಸ್ತಬ್ಧಗೊಳಿಸುವುದು. ಸಮಾಧಾನ, ಶಮ [VI^{a}. 69-27].

ಆತ್ಮಾನುಭವವನ್ನು ಪಡೆದಿರುವ ಜೀವನ್ಮುಕ್ತನ ಲಕ್ಷಣವನ್ನು ವಾಸಿಷ್ಠದಲ್ಲಿ ಹೇಳಿದೆ: "ಜೀವನ್ಮುಕ್ತನು ಯಾವದರಲ್ಲಿಯೂ ಆಸಕ್ತಿ ಇಲ್ಲದೆ ಸಾರ್ವಭೌಮನಂತೆ ಜೀವಿಸಿರುತ್ತಾನೆ" [V. 93-24]. "ಅವನು ಯಾವದರಿಂದ ಆಕರ್ಷಿತನೂ ಆಗುವದಿಲ್ಲ; ಯಾವದನ್ನು ದ್ವೇಷಿಸುವದೂ ಇಲ್ಲ. ಅವನು ಕಾಮವಾಗಲೀ ರತಿಯಾಗಲೀ ಇಲ್ಲದಂತೆ ವಿಷಯಗಳಲ್ಲಿ ಚರಿಸುತ್ತಾನೆ. ಅವನು ಎಲ್ಲಾ ಆಸಕ್ತಿಗಳನ್ನೂ ಮೀರಿದ್ದಾನೆ [VIb. 102-13]. ಜನರಿಂದ ಅವನು ಉದ್ವಿಗ್ನನಾಗುವದಿಲ್ಲ; ಅವನಿಂದ ಜನರೂ ಉದ್ವಿಗ್ನರಾಗುವದಿಲ್ಲ. [6(2)-98-2, 3, 5; 6(2)-45-10....]

ಯೋಗವಾಸಿಷ್ಠದ ಆರು ಪ್ರಕರಣಗಳಲ್ಲಿ ಕೊನೆಯ ನಿರ್ವಾಣ ಪ್ರಕರಣವೇ ಮುಖ್ಯವೆನ್ನಬಹುದು; ಅದರಲ್ಲಿಯೂ ಚೂಡಾಲಾ-ಶಿಖಿಧ್ವಜರ ಆಖ್ಯಾನವು ಅದ್ವಿತೀಯವೂ ಅದ್ಭುತವೂ ಅಪೂರ್ವವೂ ಆದುದು.

ಓಂ ತತ್‌ಸತ್

ಭಗವತೀ ಚೂಡಾಲೆಯ ಆಖ್ಯಾನ

ಪೀಠಿಕಾ

ಮನುಷ್ಯ ಲೋಕದ ಕಲ್ಯಾಣಕ್ಕೆ ಕಾರಣವಾದ ನವವಿಧ ಭಕ್ತಿಗಳಲ್ಲಿ, ಭಗವಂತನ ಸಂಕೀರ್ತನ ಭಕ್ತಿಯನ್ನೇ ಪ್ರಪಂಚದಲ್ಲಿ ಮೂಲತಃ ಪ್ರಚಾರ ಮಾಡಿದ ಕೀರ್ತಿಯು, ಮಹಾ ಕಾರುಣಿಕ ದೇವರ್ಷಿ ನಾರದರದೇ ಆಗಿದೆ. ಅವರು ತಮ್ಮ ಭಕ್ತಿಸೂತ್ರಗಳಲ್ಲಿ "ಲೋಕೇಪಿ ಭಗವದ್ಗುಣ ಶ್ರವಣಕೀರ್ತನಾತ್।", ಎಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ: ಪ್ರಪಂಚದ ವ್ಯವಹಾರದಲ್ಲಿದ್ದರೂ ಪರಮಾತ್ಮನ ಮಹಿಮೆಗಳನ್ನು ಕೇಳುವುದರಿಂದಲೂ ಗಾನಮಾಡುವುದರಿಂದಲೂ ಭಗವದನುಗ್ರಹವುಂಟಾಗಿ ದುಃಖರಹಿತವಾದ ಪರಮಸುಖ ಪ್ರಾಪ್ತಿಯಾಗುವುದು. —ಎಂದು.

ವಿಷ್ಣು ಪುರಾಣದಲ್ಲಿಯೂ ಹೇಳಿರುವದೇನೆಂದರೆ :

ಅತ್ಯಂತ ದುಷ್ಟಸ್ಯ ಕಲೇರಯಮೇಕೋ ಮಹಾನ್ ಗುಣಃ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಬಂಧಃ ಪರಂ ವ್ರಜೇತ್ ॥

ಅತ್ಯಂತ ದುಷ್ಟಸಾದ ಕಲಿಯಲ್ಲಿ ಒಂದು ಮಹಾ ಗುಣವಿರುವುದು. ಭಗವಂತನ ಮಹಿಮೆಯನ್ನು ಕೀರ್ತನೆ ಮಾಡಿದರೆ ಸಾಕು. ಬಂಧಮುಕ್ತನಾಗುತ್ತಾನೆ.

ಕೀರ್ತನೆಯೇನೂ ಸಾಮಾನ್ಯವಲ್ಲವೆಂದು ಆ ಪುರಾಣದಲ್ಲಿಯೇ ಹೀಗೆ ಹೇಳಿದೆ :

ಧ್ಯಾಯನ್ ಕೃತೇ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ॥

ಕೃತಯುಗದಲ್ಲಿ ಧ್ಯಾನದಿಂದಲೂ ತ್ರೇತಾಯುಗದಲ್ಲಿ ಯಜ್ಞದಿಂದಲೂ ದ್ವಾಪರ ದಲ್ಲಿ ಪೂಜೆಯಿಂದಲೂ ಆಗುವ ಫಲವು ಕಲಿಯುಗದಲ್ಲಿ ಕೀರ್ತನದಿಂದಾಗುವುದು. ಇದನ್ನರಿತು ದೇವತೆಗಳು ಕೂಡಾ ಕಲಿಯುಗದಲ್ಲಿ ಜನ್ಮವನ್ನು ಬಯಸುವರು.

ಭಗವಂತನೇ ಹೇಳಿರುವದೇನೆಂದರೆ :

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇ ರವೌ ।
ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ ॥

ನಾನು ವೈಕುಂಠದಲ್ಲಾಗಲೀ ಕುಂಡಲಿಯ ಉತ್ಥಾಪನೆಯನ್ನು ಮಾಡುವ ಯೋಗಿಗಳ ಹೃದಯದಲ್ಲಾಗಲೀ ಸೂರ್ಯಮಂಡಲದಲ್ಲಾಗಲೀ ಇಲ್ಲ; ನನ್ನ ಮಹಿಮೆಯನ್ನು ಗಾನಮಾಡುವ ಭಕ್ತರ' ಬಳಿಯಲ್ಲಿಯೇ ನಾನು ಸರ್ವದಾ ಇರುವೆನು.

ಆದಕಾರಣ ಕೀರ್ತನಭಕ್ತಿಯು ಅತಿ ಶ್ರೇಷ್ಠವಾದುದು. ಬಹಳ ಮಟ್ಟಿಗೆ ಎಲ್ಲರಿಗೂ ಬಹಳ ಪ್ರಿಯವೂ ಸುಲಭವೂ ರಸಮಯವೂ ಆದುದು.

ಧರ್ಮ, ಭಕ್ತಿ, ಜ್ಞಾನ, ಇವುಗಳನ್ನು ಪ್ರಚಾರ ಮಾಡುವದಕ್ಕೆ ವಾಙ್ಮಯವಾದ ಮೂರು ಸಾಧನಗಳಿವೆ. ಕೀರ್ತನ, ಪುರಾಣ, ವೇದಾಂತ ಪ್ರವಚನ, ಇವೇ ಆ ಮೂರು. ಇವುಗಳಲ್ಲಿ ಕೀರ್ತನವು ಸರಸವಾದ ಸಂಗೀತದಿಂದಲೂ ಸ್ವಾರಸ್ಯವಾದ ಕಥೆಗಳಿಂದಲೂ ಸದ್ಧರ್ಮವನ್ನೂ, ಭಕ್ತಿಪ್ರಧಾನವಾದ ತತ್ತ್ವಜ್ಞಾನವನ್ನೂ ಮನೋರಂಜನೆ ಆಗುವಂತೆ ಬೋಧಿಸುತ್ತದೆ. ಇದರಿಂದ ಆಬಾಲವೃದ್ಧರೂ ಮಹಿಳೆಯರೂ ಅಲ್ಪಜ್ಞರೂ ನಾಸ್ತಿಕರೂ ಕೂಡಾ ಪ್ರಯೋಜನವನ್ನು ಹೊಂದಬಹುದು. ಪುರಾಣ ಪ್ರವಚನಗಳಿಂದಲಾದರೋ ವಿಶಿಷ್ಟ ಯೋಗ್ಯತೆಯುಳ್ಳವರೇ ಲಾಭವನ್ನು ಪಡೆಯಬಹುದು.

ಶ್ರದ್ಧಾಭಕ್ತಿಯುಳ್ಳ ಆಸ್ತಿಕರೇ ಪುರಾಣ ಶ್ರವಣಕ್ಕೆ ಅಧಿಕಾರಿಗಳು. ಆದರೆ, ವಿವೇಕ ವೈರಾಗ್ಯ ಶಮದಮಾದಿ ಸಾಧನಚತುಷ್ಟಯಸಂಪನ್ನರಾದವರೇ ವೇದಾಂತ ಪ್ರವಚನವನ್ನು ಶ್ರವಣಮಾಡುವುದಕ್ಕೆ ಅಧಿಕಾರಿಗಳು. ಕೀರ್ತನ ಪುರಾಣಗಳಲ್ಲಿ ಆ ಮಟ್ಟದ ಶ್ರೋತೃಗಳಿಗಾಗಿ ರಂಜನೆಯು ಹೆಚ್ಚಾಗಿದೆ. ವೇದಾಂತಪ್ರವಚನದಲ್ಲಿ ಯಾದರೋ ಅಂಜನವು ತುಂಬಿದೆ. ಅದು ಜ್ಞಾನಾಂಜನ. ಅಂಜನದಿಂದ ಕಣ್ಣು ಉರಿ ಬಂದರೂ ದೃಷ್ಟಿ ನಿರ್ಮಲವೂ ಸೂಕ್ಷ್ಮವೂ ತೀಕ್ಷ್ಣವೂ ಆಗಿ ಪಂಚಕೋಶಗಳ ಒಳಗೆ ಆಳವಾದ ತಳದಲ್ಲಿ, ಅಥವಾ ಅವಸ್ಥಾತ್ರಯಗಳ ಹಿಂದೆ ಅಡಗಿರುವ, ಸರ್ವ ಜಗತ್ತಿನ ಸಾರವಾಗಿರುವ ಆತ್ಮತತ್ತ್ವದ ನಿಧಿಯು, ಹೇಗಿದೆಯೋ ಹಾಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಇದು ಸ್ವಲ್ಪ ಕಷ್ಟಸಾಧ್ಯ.

ಆದರೆ ಕೀರ್ತನ-ಪುರಾಣ-ಪ್ರವಚನಗಳ ಕೆಲವೊಂದು ಮುಖ್ಯ ಲಕ್ಷಣಗಳನ್ನು ಸೇರಿಸಿ ಹಿತ-ಮಿತ ಮಿಶ್ರಣವಾದ ಒಂದು ರಸಾಯನವನ್ನು ಅಪರೂಪವಾಗಿ ತಯಾರಿಸ

ಬಹುದು. ಈ ಪ್ರಯತ್ನವೇ ಪ್ರಕೃತ ವಿಷಯವಾದ ಚೂಡಾಲಾ ಆಖ್ಯಾನ. ಸಾಮಾನ್ಯವಾಗಿ ಕೀರ್ತನದಲ್ಲಿ ತುಂಬಿರುವ ಅಥವಾ ತುಂಬಿರಬೇಕಾದ ದಾಸರ ಪದಗಳೂ ಮಹಾರಾಷ್ಟ್ರ ಸಂತರ ಅಭಂಗಗಳೂ, ಸಾಕಿ, ದಿಂಡಿಗಳೂ, ಕಬೀರದಾಸ್, ಮೀರಾ ಮೊದಲಾದ ಸಾಧುವರ್ಯರ ಹಿಂದೀ ದೋಹಗಳೂ, ಕೀರ್ತನೆಗಳೂ, ಶಿವಶರಣರ ವಚನಗಳೂ ಇತ್ಯಾದಿಗಳು ಇದರಲ್ಲಿ ಕಾಣದಿದ್ದರೂ (ಇವುಗಳನ್ನೂ ಬೇಕಾದರೆ ಇದರಲ್ಲಿ ಸೇರಿಸಿಕೊಳ್ಳಬಹುದು) ಚೂಡಾಲಾ ಕಥೆಗೆ ಸಂಬಂಧಪಟ್ಟ ಅವಶ್ಯವಾದ ಗೀತೆಗಳು ಮಾತ್ರ ಇದರಲ್ಲಿ ಇವೆ. ಕೀರ್ತನ-ಪುರಾಣಗಳಲ್ಲಿರಬೇಕಾದ ಕಥೆಯಿದೆ. ಆದರೆ ಕೀರ್ತನ-ಪುರಾಣಗಳಲ್ಲಿ ಧರ್ಮವನ್ನೋ ಭಕ್ತಿಯನ್ನೋ ಹೆಚ್ಚಾಗಿ ನಿರೂಪಿಸಿ ಜ್ಞಾನದ ಝುಳುಕನ್ನು ಮಾತ್ರ ತೋರಿಸಬೇಕು— ಎನ್ನುವ ಪದ್ಧತಿಗೂ ವಾದಕ್ಕೂ ಇದು ಪ್ರತ್ಯೇಕವಾಗಿದೆ (ಅಪವಾದವಾಗಿದೆ). ಈ ಚೂಡಾಲೆಯಲ್ಲಿ, ಧರ್ಮವನ್ನಾಗಲೀ ಭಕ್ತಿಯನ್ನಾಗಲೀ ಬಿಡದೆ, ಹೃದಯದಲ್ಲಿ ಪೋಷಿಸಿಕೊಂಡು, ವೇದಾಂತಪ್ರವಚನದಲ್ಲಿ ಮುಖ್ಯವಾಗಿ ಇರಬೇಕಾದಂತೆ ತತ್ತ್ವಜ್ಞಾನವನ್ನೇ ಹೆಚ್ಚಾಗಿ ಬೆಳಗಿಸುತ್ತಿದೆ. ಆದರೆ ಇದರಲ್ಲಿ ತತ್ತ್ವವಿಚಾರದ ಜೊತೆಗೆ ಧಾರಣಾ-ಧ್ಯಾನ-ಸಮಾಧಿಗಳಿಂದ ಕೂಡಿದ (ಸಂಯಮಯೋಗವೂ ಅಥವಾ) ರಾಜಯೋಗವೂ ಯೋಗಸಿದ್ಧಿಗಳ ಮಹಿಮೆಯೂ ವಿಜೃಂಭಿಸುತ್ತಾ ಇವೆ. ಪರಿಶುದ್ಧವಾದ ಆತ್ಮವಿಚಾರದಿಂದ ಆತ್ಮವೊಂದೇ ಸತ್ಯವೆಂಬ ದೃಢನಿಶ್ಚಯವನ್ನು ಪಡೆದು ಎಲ್ಲಾ ಸಂಕಲ್ಪಗಳನ್ನೂ ಬಿಟ್ಟು ತನ್ನಲ್ಲಿಯೇ ತಾನು ನೆಲೆನಿಲ್ಲುವದೆಂಬ ಅಮನಸ್ಕ ಯೋಗವನ್ನೂ ಅಧ್ಯಾತ್ಮಯೋಗವನ್ನೂ ಇದರಲ್ಲಿ ಹೇಳಿದೆ. ನಿಜವಾದ ತ್ಯಾಗದಿಂದಲೂ ಬೇರೆ ಸಾಧನಗಳಿಂದಲೂ (ನಡುವೆ ಎಷ್ಟು ಅಡ್ಡಿಗಳು ಬಂದರೂ) ಶಿಷ್ಯನು ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಯಲು ಸಹಾಯ ಮಾಡಬಲ್ಲ ಸಮರ್ಥನಾದ ಗುರುವಿನಿಂದ ಸಾಧನಪಥವು ಎಷ್ಟು ಸರಳವೂ ಸುಲಭವೂ ಆಗುತ್ತದೆ, ಎನ್ನುವದನ್ನು ಈ ಕಥೆಯಲ್ಲಿ ಹೇಳಿರುತ್ತದೆ. ಈ ಕಥೆಯ ಮುಖ್ಯ ವಿಷಯ, — ಆಚಾರ್ಯೋಪದೇಶ — ಶಮದಮಾದಿಗಳಿಂದ ತುರ್ಯ ಸ್ಥಿತಿಯಲ್ಲಿ ಅನುಭವಕ್ಕೆ ಬರುವ ಭೂಮಾನಂದಪ್ರಾಪ್ತಿ, ಎನ್ನಬಹುದು. ಭೂಮಾನಂದವೆಂದರೆ ಏನು ?—ಎನ್ನುವದನ್ನು ತಿಳಿಯುವದಕ್ಕಾಗಿ—ಈ ಕಥೆಗೆ ಪೀಠಿಕಾ ಪ್ರಸಂಗವಾಗಿ ಆನಂದ ಅಥವಾ ಸುಖ, ಇದರ (ಮೀಮಾಂಸೆಯನ್ನು) ಶಾಸ್ತ್ರೀಯ ವಿಚಾರವನ್ನು ಸಂಕ್ಷೇಪವಾಗಿ ಈಗ ಮಾಡಬೇಕಾಗಿದೆ.

ಪ್ರಪಂಚದಲ್ಲಿರುವ ಜೀವಿಗಳ ಬಯಕೆಗಳು ಬೇರೆ ಬೇರೆ ಅನೇಕವಾಗಿದ್ದರೂ ಎಲ್ಲಾ ಜೀವಿಗಳ ಎಲ್ಲಾ ಬಯಕೆಗಳ ಗುರಿಯೂ ಒಂದೇ ಆಗಿದೆ. ಆ ಒಂದು ಗುರಿಯೆನ್ನುವುದೇ ಸುಖಾನುಭವ. ಎಲ್ಲಾ ಪ್ರಾಣಿಗಳ ಹಂಬಲವೂ ಪ್ರವೃತ್ತಿಯೂ ಸುಖವನ್ನು ಹೊಂದುವದಕ್ಕಾಗಿಯೇ ಇದೆ. ಸುಖವನ್ನು ಬೇಡವೆನ್ನುವ ಅಥವಾ

ದುಃಖವನ್ನು ಬೇಕೆನ್ನುವ ಪ್ರಾಣಿಯು ಯಾವುದೂ ಇಲ್ಲ. ಸುಖವನ್ನು ಹೊಂದ ಬೇಕೆಂದೂ ದುಃಖವನ್ನು ತಪ್ಪಿಸಿಕೊಳ್ಳಬೇಕೆಂದೂ ಪ್ರತಿಯೊಂದು ಪ್ರಾಣಿಯ ಸಹಜ ಪ್ರವೃತ್ತಿಯಾಗಿದೆ. ಆದ್ದರಿಂದ ಲೋಕದಲ್ಲಿ ಯಾವುದರಲ್ಲಿಯೂ ಒಂದೆನಿಸಲಾರದ ಜೀವಿಗಳು ಸುಖದ ಹಂಬಲದಲ್ಲಿ ಮಾತ್ರ ಒಂದಾಗಿದ್ದಾರೆ.

ಮನುಷ್ಯರಲ್ಲಿಯಾದರೂ ಎಲ್ಲರೂ ಬಯಸುವುದು ಸುಖವನ್ನೇ ಆಗಿದೆ. ಎಲ್ಲರ ಎಲ್ಲಾ ಪ್ರಯತ್ನವೂ ಸುಖವನ್ನು ಸಂಪಾದಿಸುವುದಕ್ಕೇ ಆಗಿದೆ. ನಾವು ವಿದ್ಯಾಭ್ಯಾಸ ಮಾಡುವುದು ಏತಕ್ಕಾಗಿ ? ಜ್ಞಾನಾರ್ಜನೆಗಾಗಿ ಎನ್ನಬಹುದು ; ಆದರೆ ಅದು ವಾಸ್ತವವಾಗಿ ಧನಾರ್ಜನೆಗಾಗಿಯೂ ಇದೆ. ಜ್ಞಾನವಾಗಲೀ ಧನವಾಗಲೀ ಏತಕ್ಕಾಗಿ? ನಮ್ಮ ಸುಖಜೀವನಕ್ಕಾಗಿ. ನಾವು ವ್ಯವಸಾಯ ಮಾಡುವುದಾಗಲೀ ವ್ಯಾಪಾರ ಮಾಡುವುದಾಗಲೀ ಯಾವ ಉದ್ಯೋಗ ಮಾಡುವುದಾಗಲೀ ಏತಕ್ಕಾಗಿ ? ಧನಾರ್ಜನೆಗಾಗಿಯೇ ಅಲ್ಲವೆ ? ಆ ಧನವಾದರೂ ಏತಕ್ಕಾಗಿ ? ನಿಶ್ಚಯವಾಗಿಯೂ ನಮ್ಮ ಸುಖಕ್ಕಾಗಿಯೇ. ಸುಖವು ಏತಕ್ಕಾಗಿ ? ಇದಕ್ಕೆ ಮಾತ್ರ ಉತ್ತರವಿಲ್ಲ. ಈ ಪ್ರಶ್ನೆಯೇ ಉಚಿತವಲ್ಲವೆಂದು ಯಾರಿಗಾದರೂ ತೋರುತ್ತದೆ. ಇದು ಹುಚ್ಚರು ಮಾಡಬಹುದಾದ ಪ್ರಶ್ನೆಯೆಂದೂ ತೋರಬಹುದು. ಇದು ಏತಕ್ಕಾಗಿ? — ಇದು ಏತಕ್ಕಾಗಿ? ಎನ್ನುವ ಪ್ರಶ್ನೆಯನ್ನು ಈ ಜಗತ್ತಿನಲ್ಲಿ ಯಾವ ವಸ್ತುವಿಗಾದರೂ ಯಾವ ಕಾರ್ಯಕ್ಕಾದರೂ ಹಾಕಬಹುದು. ಏಕೆಂದರೆ, ಅದರಿಂದ ನಮಗಾಗುವ ಪ್ರಯೋಜನವನ್ನು ತಿಳಿಯುವುದಕ್ಕಾಗಿ ಈ ಪ್ರಶ್ನೆ ಇದೆ. ಆದ್ದರಿಂದ ಈ ಪ್ರಶ್ನೆ ತಪ್ಪಲ್ಲ. ಆದರೆ ಸುಖವು ಮಾತ್ರ, ಎಲ್ಲರ ಎಲ್ಲಾ ಪ್ರಯತ್ನಗಳ ತುಟ್ಟತುದಿಯ ಗುರಿಯಾದ್ದರಿಂದಲೂ ಕಟ್ಟಕಡೆಯ ಹೆಚ್ಚಿನ ಪ್ರಯೋಜನವಾದ್ದರಿಂದಲೂ ಅದರಿಂದಾಚೆಗೆ ನಮಗೆ ಅದಕ್ಕಿಂತಲೂ ಹೆಚ್ಚು ಇಷ್ಟವಾದುದು ಎನ್ನುವುದು ಯಾವುದೂ ಇಲ್ಲವಾದ್ದರಿಂದಲೂ ಸುಖವು ಏತಕ್ಕಾಗಿ – ಎನ್ನುವ ಪ್ರಶ್ನೆಯು ಹುಟ್ಟುವುದಿಲ್ಲ. ಸೃಷ್ಟಿಯಲ್ಲಿಯೇ ಎಲ್ಲಕ್ಕೂ ಶ್ರೇಷ್ಠವಾದ ಬ್ರಹ್ಮಲೋಕವನ್ನೇ ನಾವು ಬಯಸುವದಾದರೂ ನಮ್ಮ ಸುಖಕ್ಕಾಗಿ.

ಐಹಿಕವಾದ ಧನವನ್ನೂ, ಅಧಿಕಾರವನ್ನೂ, ಶಕ್ತಿಯನ್ನೂ ನಾವು ಬಯಸುವುದು ನಮ್ಮ ಸುಖಕ್ಕಾಗಿ. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಮೊದಲಾದ ಲಲಿತಕಲೆಗಳನ್ನು ನಾವು ಅಭ್ಯಾಸಮಾಡುವುದೂ ನಮ್ಮ ಸುಖಕ್ಕಾಗಿ. ಆಧುನಿಕವಾದ ವೈಜ್ಞಾನಿಕ ಸಕಲ ಸಂಶೋಧನೆಗಳೂ ಸಾಧನೆಗಳೂ ನಡೆದಿರುವುದು ಎಲ್ಲರ ಸುಖಕ್ಕಾಗಿ ಎಂದೇ. ಆದರೆ, ಅಹಂಕಾರದಿಂದಲೂ ಆಸುರೀಭಾವಗಳಿಂದಲೂ ನಮ್ಮ ಸಾಧನೆಗಳು ವಿನಾಶಕ್ಕೂ ಕಾರಣವಾಗಬಹುದು. ಆ ಅವಿವೇಕದ ಮರೆಯಲ್ಲಿಯೂ ನಮಗೇ ಗೋಚರವಾಗದಂತೆ ಅಡಗಿರುವುದು ಸುಖದ ಹಂಬಲವೇ ಆಗಿದೆ.

ಹೀಗೆ ಒಬ್ಬೊಬ್ಬರ ಸುಖಾಪೇಕ್ಷೆಯೂ ಅದಕ್ಕಾಗಿ ಮಾಡುವ ಸಾಧನೆಯೂ ಮತ್ತೊಬ್ಬರ ಸುಖವನ್ನೂ ಅಥವಾ ಹಲವರ ಸುಖವನ್ನೂ ಕೆಡಿಸಬಹುದು. ಹಾಗಾಗ ಬಾರದೆಂದೇ, ಸುಖಾಪೇಕ್ಷಿಗಳ ಸ್ವೇಚ್ಛಾಪ್ರವೃತ್ತಿಗೆ ಅಂಕುಶವನ್ನು ಹಾಕಿ, ಪರಸ್ಪರ ಸಂಘರ್ಷಣೆಯಿಲ್ಲದಂತೆ ಸರ್ವರ ಸುಖವನ್ನೂ ಸಾಧಿಸಿ ಕೊಡುವುದಕ್ಕಾಗಿಯೇ ನೀತಿ-ಧರ್ಮಗಳ ವ್ಯವಸ್ಥೆಯಿದೆ. ವ್ಯಕ್ತಿಗೂ ಸಮಾಜಕ್ಕೂ ದೇಶಕ್ಕೂ ರಾಷ್ಟ್ರಕ್ಕೂ ಅಂತರರಾಷ್ಟ್ರಕ್ಕೂ ಸ್ನೇಹ-ಸಹಜೀವನಗಳಿಗೆ ಸಂಬಂಧಪಟ್ಟ ನೀತಿ ನಿಯಮಗಳಿವೆ. ಆದರೆ ವ್ಯಕ್ತಿಗಳೂ ಜನಾಂಗಗಳೂ ರಾಷ್ಟ್ರಗಳೂ ದುರಹಂಕಾರಕ್ಕೂ ದುರಾಶೆಗಳಿಗೂ ಬಲಿಯಾಗಿ ಪರಸ್ಪರ ದ್ವೇಷಾಸೂಯೆಗಳಿಂದ ನೀತಿಧರ್ಮಗಳನ್ನು ನಾಶಮಾಡಿ, ಪ್ರಪಂಚದ ಸುಖ-ಶಾಂತಿಗಳನ್ನು ಭಂಗಗೊಳಿಸುತ್ತಾರೆ.

ಪ್ರಜಾಪ್ರಭುತ್ವವಾದಿ ರಾಷ್ಟ್ರಗಳೂ ಕಮ್ಯೂನಿಸಂವಾದಿ ರಾಷ್ಟ್ರಗಳೂ ತಮ್ಮ ತಮ್ಮ ತತ್ತ್ವಗಳಲ್ಲಿಯೇ ಸುಖಶಾಂತಿಯಿದೆಯೆಂದು ನಂಬಿ, ಎದುರಾಳಿ ವಾದವನ್ನು ನಾಶಮಾಡಿ, ತಮ್ಮ ತತ್ತ್ವವೊಂದನ್ನೇ ಪ್ರಪಂಚದಲ್ಲೆಲ್ಲಾ ಪ್ರಸ್ಥಾಪಿಸುವುದರಿಂದ ನಮ್ಮ ಭೂಲೋಕವನ್ನು ಭೂವೈಕುಂಠವನ್ನಾಗಿ ಮಾಡುವೆವೆಂದು ಸಾರುತ್ತಾರೆ. ಆದರೆ ಪ್ರಭುತ್ವಾಕಾಂಕ್ಷಿಗಳಾದ ದುಷ್ಟರ ದರ್ಪ-ದೌರ್ಜನ್ಯಗಳಿಂದ ನಮ್ಮೀ ಲೋಕವು ಸುಖಶಾಂತಿಗಳನ್ನು ಕಳೆದುಕೊಂಡು ಹೆಚ್ಚು ಹೆಚ್ಚು ನರಕಸಮಾನವೇ ಆಗುತ್ತಿದೆ.

ಪ್ರಾಪಂಚಿಕವಾದ ಯಾವ ಸುಖವಾದರೂ ಅಲ್ಪವೂ ಅನಿತ್ಯವೂ ಕ್ಷಣಭಂಗುರವೂ ಶ್ರಮಪೂರಿತವೂ ಅತಿಶಯ ದುಃಖಮಿಶ್ರಿತವೂ ವಿಷಯಾಧೀನವೂ ಪರತಂತ್ರವೂ ಆಗಿದೆ. ಅದನ್ನು ಬೆನ್ನಟ್ಟಿ ಓಡಿದಷ್ಟೂ ಅದು ದೂರವೇ ಆಗುತ್ತದೆ. ಸುಖದ ಬಯಕೆಯು ದುಃಖಕ್ಕೇ ಕಾರಣವಾಗಿದೆ. ಆಶೆಯೇ ಅಶಾಂತಿಗೆ ಮೂಲವಾದುದು. "ಅಶಾಂತಸ್ಯ ಕುತಸ್ಸುಖಂ" ಶಾಂತಿಯಿಲ್ಲದ ಮೇಲೆ ಸುಖವೆಲ್ಲಿ? ಎಂದು ಭಗವಂತನು ಗೀತೆಯಲ್ಲಿ ಹೇಳಿರುವಂತೆ ಸುಖಕ್ಕೆ ಮನಶ್ಶಾಂತಿಯೇ ಮುಖ್ಯ ಕಾರಣವಾಗಿದೆಯೇ ಹೊರತು ಕೇವಲ ವಿಷಯೋಪಭೋಗವಲ್ಲ. ಸುಖಕ್ಕಾಗಿ ಕಾಮ್ಯ ವಿಷಯಗಳನ್ನು ಉಪಭೋಗ ಮಾಡಿದಷ್ಟೂ ಕಾಮದಾಹವು ಉರಿದೇಳುವುದೇ ಹೊರತು ತೃಪ್ತಿಯಾಗುವುದಿಲ್ಲ. ಯಯಾತಿಯು ಮುಪ್ಪಿನಲ್ಲಿ ತನ್ನ ಮಗ ಪುರುವಿನಿಂದ ತಾರುಣ್ಯವನ್ನು ತಾತ್ಕಾಲಿಕವಾಗಿ ಕೈಗಡ ತೆಗೆದುಕೊಂಡು ಸಹಸ್ರ ವರ್ಷಗಳು ದಿವ್ಯ ಭೋಗಗಳನ್ನು ಭೋಗಿಸಿದರೂ ತೃಪ್ತನಾಗದೆ ಕೊನೆಗೆ ವಿವೇಕದಿಂದ ಹೀಗೆ ಉದ್ಗಾರಮಾಡಿದನು :

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

ಕಾಮ ವಿಷಯಗಳನ್ನು ಭೋಗಿಸುವುದರಿಂದ ನಮ್ಮ ಸುಖದ ಆಶೆಯು ಎಂದಿಗೂ ಶಾಂತವಾಗಲಾರದು. ಅಗ್ನಿಗೆ ಹವಿಸ್ಸನ್ನು ಹಾಕುವುದರಿಂದ ಭುಗ್ಗೆಂದು ಉರಿಯು ಹೆಚ್ಚಾಗಿಯೇ ಎದ್ದುಕೊಳ್ಳುವಂತೆ ಕಾಮೋಪಭೋಗದಿಂದ ನಮ್ಮ ಸುಖಕಾಮನೆಯ ದಾಹವು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆದುಕೊಳ್ಳುತ್ತಲೇ ಇರುವುದು—ಎಂದು ಯಯಾತಿಯು ಹೇಳಿಕೊಂಡಿರುವುದರ ಸತ್ಯತೆಯು ನಮ್ಮೆಲ್ಲರ ಅನುಭವದಲ್ಲಿಯೂ ಇದೆ.

ಇಷ್ಟಾದರೂ, ಎಷ್ಟೋ ಕಷ್ಟಪಟ್ಟು ನಾವು ಅನುಭವಿಸುತ್ತಿರುವ ವಿಷಯ ಸುಖವು ನಿಜವಾದ ಸುಖವಲ್ಲವೆಂದೂ ಸುಖದ ತೋರಿಕೆ ಮಾತ್ರವೆಂದೂ ಹಾಗೂ ಅಪಾರವಾದ ನಿಜಸುಖದ ಆ ಮಹಾಸಿಂಧುವಿನಲ್ಲಿ, ಇಂದ್ರಾದಿ ದೇವತೆಗಳ ವಿಷಯ ಸುಖವು ಸಹ, ಬಿಂದುಮಾತ್ರವಾಗಬಹುದೆಂದೂ ನಿಜಸುಖವನ್ನು ತಿಳಿದ ಮಹಾನುಭಾವರು ಹೇಳುತ್ತಾರೆ. ಏಕೆಂದರೆ, ಹೊರಗಿನಿಂದ ನಾವು ಪಡೆಯುವ ಸುಖದ ಸ್ವಭಾವವೇ ಅಂತಹುದು. ತೋರುವುದೂ ಹಾರುವುದೂ ಅದರಿಂದ ದುಃಖ ವನ್ನುಂಟುಮಾಡುವುದೂ ಅದರ ಮುಖ್ಯ ಸ್ವಭಾವ. ಹರಿತವಾದ ಕತ್ತಿಯ ಅಲಗಿಗೆ ಜೇನುತುಪ್ಪವನ್ನು ಹಚ್ಚಿ ನಾಲಗೆಯಿಂದ ಅದನ್ನು ನೆಕ್ಕಿದರೆ ಅನುಭವಕ್ಕೆ ಬರುವ ಅತ್ಯಲ್ಪವಾದ ಜೇನಿನ ಲೇಶಮಾತ್ರವಾದ ಸವಿಗಿಂತಲೂ ನಾಲಿಗೆಯು ಸೀಳಿ, ರಕ್ತ ಸುರಿದು, ಉರಿದು, ವ್ರಣವಾಗಿ, ಬಹಳ ಕಾಲ ಅನುಭವಿಸುವ ದುಃಖದ ಪ್ರಮಾಣವೇ ಬಹಳ ಹೆಚ್ಚಾಗಿರುವಂತೆ ವಿಷಯ ಸುಖವು (ಅದಕ್ಕಾಗಿಯೂ ಅದರಿಂದಲೂ ಪ್ರಾಪ್ತಿಯಾಗುವ) ದುಃಖವೂ ಇವೆ.

ಗೀತೆಯಲ್ಲಿ ಭಗವಂತನು :

ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।

ವಿಷಯೇಂದ್ರಿಯಗಳ ಸಂಯೋಗದಿಂದ ಉಂಟಾಗುವ ಸುಖಭೋಗಗಳೆಲ್ಲಾ ದುಃಖದ ಉತ್ಪತ್ತಿಸ್ಥಾನಗಳೇ—ಎಂದು ಹೇಳಿದ್ದಾನೆ.

ಭರ್ತೃಹರಿ ಮಹರ್ಷಿಯು ಹೇಳಿರುವುದೇನೆಂದರೆ,

ಪ್ರತೀಕಾರಂ ವ್ಯಾಧೇಃ ಸುಖಮಿತಿ ವಿಪರ್ಯಸ್ಯತಿ ಜನಃ ।

ಹಸಿವು, ಬಾಯಾರಿಕೆ, ಸ್ತ್ರೀ-ಪುರುಷ ಕಾಮ ಇವೇ ಮೊದಲಾದವು ಪ್ರಾಣಿ ಸಹಜವಾದ ನಿತ್ಯರೋಗಗಳು. ಈ ವ್ಯಾಧಿಗಳ ಬಾಧೆಯನ್ನು ಸಹಿಸಲಾರದೇ ಮಾಡಿಕೊಳ್ಳುವ ಚಿಕಿತ್ಸಾರೂಪವಾದ ಭೋಜನ, ಪಾನ, ಆಲಿಂಗನಾದಿ ಪರಿಹಾರ ಗಳನ್ನೇ ಸುಖವೆಂದು ಭ್ರಮಿಸಿದ್ದೇವೆ. ಭರ್ತೃಹರಿಯೇ ಇನ್ನೊಂದು ಸಂದರ್ಭದಲ್ಲಿ—

ಚುಂಬನಂ ದೇಹಿ ಮೇ ಕಾಂತಾ ಕಾಮಚಂಡಾಲ ತೃಪ್ತಯೇ ।

"ಎಲೈ ಕಾಂತೆ ! ನನ್ನನ್ನು ಕಾಡುತ್ತಿರುವ ಈ ಕಾಮಚಂಡಾಲನ ಪೀಡೆಯ ಪರಿಹಾರಕ್ಕಾಗಿ ಚುಂಬನಾದಿಗಳನ್ನು ನೀಡು" ಎಂದು ಹೇಳಿದ್ದಾನೆ. ಹೀಗೆ ನಮ್ಮ ಎಷ್ಟೋ ಸುಖಗಳು ದುಃಖ ಪರಿಹಾರ ಮಾತ್ರವಾಗಿವೆ.

ಆರೋಗ್ಯವಾಗಿದ್ದ ನಾವು ಜ್ವರಾದಿ ರೋಗದಿಂದ ಬಹಳ ದಿನಗಳು ವ್ಯಥೆಪಟ್ಟು ಔಷಧೋಪಚಾರಗಳಿಂದ ಗುಣಹೊಂದಿ ಸುಖವಾಯಿತೆನ್ನುತ್ತೇವೆ. ಇಲ್ಲಿ ನಮಗೆ ನಿಜವಾಗಿಯೂ ಆದ ಸುಖವೇನು? ಮೊದಲು ಆರೋಗ್ಯವಂತರಾಗಿದ್ದ ನಾವೇ ಮಧ್ಯದಲ್ಲಿ ಆರೋಗ್ಯವನ್ನು ಕಳೆದುಕೊಂಡು ಪುನಃ ಆರೋಗ್ಯವನ್ನೇ ಹೊಂದಿದೆವು. ಇದರಿಂದ ನಮಗೆ ಹೆಚ್ಚಿನ ಲಾಭವೇನೂ ಇಲ್ಲವಾದರೂ ನಮಗಾದ ಕಷ್ಟ ನಷ್ಟ ಪರಿಹಾರವೇ ಹೊಸ ಲಾಭವೆನ್ನಿಸಿ ನಮ್ಮನ್ನು ಉಲ್ಲಾಸಪಡಿಸುತ್ತದೆ.

ಮಳೆಗಾಲದಲ್ಲಿ ಮನೆಯಲ್ಲಿ ನೆಮ್ಮದಿಯಾಗಿದ್ದ ನಾವು, ಯಾವದೊಂದು ಕಾರ್ಯಕ್ಕಾಗಿ ಹೊರಗೆ ಹೋಗಿ, ಕೊಡೆಯಿಲ್ಲದೆ ಮಳೆಯಲ್ಲಿ ನೆನೆದು ತೊಂದರೆಪಟ್ಟು ಪುನಃ ಮನೆಗೆ ಬಂದು ಹಾಯಾಗಿರುತ್ತೇವೆ. ಇಲ್ಲಿ ನಮಗಾದ ಸುಖವೂ ದುಃಖದ ಪರಿಹಾರವೇ ಆಗಿದೆ.

ಹೀಗೆಯೇ ನಮ್ಮ ಮನಸ್ಸು ಯಾವುದೊಂದು ವಿಷಯವನ್ನು ಬಯಸಿ, ಅದಕ್ಕಾಗಿ ಹಂಬಲಿಸಿ, ಅದರ ಭೋಗಕ್ಕಾಗಿ ಕಾತರಿಸಿ, ಚಿಂತಾಕುಲವಾಗುತ್ತದೆ. ಆ ಇಷ್ಟವಸ್ತುವಿನ ದರ್ಶನಮಾತ್ರದಿಂದ ಉಂಟಾಗುವ ಮನಸ್ಸಿನ ಉಲ್ಲಾಸವು ಪ್ರಿಯವೆನಿಸುತ್ತದೆ. ಆ ವಸ್ತುವಿನ ಪ್ರಾಪ್ತಿಯಿಂದ ಉಂಟಾಗುವ ಹೆಚ್ಚಿನ ಉಲ್ಲಾಸವೇ ಮೋದವೆನಿಸುತ್ತದೆ. ಅದರ ಭೋಗದಿಂದ ಅನುಭವವಾಗುವ ಪೂರ್ಣ ಸುಖವು ಪ್ರಮೋದವೆನಿಸುತ್ತದೆ. ಈ ಪ್ರಿಯ, ಮೋದ, ಪ್ರಮೋದಗಳೆಂಬ ಮನೋವೃತ್ತಿಗಳು ಸುಖದ ತಾರತಮ್ಯ ಭಾವಗಳೇ ಆಗಿವೆ. ಇದರಲ್ಲಿ ವಿಷಯೋಪಭೋಗದಿಂದ ಇಂದ್ರಿಯಗಳಿಗುಂಟಾಗುವ ಸುಖಸಂವೇದನೆಯ ಜೊತೆಗೆ ಮನಸ್ಸಿನ ಸಂತೋಷವೂ ಸೇರಿದೆ. ಮನಸ್ಸಿನ ಬಯಕೆಯೆಂಬ ಬೇನೆಯ ಪ್ರತೀಕಾರವೇ ಅಥವಾ ಪರಿಹಾರವೇ ಈ ಸಂತೋಷವಾಗಿದೆ.

ಈ ಸಂತೋಷವಾದರೂ ಪೂರಾ ಹೊರಗಿನಿಂದ ಬಂದುದಲ್ಲ. ಅದು ನಮ್ಮ ಒಳಗಿನ ಆತ್ಮನ ಸುಖಸ್ವರೂಪದ ಪ್ರತಿಫಲನವೇ ಆಗಿದೆ. ಏಕೆಂದರೆ, ಬಯಕೆಯಿಂದ ಹರಿದಾಡುತ್ತಿದ್ದ ಮನಸ್ಸು, ಬಯಸಿದ್ದ ವಿಷಯವು ಲಭಿಸಿದ ಕೂಡಲೇ ಕ್ಷಣಿಕವಾದ ತೃಪ್ತಿಯಿಂದ, ಸ್ವಲ್ಪ ಹೊತ್ತು ಹರಿದಾಟವನ್ನು ಬಿಟ್ಟು, ಹಾಯಾಗಿ ತನ್ನೊಳಗೇ ನಿಲ್ಲುತ್ತದೆ. ವಿಷಯಲಾಭದ ಕಾರಣದಿಂದಲೇ ಆದರೂ ನಿಮಿಷಮಾತ್ರವಾದರೂ ಮನಸ್ಸು ನಿಶ್ಚಲವಾಗಿ ನಿಲ್ಲುವುದು ಸತ್ತ್ವಗುಣದ ಕಾರ್ಯವಾಗಿದೆ.

ನಿಶ್ಚಲವಾದ ಮನಸ್ಸು ನಿರ್ಮಲವೂ ಇರುವುದರಿಂದ, ಸ್ವಚ್ಛವಾದ ಕನ್ನಡಿಯಂತಿರುವ ಆ ಅಂತಃಕರಣ ವೃತ್ತಿಯಲ್ಲಿ ಸಚ್ಚಿದಾನಂದ ಸ್ವರೂಪನಾದ ನಮ್ಮ ಅಂತರಾತ್ಮನ ಆನಂದಸ್ವಭಾವದ ಸುಖವು ಪ್ರತಿಫಲಿಸಿ ತೋರುತ್ತದೆ. ಆದರೆ ವಿವೇಕರಹಿತವಾದ ನಮ್ಮ ಮಲಿನ ಮನಸ್ಸು, ಸುಖದ ಮೂಲವನ್ನು ಅರಿಯದೆ, ಪುನಃ ನಿಮಿಷಮಾತ್ರದಲ್ಲಿ ಚಲಿಸಿ, ವಿಷಯವನ್ನು ಕಲ್ಪಿಸಿಕೊಂಡು, ಅದರಿಂದಲೇ ಸುಖವಾಯಿತೆಂದು ಭ್ರಮಿಸುತ್ತದೆ. ಅಂತು ವಿಷಯಸುಖದ ಮೂಲಕಾರಣವಾದರೂ ಸುಖಸ್ವರೂಪವಾದ ನಮ್ಮ ಆತ್ಮನೇ ಆಗಿದೆಯೆನ್ನುವುದು ಸ್ಪಷ್ಟವಾಗುತ್ತದೆ.

ಸುಖಕ್ಕಾಗಿ ಹೊರಗೆ ಹರಿಯುವ ಭ್ರಮೆಯನ್ನು ತಪ್ಪಿಸಿ, ನಿಜವಾದ ಸುಖವು ನಮ್ಮೊಳಗೇ ನಿತ್ಯಸಿದ್ಧವಾಗಿಯೂ ಅಮೃತವಾಗಿಯೂ ಅಪಾರವಾಗಿಯೂ ಇದೆಯೆಂದು ಅಧ್ಯಾತ್ಮಶಾಸ್ತ್ರವು ಉಪದೇಶಿಸುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಬಂದಿರುವ ನಾರದ - ಸನತ್ಕುಮಾರರ ಸಂವಾದದಲ್ಲಿ ಈ ವಿವೇಚನೆಯು ಸ್ಪಷ್ಟವಾಗಿದೆ.

ಒಮ್ಮೆ ನಾರದ ಮಹರ್ಷಿಗಳು ಸನತ್ಕುಮಾರರಲ್ಲಿ ಹೋಗಿ, "ಅಧೀಹಿ ಭಗವನ್" "ಪೂಜ್ಯರೆ ! ನನಗೆ ಉಪದೇಶವನ್ನು ಮಾಡಿ ಅನುಗ್ರಹಿಸಬೇಕು" ಎಂದು ಕೇಳಿದರು. ಅದಕ್ಕೆ ಸನತ್ಕುಮಾರರು "ನೀನು ಇದುವರೆಗೆ ತಿಳಿದಿರುವುದನ್ನೆಲ್ಲಾ ಹೇಳಿದರೆ, ಅದಕ್ಕಿಂತಲೂ ಹೆಚ್ಚಿನದನ್ನು ನಾನು ತಿಳಿಸುತ್ತೇನೆ." ಎಂದರು.

ನಾರದರು ಎಲ್ಲಾ ಧರ್ಮಗಳನ್ನೂ ಆಚರಿಸಿದವರು. ಅವರು ಸಕಲಶಾಸ್ತ್ರಗಳ ಜ್ಞಾನವನ್ನೂ ಪಡೆದವರೇ ಆಗಿದ್ದರು. ಆದರೂ ಆತ್ಮಜ್ಞಾನವಿಲ್ಲದೆ ಅವರು ಶೋಕತಪ್ತರಾಗಿದ್ದರು. ದೇವರ್ಷಿಗಳಾದ ನಾರದರೇ ಅಶಾಂತಿಯಿಂದ ಸಂಕಟಪಡುತ್ತಿದ್ದಮೇಲೆ ಯಾವ ಧರ್ಮವನ್ನೂ ಆಚರಿಸದೆ, ಯಾವ ಜ್ಞಾನವನ್ನೂ ಸಂಪಾದಿಸದೇ ಇರತಕ್ಕ ಮಿಕ್ಕ ಸಾಮಾನ್ಯ ಜೀವರ ಪಾಡೇನು ?

ಸರ್ವಶಾಸ್ತ್ರಗಳಲ್ಲಿಯೂ ಪ್ರವೀಣರಾದ ನಾರದರು ಅತಿ ವಿನಯದಿಂದ ಹೀಗೆ ಹೇಳಿದರು : "ದೇವ ! ನಾನು ಋಗ್ವೇದವನ್ನೂ, ಯಜುರ್ವೇದ, ಸಾಮವೇದ, ಅಥರ್ವಣವೇದ ಇವುಗಳನ್ನೂ ಬಲ್ಲೆನು. ಪಂಚಮವೇದವೆನಿಸಿಕೊಂಡ ಇತಿಹಾಸ ಪುರಾಣಗಳನ್ನೂ, ಪಿತೃಯಜ್ಞವನ್ನೂ, ಗಣಿತಶಾಸ್ತ್ರವನ್ನೂ, ಜ್ಯೋತಿಷ್ಯ, ಖಗೋಳ ಶಾಸ್ತ್ರಗಳನ್ನೂ, ಕಾಲಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ರಾಜ್ಯಶಾಸ್ತ್ರ, ಸಾಹಿತ್ಯಶಾಸ್ತ್ರ, ಆಗಮಶಾಸ್ತ್ರ, ಭೂತವಿದ್ಯಾ, ಯುದ್ಧವಿದ್ಯಾ, ನಕ್ಷತ್ರವಿದ್ಯಾ, ಸರ್ಪವಿದ್ಯಾ, ಕುಶಲವಿದ್ಯಾ, ಮಂತ್ರವಿದ್ಯಾ ಇವೇ ಮೊದಲಾದ ಎಲ್ಲಾ ವಿದ್ಯೆಗಳನ್ನೂ ಭಗವನ್ !

ನಾನು ಬಲ್ಲವನಾದರೂ ಆತ್ಮಜ್ಞಾನವನ್ನು ಪಡೆದವನಾಗಲಿಲ್ಲ. ನಾನು ಬರೀ ಶಬ್ದಜ್ಞಾನವುಳ್ಳವನಾಗಿದ್ದೇನೆ.

"ತರತಿ ಶೋಕಂ ಆತ್ಮವಿತ್"

'ಆತ್ಮವನ್ನು ತಿಳಿದವನು ಶೋಕಸಾಗರವನ್ನೇ ದಾಟುತ್ತಾನೆ' ಎಂದು ತಮ್ಮಂಥವರು ಹೇಳುವದನ್ನು ಕೇಳಿದ್ದೇನೆ. ಪೂಜ್ಯರೇ ! ಶೋಕಸಾಗರದಿಂದ ನನ್ನನ್ನು ದಾಟಿಸಿರಿ" ಎಂದು ನಾರದರು ಬಿನ್ನವಿಸಿದರು.

ಇದಕ್ಕೆ ಸನತ್ಕುಮಾರರು ಹೇಳಿದರು :

"ನೀನು ಓದಿರುವದೆಲ್ಲಾ ಕೇವಲ ಶಬ್ದ ಮಾತ್ರ, ನಾಮ ಮಾತ್ರ. ಋಗ್ವೇದ ಅನ್ನುವದು ಒಂದು ಹೆಸರು, ಯಜುರ್ವೇದವೂ ಒಂದು ಹೆಸರು. ನೀನು ಹೇಳಿದುದು ಪ್ರತಿಯೊಂದೂ ನಾಮಮಾತ್ರವಾಗಿದೆ. ಆದ್ದರಿಂದ ಜನರು ಒಂದು ವಿಗ್ರಹವನ್ನು ವಿಷ್ಣುವೆಂದು ಪೂಜಿಸುವಂತೆ ಈ ನಾಮವೇ ಬ್ರಹ್ಮವೆಂದು ಉಪಾಸನೆಮಾಡು ; ಅದರಿಂದ ಇಂಥಾ ಫಲವಾಗುವುದು" ಎಂದರು.

ನಾರದರು, ಬ್ರಹ್ಮೋಪಾಸನೆಗೆ ನಾಮಕ್ಕಿಂತಲೂ ಶ್ರೇಷ್ಠವಾದ ಇನ್ನೊಂದು ಸಾಧನವನ್ನು ಹೇಳಬೇಕೆಂದು ಕೇಳಿದರು.

ಅದಕ್ಕೆ ಸನತ್ಕುಮಾರರು, ಕಾರ್ಯಕ್ಕಿಂತಲೂ ಕಾರಣವು ಶ್ರೇಷ್ಠವಾಗಿರುವಂತೆ ನಾಮಕ್ಕಿಂತಲೂ ಅದರ ಕಾರಣವಾದ ವಾಕ್ಕೇ (ಮಾತೇ) ಶ್ರೇಷ್ಠವೆಂದು ಹೇಳಿದರು.

ಪುನಃ ನಾರದರು ವಾಕ್ಕಿಗಿಂತಲೂ ಶ್ರೇಷ್ಠವಾದುದನ್ನು ತಿಳಿಸಬೇಕೆಂದು ಕೇಳಿದರು. ಸನತ್ಕುಮಾರರು, ಒಳಗಿನ ವಾಕ್ಕನ್ನೂ ಹೊರಗಿನ ನಾಮವನ್ನೂ ತನ್ನೊಳಗೇ ಅಡಗಿಸಿಕೊಂಡಿರುವ ವ್ಯಾಪಕವಾದ ಮನಸ್ಸು ಶ್ರೇಷ್ಠವೆಂದು ಹೇಳಿದರು. ಏಕೆಂದರೆ, ನಾನು ಕರ್ಮವನ್ನು ಮಾಡತಕ್ಕವನು, ನಾನು ಅದರ ಫಲವನ್ನು ಅನುಭವಿಸತಕ್ಕವನು ಎಂಬ ಕರ್ತೃತ್ವ, ಭೋಕ್ತೃತ್ವ ಭಾವನೆಗಳಿಗೆ ಮನಸ್ಸೇ ಕಾರಣ ; ಮನಸ್ಸಿನಿಂದಲೇ ಬಯಸುವುದು, ಮನಸ್ಸಿನಿಂದಲೇ ವಿಚಾರಮಾಡಿ ನಿಶ್ಚಯಿಸಿ ಬಯಸಿದ ಫಲವನ್ನು ಸಾಧಿಸುವುದು. ಇಹಲೋಕ ಫಲವನ್ನಾಗಲೀ ಪರಲೋಕ ಫಲವನ್ನಾಗಲೀ ಸಾಧಿಸುವುದಕ್ಕೆ ಮನಸ್ಸೇ ಕಾರಣ. ಆದ್ದರಿಂದ ಮನಸ್ಸಿನಿಂದಲೇ ಸರ್ವ ಪ್ರಪಂಚ ; ಮನಸ್ಸೇ ಸಕಲ ಪ್ರಪಂಚ. ನಾನು ಎನ್ನುವ ಭಾವನೆಗೂ ಮನಸ್ಸೇ ಮೂಲವಾದುದರಿಂದ ಮನಸ್ಸೇ ಆತ್ಮ. ಅಲ್ಲಾಡುವ ಅಥವಾ ಚಲಿಸುವ

ಮನಸ್ಸೇ ಜೀವ; ಅಲುಗಾಡದೇ ತಾನೇತಾನಾಗಿ ಬೆಳಗುತ್ತಾ ನಿಂತಿರುವ ಮನಸ್ಸೇ ಶಿವ. ಹೀಗೆ ಆತ್ಮನೂ ಮನಸ್ಸೇ, ಸಮಸ್ತ ವಿಶ್ವವೂ ಮನಸ್ಸೇ ಆದುದರಿಂದ ಮನಸ್ಸೇ ಸರ್ವವೆಂದು ಅಥವಾ ಮನಸ್ಸೇ ಬ್ರಹ್ಮವೆಂದು ಉಪಾಸನಾ ಮಾಡು—ಎಂದು ಸನತ್ಕುಮಾರರು ಹೇಳಿದರು.

ಆದರೆ, ಪುನಃ ನಾರದರು ಮನಸ್ಸಿಗಿಂತಲೂ ಶ್ರೇಷ್ಠವಾದುದು ಯಾವದೆಂದು ಪ್ರಶ್ನೆಮಾಡಿದರು. ಅದಕ್ಕೂ ಸನತ್ಕುಮಾರರು ಉಚಿತವಾದ ಉತ್ತರವನ್ನು ಹೇಳಿದರು. ಹೀಗೆ ನಾರದ-ಸನತ್ಕುಮಾರರ ಪ್ರಶ್ನೋತ್ತರ ಪರಂಪರೆಯ ಇಪ್ಪತ್ತೊಂದು ವಿಷಯಗಳ ಕೊನೆಯಲ್ಲಿ ಸನತ್ಕುಮಾರರು ಹೇಳಿದ್ದೇನೆಂದರೆ,

"ಯದಾ ವೈ ಸುಖಂ ಲಭತೇ ಅಥ ಕರೋತಿ,
ನಾಸುಖಂ ಲಬ್ಧ್ವಾ ಕರೋತಿ,
ಸುಖಮೇವ ಲಬ್ಧ್ವಾ ಕರೋತಿ,
ಸುಖಂ ತ್ವೇವ ವಿಜಿಜ್ಞಾಸಿತವ್ಯಮಿತಿ।"

ತನಗೆ ಸುಖವು ದೊರಕುವದಾದರೆ ಅಥವಾ ಸುಖವು ದೊರಕುವದೆಂಬ ನಿಶ್ಚಯವೂ ಭರವಸೆಯೂ ಇದ್ದರೇ ಯಾವನೊಬ್ಬನು ತನ್ನ ಕರ್ತವ್ಯವನ್ನು ನಡೆಸುವದು; ಸುಖವು ಲಭಿಸುವದಿಲ್ಲವಾದರೆ ಅವನು ಅದನ್ನು ಮಾಡುವದಿಲ್ಲ. ಸುಖವೇ ದೊರಕುವುದರಿಂದ ಅವನು ತನ್ನ ಕರ್ತವ್ಯವನ್ನು ಮಾಡುತ್ತಾನೆ. ಆದ್ದರಿಂದ ಸಕಲ ಉದ್ದೇಶಗಳಿಗೂ ಪ್ರವೃತ್ತಿಗಳಿಗೂ ಕ್ರಿಯೆಗಳಿಗೂ ಮೂಲವಾದ ಈ ಸುಖದ ಸ್ವರೂಪವನ್ನೇ ತಿಳಿಯಲು ಪ್ರತಿಯೊಬ್ಬನೂ ಇಚ್ಛಿಸಬೇಕು.

ಅದಕ್ಕೆ ನಾರದರು ಹೇಳಿದರು : "ಸುಖಂ ಭಗವೋ ವಿಜಿಜ್ಞಾಸ" ಇತಿ.

"ಪೂಜ್ಯರೇ ! ಸುಖದ ಸ್ವರೂಪವನ್ನು ತಿಳಿಯಲು ಇಚ್ಛಿಸುತ್ತೇನೆ ; ದಯವಿಟ್ಟು ತಿಳಿಸಬೇಕು."

ಅದಕ್ಕೆ ಸನತ್ಕುಮಾರರು ಹೇಳಿದ್ದೇನೆಂದರೆ,

"ಯೋ ವೈ ಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ,
ಭೂಮೈವ ಸುಖಂ, ಭೂಮಾತ್ವೇವ ವಿಜಿಜ್ಞಾಸಿತವ್ಯ ಇತಿ"

"ಯಾವುದು ಮಹತ್ತೋ ಅಪರಿಮಿತವೋ ಅಖಂಡವೋ, ಅತ್ಯಂತ ಶ್ರೇಷ್ಠವೋ, ಅತ್ಯುನ್ನತವೋ ಅದು ಸುಖ. ಅಲ್ಪವಾದುದರಲ್ಲಿ, ಸಣ್ಣದರಲ್ಲಿ, ಖಂಡವಾದುದರಲ್ಲಿ ಸುಖವಿಲ್ಲ. ಏಕೆಂದರೆ, ಅಲ್ಪವಾದುದರಲ್ಲಿ ಹೆಚ್ಚಿನದಕ್ಕೆ ಬಯಕೆಯಿರುವುದರಿಂದಲೂ

ಆಶೆಯೇ ಸರ್ವದುಃಖಗಳಿಗೂ ಮೂಲವಾದುದರಿಂದಲೂ ಅದರಲ್ಲಿ ಸುಖವಿಲ್ಲ. ಆದ್ದರಿಂದ ಅಪರಿಮಿತವಾದುದೇ ಸುಖ; ಅಪಾರವಾದುದೇ ಅಖಂಡವಾದುದೇ ಸುಖ. ಅತ್ಯುನ್ನತವಾದುದೇ ಪರಿಪೂರ್ಣವಾದುದೇ ಸುಖ. ಆದ್ದರಿಂದ ಈ ಭೂಮಾದ ಸ್ವರೂಪವನ್ನೇ ವಿಚಾರ ಮಾಡಬೇಕು."

ಆಗ ನಾರದರು ಹೇಳಿದರು :

"ಭೂಮಾನಂ ಭಗವೋ ವಿಜಿಜ್ಞಾಸ"

"ಪೂಜ್ಯರೆ ! ಭೂಮಾ ಎಂದರೇನು ತಿಳಿಯಲಿಚ್ಛಿಸುತ್ತೇನೆ; ತಿಳಿಸಬೇಕು."

ಅದಕ್ಕೆ ಸನತ್ಕುಮಾರರು ಆತ್ಯಂತಿಕ ಸತ್ಯವನ್ನು ಹೀಗೆ ಬೋಧಿಸಿದರು :

"ಯತ್ರ ನಾನ್ಯತ್ ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾ। ಅಥ ಯತ್ರಾನ್ಯತ್ ಪಶ್ಯತಿ ಅನ್ಯಚ್ಛೃಣೋತಿ ಅನ್ಯದ್ವಿಜಾನಾತಿ ತದಲ್ಪಂ। ಯೋ ವೈ ಭೂಮಾ ತದಮೃತಂ, ಅಥ ಯದಲ್ಪಂ ತನ್ಮರ್ತ್ಯಂ...."

"ಎಲ್ಲಿ ಇನ್ನೊಂದೇನನ್ನೂ ಕಾಣುವದಿಲ್ಲವೋ, ಇನ್ನೊಂದೇನನ್ನೂ ಕೇಳುವದಿಲ್ಲವೋ, ಇನ್ನೊಂದೇನನ್ನೂ ಅರಿಯುವದಿಲ್ಲವೊ ಅದೇ ಭೂಮಾ; ಎಲ್ಲಿ ಇನ್ನೊಂದನ್ನು ನೋಡುತ್ತಾನೋ, ಇನ್ನೊಂದನ್ನು ಕೇಳುತ್ತಾನೋ ಇನ್ನೊಂದನ್ನು ಅರಿಯುತ್ತಾನೋ ಅದೇ ಅಲ್ಪವಾದುದು, ಕ್ಷುದ್ರವಾದುದು, ಕೀಳಾದುದು. ಅನಂತವಾದುದೇ ಅಮೃತವಾದುದು; ಅಪಾರವಾದುದೇ ಅಖಂಡವಾದುದೇ ಅವಿನಾಶಿಯಾದುದು; ಸಾವಿಲ್ಲದುದು. ಅಲ್ಪವಾದುದೇ ನಾಶವುಳ್ಳದುದು......

ಅಜ್ಞಾನದಶೆಯಲ್ಲಿ ಎಲ್ಲರಿಗೂ ತುಂಡು ತುಂಡಾದ ಜ್ಞಾನವಿರುತ್ತದೆ. ನಾನು ನೋಡತಕ್ಕವನು, ನನ್ನ ನೋಟಕ್ಕೆ ಈ ರೂಪಗಳು ಕಾಣುತ್ತಿವೆ. ನೋಡುವ ಕ್ರಿಯೆ ನಡೆಯುತ್ತಿದೆ. ನಾನು ಕೇಳತಕ್ಕವನು, ನನ್ನ ಕಿವಿಗಳಿಗೆ ಈ ಶಬ್ದಗಳು ಕೇಳುತ್ತಿವೆ. ಕೇಳುವ ಕ್ರಿಯೆ ನಡೆಯುತ್ತಿದೆ. ನಾನು ಅರಿಯತಕ್ಕವನು, ನನ್ನ ಅರಿವಿನಿಂದ ಈ ವಿಷಯಗಳನ್ನು ಅರಿಯುತ್ತೇನೆ. ಅರಿಯುವ ಕ್ರಿಯೆ ನಡೆಯುತ್ತಿದೆ. ಈ ರೀತಿಯಾದುದೇ ಆ ತುಂಡುತುಂಡಾದ ಜ್ಞಾನ. ನಾನು ಅರಿಯತಕ್ಕವನು, ಕರ್ಮ ಮಾಡತಕ್ಕವನು, ಫಲವನ್ನು ಅನುಭವಿಸತಕ್ಕವನು ಜ್ಞಾತೃ, ಜ್ಞಾನ, ಜ್ಞೇಯ; ಕರ್ತೃ, ಕರ್ಮ, ಕ್ರಿಯೆ, ಭೋಕ್ತೃ, ಭೋಗ್ಯ, ಭೋಗ, ಎಂಬಿವೇ ಮೂರು ಮೂರು ಕವಲುಗಳುಳ್ಳ ತಿಳಿವಳಿಕೆ. ಆದರೆ ಪರಮಾರ್ಥ ಸತ್ಯವಾದ ಭೂಮಾನಂದ ಸ್ವರೂಪದಲ್ಲಿ

ಅಲ್ಪವಾದ ಈ ಯಾವ ತುಂಡು ತಿಳಿವಳಿಕೆಯ ಸುಳಿವೂ ಇಲ್ಲ. ಎರಡನೆಯದೆಂಬುದೇ ಇಲ್ಲದೆ ತಾನೇ ತಾನಾಗಿರುವ ಜ್ಞಾನಾನಂದಘನವಾದ ಆತ್ಮಸ್ವರೂಪವು ಮಾತಿಗೂ ಮನಸ್ಸಿಗೂ ಮೀರಿರುವುದರಿಂದ ಇದನ್ನು ನೇರಾಗಿ ವರ್ಣಿಸುವುದೇ ಸಾಧ್ಯವಿಲ್ಲ. ಆದ್ದರಿಂದ ಅಜ್ಞಾನದೆಶೆಯಲ್ಲಿ ಬರುವ ಎಲ್ಲಾ ಬಗೆಯ ಅನುಭವಗಳನ್ನೂ ಅಲ್ಲ ಗಳೆಯುವುದೇ ಬ್ರಹ್ಮಾನುಭವವನ್ನು ಅಥವಾ ಭೂಮಾನುಭವವನ್ನು ತಿಳಿಸುವ ಉತ್ತಮ ಉಪಾಯವಾಗಿದೆ. ಭೂಮಾನಂದದಲ್ಲಿ ಅಥವಾ ಬ್ರಹ್ಮಾನಂದದಲ್ಲಿ ಹುಟ್ಟುಸಾವುಗಳಿಲ್ಲ; ಅಂದರೆ ಭೂಮಾನಂದವನ್ನು ಅನುಭವಿಸುವ ಮಹಾತ್ಮನಿಗೆ ಹುಟ್ಟುಸಾವುಗಳಿಲ್ಲ; ಅವನೇ ಜೀವನ್ಮುಕ್ತ.

ಇದೆಲ್ಲಾ ವೇದಾಂತದ ತುಟ್ಟತುದಿಯ ವಿಚಾರಗಳೆಂದೂ ನಮಗಾರಿಗೂ ಎಟುಕದ ವಿಷಯಗಳೆಂದೂ ನಮಗೆಲ್ಲಾ ತೋರುವುದು ಸ್ವಾಭಾವಿಕ. ಆದರೆ ಸಾತ್ತ್ವಿಕ ಸಂಸ್ಕಾರವುಳ್ಳವರಿಗೆ ಮಹಾನುಭಾವಿಯಾದ ಸದ್ಗುರುವಿನ ಅನುಗ್ರಹ ವಾದರೆ ಈ ಅನುಭವವೇನೂ ಅಸಾಧ್ಯವಲ್ಲ. ಏಕೆಂದರೆ, ಈ ಅನುಭವವು ಹೊರಗಿನ ವಿಷಯವಲ್ಲ, ಬೇರೆ ವಿಷಯವೂ ಅಲ್ಲ. ಭೂಮಾನಂದ ಸ್ವರೂಪವು ನಮ್ಮೆಲ್ಲರ ಒಳಗೆ ನಮ್ಮೆಲ್ಲರ ಸ್ವರೂಪವಾಗಿಯೇ ಇದೆ. ಇದನ್ನು ಎಲ್ಲರೂ ತಮ್ಮ ತಮ್ಮ ಮನಸ್ಸಿನ ಕನ್ನಡಿಯಲ್ಲಿಯೇ ಸ್ಫುಟವಾಗಿ ಕಂಡು ಕುಣಿದಾಡಬಹುದು; ಪರಮಾನಂದದಿಂದ ಕುಣಿಕುಣಿದು ತಣಿದು ಪರಮಶಾಂತಿಯಲ್ಲಿ ಕರಗಿ ಅಮೃತರಸವಾಗಬಹುದು. ಆದರೆ ಇದನ್ನು ಕಾಣಬೇಕಾದರೆ ನಮ್ಮ ಮನಸ್ಸೆಂಬ ಕನ್ನಡಿಯು ಸ್ವಚ್ಛವಾಗಬೇಕು; ರಾಗದ್ವೇಷಾದಿಗಳ ಕೊಳೆಯನ್ನು ಕಳೆದುಕೊಂಡು ನಿರ್ಮಲವಾಗಿ ಆ ಕನ್ನಡಿಯು ತನ್ನೊಳಗೇ ತಿರುಗಿಕೊಂಡು ನಿಶ್ಚಲವಾಗಿ ನೋಡಬೇಕು. ಶಾಂತವಾಗಿ ನೋಡಬೇಕು. ಪ್ರಕೃತಿಮಾತೆಯು ಪರಮ ಕರುಣೆಯಿಂದ ಈ ಭೂಮಾನುಭವದ ಒಂದು ವಿಲಕ್ಷಣ ಪ್ರತಿರೂಪವನ್ನು ಸಕಲ ಜೀವರಿಗೂ ಗಾಢ ನಿದ್ರೆಯಲ್ಲಿ ಅನುಗ್ರಹಿಸಿದ್ದಾಳೆ. ಅದು ಯಾವ ಎರಡನೆಯ ವಿಷಯದ ಅರಿವೂ ಇಲ್ಲದ ಏಕಘನವಾದ ಅನುಭವ, ಒಂದೇ ಗಟ್ಟಿಯಾಗಿ ಹೆಪ್ಪುಗಟ್ಟಿದ ಅನುಭವ; ಏಕರಸವಾದ ಅನುಭವ. ಗಾಢ ನಿದ್ರೆಯಲ್ಲಿ ನಾನು ಎನ್ನುವದಿಲ್ಲ; ಇದು ಎನ್ನುವ ಈ ಪ್ರಪಂಚವಿಲ್ಲ. ಆದ್ದರಿಂದ ನಾನು ಅರಿಯತಕ್ಕವನು, ಮಾಡತಕ್ಕವನು, ಅನುಭವಿಸತಕ್ಕವನು ಎನ್ನುವ ತುಂಡು ತುಂಡಾದ ತಿಳಿವಳಿಕೆಯೂ ಇಲ್ಲ. ಸಂಸಾರವಿಲ್ಲ; ಸಂಸಾರದ ಸುಖದುಃಖಗಳಿಲ್ಲ. ಎಚ್ಚರದಲ್ಲಿ ಕುರುಡನಾದವನು ಅವನ ಗಾಢ ನಿದ್ರೆಯಲ್ಲಿ ಕುರುಡನಲ್ಲ. ಎಚ್ಚರದಲ್ಲಿ ಹುಚ್ಚನಾದವನು ಅವನ ಗಾಢ ನಿದ್ರೆಯಲ್ಲಿ ಹುಚ್ಚನಲ್ಲ. ಅಪಘಾತದಲ್ಲಿ ಕಾಲು ಕತ್ತರಿಸಲ್ಪಟ್ಟು ಎಚ್ಚರದಲ್ಲಿ ಘೋರ ಯಾತನೆಯನ್ನು ಅನುಭವಿಸುತ್ತಿರುವವನಿಗೆ ಪ್ರಕೃತಿಮಾತೆಯ ಅಥವಾ ವೈದ್ಯರ ಅನುಗ್ರಹದಿಂದ ಕ್ಷಣಕಾಲ ಗಾಢ ನಿದ್ರೆ ಹತ್ತಿದರೆ, ಅದರಲ್ಲಿ ಅವನಿಗೆ ಯಾವ ಯಾತನೆಯೂ ತೋರುವದಿಲ್ಲ. ನಿದ್ರೆಯಲ್ಲಿ ತನಗೆ ಪರಮ

ಸುಖವಿತ್ತೆಂದು ನೆನೆಸಿಕೊಳ್ಳುತ್ತಾನೆ. ಸಕಲ ಸಂಪತ್ತೂ ಸುಖಸೌಕರ್ಯಗಳೂ ಉಳ್ಳಂಥ ಶ್ರೀಮಂತನಿಗೆ ಒಂದು ದಿನ ಸರಿಯಾಗಿ ನಿದ್ರೆ ಬಾರದಿದ್ದರೆ ಅನಾರೋಗ್ಯವೂ ಅಶಾಂತಿಯೂ ಉಂಟಾಗಿ ನಿದ್ರೆಗಾಗಿ ಚಡಪಡಿಸುವಂತಾಗುತ್ತದೆ. ನಿದ್ರಾಸುಖಕ್ಕಾಗಿ ಎಷ್ಟಾದರೂ ಖರ್ಚುಮಾಡಲು ಏನನ್ನಾದರೂ ತ್ಯಾಗಮಾಡಲು ಸಿದ್ಧವಾಗುತ್ತಾನೆ. ನಿದ್ರಾಸುಖ ಒಂದಿಲ್ಲವಾದರೆ ಮಿಕ್ಕೆಲ್ಲಾ ಸುಖಗಳೂ ಸಾಮ್ರಾಜ್ಯ ಸಂಪತ್ತೂ ಅವನಿಗೆ ನಿರರ್ಥಕವಾಗಿ ತೋರುತ್ತವೆ. ಕಾಸಿಗೂ ಕಡೆಯಾಗಿ ತೋರುತ್ತದೆ. ಏಕೆಂದರೆ, ನಿಷ್ಪ್ರಪಂಚವಾದ–ಪ್ರಪಂಚವೇ ಇಲ್ಲದ—ಸರ್ವವೂ ಒಂದಾಗಿರುವ ಆ ಭೂಮಾನಂದದ ಮಹಿಮೆಯೇ ಅಂಥಾದ್ದು. ಆದರೆ ಗಾಢ ನಿದ್ರೆಯಲ್ಲಿ ನಮ್ಮೆಲ್ಲರಿಗೂ ಬರುತ್ತಿರುವದು ನಿಜವಾದ ಭೂಮಾನುಭವವಲ್ಲ; ಅದರದೊಂದು ವಿಲಕ್ಷಣವಾದ ಪ್ರತಿರೂಪ, ನಿಷೇಧ ರೂಪ (Negative form; Negative replica). ಆದರೂ ಅದರ ಮಹಿಮೆಯು ಅಗಾಧವಾಗಿ ತೋರುತ್ತದೆ. ನಿದ್ರೆಯಲ್ಲಿ ತೋರುವ ಪರಮಸುಖದ ತತ್ತ್ವವೇನೆಂದು, ರಹಸ್ಯವೇನೆಂದು ವಿಚಾರಮಾಡಿ ನಿಜವಾದ ಭೂಮಾಸುಖವನ್ನು ಪಡೆದು ಮುಕ್ತರಾಗುವದಕ್ಕೆ ಸೂಚಕವೂ ಸಹಾಯಕವೂ ಪ್ರೇರಕವೂ ಆಗಲೆಂದು ಪ್ರಕೃತಿಮಾತೆಯು ಪಕ್ಷಪಾತವಿಲ್ಲದೆ ಸಕಲ ಜೀವರಿಗೂ ನಿದ್ರಾಭೂಮವನ್ನು ಅನುಗ್ರಹಿಸಿದ್ದಾಳೆ. ಆ ತತ್ತ್ವಶೋಧಕ್ಕೆ ಶಾಸ್ತ್ರವೂ ಸದ್ಗುರುವೂ ಸಹಾಯಕರಾಗಿದ್ದಾರೆ.

ನಿದ್ರೆಯೇ ನಿಜವಾದ ಭೂಮವಾಗಿದ್ದರೆ, ಯಾವ ಶ್ರಮವೂ ಸಾಧನೆಯೂ ಇಲ್ಲದೆ ಎಲ್ಲಾ ಜೀವರೂ ನಿದ್ರೆಯಿಂದಲೇ ಮುಕ್ತರೂ ಧನ್ಯರೂ ಕೃತಕೃತ್ಯರೂ ಆಗ ಬಹುದಿತ್ತು. ಆದರೆ ನಿದ್ರೆಯಿಂದ ಎಚ್ಚರವಾದ ಕೂಡಲೇ ಪುನಃ ಸಂಸಾರವು ಗಂಟು ಬೀಳುತ್ತದೆ; ನಾನು ಸಂಸಾರಿಯೆಂದೇ ಪ್ರತಿಯೊಬ್ಬನಿಗೂ ಅನುಭವವಾಗುತ್ತದೆ. ಏಕೆಂದರೆ ನಿದ್ರೆಯಲ್ಲಿ ಸಂಸಾರಕ್ಕೆ ಕಾರಣವಾದ ಅಜ್ಞಾನವೂ ವಿಷಯ ವಾಸನೆಯ ಬೀಜವೂ ಅಡಗಿವೆಯೆಂದು ತೋರುತ್ತಿದೆ. ಆದರೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ: "ಯದ್ವೈ ತನ್ನ ವಿಜಾನಾತಿ ವಿಜಾನನ್ ವೈ ತನ್ನ ವಿಜಾನಾತಿ...." "ನಿದ್ರೆಯಲ್ಲಿ ಅರಿಯದೇ ಇರುವಾಗಲೂ ಅರಿವುಳ್ಳವನಾಗಿಯೇ ಇರುತ್ತಾನೆ" ಎಂದು ಹೇಳಿದೆ. ಗಾಢ ನಿದ್ರೆಯಲ್ಲಿ ಕ್ಷಣಕಾಲ ಯಾವ ನೋವೂ ಕಾಣದಿದ್ದರೂ ಎಚ್ಚರವಾದ ಕೂಡಲೇ ತನಗೇ ನೋವು ಸಾವುಗಳಿವೆಯೆಂದು ಪ್ರತಿಯೊಬ್ಬನಿಗೂ ಸಾಮಾನ್ಯವಾಗಿ ತೋರುತ್ತದೆ. ಆದ್ದರಿಂದ ಶಾಸ್ತ್ರ–ಗುರುಗಳ ಸಹಾಯದಿಂದ ತಾನಾರೆಂದು ವಿಚಾರ ಮಾಡಿ, ನಿರ್ಮಲವೂ ನಿಶ್ಚಲವೂ ಆದ ಮನಸ್ಸಿನಿಂದ ತನ್ನ ಸ್ವರೂಪದಲ್ಲಿಯೇ ತಾನು ನೆಲೆಯಾಗಿ ನಿಲ್ಲಬೇಕು. ಆಗ ಗಾಢ ನಿದ್ರೆಯಲ್ಲಿ ತೋರಿಬರುವ ಯಾವ ಎರಡನೆಯದೂ ಇಲ್ಲದ ಒಂದೇ ಆದ ಸುಖವು ಎಚ್ಚರದಲ್ಲಿಯೂ ಎಚ್ಚರಾದ ತುರೀಯವೆಂಬುವ ಸ್ಥಿತಿಯಲ್ಲಿ ಆ ಯೋಗಿಗೆ ತೋರುತ್ತದೆ. ಅಲ್ಲಿ ತಾನಾರೆಂಬ ಮರವೆಯಿಲ್ಲ; ತನ್ನ

ಹೊರತು ಇನ್ನೊಂದಿಲ್ಲ. ಆಗ ಆ ಮಹಾ ಯೋಗಿಗೆ ಅನುಭವವಾಗುವ ಅಪಾರವಾದ ಆನಂದವೇ ಭೂಮಾನಂದವು; ಆ ಅಖಂಡವಾದ ಸುಖವೇ ಭೂಮಾಸುಖವು. ಆ ಅನುಭವವನ್ನು ಪಡೆದವನಿಗೆ ಪುನಃ ಸಂಸಾರವಿಲ್ಲ. ಅವನು ಅಮೃತನು, ಅಮರನು, ಮುಕ್ತನು, ಕೃತಕೃತ್ಯನು!

ಪ್ರಾಪಂಚಿಕವಾದ ಎಲ್ಲಾ ಬಗೆಯ ಸುಖವೂ ಆನಂದವೂ ಬ್ರಹ್ಮಾನಂದ ಸಾಗರದ ಕಣಮಾತ್ರವಾಗಿದೆ; ಹನಿಯು ಮಾತ್ರ, ತುಂತುರು ಆಗಿದೆ. ಒಂದಕ್ಕಿಂತಲೂ ಒಂದು ಶತಸಹಸ್ರಾಧಿಕವಾದ ಚಕ್ರವರ್ತಿಯ ಆನಂದವೂ ದೇವತೆಗಳ ಆನಂದವೂ ಇಂದ್ರನ ಆನಂದವೂ ಪ್ರಜಾಪತಿಯ ಆನಂದವೂ ಬೃಹಸ್ಪತಿಯ ಆನಂದವೂ ಹಿರಣ್ಯ ಗರ್ಭ ಬ್ರಹ್ಮನ ಆನಂದವೂ ಆತ್ಮಾನಂದದ ಅಂಶಗಳೇ ಆಗಿವೆ. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಾದ ಹಿರಣ್ಯಗರ್ಭನ ಆನಂದಕ್ಕೂ ಮಿತಿಯಿದೆ. ಆದರೆ ಭೂಮಾರೂಪದ ಆತ್ಮಾನಂದಕ್ಕೆ ಮಿತಿಯೇ ಇಲ್ಲ.

ನಾವು ಹೆಣ್ಣಾಗಲೀ ಗಂಡಾಗಲೀ ನಮ್ಮ ಪ್ರತಿಯೊಬ್ಬರ ಹೃದಯದಲ್ಲಿಯೂ ಆತ್ಮಾನಂದವು ನಮ್ಮ ಸ್ವರೂಪವಾಗಿಯೇ ಇದೆ. ಇದರ ಅನುಭವ ಪಡೆಯುವುದಕ್ಕೆ ಅಥವಾ ಜ್ಞಾನವನ್ನು ಪಡೆಯುವುದಕ್ಕೆ ಮನಸ್ಸಿನ ಶುದ್ಧಿಯೂ ಸ್ಥೈರ್ಯವೂ ಬೇಕು. ಮನಶ್ಶುದ್ಧಿಗೆ ಈಶ್ವರ ಪ್ರೀತ್ಯರ್ಥವಾದ ನಿಷ್ಕಾಮ ಕರ್ಮವೇ ಸಾಧನ. ಮನಸ್ಸಿನ ಸ್ಥಿರತೆಗೆ ಉಪಾಸನಾಯೋಗವೇ ಸಾಧನ.

ಧ್ಯಾನಯೋಗದಿಂದ ಚಿತ್ತಶುದ್ಧಿಯೂ ಚಿತ್ತಸ್ಥೈರ್ಯವೂ ಉಂಟಾಗಿ ಜ್ಞಾನ ನಿಷ್ಠಾಯೋಗ್ಯತೆಯು ಬಂದು ಭೂಮಾನಂದ ಪ್ರಾಪ್ತಿಯಾಗುತ್ತದೆ.

ಯೋಗವೆಂದರೆ ಉಪಾಯ; ಆತ್ಮಜ್ಞಾನವನ್ನು ಪಡೆಯುವುದಕ್ಕೆ ಅಥವಾ ಪರಮಾತ್ಮ ಜ್ಞಾನವನ್ನು ಪಡೆಯುವುದಕ್ಕೆ ಹಲವು ಉಪಾಯಗಳಿವೆ. ಅವುಗಳಲ್ಲಿ ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಜ್ಞಾನಯೋಗಗಳು ಮುಖ್ಯವಾದುವು. ಯುಜ್ ಎಂಬ ಸಂಸ್ಕೃತ ಧಾತುವಿನಿಂದ ಯೋಗಶಬ್ದವುಂಟಾಗಿದೆ, ಆಧ್ಯಾತ್ಮಿಕವಾಗಿ ಜೀವಾತ್ಮನು ಪರಮಾತ್ಮನಲ್ಲಿ ಸೇರಿಹೋಗುವುದೇ ಯೋಗವೆನಿಸುತ್ತದೆ. ಜೀವ ಬ್ರಹ್ಮರ ಸಂಯೋಗವೇ ಯೋಗ. ಕರ್ಮಯೋಗ ಮೊದಲಾದ ನಾಲ್ಕು ಯೋಗ ಗಳಲ್ಲಿ ಯಮ-ನಿಯಮಾದಿಗಳಿಂದ ಕೂಡಿದ ರಾಜಯೋಗವೇ ಮುಖ್ಯವಾದುದು. ಯೋಗಗಳಲ್ಲಿ ರಾಜನೆನಿಸಿಕೊಂಡ ರಾಜಯೋಗದ ಮಹಿಮೆಯು ಅದ್ಭುತವಾದುದು.

ರಾಜಯೋಗಸ್ಯ ಮಾಹಾತ್ಮ್ಯಂ ಕೋ ವಾ ಜಾನಾತಿ ತತ್ತ್ವತಃ।
ಜ್ಞಾನಂ ಮುಕ್ತಿಸ್ಥಿತಿಸ್ಸಿದ್ಧಿಃ ಗುರುವಾಕ್ಯೇನ ಲಭ್ಯತೇ ॥

[ಹಠ ೪-೮]

ರಾಜಯೋಗದ ಮಹಿಮೆಯನ್ನು ಸ್ಪಷ್ಟವಾಗಿ ಯಾರು ತಿಳಿಯಲು ಸಾಧ್ಯ? ಗುರೂಪದಿಷ್ಟವಾದ ರಾಜಯೋಗದ ಸಾಧನೆಯಿಂದ ಆತ್ಮಜ್ಞಾನವೂ ಜೀವನ್ಮುಕ್ತಿಯೂ ಅಣಿಮಾದಿ ಯೋಗಸಿದ್ಧಿಗಳೂ ಲಭಿಸುತ್ತವೆ.

ರಾಜಯೋಗಿಯು ಮೊದಲು ಯಮ-ನಿಯಮಗಳ ನೈತಿಕ ಸಾಧನೆಯಿಂದ ಚಿತ್ತಶುದ್ಧಿಯನ್ನು ಪಡೆಯುತ್ತಾನೆ. ಅನಂತರ ಆಸನ ಪ್ರಾಣಾಯಾಮಗಳ ಅಭ್ಯಾಸದಿಂದ ಶರೀರ ಮನಸ್ಸುಗಳ ಸ್ಥಿರತೆಯನ್ನೂ ನಾಡೀಶುದ್ಧಿಯನ್ನೂ ಸಾಧಿಸುತ್ತಾನೆ. ಅನಂತರ ಪ್ರತ್ಯಾಹಾರ, ಧಾರಣಾಧ್ಯಾನಗಳಿಂದ ಸಮಾಧಿಸ್ಥಿತಿಯನ್ನು ಸಂಪಾದಿಸುತ್ತಾನೆ. ಧಾರಣಾಧ್ಯಾನ ಸಮಾಧಿಗಳು ಒಟ್ಟುಗೂಡಿದ ಸಂಯಮದ ಬಲದಿಂದ ಆಶ್ಚರ್ಯಕರವಾದ ಬಗೆಬಗೆಯ ಯೋಗಸಿದ್ಧಿಗಳನ್ನು ಪಡೆಯುತ್ತಾನೆ.

ಯೋಗಸಿದ್ಧಿಗಳಲ್ಲಿ ಅಣಿಮಾದಿ ಎಂಟು ಸಿದ್ಧಿಗಳು ಮುಖ್ಯವಾದುವು.

1. ಅಣಿಮಾ ಎಂದರೆ ಸಂಕಲ್ಪಮಾತ್ರದಿಂದ ಪ್ರಕೃತಿಯು ಕ್ಷೀಣವಾಗಿ ಪರಮಾಣುವಿನಂತೆ ದೇಹವು ಸೂಕ್ಷ್ಮವಾಗುವುದು.
2. ಮಹಿಮಾ ಎಂದರೆ ಸಂಕಲ್ಪಮಾತ್ರದಿಂದ ಮಹದ್ಭಾವವನ್ನು ಪಡೆಯುವದು.

[ಹನುಮಂತನು ಜಾಂಬುವಂತನಿಂದ ಪ್ರೇರಿತನಾಗಿ ಮಹೇಂದ್ರ ಪರ್ವತವನ್ನೇರಿ ಅಲ್ಲಿಂದ ಸಮುದ್ರದ ಮೇಲೆ ಹಾರಿ ಲಂಕೆಯ ಕಡೆಗೆ ಹೋಗುತ್ತಿದ್ದನು. ಹೀಗೆ ಹಾರಿಹೋಗುತ್ತಿರುವಾಗ ಸಮುದ್ರಮಧ್ಯದಲ್ಲಿ ತನಗೆ ಅಡ್ಡವಾದ ಸುವರ್ಣನಾಭವೆಂಬ ಮೈನಾಕ ಪರ್ವತವನ್ನು ಅಪ್ಪಳಿಸಿದನು. ಆಗ ಮೈನಾಕಪರ್ವತವು ಅವನನ್ನು ಸತ್ಕರಿಸಿತು. ಅದರಿಂದ ಸಂತುಷ್ಟನಾಗಿ ಹನುಮಂತನು ಮುಂದಕ್ಕೆ ಹಾರಿ ಹೋಗುತ್ತಿರುವಾಗ ಸುರಸೆಯೆಂಬ ನಾಗಮಾತೆಯು ದೇವತೆಗಳಿಂದ ಪ್ರೇರಿಸಲ್ಪಟ್ಟು ಹನುಮಂತನನ್ನು ಪರೀಕ್ಷಿಸಲು ಘೋರ ವೇಷವನ್ನು ತಾಳಿ, ಹನುಮಂತನನ್ನು ಭಕ್ಷಿಸಬೇಕೆಂದು ಬಾಯಿ ತೆರೆದು ಬಂದಳು. ಆಂಜನೇಯನು ಆಕೆಗೆ ಕೈಮುಗಿದು ತಾನು ರಾಮಕಾರ್ಯಕ್ಕಾಗಿ ಹೋಗುವ ದೂತನೆಂದೂ ಆಗ ತನ್ನನ್ನು ಕೈಬಿಟ್ಟರೆ, ರಾಮಕಾರ್ಯವನ್ನು ಸಾಧಿಸಿ ಹಿಂದಿರುಗುವಾಗ ಆಕೆಗೆ ತಾನು ತಪ್ಪದೇ ಆಹಾರವಾಗುವುದಾಗಿ ಆಣೆಮಾಡಿ ಹೇಳುವದಾಗಿಯೂ ಬೇಡಿಕೊಂಡನು. ಆದರೆ ತನ್ನನ್ನು ಮೀರಿ ಯಾರೂ ಹೋಗಕೂಡದೆಂದು ತನಗೆ ಬ್ರಹ್ಮನ ವರವಿರುವದಾಗಿ ಸುರಸೆಯು ಹೇಳಿ ತನ್ನ ಬಾಯನ್ನು ಅತಿ ವಿಶಾಲವಾಗಿ ಬೆಳೆಸಿ, ಮಾರುತಿಯನ್ನು ನುಂಗಲು ಮುಂದೆ ಬಂದಳು. ಆಗ ಮಾರುತಿಯು ಕೋಪಾವಿಷ್ಟನಾಗಿ ತನ್ನ ಮಹಿಮಾಯೋಗ ಸಿದ್ಧಿಯಿಂದ ದೇಹವನ್ನು ಹತ್ತು ಯೋಜನ ವಿಸ್ತಾರವಾಗಿ ಬೆಳೆಸಿದನು. ಆದನ್ನು

ನೋಡಿ ಸುರಸೆಯು ತನ್ನ ಬಾಯನ್ನು ಇಪ್ಪತ್ತು ಯೋಜನ ವಿಸ್ತಾರವಾಗಿ ಬೆಳೆಸಿ ದಳು. ಹನುಮಂತನು ಕ್ರುದ್ಧನಾಗಿ ಮೂವತ್ತು ಯೋಜನ ವಿಸ್ತಾರವಾಗಿ ಬೆಳೆದನು. ಹೀಗೆ ಸುರಸೆಯು ನೂರು ಯೋಜನ ವಿಸ್ತಾರವಾಗಿ ಬೆಳೆಯುವವರೆಗೂ ಉಭಯರ ಸ್ಪರ್ಧೆಯೂ ಪರಸ್ಪರ ಅಧಿಕ, ಅಧಿಕತರವಾಗಿ ಬೆಳೆಯಿತು. ಆಗ ಬುದ್ಧಿಶಾಲಿಯಾದ ಹನುಮಂತನು ತನ್ನ ಅಣಿಮಾಯೋಗಸಿದ್ಧಿಯಿಂದ ಅಂಗುಷ್ಠಮಾತ್ರ ದೇಹವುಳ್ಳವ ನಾಗಿ ಸುರಸೆಯ ಮುಖದಲ್ಲಿ ವೇಗದಿಂದ ಪ್ರವೇಶಮಾಡಿ ಹೊರಗೆ ಹಾರಿ ನಿಂತು ತನ್ನ ಕಾರ್ಯವು ಮುಗಿಯಿತೆಂದು ಆಕೆಗೆ ಕೈಮುಗಿದನು. ನಿರ್ಜಿತಳಾದ ಸುರಸೆಯು ಸಂತೋಷದಿಂದ ಆಂಜನೇಯನನ್ನು ಆಶೀರ್ವದಿಸಿ ಬೀಳ್ಕೊಟ್ಟಳು. ಆಂಜನೇಯನು ಲಘಿಮಾ ಯೋಗಸಿದ್ಧಿಯಿಂದ ಸಮುದ್ರಲಂಘನ: ಮಾಡಿದನು.]

3. ಗರಿಮಾ ಎಂದರೆ ಪರ್ವತಾದಿಗಳಂತೆ ಭಾರವಾಗುವುದು.
4. ಲಘಿಮಾ ಎಂದರೆ ಹತ್ತಿಯಂತೆ ಹಗುರವಾಗುವುದು.
5. ಪ್ರಾಪ್ತಿ ಎಂದರೆ ಸಂಕಲ್ಪಮಾತ್ರದಿಂದ ಸರ್ವವಸ್ತುಗಳ ಪ್ರಾಪ್ತಿ.
6. ಪ್ರಾಕಾಮ್ಯ ಎಂದರೆ, ಯಾವ ಅಡ್ಡಿಯೂ ಇಲ್ಲದೆ ಎಲ್ಲಾ ಬಗೆಯ ಇಷ್ಟಸಿದ್ಧಿ.
8. ಈಶತಾ ಎಂದರೆ ಪಂಚಭೂತಗಳನ್ನೂ ಭೌತಿಕವಸ್ತುಗಳನ್ನೂ ನಿಯಂತ್ರಣಮಾಡುವ ವಿಶೇಷ ಸಾಮರ್ಥ್ಯ.
8. ವಶಿತ್ವ ಎಂದರೆ ಭೂತಭೌತಿಕ ವಸ್ತುಗಳ ಸ್ವಾಧೀನತೆ.

ಇಂದ್ರಿಯಗಳ ಬಯಕೆಗಳಿಗೆ ಬಲಿಯಾಗದೆ ನಿರಂತರ ಧಾರಣಾಧ್ಯಾನ ಸಮಾಧಿ ಗಳನ್ನು ಅಭ್ಯಾಸ ಮಾಡುವುದರಿಂದ ಕುಂಡಲಿನೀ ಶಕ್ತಿಯ ಜಯವೂ ತನ್ಮೂಲಕ ಅಣಿಮಾದಿ ಮಹಾಸಿದ್ಧಿಗಳೂ ಪ್ರಾಪ್ತಿಯಾಗುತ್ತವೆ.

ಅಲೌಕಿಕವೆನ್ನುವುದೂ ಅಸಾಧ್ಯವೆನ್ನುವುದೂ ಅಪ್ರಾಕೃತವೆನ್ನುವುದೂ ಇಲ್ಲವೇ ಇಲ್ಲವೆಂದೂ ಸಕಲವೂ ಪೌರುಷಪ್ರಯತ್ನಕ್ಕೆ ಸಾಧ್ಯವೆಂದೂ ಯೋಗಿಯು ಹೇಳುತ್ತಾನೆ. "ಅನ್ಯಮಿಂದ್ರಂ ಕರಿಷ್ಯಾಮಿ" ಇನ್ನೊಬ್ಬ ಇಂದ್ರನನ್ನೂ ಅವನಿಗೆ ಇನ್ನೊಂದು ಸ್ವರ್ಗವನ್ನೂ ಸೃಷ್ಟಿಸುತ್ತೇನೆ—ಎಂದು ಎನ್ನುವ ವಿಶ್ವಾಮಿತ್ರಮಹರ್ಷಿಯ ಸಾಹಸ ಅವನದು.

ಆದರೆ, ಪತಂಜಲಿಗಳು "ತೇ ಸಮಾಧೌ ಉಪಸರ್ಗಾ ವ್ಯುತ್ಥಾನೇ ಸಿದ್ಧಯಃ" ಎಂದು ಹೇಳಿದ್ದಾರೆ. ಅಂದರೆ ಸಾಧಕನು ಆ ಸಿದ್ಧಿಗಳಲ್ಲಿ ಅತಿಯಾಗಿಯೂ ಅನಗತ್ಯ ವಾಗಿಯೂ ರಮಿಸಿದರೆ ಅವುಗಳೇ ಅವನ ಶ್ರೇಯಸ್ಸಿಗೂ ಸಮಾಧಿಗೂ ಅಡ್ಡಿಯಾಗು ತ್ತವೆ—ಎಂದು. ಆದರೆ ಅವು ಲೌಕಿಕವಾಗಿ ಅದ್ಭುತ ಶಕ್ತಿಗಳೆಂಬುದೇನೋ

ನಿಜವೇ ಸರಿ. ಯೋಗಿಯು ತೀವ್ರವಾದ ವಿವೇಕ ವೈರಾಗ್ಯಗಳಿಂದ ಸರ್ವ ವಾಸನೆಗಳನ್ನೂ ಅಭಿಮಾನವನ್ನೂ ತ್ಯಾಗಮಾಡಿ ಯೋಗಸಿದ್ಧಿಗಳನ್ನು ನಿರ್ಲಕ್ಷ್ಯಮಾಡಿದರೆ ಮಾತ್ರ ಆತ್ಮಜ್ಞಾನದ ಪರಮಪದವನ್ನು ಪಡೆದು ಮುಕ್ತನಾಗುತ್ತಾನೆ.

ಪತಂಜಲಿಗಳು "ತದ್ವೈರಾಗ್ಯಾದಪಿ ದೋಷಬೀಜಕ್ಷಯೇ ಕೈವಲ್ಯಂ" ಸರ್ವಜ್ಞತ್ವ-ಸರ್ವಶಕ್ತಿತ್ವಗಳ ಅಭಿಮಾನವನ್ನೂ ಭಾವನೆಯನ್ನೂ ಸಹ ಹೇಯವೆಣಿಸಿ ಬಿಡುವುದರಿಂದ ಸಕಲ ದೋಷಗಳ ವಾಸನಾಬೀಜವೇ ನಾಶವಾಗಿ ಕೈವಲ್ಯವು ಲಭಿಸುತ್ತದೆ—ಎಂದು ಹೇಳಿದ್ದಾರೆ.

ಪೂರ್ಣಜ್ಞಾನಿಯಾದ ಜೀವನ್ಮುಕ್ತನಲ್ಲಿ ಸ್ವಾಭಾವಿಕವಾಗಿರಬಹುದಾದ ಯೋಗಸಿದ್ಧಿಗಳು ಅವನಿಗೆ ಯಾವ ರೀತಿಯಿಂದಲೂ ಬಾಧಕವಾಗದೇ ಲೋಕಾನುಗ್ರಹಾರ್ಥವಾಗಿ ಸಾಧಕವೇ ಆಗುತ್ತವೆ.

ಆಧುನಿಕ ಯೋಗಿಗಳಲ್ಲಿ ಅತ್ಯಂತ ಪ್ರಸಿದ್ಧರಾದ ಅರವಿಂದರು ಸಿದ್ಧಿಗಳ ವಿಷಯದಲ್ಲಿ ಹೀಗೆ ಹೇಳಿದ್ದಾರೆ:

"All the yogis know about the authenticity of the super physical powers or these Vibhutis or Siddhis. The use of such powers is not detrimental necessarily. It all depends on the one who uses them and on his motives. The idea that yogis do not or ought not to, use such powers, I regard as an ascetic superstition. To prevent a Kalidas or a Shakespeare from writing poems or dramas would be as foolish as to prohibit a yogi from using what become his normal powers, though to ordinary men they appear to be super-normal."

"ಭೌತಿಕ ಭೂಮಿಕೆಯನ್ನು ಮೀರಿದ ಈ ಶಕ್ತಿಗಳಿಗೂ ಅಥವಾ ಈ ವಿಭೂತಿಗಳಿಗೂ ಅಥವಾ ಸಿದ್ಧಿಗಳಿಗೂ ಪ್ರಾಮಾಣ್ಯವನ್ನು ಎಲ್ಲಾ ಯೋಗಿಗಳೂ ಬಲ್ಲರು. ಅಂಥ ಶಕ್ತಿಗಳನ್ನು ಉಪಯೋಗಿಸುವುದು ಅವಶ್ಯವಾಗಿ ಹಾನಿಕರವೇ ಎಂಬುದಿಲ್ಲ. ಅದೆಲ್ಲಾ ಅವುಗಳನ್ನು ಉಪಯೋಗಿಸತಕ್ಕವನ ಮೇಲೂ ಮತ್ತು ಅವನ ಉದ್ದೇಶದ ಮೇಲೂ ಅವಲಂಬಿಸುತ್ತದೆ. ಅಂಥಾ ಸಿದ್ಧಿಗಳನ್ನು ಯೋಗಿಗಳು ಉಪಯೋಗಿಸುವುದಿಲ್ಲ; ಉಪಯೋಗಿಸಬಾರದು—ಎನ್ನುವ ಭಾವನೆಯನ್ನು ನಾನು ಬೈರಾಗಿಯ ಭ್ರಮೆಯೆಂದು ಎಣಿಸುತ್ತೇನೆ. ಕವಿತೆಗಳನ್ನು ಅಥವಾ ನಾಟಕಗಳನ್ನು ಬರೆಯದಂತೆ ಒಬ್ಬ ಕಾಳಿದಾಸನನ್ನೋ ಅಥವಾ ಒಬ್ಬ ಷೇಕ್ಸ್‌ಪಿಯರನನ್ನೋ ತಪ್ಪಿಸುವುದು

ಎಷ್ಟು ಮೂರ್ಖತನವೋ ಸಾಮಾನ್ಯ ಜನರಿಗೆ ಅಸಾಮಾನ್ಯವಾಗಿ ಕಂಡರೂ ಅವನಿಗೆ ಸಾಮಾನ್ಯವೆನಿಸುವ ಸಿದ್ಧಿಗಳನ್ನು ಉಪಯೋಗಿಸದಂತೆ ಯೋಗಿಯನ್ನು ನಿಷೇಧಿಸುವುದೂ ಅಷ್ಟೇ ಹುಚ್ಚುತನ."

—ಇದು ಯೋಗಿ ಅರವಿಂದರ ಅಭಿಪ್ರಾಯ.

ಹೀಗೆ ಜ್ಞಾನಸಿದ್ಧಿಯಿಂದಲೂ ಯೋಗಸಿದ್ಧಿಗಳಿಂದಲೂ ಮಚ್ಛೇಂದ್ರನಾಥ್, ಗೋರಖ್‌ನಾಥ್, ಜ್ಞಾನದೇವ್, ಮೊದಲಾದ ಮಹಾಯೋಗಿಗಳು ತಮ್ಮ ತಮ್ಮ ಶಿಷ್ಯರನ್ನು ಅನುಗ್ರಹ ಮಾಡಿರುವ ಅನೇಕ ಪ್ರಸಂಗಗಳು ಪ್ರಸಿದ್ಧವಾಗಿವೆ.

ಮೊದಲು ಪತಿಕಾಮನೆಯಿಂದ ಉಪಾಸನೆ ಮಾಡಿದ ಪಾರ್ವತಿಯನ್ನು ಪರಮೇಶ್ವರನು ಆಕೆಯ ಕಾಮಕ್ಕಾಗಿ ತಿರಸ್ಕಾರ ಮಾಡಿದರೂ ಅನಂತರ ನಿಷ್ಕಾಮ ತಪಸ್ಸಿನಿಂದ ಶುದ್ಧಸತ್ತ್ವಳಾದ ಆಕೆಯನ್ನು ಪರಶಿವನು ಅನುಗ್ರಹಿಸಿದುದು ದೇವ ದಾಂಪತ್ಯದಲ್ಲಿ ಪ್ರಸಿದ್ಧವಾಗಿದೆ.

ನಿಷ್ಠಾವತೀ ಪತ್ನಿಯಾದ ಕಾತ್ಯಾಯಿನಿ ಇದ್ದರೂ ಜಿಜ್ಞಾಸುವೂ ಮುಮುಕ್ಷುವೂ ಆದ ಮೈತ್ರೇಯಿಯನ್ನು ಶಿಷ್ಯಳನ್ನಾಗಿಯೂ ಪತ್ನಿಯನ್ನಾಗಿಯೂ ಪರಿಗ್ರಹಿಸಿ ಯಾಜ್ಞವಲ್ಕ್ಯರು ಅನುಗ್ರಹಿಸಿದುದು ಋಷಿದಾಂಪತ್ಯದಲ್ಲಿ ಪ್ರಸಿದ್ಧವಾಗಿದೆ.

ಸೀತಾದೇವಿಯನ್ನು ಶ್ರೀರಾಮಚಂದ್ರನೂ ರುಕ್ಮಿಣೀ ಮೊದಲಾದ ಪತ್ನಿಯರನ್ನೂ ವ್ರಜಗೋಪಿಕಾ ಭಕ್ತೆಯರನ್ನೂ ಶ್ರೀಕೃಷ್ಣನೂ ಅನುಗ್ರಹಿಸಿದುದು ರಾಜ ದಾಂಪತ್ಯದಲ್ಲಿ ಪ್ರಸಿದ್ಧವಾಗಿದೆ.

ಮೇನಕಾ-ವಿಶ್ವಾಮಿತ್ರರ ಸ್ವರ್ಗ-ಮರ್ತ್ಯಗಳ ಸಂಗಮಫಲವಾದ ಶಕುಂತಲೆಯು, ಕಣ್ವ ಮಹರ್ಷಿಗಳ ಕೃಪಾಶ್ರಯದಲ್ಲಿಯೇ ಬೆಳೆದರೂ ದುಷ್ಯಂತ ಮಹಾರಾಜನ ಗಾಂಧರ್ವ ಪ್ರೇಮಕ್ಕೆ ಬಲಿಯಾದಳು. ಆದರಿಂದ ಗರ್ಭವತಿಯಾದ ಆಕೆಯು ದೂರ್ವಾಸ ಶಾಪದ ನಿಮಿತ್ತವಾಗಿ ವಿಸ್ಮೃತಿಯನ್ನು ಪಡೆದ ತನ್ನ ಪತಿಯಿಂದ ತಿರಸ್ಕೃತಳಾದಳು. ಆಮೇಲೆ, ಪತಿನಿಷ್ಠಳಾದ ಶಕುಂತಲೆಯು ಸರ್ವದಮನ-ಭರತನ ತಾಯಿಯಾದ ಅನಂತರ, ಮುದ್ರೆಯುಂಗುರದ ದರ್ಶನದಿಂದ ಶಾಪವಿಮುಕ್ತನಾದ ದುಷ್ಯಂತ ಮಹಾರಾಜನಿಂದ ಪರಿಗ್ರಹೀತಳಾಗಿ ಆದರಿಸಲ್ಪಟ್ಟಳು. ಇದು ಇತಿಹಾಸಪ್ರಸಿದ್ಧವಾಗಿದೆ.

ಇಂಥಾ ಒಂದೊಂದು ಪ್ರಸಂಗದಲ್ಲಿಯೂ ಅನೇಕ ವೇಳೆ ಸ್ತ್ರೀಗಿಂತಲೂ ಪುರುಷನ ಶ್ರೇಷ್ಠತೆಯೂ ಪುರುಷನಿಂದ ಸ್ತ್ರೀಗೆ ಅನುಗ್ರಹವಾಗಿರುವುದೂ ಸ್ಪಷ್ಟವಾಗಿ ತೋರಿಬರುತ್ತದೆ.

ಆದರೆ, ಧರ್ಮದೃಷ್ಟಿಯಿಂದ ವಿಧೇಯಳೂ ವಿನೀತಳೂ ಆದರ್ಶಳೂ ಆಗಿದ್ದ ಧರ್ಮಪತ್ನಿಯು ತನ್ನ ಯೋಗಮಹಿಮೆಯಿಂದಲೂ ಜ್ಞಾನಮಹಿಮೆಯಿಂದಲೂ ವಿದ್ಯಾವಂತನೂ ವೀರನೂ ಸುಸಂಸ್ಕೃತನೂ ಆದ ಪತಿರಾಜನಿಗೇ ಗುರುವಾಗಿ ಉದ್ಧಾರಮಾಡಿದ ಚೂಡಾಲಾರಾಣಿಯ ಆಖ್ಯಾನವು ಪ್ರಾಯಶಃ ಪ್ರಪಂಚ ಸಾಹಿತ್ಯದಲ್ಲಿಯೇ ಅತ್ಯಂತ ಅದ್ಭುತವೂ ಅಭೂತಪೂರ್ವವೂ ಅನುಪಮವೂ ಆಗಿರುವದೆಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ವಸಿಷ್ಠಮಹರ್ಷಿಗಳೇ ಶ್ರೀರಾಮಚಂದ್ರನಿಗೆ ಈ ಆಶ್ಚರ್ಯ ಚರಿತ್ರೆಯನ್ನು ನಿರೂಪಿಸಿದ್ದಾರೆಂದು ಪ್ರಸಿದ್ಧವಾದ ವಾಸಿಷ್ಠ ರಾಮಾಯಣಗ್ರಂಥದಲ್ಲಿ ಉಕ್ತವಾಗಿದೆ.

ಈ ದಿವಸ ಮಹಾಯೋಗಿಗಳಾದ ಚೂಡಾಲಾ-ಶಿಖಿಧ್ವಜರ ಆಖ್ಯಾನವನ್ನೇ ಯಥಾಮತಿ ಸಂಕ್ಷೇಪವಾಗಿ ವಿಜ್ಞಾಪಿಸುತ್ತೇನೆ.

ಇದಕ್ಕೆ ಮೊದಲು ಸ್ತ್ರೀ-ಪುರುಷ ಭೇದದ ಮೂಲತತ್ತ್ವವನ್ನೂ ಅವುಗಳಲ್ಲಿ ಪ್ರತಿಯೊಂದರ ಸಹಜವಾದ ಗುಣ ಸ್ವಭಾವ ಧರ್ಮಗಳನ್ನೂ ವಿಚಾರ ಮಾಡಬೇಕಾಗಿದೆ. ಮತ್ತು ಪ್ರಾಚೀನ ಭಾರತದ ಸಂಸ್ಕೃತಿಯಲ್ಲಿಯೂ ಸಾಹಿತ್ಯದಲ್ಲಿಯೂ ವಿಶೇಷವಾಗಿ ಎತ್ತಿಹಿಡಿದಿರುವ ಸ್ತ್ರೀತ್ವದ ಉತ್ಕೃಷ್ಟವಾದ ಆದರ್ಶವನ್ನೂ ಸಂಕ್ಷೇಪವಾಗಿ ಮನದಂದುಕೊಳ್ಳಬೇಕಾಗಿದೆ.

ಅದ್ಭುತವಾದ ವಿದ್ಯುಚ್ಛಕ್ತಿಯ ಆವಿಷ್ಕಾರದಿಂದ ಪ್ರಾರಂಭವಾಗಿ, ಅಣೋರಣೀಯಾನ್ ಆದ ಪರಮಾಣುವಿನ ಗರ್ಭದಲ್ಲಿ ಮಹತೋಮಹೀಯಾನ್ ಆಗಿರುವ ಅಪಾರ ಪ್ರಚಂಡಶಕ್ತಿಯನ್ನು ಶೋಧಿಸುವುದರಲ್ಲಿ ಮುಂದುವರಿದು, ವೈರ್‌ಲೆಸ್, ರೇಡಿಯೋ, ಟೆಲಿವಿಷನ್, ಜೆಟ್ ಪ್ಲೇನ್, ಸೂಪರ್‌ಸಾನಿಕ್ ಮೊದಲಾದ ಯಂತ್ರ ತಂತ್ರಗಳಲ್ಲಿ ವಿಲಾಸಮಾಡುತ್ತಾ ಬಾಹ್ಯಾಂತರಿಕ್ಷ ವಿಜಯದಿಂದ ರಾಕೆಟ್‌ಗಳ ಮೂಲಕ ಚಂದ್ರಮಂಡಲಕ್ಕೆ ಹಾರುತ್ತಿರುವ ಆಧುನಿಕ ಸ್ಪೂಟ್‌ನಿಕ್ ಯುಗದಲ್ಲಿ ನಿತ್ಯನಿರ್ದುಷ್ಟವೂ ಶ್ರೇಷ್ಠವೂ ಆದ ಸನಾತನ ಆದರ್ಶಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು, ನೂತನ ಪರಿಸ್ಥಿತಿಗೆ ಹೊಂದಿಕೊಳ್ಳುವದಕ್ಕೆ ಅವಶ್ಯವಾದ ಸುಧಾರಣೆಗಳನ್ನೂ ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕು. ಹಾಗೆಯೇ ಪಾಶ್ಚಾತ್ತ್ಯ ನಾಗರಿಕತೆಯ ಪ್ರಭಾವಕ್ಕೊಳಗಾಗಿ ಮೋಹದಿಂದ ನಮ್ಮಲ್ಲಿ ಬೆಳೆದುಬಂದಿರುವ ಅಸಹ್ಯವೂ ಅನಾವಶ್ಯಕವೂ ಅಪಾಯಕರವೂ ಆದ ಬದಲಾವಣೆಗಳು ಯಾವುವು ಎಂಬುದನ್ನೂ ನಾವು ಗುರುತಿಸಿ, ಅವನ್ನು ನಿರ್ದಾಕ್ಷಿಣ್ಯವಾಗಿ ತ್ಯಜಿಸಬೇಕು.

ಒಂದು ದೇಶದ ನಾಗರಿಕತೆಯಲ್ಲಿ, ಅದು ಸ್ತ್ರೀತ್ವಕ್ಕೆ ಕೊಟ್ಟಿರುವ ಸ್ಥಾನಮಾನ ಮೌಲ್ಯಗಳಿಂದ ಆ ನಾಗರಿಕತೆಯ ವಿಕಾಸದ ವೈಶಾಲ್ಯವನ್ನು ಅಳಿಯಬಹುದೆಂಬು

ಪ್ರಾಜ್ಞರ ಅಭಿಪ್ರಾಯವಿದೆ. ಅದು ನಿಜವಾದರೆ, ಪ್ರಾಚೀನ ಭಾರತದ ನಾಗರಿಕತೆಯು ಉನ್ನತ ಶಿಖರಕ್ಕೆ ಏರಿತ್ತೆಂಬುದು ಆಗಿನ ಆರ್ಯ ಮಹಿಳಾಮಣಿಗಳ ಚರಿತ್ರೆಗಳನ್ನು ಪರಿಶೀಲಿಸುವುದರಿಂದ ನಿಸ್ಸಂದೇಹವಾಗಿ ವ್ಯಕ್ತವಾಗುತ್ತದೆ. ನಾವು ಪ್ರಪಂಚದ ಸಾಹಿತ್ಯವನ್ನೆಲ್ಲಾ ಶೋಧಿಸಿದರೂ, ಮಾನವಕುಲದ ಇತಿಹಾಸವನ್ನೆಲ್ಲಾ ಅಧ್ಯಯನ ಮಾಡಿದರೂ ಪ್ರಾಚೀನ ಭಾರತದ ಸಾಹಿತ್ಯದಲ್ಲಿ ದೊರಕುವ ಸ್ತ್ರೀತ್ವದ ಮಾದರಿ ಗಿಂತಲೂ, ಆದರ್ಶಕ್ಕಿಂತಲೂ ಹೆಚ್ಚು ಸುಂದರವಾದುದೂ ಮಧುರವಾದುದೂ ಭವ್ಯವೂ ದಿವ್ಯವೂ ಆದುದೂ ಪ್ರಬಲವಾದುದೂ ಬೇರೆಲ್ಲಿಯೂ ಲಭಿಸಲಾರದು. ಪ್ರತಿಯೊಂದು ಆದರ್ಶ ಗುಣವೂ ಶೀಲವೂ ಸೊಬಗೂ ಶೋಭೆಯೂ ಲಾಲಿತ್ಯವೂ ತಮ್ಮ ಸೌಂದರ್ಯ ದಿಂದ ಲೋಕವನ್ನೇ ಆಕರ್ಷಿಸುವುದಕ್ಕಾಗಿ ಮಾನವರೂಪವನ್ನು ತಳೆದು ಬಂದು ಬಾಳಿನಲ್ಲಿ ಬೆಳಗುತ್ತಿರುವಂತೆ ಆ ವ್ಯಕ್ತಿಗಳ ಚಿತ್ರಣಗಳಿವೆ.

ಅಂಥಾ ಸ್ತ್ರೀರತ್ನಗಳಾದ ಸೀತಾ, ದ್ರೌಪದೀ, ಸಾವಿತ್ರೀ, ಶಕುಂತಲಾ ಮೊದಲಾದ ಹೆಸರುಗಳು ನಮ್ಮಲ್ಲಿ ಹೇಗೋ ಹಾಗೇ ಪಾಶ್ಚಾತ್ಯ ದೇಶಗಳಲ್ಲಿಯೂ ತಿಳಿದವರಲ್ಲಿ ಬಳಕೆಯಾದ ಮನೆಯ ಮಾತಾಗಿದೆ. ಅವರು ಸ್ತ್ರೀತ್ವದ ಪರಮಾದರ್ಶ ವೆಂದೂ, ಎಂದೂ ಎಲ್ಲಿಯೂ ಮೀರಿಸಲಾಗದ ಮಾದರಿಯನ್ನು ಭಾರತವು ಲೋಕಕ್ಕೇ ಕೊಟ್ಟಿದೆಯೆಂದೂ ಪಾಶ್ಚಾತ್ಯ ಲೇಖಕರೂ ವಿದ್ವಾಂಸರೂ ವಿಚಾರಧುರೀಣರೂ ತತ್ತ್ವಜ್ಞಾನಿಗಳೂ ಆ ಸೃಷ್ಟಿಸೌಂದರ್ಯಕ್ಕೆ ಮುಗ್ಧರಾಗಿ ಮನಬಿಚ್ಚಿ ಹೊಗಳಿದ್ದಾರೆ. ಅವರ ಮನಸ್ಸಿನ ಮೇಲೆ ಎಂಥಾ ಅದ್ಭುತ ಪರಿಣಾಮವಾಗಿದೆಯೆಂಬುದನ್ನು ತೋರಿಸು ವುದಕ್ಕಾಗಿ ಪಾಶ್ಚಾತ್ತ್ಯ ಲೇಖಕರ ಉದ್ಗಾರಗಳಿಂದ ವಿದ್ವಾಂಸರು ಯಥೇಷ್ಟವಾಗಿ ಉದಾಹರಿಸಬಹುದು. ಹೀಗಿದ್ದರೂ ಆರ್ಯ ಮಹಿಳೆಯರಾದ ನಮ್ಮ ತಾಯಂದಿರು ಭಾರತೀಯ ಸ್ತ್ರೀ ಆದರ್ಶದ ಬೆಲೆಯನ್ನೇ ತಿಳಿಯದೆ ಕಪಿಗಳಂತೆ ಪಾಶ್ಚಾತ್ತ್ಯ ನಾರಿಯರ ಅನುಕರಣ ಮಾಡುವುದು ವಿಷಾದಕರವೇ ಸರಿ. ಗತಕಾಲದ ಮಹತ್ತನ್ನು ಮನಸ್ಸಿಗೆ ತಾರದೆ ಮತ್ತು ವರ್ತಮಾನ ಕಾಲದ ಅತೃಪ್ತ ಪರಿಸ್ಥಿತಿಗೆ ಅದನ್ನು ಹೋಲಿಸದೆ ಆ ಸಾಂಸ್ಕೃತಿಕ ಪೂರ್ವವೈಭವವನ್ನು ನಮ್ಮ ಜೀವನದಲ್ಲಿ ಅಳವಡಿಸುವುದು ಸಾಧ್ಯ ವಲ್ಲ. ಗತವೈಭವದ ಸವಿಸೆನಪಿನಲ್ಲಿಯೇ ತೊಳಲಾಡಿದ ಮಾತ್ರಕ್ಕೇ ಪ್ರಯೋಜನವೂ ಇಲ್ಲ.

ಜನರಲ್ಲಿ ಸಾಮಾನ್ಯವಾಗಿ ಎರಡು ಗುಂಪುಗಳಿವೆ. ಸುಧಾರಣೋತ್ಸುಕರ ಒಂದು ಗುಂಪು ನಮ್ಮ ಜೀವನದ ನಡೆ, ನುಡಿ, ಆಚಾರ, ವಿಚಾರ, ಮೊದಲಾದ ಸಕಲವನ್ನೂ ಸಮೂಲವಾಗಿ ಬದಲಾಯಿಸಬೇಕೆಂದು ಬಯಸುತ್ತಾರೆ. ಸಂಪ್ರದಾಯ ನಿಷ್ಠರ ಇನ್ನೊಂದು ಗುಂಪು, ಹಿಂದಿನಿಂದ ನಮ್ಮ ಜನಾಂಗದಲ್ಲಿ ಪರಂಪರೆಯಾಗಿ ಬಂದಿರುವ ಯಾವ ಆಚಾರ, ವಿಚಾರಗಳನ್ನೂ ಜೀವನ ಪದ್ಧತಿಯನ್ನೂ ಬದಲಾಯಿಸ

ಬಾರದೆನ್ನುತ್ತಾರೆ. ಭಾರತದ ಭಾವೀ ಭಾಗ್ಯವು ಈ ಎರಡು ವಿರುದ್ಧವಾದಗಳ ಅತಿರೇಕಭಾವಗಳ ನಡುವೆ ಬಹುಕಾಲ ತೂಗಾಡುತ್ತಿತ್ತು. ಆದರೆ ಯಾರಿಗೆ ಬೇಕಾಗಲೀ ಯಾರಿಗೆ ಬೇಡವಾಗಲೀ ಕಾಲಗತಿಯ ವೇಗದಿಂದ ಪ್ರಪಂಚದಲ್ಲಿ ಈಗ ತಾನಾಗಿಯೇ ಎಲ್ಲರ ಮೇಲೆ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ರಭಸದಿಂದ ಬಂದೆರಗುತ್ತಿರುವ ಕ್ರಾಂತಿಯ ಹುಚ್ಚುಹೊಳೆಯು ಸಮಸ್ತವನ್ನೂ ಕೊಚ್ಚಿಕೊಂಡು ಹೋಗುತ್ತಿರುವಾಗ ಜ್ಞಾನಸಮ್ಮತವಾದ ನಮ್ಮ ಧಾರ್ಮಿಕ ಸಂಪ್ರದಾಯಗಳೂ ಪರಿಶುದ್ಧವಾದ ಸನಾತನ ಆದರ್ಶಗಳೂ ಪವಿತ್ರವಾದ ನಮ್ಮ ಭಾರತೀಯ ಸಂಸ್ಕೃತಿಯನ್ನು ರಕ್ಷಣೆಮಾಡುವ ಭದ್ರವಾದ ನೌಕೆಗಳಾಗಿವೆ.

ಇದುವರೆಗೆ ನಮ್ಮ ಸಂಸ್ಕೃತಿಯ ರಕ್ಷಣೆಯಾಗಿದ್ದರೆ ಅದು, ಶ್ರದ್ಧಾವಂತಳೂ ಸಾಧ್ವಿಯೂ ಧರ್ಮನಿಷ್ಠಳೂ ಆದ ಆರ್ಯಸ್ತ್ರೀಯಿಂದಲೇ ಎಂದು ವಿವೇಕಾನಂದರು ಹೇಳಿದ್ದಾರೆ. ಪ್ರಕೃತಿಯ ರಾಜ್ಯದಲ್ಲಿ ಸ್ತ್ರೀಯರಿಗೆ ವಿಶಿಷ್ಟವಾದ ಸ್ಥಾನವಿದೆ. ಅದರ ಸ್ವಭಾವಕ್ಕನುಗುಣವಾಗಿಯೂ ಅವರ ಶರೀರರಚನಾ ವಿಶೇಷಕ್ಕನುಸಾರವಾಗಿಯೂ ಅವರಿಂದಲೇ ನಡೆಯಬೇಕಾದ ಕೆಲವು ವಿಶಿಷ್ಟ ಕ್ರಿಯೆಗಳಿವೆ. ಮಾನವರಲ್ಲಿಯೂ ಸಕಲ ಪ್ರಾಣಿಗಳಲ್ಲಿಯೂ—ಏಕೆ—ಸಮಸ್ತ ಪ್ರಕೃತಿಮಂಡಲದಲ್ಲಿಯೂ ಇರುವ ಮಹತ್ತಾದ ಸ್ತ್ರೀಪುರುಷ ಭೇದವು ಅಗಾಧವಾದ ಅರ್ಥವುಳ್ಳದ್ದಾಗಿದೆ; ಜೀವಶಕ್ತಿಯ ವಿಕಾಸದಲ್ಲಿಯೂ ಅದು ಅತಿ ಮಹತ್ತ್ವವನ್ನು ಪಡೆದಿದೆ. ಆದ್ದರಿಂದಲೇ ಈ ಭೇದವನ್ನು ಇಲ್ಲದಂತೆ ಮಾಡುವ ಅಥವಾ ಸ್ತ್ರೀಯನ್ನು ಪುರುಷನನ್ನಾಗಿಯೋ, ಪುರುಷನನ್ನು ಸ್ತ್ರೀಯನ್ನಾಗಿಯೋ ಮಾಡುವ ಎಂಥಾ ಪ್ರಯತ್ನವೂ ವ್ಯರ್ಥವೇ ಸರಿ; ಮಾನವಕುಲದ ಪ್ರಗತಿಪರವಾದ ವಿಕಾಸಕ್ಕೆ ಆ ಹುಚ್ಚು ಸಾಹಸವು ಗದಾಘಾತವೇ ಸರಿ. ಆ ಪ್ರತಿಯೊಂದು ಭೇದದಲ್ಲಿಯೂ ಕೆಲವು ವಿಶಿಷ್ಟ ಗುಣಸ್ವಭಾವಗಳು ವಿಕಸಿತವಾಗಿವೆ. ಕೆಲವು ಪ್ರತ್ಯೇಕ ಶಕ್ತಿಗಳು ಆ ಒಂದೊಂದರಲ್ಲಿಯೂ ನಿಯಮಿತವಾಗಿವೆ. ಯಾವದೊಂದನ್ನು ಘಾತಿಸುವುದೂ ಮೌಢ್ಯವೇ ಸರಿ.

ಸೃಷ್ಟಿಯ ಪ್ರಾರಂಭದಲ್ಲಿ ಮನುಷ್ಯ ಜಾತಿಯನ್ನು ನಿರ್ಮಾಣ ಮಾಡುವ ಸಮಯದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನೇ ತನ್ನನ್ನು ತಾನು ಸ್ತ್ರೀಪುರುಷ ರೂಪಗಳಿಂದ ಅಥವಾ ಪ್ರಕೃತಿ ಪುರುಷ ರೂಪಗಳಿಂದ ಎರಡಾಗಿ ವಿಭಾಗಿಸಿಕೊಂಡನು. ಸಕಲ ಭೇದಗಳ ಮೂಲವೇ ಅದು. ಆದ್ದರಿಂದ ಮಾನವಕುಲದ ವಿಕಾಸದಲ್ಲಿಯೂ ಸಮಗ್ರ ಪ್ರಪಂಚದ ವಿಕಾಸದಲ್ಲಿಯೂ ಎರಡು ಭೇದಗಳೂ ನಡೆಸಬೇಕಾದ ಪ್ರತ್ಯೇಕವಾದ ಮಹತ್ಕಾರ್ಯಗಳಿವೆ. ಜಗನ್ಮೂಲವಾದ ಒಂದು ತತ್ತ್ವವೇ ಸೃಷ್ಟಿವಿಲಾಸಕ್ಕಾಗಿ ಎರಡಾಗಿ ತೋರುತ್ತಿರುವುದರಿಂದ ಪುನಃ ಆ ಎರಡು ಒಂದಾಗಿ ಸೃಷ್ಟಿಕಾರ್ಯವನ್ನು ಬೆಳೆಸುವದಕ್ಕಾಗಿಯೇ ಒಂದನ್ನೊಂದು ಸೆಳೆಯುತ್ತಿವೆ. ಒಂದನ್ನು ಇನ್ನೊಂದ

ರಿಂದ ಬೇರ್ಪಡಿಸಲಾಗುವುದಿಲ್ಲ. ಈ ಸೆಳೆತವೇ ಸ್ತ್ರೀಪುರುಷರ ರಾಗಭೋಗಗಳು. ಇದರ ಫಲವೇ ಸಂತಾನ. ಒಂದು ರೂಪದಲ್ಲಿಯೇ ಈ ಎರಡು ಗುಣಗಳನ್ನೂ ಕ್ರಿಯೆಗಳನ್ನೂ ಸಾಧಿಸಲಾಗುವುದಿಲ್ಲ. ಆದ್ದರಿಂದ ಒಂದಕ್ಕೊಂದು ಪೂರಕವಾದ್ದರಿಂದಲೇ ಒಂದನ್ನೊಂದು ಬಿಟ್ಟಿರಲಾರದ ಸ್ವಭಾವವುಳ್ಳ ಸ್ತ್ರೀಪುರುಷರೆಂಬ ಎರಡು ಬೇರೆ ಬೇರೆ ದೇಹಗಳಾದವು. ದೇವಿಯಿಲ್ಲದೆ ಯಾವ ದೇವನೂ ಇಲ್ಲ. ಶಕ್ತಿಯಿಲ್ಲದೆ ಶಿವನಿಲ್ಲ. ಲಕ್ಷ್ಮಿಯಿಲ್ಲದೆ ನಾರಾಯಣನಿಲ್ಲ. ಪಾರ್ವತಿಯು ಪರಮೇಶ್ವರನಿಗೆ ನಿತ್ಯಾನಪಾಯಿನೀ.

ಆದ್ದರಿಂದ ದೇವತ್ವದ ಅರ್ಧ ಶಕ್ತಿಯು ಸ್ತ್ರೀತ್ವದಲ್ಲಿ ಬೆಳಗಿ ಬಂದಿದೆ. ರೂಪರಚನೆಗೆ ಅಥವಾ ದೇಹಗಳ ನಿರ್ಮಾಣಕ್ಕೆ ಅಗತ್ಯವಾದ ಕ್ಷೇತ್ರವನ್ನೂ ದ್ರವ್ಯವನ್ನೂ ನೀಡಿ, ಧಾರಣೆಯನ್ನೂ ಪೋಷಣೆಯನ್ನೂ ರಕ್ಷಣೆಯನ್ನೂ ಮಾಡುವ ಮಾತೃಶಕ್ತಿಯೇ ಸ್ತ್ರೀ ಸ್ವಭಾವದಲ್ಲಿದೆ. ವಿಶ್ವದಲ್ಲಿ ಪ್ರಕೃತಿಯಿಂದ ಸ್ತ್ರೀಗೆ ನಿಯಮಿಸಲ್ಪಟ್ಟಿರುವ ಮೂಲಸ್ವಭಾವವೇ ಇದು. ಕ್ಷೇತ್ರರೂಪಳಾದ ಸ್ತ್ರೀಯಲ್ಲಾಗುವ ರೂಪರಚನೆಗೆ ಬೀಜಶಕ್ತಿಯನ್ನು ಒದಗಿಸತಕ್ಕವನೇ ಚೈತನ್ಯನಾದ ಪುರುಷ.

ಆಸುರೀ ಶಕ್ತಿಯು ಬೆಳೆದು ಲೋಕವನ್ನೆಲ್ಲಾ ಬಾಧಿಸುತ್ತಿದ್ದಾಗ ದೇವತೆಗಳೂ ಕಂಗೆಟ್ಟಿರಲು ಸಕಲ ದೇವತೆಗಳ ತೇಜಸ್ಸೂ ಒಂದುಗೂಡಿ ದುರ್ಗಾದೇವಿಯ ಅವತಾರವಾಗುತ್ತದೆ. ಸಕಲ ಶಕ್ತಿಗಳ ಸಂಘಾತವಾದ ದುರ್ಗಾಮಾತೆಯು ಆಸುರೀ ಶಕ್ತಿಯನ್ನು ನಿಗ್ರಹಿಸಿ ದೇವತೆಗಳನ್ನೂ ಲೋಕವನ್ನೂ ರಕ್ಷಣೆ ಮಾಡುತ್ತಾಳೆ. ಭಾರತೀಯ ಸಾಹಿತ್ಯದಲ್ಲಿ ಸ್ತ್ರೀತ್ವದ ನಿರೂಪಣೆ ಇಷ್ಟು ಪೂಜನೀಯವೂ ಗಂಭೀರವೂ ಆಗಿದೆ.

ಸ್ತ್ರೀರೂಪದ ದೈವೀ ಶಕ್ತಿಯನ್ನು ಪ್ರಕಾಶಪಡಿಸುವುದಕ್ಕಾಗಿಯೇ ಮಾನವ ಸಮಾಜದಲ್ಲಿ ವಿವಾಹಪದ್ಧತಿಯ ಆದರ್ಶವು ಎತ್ತಿ ಹಿಡಿಯಲ್ಪಟ್ಟಿದೆಯೆಂದು ಹೇಳಿದೆ. ದಂಪತಿಗಳಲ್ಲಿ ಪತಿಪತ್ನಿಯರು ಉಭಯರೂ ಬೇರೆ ಬೇರೆ ಸ್ವತಂತ್ರ ವ್ಯಕ್ತಿಗಳೆಂದು ಎಣಿಸಲ್ಪಡುವದಿಲ್ಲ. ಮಹಾಕವಿ ಕಾಳಿದಾಸನು ಇದೇ ತತ್ತ್ವಾರ್ಥವನ್ನು ರಘುವಂಶ ಕಾವ್ಯದ ಪ್ರಥಮ ಶ್ಲೋಕದಲ್ಲಿ ಸುಂದರವಾಗಿ ವ್ಯಕ್ತಮಾಡಿದ್ದಾನೆ.

ವಾಗಾರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

"ಮಾತೂ ಮತ್ತು ಅದರ ಅರ್ಥವೂ ಹೇಗೆ ಒಂದನ್ನೊಂದು ಹೊಂದಿಕೊಂಡಿವೆಯೋ ಹಾಗೆ ಸದಾ ಮಿಳಿತವಾಗಿರುವ ಜಗತ್ತಿನ ತಂದೆತಾಯಿಗಳಾದ ಪಾರ್ವತೀ

ಪರಮೇಶ್ವರರನ್ನು ಮಾತಿನ ಅರ್ಥವು ಸರಿಯಾಗಿ ತಿಳಿಯುವುದಕ್ಕಾಗಿ ನಮಸ್ಕರಿಸುತ್ತೇನೆ" ಎಂದು ಹೇಳಿದ್ದಾನೆ.

ಕಾಳಿದಾಸನು ನಿರೂಪಿಸಿರುವ ಪಾರ್ವತೀ ಪರಮೇಶ್ವರರ ಅವಿನಾಭಾವವೇ ಪ್ರತಿ ದಂಪತಿಗಳಲ್ಲಿಯೂ ಅನ್ವಯಿಸುತ್ತದೆ. ಪತಿಪತ್ನಿಯರಿಗೆ ವಿರೋಧವೂ ವೈರವೂ ಇಲ್ಲ. ಸ್ತ್ರೀಯು ಪುರುಷನ ಅರ್ಧಾಂಗಿಯು, ಸಹಧರ್ಮಿಣಿಯು. ಆದ್ದರಿಂದ ಸ್ತ್ರೀಯಿಂದ ಪುರುಷನು ಪೂರ್ಣಾಂಗನು, ಪೂರ್ಣನು.

ಆದರ್ಶ ಸ್ತ್ರೀಯ ಇಡೀ ಶರೀರವು ಭಾವಾವೇಗದ ಬಲವನ್ನೂ ಸೊಬಗನ್ನೂ ತೀವ್ರಪ್ರೇಮದ ಗಾಢತೆಯನ್ನೂ ಔನ್ನತ್ಯವನ್ನೂ ಅಭಿವ್ಯಕ್ತಮಾಡುವುದಕ್ಕಾಗಿಯೇ ರಚನೆಯಾಗಿದೆ. ಪುರುಷನ ಪ್ರಕೃತಿಯು ಬುದ್ಧಿಪ್ರಧಾನವಾಗಿಯೇ ಸೃಷ್ಟಿಯಾಗಿದೆ. ಮಾನವಗುಣದ ಈ ಎರಡು ವಿಶಿಷ್ಟಸ್ವಭಾವಗಳನ್ನು ತೋರಿಸುವುದಕ್ಕಾಗಿಯೇ ಸ್ತ್ರೀ ಪುರುಷರ ಪ್ರತ್ಯೇಕ ಭೌತಿಕ ದೇಹಗಳ ನಿರ್ಮಾಣವಾಗಿವೆ. ನಿರ್ದೇಶಕ ಶಕ್ತಿಯುಳ್ಳ ಬುದ್ಧಿಯೂ ಪ್ರಚೋದಕ ಶಕ್ತಿಯುಳ್ಳ ಭಾವವೂ ಜೊತೆಗೂಡಿದಾಗಲೇ ಮಾನವನು ಈ ಪ್ರಪಂಚದಲ್ಲಿ ತನ್ನ ಸರಿಯಾದ ಕರ್ತವ್ಯವನ್ನು ಸಾಧಿಸಬಲ್ಲನು. ಆ ಐಕ್ಯತೆಯನ್ನು ಭಂಗಮಾಡುವ ಯಾವ ಪ್ರಯತ್ನವಾಗಲೀ, ಜೀವನದಲ್ಲಿ ಸ್ತ್ರೀ ಪುರುಷರು ಒಬ್ಬರೊಡನೊಬ್ಬರು ಸ್ಪರ್ಧಿಸುವಂತೆಯೂ ಸೆಣಸಾಡುವಂತೆಯೂ ಮಾಡುವ ಯಾವ ಕುಯುಕ್ತಿಯಾಗಲೀ ಮಾನವತ್ವದ ವಿಕಾಸಕ್ಕೂ ಪ್ರಗತಿಗೂ ಕುಠಾರಪ್ರಾಯವಾದುದೇ ಸರಿ.

ಮೂಲಭೂತವಾದ ಈ ತತ್ತ್ವವನ್ನೂ ರಹಸ್ಯವನ್ನೂ ನಾವು ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸುವ ಸಂದರ್ಭದಲ್ಲಿ ಎಂದೂ ಮರೆಯಬಾರದು. ಹೆಣ್ಣಿನಲ್ಲಿ ರಾಗಭಾವಗಳು (Emotion) ಅತ್ಯಂತ ಪ್ರಬಲವಾಗಿ ವ್ಯಕ್ತವಾಗುತ್ತವೆ; ಪೂರ್ಣವಾಗಿ ಬೆಳೆದು ತೋರುತ್ತವೆ. ಆದ್ದರಿಂದ ಪುರುಷನ ಸುಖದುಃಖಾನುಭವಗಳಿಗಿಂತಲೂ ಸ್ತ್ರೀಯ ಸುಖಾನುಭವವಾಗಲೀ ದುಃಖಾನುಭವವಾಗಲೀ ಹೆಚ್ಚು ತೀವ್ರವಾಗಿರುತ್ತವೆ. ಆದ್ದರಿಂದ ಸ್ತ್ರೀಗೆ ಶಿಕ್ಷಣ ಕೊಡುವಾಗ ಆಕೆಯಲ್ಲಿ ಸ್ವಾಭಾವಿಕವಾಗಿ ಪ್ರಬಲವಾಗಿರುವ ರಾಗಭಾವಗಳ (ಇಮೋಷನ್ನಿನ) ಅಂಶವನ್ನು ಪೂರ್ಣವಾಗಿ ಹೊರಹೊಮ್ಮುವಂತೆಯೂ ದುರ್ಬಲವಾಗಿರುವ ಬುದ್ಧಿಶಕ್ತಿಯ ಅಂಶವನ್ನು ಹೆಚ್ಚಾಗಿ ಬೆಳೆದು ಬರುವಂತೆಯೂ ಪ್ರಯತ್ನ ಮಾಡಬೇಕು. ಇದಕ್ಕೆ ವಿಲಕ್ಷಣವಾಗಿ ಪುರುಷನು ಬುದ್ಧಿ ಪ್ರಧಾನನಾಗಿರುವುದರಿಂದ ಅವನಲ್ಲಿ ಬುದ್ಧಿಶಕ್ತಿಯನ್ನೂ ಪೂರ್ಣವಾಗಿ ಬೆಳೆಸುವುದರ ಜೊತೆಗೆ ರಾಗಭಾವಗಳನ್ನೂ ನೈತಿಕ ಭಾವವನ್ನೂ ಹೆಚ್ಚಾಗಿ ಬೆಳಸಿ ಅವನು ಕಠಿಣ ಸ್ವಭಾವದವನೂ ಸ್ವಾರ್ಥಿಯೂ ಆಗದಂತೆ ನೋಡಿಕೊಳ್ಳಬೇಕು. ಸ್ತ್ರೀಯಲ್ಲಾಗಲೀ ಪುರುಷನಲ್ಲಾಗಲೀ ಭಾವಾವೇಗಗಳು ಬುದ್ಧಿಯ

ಅಂಕೆಯಲ್ಲಿರಬೇಕು. ಅಂತು ಬುದ್ಧಿಭಾವಗಳ ಬೆಳವಣಿಗೆಯು ಇಬ್ಬರಲ್ಲಿಯೂ ಸಮವಾಗಿರಬೇಕು. ಇಲ್ಲವಾದರೆ ಸಮತೋಲನದ ವ್ಯಕ್ತಿತ್ವವಾಗುವುದಿಲ್ಲ. ಹೀಗೆ ಸರ್ವತೋಮುಖವಾಗಿ ವಿಕಾಸಹೊಂದಿ ಸುಸಂಸ್ಕೃತರಾದ ಸ್ತ್ರೀ ಪುರುಷರ ವಿವಾಹ ವಾದರೆ ಇಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡು ಜೀವನದಲ್ಲಿ ಪರಸ್ಪರ ಸ್ನೇಹಭಾವವುಳ್ಳವರೂ ಸಹಾಯಕರೂ ಆಗಿದ್ದು, ಲೋಕದಲ್ಲಿ ಮಹತ್ಕಾರ್ಯ ಗಳನ್ನು ಸಾಧಿಸಬಹುದು. ಇದೇ ಆದರ್ಶ ದಾಂಪತ್ಯವಾಗುತ್ತದೆ. ಹೀಗಲ್ಲದೆ ಪುರುಷನಲ್ಲಿ ಮುಖ್ಯಭಾಗವಾದ ಬುದ್ಧಿಯೂ ಸ್ತ್ರೀಯಲ್ಲಿ ಮುಖ್ಯವಾದ ಭಾವವೂ ಅತಿಯಾಗಿ ಬೆಳೆದು, ಇಬ್ಬರಲ್ಲಿಯೂ ಗೌಣಭಾಗಗಳಾದ ಭಾವ-ಬುದ್ಧಿಗಳು ಬೆಳೆಯದಿದ್ದರೆ ಜೀವನವು ಅಪೂರ್ಣವೂ ವ್ಯಾಕುಲಿತವೂ ಆಗುತ್ತದೆ. ಇಂಥಾ ಎರಡು ವ್ಯಕ್ತಿಗಳ ದಾಂಪತ್ಯವು ವಿಷಮವೂ ವಿರಸವೂ ಆಗುತ್ತದೆ.

ನಮ್ಮ ಪ್ರಾಚೀನ ಸಾಹಿತ್ಯವನ್ನು ನೋಡಿದರೆ, ಭಾರತೀಯ ಆದರ್ಶಸತಿಯ ಪತಿಪ್ರೇಮವು ಗೌರವಪೂರ್ಣವೂ ಅಪರಿಮಿತವೂ ಆದರ್ಶವೂ ಆಗಿರುವುದು ವ್ಯಕ್ತವಾಗುತ್ತದೆ. ಎಂತಹ ಭಯಂಕರ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಆಕೆಯ ಪತಿನಿಷ್ಠೆಯು ಅಚಲವಾದುದು. ದಾರುಣ ಅಗ್ನಿಪರೀಕ್ಷೆಯಲ್ಲಿಯೂ ಆಕೆಯ ಪ್ರೇಮವು ನಿಷ್ಕಪಟವೂ ನಿರತಿಶಯವೂ ಆದುದು. ಅತ್ಯಂತ ಕಠಿಣ ಪ್ರಸಂಗದಲ್ಲಿಯೂ ಪತಿಯ ಸಂಬಂಧವಾದ ಆಕೆಯ ಶ್ರದ್ಧಾಭಕ್ತಿವಿಶ್ವಾಸಗಳು ಅಸಾಧಾರಣವೂ ಆಶ್ಚರ್ಯಕರವೂ ಆದುವು. ಹಾಗೆಯೇ ಆದರ್ಶನಾದ ಪತಿಯೂ ತನ್ನ ಪತ್ನಿಯ ವಿಷಯದಲ್ಲಿ ಅತ್ಯಂತ ಕೋಮಲ ಮನಸ್ಸಿನವನೂ ಪ್ರೇಮಳಸ್ವಭಾವದವನೂ ಸಹನಶೀಲನೂ ಕ್ಷಮಾಶಾಲಿಯೂ ಆಗಿದ್ದಾನೆ. ಭೀಕರ ಸಂಕಷ್ಟದಲ್ಲಿಯೂ ಘೋರ ವಿಪತ್ತಿನಲ್ಲಿಯೂ ಬಿಡದೆ, ತನ್ನ ಸರ್ವಸ್ವವನ್ನೂ ಪ್ರಾಣವನ್ನೂ ಬಲಿಗೊಟ್ಟಾದರೂ ಪತಿಯು ಪೌರುಷದಿಂದ ತನ್ನ ಪತ್ನಿಯ ಪ್ರಾಣಮಾನಗಳನ್ನು ಸಂರಕ್ಷಣೆ ಮಾಡುತ್ತಾನೆ. ಬುದ್ಧಿಶಾಲಿಯಾದ ಪತಿಯು ಭಾವ-ಪೂರ್ಣಳಾದ ಪತ್ನಿಯನ್ನು ಎಂದೂ ಕ್ಷೀಣವಾಗದ ಪ್ರೀತಿಯಿಂದ ಸನ್ಮಾರ್ಗದಲ್ಲಿಯೇ ನಯವಾಗಿ ಕೈಹಿಡಿದು ನಡೆಸುತ್ತಾನೆ. ಧರ್ಮಮಾರ್ಗದಲ್ಲಾಗಲೀ ಅರ್ಥಕಾಮಗಳ ಭೋಗದಲ್ಲಾಗಲೀ ಕೊನೆಗೆ ಪರಮಾರ್ಥಸಾಧನೆಯಲ್ಲಾಗಲೀ ಪತ್ನಿಗೆ ಏಕಮಾತ್ರ ಸಹಾಯಕನೂ ಸ್ನೇಹಿತನೂ ನಿರಂತರ ಸಹಜೀವಿಯೂ ಗುರುವೂ ಆಗಿ ಆಕೆಗೆ ಇಹಲೋಕದ ಸುಖವನ್ನೂ ಪರಲೋಕದ ಸುಖವನ್ನೂ ಪಾರಮಾರ್ಥಿಕವಾದ ಅಕ್ಷಯಭೂಮಾ ನಂದವನ್ನೂ ಅನುಗ್ರಹಿಸುವ ದೇವಾಧಿದೇವ-ದೇವತಾಸಾರ್ವಭೌಮನೇ ಪತಿದೇವನು. ಹಾಗೆಯೇ ಉತ್ಕರ್ಷವಾದ ಯೋಗ್ಯತೆಯನ್ನವಲಂಬಿಸಿ ಸತಿಯೂ ತನ್ನ ಪತಿಗೆ ಭೂರಿಯಾದ ಇಹಪರಸುಖಗಳನ್ನೂ ಶಾಶ್ವತವಾದ ಕೈವಲ್ಯಾನಂದವನ್ನೂ ಕರುಣಿಸುವ ರಾಜರಾಜೇಶ್ವರಿಯೂ ಪರಮೇಶ್ವರಿಯೂ ಆಗಬಹುದು.

ಹೀಗೆ ಭಾರತೀಯ ಸ್ತ್ರೀ ಪುರುಷರ ಸಂಯೋಗದ ದಾಂಪತ್ಯ ಜೀವನದಲ್ಲಿ ಮಾನವಬಾಂಧವ್ಯದ ಪರಮೋಚ್ಚ ಭಾವಗಳ ಭವ್ಯವೂ ದಿವ್ಯವೂ ಆದ ಆದರ್ಶವಿದೆ. ಬೇರೆ ದೇಶಗಳಲ್ಲಿರುವಂತೆ ಆದರ್ಶವು ಕೇವಲ ಲೌಕಿಕವಾದರೆ, ಅದು ಎಷ್ಟು ಉಚ್ಚವಾದರೂ ಅಪೂರ್ಣವೇ ಆಗುತ್ತದೆ. ಆದ್ದರಿಂದ ಭಾರತೀಯವಾದ ಯಾವ ಆದರ್ಶಕ್ಕಾದರೂ ಆಧಿಭೌತಿಕವೂ ಆಧಿದೈವಿಕವೂ ಆಧ್ಯಾತ್ಮಿಕವೂ ಆದ ಮೂರು ಮುಖಗಳಿರುವುದರಿಂದ ಅದರ ಸ್ವರೂಪವೂ ಸಾಧನೆಯೂ ಜೀವನವೂ ಸಮಗ್ರವಾದುದೆನಿಸುತ್ತದೆ.

ಆದ್ದರಿಂದಲೇ ಆದರ್ಶ ಹಿಂದೂ ಪತ್ನಿಯೂ ಆದರ್ಶ ಹಿಂದೂ ಪತಿಯೂ ಜಗತ್ತಿನಲ್ಲಿ ಯಾವ ರಾಷ್ಟ್ರಕ್ಕಾದರೂ ಯಾವ ಜನಾಂಗಕ್ಕಾದರೂ ಶ್ರೇಷ್ಠವಾದ ದಾಂಪತ್ಯ ಜೀವನದ ಪರಮಾದರ್ಶದ ಪರಿಪೂರ್ಣ ರೂಪಕಗಳಾಗಿ ಶೋಭಿಸುತ್ತಾರೆ.

ಸ್ತ್ರೀಯು ವಿಶ್ವದಲ್ಲಿ ಶಕ್ತಿಯ ಪ್ರತೀಕಳಾದರೂ ದೇಹದೃಷ್ಟಿಯಿಂದ ಕೋಮಲೆಯೂ ಅಬಲೆಯೂ ಆಗಿದ್ದು, ಪುರುಷನ ಆಶ್ರಯವನ್ನೂ ಪೋಷಣೆಯನ್ನೂ ರಕ್ಷಣೆಯನ್ನೂ ಬಯಸುವುದರಿಂದ ಭಾರತೀಯ ಪ್ರಾಚೀನರು ಹೆಣ್ಣಿಗೇ ಹೆಚ್ಚಿನ ಗೌರವವನ್ನೂ ಪೂಜೆಯನ್ನೂ ಸಲ್ಲಿಸಿದ್ದಾರೆ.

ಮನುಧರ್ಮ ಶಾಸ್ತ್ರದಲ್ಲಿ ಹೇಳಿರುವುದೇನೆಂದರೆ :

> ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।
> ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥
> [3–55]

ಅತಿಶಯವಾದ ಸಂಪತ್ತನ್ನೂ ಸುಖವನ್ನೂ ಅಭ್ಯುದಯವನ್ನೂ ಬಯಸುವದಾದರೆ ತಂದೆಯವರೂ ಸಹೋದರರೂ ಪತಿಗಳೂ ಭಾವಮೈದುನರೂ ಸ್ತ್ರೀಯರನ್ನು ಗೌರವಿಸಬೇಕು ಮತ್ತು ವಸ್ತ್ರಾಭರಣಗಳಿಂದ ಅಲಂಕರಿಸಬೇಕು. ಮತ್ತು,

> ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।
> ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥
> [3–56]

ಯಾವ ಕುಟುಂಬದಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗುತ್ತಾರೆ. ಎಲ್ಲಿ ಇವರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಎಲ್ಲಾ ಸತ್ಕರ್ಮಗಳೂ ನಿಷ್ಫಲವಾಗುತ್ತವೆ.

> ಜಾಮಯೋ ಯಾನಿ ಗೇಹಾನಿ ಶಪನ್ತ್ಯಪ್ರತಿಪೂಜಿತಾಃ ।
> ತಾನಿ ಕೃತ್ಯಾಹತಾನೀವ ವಿನಶ್ಯನ್ತಿ ಸಮನ್ತತಃ ॥ [3–58]

ಗೌರವವನ್ನು ಪಡೆಯದಿರುವ ಕಾರಣ, ಯಾವ ಮನೆಗಳನ್ನು ಮಹಿಳೆಯರು ಶಪಿಸುತ್ತಾರೋ ಅವು ಕೃತ್ರಿಮ ಕ್ರಿಯೆಯಿಂದ ಅಂದರೆ ಮಾಟ ಮಾಡಿದ್ದರಿಂದ ಹೇಗೋ ಹಾಗೆ ಸಂಪೂರ್ಣ ನಾಶಹೊಂದುತ್ತವೆ.

ತಸ್ಮಾದೇತಾಃ ಸದಾ ಪೂಜ್ಯಾ ಭೂಷಣಾಚ್ಛಾದನಾಶನೈಃ ।
ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ ॥

[3-59]

ಆದ್ದರಿಂದ ಸಂಪತ್ತನ್ನೂ ಅಭ್ಯುದಯವನ್ನೂ ಸಿದ್ಧಿಗಳನ್ನೂ ಬಯಸತಕ್ಕವರು ನಿತ್ಯವೂ ಸತ್ಕಾರ್ಯಗಳಲ್ಲಿಯೂ ಉತ್ಸವಗಳಲ್ಲಿಯೂ ನಾರಿಯರನ್ನು ವಸ್ತ್ರಾಭರಣಗಳಿಂದಲೂ ಭೋಜನಾದಿಗಳಿಂದಲೂ ಸರ್ವದಾ ಸತ್ಕರಿಸಬೇಕು.

ಪ್ರಜನಾರ್ಥಂ ಮಹಾಭಾಗಾಃ ಪೂಜಾರ್ಹಾ ಗೃಹದೀಪ್ತಯಃ ।
ಸ್ತ್ರಿಯಃ ಶ್ರಿಯಶ್ಚ ಗೇಹೇಷು ನ ವಿಶೇಷೋಽಸ್ತಿ ಕಶ್ಚನ ॥

[ಮನು. 6-26]

ಮಹಾಭಾಗ್ಯವತಿಯರಾದ ಭಾಮಿನಿಯರು ಸಂತಾನಭರಣ ಮಾಡುವುದರಿಂದ ಕುಲದೀಪಕರೂ ವಂಶೋದ್ಧಾರಕರೂ ಆಗಿದ್ದಾರೆ. ಆದ್ದರಿಂದ ಮನೆಯಲ್ಲಿ ಪತ್ನಿಗೂ ಸಾಕ್ಷಾತ್ ಲಕ್ಷ್ಮೀದೇವಿಗೂ ಯಾವ ಭೇದವನ್ನೂ ಮಾಡಬಾರದು.

ಆದ್ದರಿಂದಲೇ ವಿವಾಹದಲ್ಲಿ ಪತಿಯು ತನ್ನ ಪತ್ನಿಗೆ,

"ಸಖಾ ಸಪ್ತಪದಾ ಭವ"

"ಎಲೌ ಸಖಿಯೆ! ಸ್ನೇಹಿತಳೇ! ನನ್ನೊಡನೆ ಏಳು ಹೆಜ್ಜೆಯನ್ನು ನಡಿ; ಅದರಿಂದ ನಮ್ಮ ಮೈತ್ರಿಯು ಎಂದೆಂದೂ ಭದ್ರವಾಗಿರಲಿ! ಏಳು ಲೋಕಗಳಲ್ಲಿಯೂ ನಮ್ಮ ಸ್ನೇಹವು ವ್ಯಾಪಿಸಿ ಏಳು ಲೋಕಗಳನ್ನೂ ನಾವು ಜಯಿಸೋಣ" ಎನ್ನುತ್ತಾನೆ. ಈ ಪ್ರತಿಜ್ಞೆಯಿಂದಲೇ ವಿವಾಹವು ಪೂರ್ಣಗೊಂಡು ದಾಂಪತ್ಯವು ಭದ್ರವಾಗುವದು.

ಮದುವೆಯಲ್ಲಿ ಹೇಳುವ ಇನ್ನೊಂದು ಋಗ್ವೇದ ಮಂತ್ರವು ಕುಟುಂಬದಲ್ಲಿ ಪತ್ನಿಗೆ ಕೊಡುವ ಪರಮೋಚ್ಚವಾದ ಸಾರ್ವಭೌಮ ಗೌರವವನ್ನು ವ್ಯಕ್ತಮಾಡುತ್ತದೆ.

ಸಂರಾಜ್ಞೀ ಶ್ವಶುರೇ ಭವ ಸಂರಾಜ್ಞೀ ಶ್ವಶ್ರ್ವಾಂ ಭವ ।
ನನಾಂದರಿ ಸಂರಾಜ್ಞೀ ಭವ ಸಂರಾಜ್ಞೀ ಅಧಿದೇವೃಷು ॥

ನೀನು ಕುಟುಂಬದಲ್ಲಿ ನಿನ್ನ ಮಾವನಿಗೂ ಅತ್ತೆಗೂ ನಿನ್ನ ನಾದಿನಿಯರಿಗೂ ಮೈದುನರಿಗೂ ಸರ್ವರಿಗೂ ಸಂರಾಜ್ಞಿಯಂತೆ ಗೌರವದಿಂದ ಬಾಳು.

ಹೀಗೆ ಪುರುಷನಿಂದ ಎಲ್ಲಾ ಬಗೆಯ ಗೌರವವನ್ನು ಪಡೆದ ಸ್ತ್ರೀಯು ತನ್ನ ಪತಿಯ ವಿಷಯದಲ್ಲಿಯೂ ಹಾಗೆಯೇ ಅತ್ಯಂತ ಗೌರವದಿಂದ ನಡೆದುಕೊಳ್ಳಬೇಕೆಂದು ಶಾಸ್ತ್ರದಲ್ಲಿಯೇ ಹೇಳಿದೆ.

ಪತಿರೇವ ಗತಿಸ್ಸ್ತ್ರೀಣಾಂ ಪತಿಃ ಪ್ರಾಣಾಶ್ಚ ಸಂಪದಃ ।
ಧರ್ಮಾರ್ಥಕಾಮಮೋಕ್ಷಾಣಾಂ ಹೇತುಃ ಸೇತುರ್ಭವಾರ್ಣವೇ ॥

ಸ್ತ್ರೀಯರಿಗೆ ಪತಿಯೇ ಸರ್ವಗತಿಯು. ತನ್ನ ಪ್ರಾಣಗಳೂ ಸುಖಸಂಪತ್ತುಗಳೂ ಪತಿಯೇ. ಧರ್ಮಾರ್ಥಕಾಮ ಮೋಕ್ಷಗಳಿಗೂ ಕಾರಣನಾದವನೂ ಸಂಸಾರ ಸಾಗರಕ್ಕೆ ಸೇತುಬಂಧನವೂ ಪತಿಯೇ ಆಗಿದ್ದಾನೆ.

ಪತಿರೇವ ಹಿ ನಾರೀಣಾಂ ದೈವತಂ ಪರಮಂ ಮಹತ್ ।
ಪ್ರಕಾಮಂ ಭರ್ತರಿ ಪ್ರೀತೇ ಕಃ ಕಾಮೋ ಹಿ ದುರಾಗಮಃ ॥

ಸ್ತ್ರೀಯರಿಗೆ ಪತಿಯೇ ಮಹತ್ತಾದ ಪರದೇವತೆಯು. ಗಂಡನು ಸಂಪೂರ್ಣ ಸಂಪ್ರೀತನಾದದ್ದೇ ಆದರೆ, ಪತ್ನಿಗೆ ಯಾವ ಇಚ್ಛೆಯು ತಾನೇ ದುರ್ಲಭವಾದೀತು?

ಸ್ಕಂದಪುರಾಣದ ಕಾಶೀ ಖಂಡದಲ್ಲಿ ಹೇಳಿರುವುದೇನೆಂದರೆ,

ಇದಮೇವ ವ್ರತಂ ಸ್ತ್ರೀಣಾಮಯಮೇವ ಪರೋ ವ್ರತಃ ।
ಇಯಮೇಕಾ ದೇವಪೂಜಾ ಭರ್ತೃವಾಕ್ಯಂ ನ ಲಂಘಯೇತ್ ॥

ಹೆಂಡತಿಯು ಗಂಡನ ಮಾತನ್ನು ಮೀರದಿರುವುದೇ ವ್ರತವು; ಇದೇ ಆಕೆಗೆ ಪರಮ ಶ್ರೇಷ್ಠವಾದ ವ್ರತವು, ಧರ್ಮವು. ಪತಿಗೆ ಯಾವಾಗಲೂ ವಿಧೇಯಳಾಗಿರುವುದೊಂದೇ ನಿಜವಾದ ದೇವಪೂಜೆಯು.

ಹೃಷ್ಟಾ ಹೃಷ್ಟೇ ವಿಷಣ್ಣಾಸ್ಯಾ ವಿಷಣ್ಣಾಸ್ಯೇ ಪ್ರಿಯೇ ಸದಾ ।
ಏಕರೂಪಾ ಭವೇತ್ ಪುಣ್ಯಾ ಸಂಪತ್ಸು ಚ ವಿಪತ್ಸು ಚ ॥

ಪತಿಯು ಹರ್ಷವುಳ್ಳವನಾದರೆ ತಾನೂ ಹರ್ಷಚಿತ್ತಳಾಗಿಯೂ ಅವನು ದುಃಖಿತನಾದರೆ ತಾನೂ ದುಃಖಿತ ಮುಖವುಳ್ಳವಳಾಗಿಯೂ ಸಂಪತ್ತಿನಲ್ಲಿಯಾಗಲೀ ವಿಪತ್ತಿನಲ್ಲಿಯಾಗಲೀ ಪುಣ್ಯವತಿಯಾದ ಸತಿಯು ಪತಿಯೊಡನೆ ಏಕರೂಪದಿಂದಿರುತ್ತಾಳೆ.

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ
ತಥೈವ ಚ ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥
[ಮನು. 3-60]

ಯಾವ ಕುಟುಂಬದಲ್ಲಿ ಪತಿಯು ಪತ್ನಿಯಿಂದಲೂ ಪತ್ನಿಯು ಪತಿಯಿಂದಲೂ ಸಂತುಷ್ಟರಾಗಿದ್ದಾರೋ ಅಲ್ಲಿ ಶುಭವೂ ಸುಖವೂ ಶ್ರೇಯಸ್ಸೂ ಶಾಶ್ವತವಾಗಿ ನೆಲೆ ಸಿರುತ್ತವೆ ಎಂದು ಮನುವು ಹೇಳಿರುತ್ತಾನೆ.

ಈ ಶಾಸ್ತ್ರೋಕ್ತ ವಿಧಿವಾಕ್ಯಗಳಿಂದ ವಾಸ್ತವ ಜೀವನಕ್ಕೆ ಬಂದರೆ, ಪ್ರಾಚೀನ ಭಾರತದಲ್ಲಿ ಜೀವಮಾನವೆಲ್ಲಾ ವಿವಾಹವನ್ನು ಮಾಡಿಕೊಳ್ಳದೇ ಇದ್ದ ಒಂದು ವರ್ಗದ ಸ್ತ್ರೀಯರಿದ್ದರು. ಅವರು ಆಜನ್ಮ ಬ್ರಹ್ಮಚಾರಿಣಿಯರಾಗಿದ್ದರು. ಅವರಿಗೆ ಬ್ರಹ್ಮವಾದಿನಿಯರೆಂದು ಹೆಸರಿತ್ತು. ಅವರು ವೇದವನ್ನು ಕಲಿಸುತ್ತಿದ್ದರು. ಅವರಿಗೆ ಸಮಾಜದಲ್ಲಿಯೂ ಶಾಸ್ತ್ರದಲ್ಲಿಯೂ ವಿಶೇಷ ಗೌರವದ ಸ್ಥಾನಮಾನ ಗಳಿದ್ದವು. ಆ ಬಗೆಯ ಬ್ರಹ್ಮವಾದಿನಿಯರು ಈಗ ಕಂಡುಬರುವುದಿಲ್ಲ. ಆಗ ಬ್ರಹ್ಮವಾದಿನಿಯರೆಂದೂ ಸದ್ಯೋವಧುಗಳೆಂದೂ ಅಥವಾ ವಿವಾಹಿತರೆಂದೂ ಸ್ತ್ರೀಯರಲ್ಲಿ ಎರಡು ವರ್ಗಗಳಿದ್ದವು ಬ್ರಹ್ಮವಾದಿನಿಯರಿಗೆ ಉಪನಯನವಾಗಿ ಯಜ್ಞೋಪವೀತವನ್ನು ಧರಿಸುತ್ತಿದ್ದರು. ಅವರು ಅಗ್ನಿಯನ್ನು ಉಪಾಸಿಸುತ್ತಿದ್ದರು. ವೇದಾಧ್ಯಯನ ಮತ್ತು ಅಧ್ಯಾಪನ ಅಂದರೆ ವೇದವನ್ನು ಕಲಿಯುವುದು ಮತ್ತು ಕಲಿಸುವುದು ಈ ಎರಡೂ ಅವರಿಗಿತ್ತು. ತಮ್ಮ ಮನೆಯಲ್ಲಿ ತಾವು ಮದುವೆಯಿಲ್ಲದೆ ಇರುತ್ತಿದ್ದರು. ಹಾರೀತ ಋಷಿಗಳೂ ಇತರರೂ ಹೀಗೆ ಹೇಳಿದ್ದಾರೆ.

ಪುರುಷರಲ್ಲಿ ಹೇಗೋ ಹಾಗೆ ಸ್ತ್ರೀಯರಲ್ಲಿಯೂ ಸಂನ್ಯಾಸಿನಿಯರಿದ್ದರು. ಸ್ತ್ರೀಯರಿಗೆ ಕೂಡ ಸಂನ್ಯಾಸವುಂಟೆಂದು ವಿದ್ಯಾರಣ್ಯರು ಜೀವನ್ಮುಕ್ತಿ ವಿವೇಕದಲ್ಲಿ ಹೇಳಿದ್ದಾರೆ. ಮದುವೆ ಆಗುವುದಕ್ಕೆ ಮುಂಚಾಗಿ ಆಗಲಿ ಅಥವಾ ವೈಧವ್ಯ ಬಂದ ಮೇಲೆ ಆಗಲೀ ಸ್ತ್ರೀಯರೂ ಸಂನ್ಯಾಸಿಗಳಾಗಿ ಭಿಕ್ಷುಕಿಯರೆನ್ನಿಸಿಕೊಂಡು ಭಿಕ್ಷಾ ಚರ್ಯವನ್ನೂ ಮಾಡಿ ಮೋಕ್ಷ ಶಾಸ್ತ್ರವನ್ನು ಶ್ರವಣಮಾಡುತ್ತಾ ತ್ರಿದಂಡಧಾರಿ ಗಳಾಗಿ ಏಕಾಂತದಲ್ಲಿ ಆತ್ಮಧ್ಯಾನವನ್ನು ಮಾಡಿಕೊಂಡಿರಬಹುದು. ಹೀಗೆ ಸ್ತ್ರೀಯರೂ ಇರಬಹುದೆಂಬ ವಿಷಯವು ಮೋಕ್ಷಧರ್ಮ ವಿಚಾರವಾದ ಸುಲಭಾ ಜನಕ ಸಂವಾದದಲ್ಲಿಯೂ ಶ್ರೀಮಚ್ಛಂಕರಾಚಾರ್ಯರ ಶಾರೀರಕ (ಬ್ರಹ್ಮಸೂತ್ರ) ಭಾಷ್ಯದ ಮೂರನೇ ಅಧ್ಯಾಯದ ನಾಲ್ಕನೇ ಪಾದದಲ್ಲಿರುವ ವಿಧುರರ ಅಂದರೆ ಪತ್ನಿಯನ್ನು ಕಳೆದುಕೊಂಡಿರುವವರ ಅಧಿಕಾರ ವಿವೇಚನಾ ಪ್ರಸಂಗದಲ್ಲಿಯೂ ಬಂದಿದೆ.

ಜನಕ ಮಹಾರಾಜನ ವಿದ್ವತ್ ಸಭೆಯಲ್ಲಿ ಬ್ರಹ್ಮವೇತ್ತರಾದ ಯಾಜ್ಞವಲ್ಕ್ಯ ಮಹರ್ಷಿಗಳೊಡನೆ ಬ್ರಹ್ಮವಿಚಾರದಲ್ಲಿ ವಾದಮಾಡುವುದಕ್ಕಾಗಿ ಅನೇಕ ವಿದ್ವಾಂಸರೂ ಯೋಗಿಗಳೂ ಸೇರಿದಾಗ ಬಾಲಬ್ರಹ್ಮಚಾರಿಣಿಯೂ ಸಂನ್ಯಾಸಿನಿಯೂ ಆದ ಗಾರ್ಗಿಯೂ ಆ ಮಹಾಸಭೆಯಲ್ಲಿ ಯಾಜ್ಞವಲ್ಕ್ಯರೊಡನೆ ವಾದ ಮಾಡಿದ್ದು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿದೆ. ಇದರಿಂದ ಪೂರ್ವಕಾಲದಲ್ಲಿ ಸ್ತ್ರೀಯರಿಗೆ ಧರ್ಮವಿಚಾರದಲ್ಲಿಯೂ ಜ್ಞಾನವಿಚಾರದಲ್ಲಿಯೂ ಮತ್ತು ಮಹಾರಾಜರ ವಿದ್ವತ್ ಸಭೆಗಳ ಶಾಸ್ತ್ರವಿಚಾರಗಳಲ್ಲಿ ಭಾಗವಹಿಸುವುದಕ್ಕೂ ಪೂರ್ಣ ಅಧಿಕಾರವೂ ಅವಕಾಶವೂ ಗೌರವವೂ ಇದ್ದುದು ಸ್ಪಷ್ಟವಾಗುತ್ತದೆ. ಇದರಿಂದ ಸ್ತ್ರೀಯರಿಗೆ ವೇದಾಧ್ಯಯನಕ್ಕೆ ಅಧಿಕಾರವಿಲ್ಲವೆನ್ನುವುದು ಇತ್ತೀಚಿನ ಕಲ್ಪನೆಯೆಂದು ತೋರುತ್ತದೆ.

ಉಪನಯನಪೂರ್ವಕ ವೇದಾಧ್ಯಯನ ವಿಷಯದಲ್ಲಿ ಸ್ತ್ರೀಶೂದ್ರರಿಗೆ ಉಪನಯನವೂ ವೇದಾಧ್ಯಯನವೂ ಕೂಡದೆಂದು ಸಾಮಾನ್ಯವಾಗಿ ಅಭಿಪ್ರಾಯವೂ ಅನುಷ್ಠಾನವೂ ಈಗಿರುತ್ತದೆ. ಆದರೆ, ಆರ್ಯಸ್ತ್ರೀಯರು ಶೂದ್ರಸಮರಲ್ಲ. ಅವರಿಗೆ ವಿವಾಹಾದಿ ಸಕಲ ಸಂಸ್ಕಾರಗಳೂ ಪುರುಷರಂತೆ ವೇದೋಕ್ತವಾಗಿ ನಡೆಯುತ್ತದೆ. ಅವರು ವೇದ ಮಂತ್ರ ಶ್ರವಣವನ್ನು ಮಾಡುತ್ತಿದ್ದಾರೆ. ಅಗ್ನ್ಯಾಧಾನಾದಿ ಕಾಲದಲ್ಲಿ ಅವಶ್ಯವಾದ ಮಂತ್ರಗಳನ್ನು ಕಲಿಸಬೇಕೆಂದು ವಿಧಿಯಿರುವುದು. ಜೈಮಿನಿ ಮಹರ್ಷಿಗಳು ಸ್ತ್ರೀಯರಿಗೆ ಯಾಗದಲ್ಲಿ ಪುರುಷರಂತೆ ಸಮಾನಾಧಿಕಾರವನ್ನು ನಿರ್ಣಯಿಸಿರುತ್ತಾರೆ. ಬಾದರಾಯಣಾಚಾರ್ಯರು ಬ್ರಹ್ಮಸೂತ್ರಗಳಲ್ಲಿ ಸ್ತ್ರೀಯರಿಗೆ ಬ್ರಹ್ಮವಿದ್ಯಾಧಿಕಾರವಿದೆಯೆಂದು ನಿರ್ಣಯಿಸಿರುತ್ತಾರೆ. ಪೂರ್ವಕಾಲದಲ್ಲಿ ಅವರಿಗೆ ಉಪನಯನವೂ ವೇದಾಧ್ಯಯನವೂ ಇದ್ದವೆಂದು ಸಕಲ ಧರ್ಮಶಾಸ್ತ್ರಕಾರರೂ ಬರೆದಿದ್ದಾರೆ. ಪಾಣಿನೀ ಮೊದಲಾದವರು "ಉಪಾಧ್ಯಾಯಾ ಉಪಾಧ್ಯಾಯೀ ಆಚಾರ್ಯಾ" ಮೊದಲಾದ ಶಬ್ದಗಳನ್ನು ಉಪಾಧ್ಯಾಯ ವೃತ್ತಿಯನ್ನೂ ಆಚಾರ್ಯ ವೃತ್ತಿಯನ್ನೂ ವಹಿಸಿದವಳೆಂಬ ಅರ್ಥದಲ್ಲಿಯೇ ಉಪಯೋಗಿಸಿದ್ದಾರೆ. ಉಪಾಧ್ಯಾಯನ ಪತ್ನಿ ಎಂಬ ಅರ್ಥದಲ್ಲಿ ಉಪಾಧ್ಯಾಯಾನೀ, ಆಚಾರ್ಯಾಣೀ ಎಂಬ ಶಬ್ದಗಳ ರೂಢಿಯಿದೆ. ಪುರುಷರಿಗೆ ಸಮವಾಗಿ ಸ್ತ್ರೀಯರಿಗೂ ಪಿತ್ರಾರ್ಜಿತ ದಾಯಾಧಿಕಾರವನ್ನು ಯಾಸ್ಕರು ವೇದವ್ಯಾಖ್ಯಾನದಲ್ಲಿ ಬರೆದಿದ್ದಾರೆ. ಹೀಗೆ ವೈದಿಕ ಲೌಕಿಕವಾದ ಸರ್ವಾಧಿಕಾರವಿರುವುದರಿಂದಲೇ ಹಾರೀತ ಮೊದಲಾದ ಸ್ಮೃತಿಕಾರರು "ನ ಶೂದ್ರ ಸಮಾಃ ಸ್ತ್ರಿಯಃ" ಸ್ತ್ರೀಯರು ಎಂದೂ ಶೂದ್ರಸಮರಲ್ಲ—ಎಂದು ಹೇಳಿದ್ದಾರೆ. ಬ್ರಾಹ್ಮಣ ಸ್ತ್ರೀಯರು ಶೂದ್ರಸಮರಾಗಿದ್ದರೆ ಅವರ ಗರ್ಭದಲ್ಲಿ ಜನಿಸುವವರು ಬ್ರಾಹ್ಮಣರು ಹೇಗಾದಾರು ? ಎಂದು ಕೇಳಿದ್ದಾರೆ. ಸ್ತ್ರೀಯರಿಗೆ ಸಂನ್ಯಾಸಾಶ್ರಮ ಸ್ವೀಕಾರ ಉಂಟೆಂದು ಬೋಧಾಯನ ಧರ್ಮಸೂತ್ರಕಾರರು (ಮಸ್ಕರಿ ಭಾಷ್ಯದಲ್ಲಿ) ಹೇಳಿರುತ್ತಾರೆ. ಬ್ರಾಹ್ಮಣಕುಲದ ಅನೇಕ ಸಹಸ್ರ ಸ್ತ್ರೀಯರು ಕೌಮಾರ

ಬ್ರಹ್ಮಚಾರಿಣಿಯರಾಗಿದ್ದು ಸಂತತಿಯನ್ನು ಪಡೆಯದೆ ಸ್ವರ್ಗಕ್ಕೆ ಹೋಗಿದ್ದಾರೆಂದು ಮನುಸ್ಮೃತಿಯಲ್ಲಿದೆ.

ಅನೇಕಾನಿ ಸಹಸ್ರಾಣಿ ಕೌಮಾರ ಬ್ರಹ್ಮಚಾರಿಣಾಮ್ ।
ದಿವಂ ಗತಾನಿ ವಿಪ್ರಾಣಾಮಕೃತ್ವಾ ಕುಲಸಂತತಿಮ್ ॥

ಮತ್ತು ಧರ್ಮಶಾಸ್ತ್ರಪ್ರಕಾರ ವರ್ಣವಿಭಾಗ ಸ್ತ್ರೀಮೂಲಕವಾಗಿರುತ್ತದೆ, ಅಂದರೆ ಕ್ಷೇತ್ರಪ್ರಧಾನವಾಗಿರುತ್ತದೆ. ಪೂರ್ವದಲ್ಲಿ ಬೀಜ ಪ್ರಧಾನವಾಗಿತ್ತು. ಈಗ "ಮಾತೃತೋ ಜಾತಿವ್ಯವಸ್ಥಾ"

ಆದುದರಿಂದ ಸ್ತ್ರೀಯರಿಗೆ ಧರ್ಮದ ವಿಷಯದಲ್ಲಿ ಸರ್ವಾಧಿಕಾರವುಂಟು. ಉಪನಯನದ ಸ್ಥಾನದಲ್ಲಿ ಈಗ ವಿವಾಹವು ನಿಂತಿದೆ. ಕೇರಳ ಮೊದಲಾದ ದೇಶಗಳಲ್ಲಿ ಸ್ತ್ರೀಯರಿಗೂ ವಿವಾಹಕ್ಕೆ ಮೊದಲು ಯಥೋಚಿತವಾಗಿ ಉಪನಯನ ಸಂಸ್ಕಾರವು ನಡೆಯುತ್ತಿದೆಯೆಂದು ಕೇಳಿದ್ದೇವೆ.

ಹಾರೀತ ಸ್ಮೃತಿಯಲ್ಲಿ (ಕಲ್ಪಾಂತರ ವಿಚಾರವೇನೂ ಇಲ್ಲದೆ) ಹೀಗೆ ಹೇಳಿದೆ. ಸ್ತ್ರೀಯರು ಬ್ರಹ್ಮವಾದಿನಿಗಳೆಂದೂ ಸದ್ಯೋವಧುಗಳೆಂದೂ ಎರಡು ಬಗೆ. ಬ್ರಹ್ಮವಾದಿನಿಗಳಿಗೆ ಉಪನಯನ, ವೇದಾಧ್ಯಯನ, ಮೊದಲಾದ ನಿಯಮಗಳಿವೆ. ಸದ್ಯೋವಧುಗಳಿಗೆ ವಿವಾಹ ಸಮಯ ಪ್ರಾಪ್ತವಾದರೆ ಯಥೋಚಿತವಾದ ಉಪನಯನವನ್ನು ಮಾತ್ರ ಮಾಡಬೇಕೆಂದು ವಿಧಿಸಿರುವರು. ವೇದಾಧ್ಯಯನದಲ್ಲಿ ತಂದೆ, ಅಣ್ಣ, ಅಥವಾ ತಂದೆಯ ಅಣ್ಣತಮ್ಮಂದಿರು—ಇವರುಗಳೇ ಉಪಾಧ್ಯಾಯರಾಗಿರಬೇಕು. ತಮ್ಮ ಮನೆಯಲ್ಲಿಯೇ ಭಿಕ್ಷಾಚರಣೆ ನಡಿಯಬೇಕು. ಕೃಷ್ಣಾಜಿನ, ಜಟಾಧಾರಣ ಮೊದಲಾದ ವೇಷಗಳು ಮಾತ್ರ ಕೂಡದು ಎಂದು (ಯಮಧರ್ಮಶಾಸ್ತ್ರದಲ್ಲಿ) ಹೇಳಿದೆ.

ಇದರಿಂದ ಒಟ್ಟನಲ್ಲಿ ನಿಶ್ಚಿತವಾಗಿಯೂ ಸ್ಪಷ್ಟವಾಗಿಯೂ ತಿಳಿಯುವುದೇನೆಂದರೆ, ಪೂರ್ವಕಾಲದಲ್ಲಿ ಸ್ತ್ರೀಯರಿಗೆ ಪುರುಷರಂತೆ ಉಪನಯನ, ವೇದಾಧ್ಯಯನ ಮೊದಲಾದವು ಇದ್ದವು. ಅನಂತರ ಕಾಲದಲ್ಲಿ ಉಪನಯನವನ್ನು ಮಾತ್ರ ಮಾಡಿ ವೇದಾಧ್ಯಯನವಿಲ್ಲದೇ ವಿವಾಹವನ್ನು ಮಾಡುತ್ತಿದ್ದರು. ಈಗ ಉಪನಯನ ಸಂಸ್ಕಾರವಿಲ್ಲದೇ ವಿವಾಹವು ನಡೆಯುತ್ತಿದೆ. ಆ ವಿವಾಹವೂ ಉಪನಯನ ಕಾಲವನ್ನು ಮೀರಿ 20-25-30 ವರ್ಷ ವಯಸ್ಸಾದ ಮೇಲೆ ನಡೆಯುತ್ತಿದೆ. ಇನ್ನೆಷ್ಟೋ ಬಾಲಕಿಯರಿಗೆ ಉಪನಯನವೂ ಇಲ್ಲದೆ ವಿವಾಹವೂ ಇಲ್ಲದೆ ವೃದ್ಧೆಯರಾಗುತ್ತಿದ್ದಾರೆ. ಹೀಗೆ ನಮ್ಮ ಬಾಲಕಿಯರು ಸಂಸ್ಕಾರ ಹೀನರಾಗಿ ಅಸಂಸ್ಕೃತರೂ ಅಪರಿಶುದ್ಧರೂ ಆಗುತ್ತಿರುವುದರಿಂದ ಆರ್ಯಕುಲದವರಾದ ನಾವು ಅನಾರ್ಯರಾಗುತ್ತಿದ್ದೇವೆ. ಇದು ಜನಾಂಗಕ್ಕೂ ದೇಶಕ್ಕೂ ಶ್ರೇಯಸ್ಕರವಲ್ಲ.

ಈ ಶೋಚನೀಯ ಪರಿಸ್ಥಿತಿಗೆ ನಮ್ಮ ಕೈ ಮೀರಿದ ಅನೇಕ ಕಾರಣಗಳಿರಬಹುದು. ಆದರೆ, ಪಾಶ್ಚಾತ್ತ್ಯ ನಾಗರಿಕತೆಗೆ ಮುಗ್ಧರಾದ ನಾವು ಆ ಜನಜೀವನವನ್ನು ಕುರುಡರಂತೆ ಅನುಕರಣ ಮಾಡುತ್ತಿರುವುದೇ ಒಂದು ಮುಖ್ಯ ಕಾರಣವೆಂಬುದಂತೂ ನಿರ್ವಿವಾದವಾದುದು. ಮೊದಲು ಮೊದಲು ಪಾಶ್ಚಾತ್ತ್ಯ ವಿದ್ಯಾ ಪ್ರಭಾವಕ್ಕೊಳಗಾದ ಪುರುಷರ ದೆಸೆಯಿಂದಲೂ ಪುರುಷರಿಗಾಗಿಯೂ ಆ ಮುಖದಲ್ಲಿ ಸ್ತ್ರೀಯರ ಪರಿವರ್ತನೆಯೂ ಅನಿವಾರ್ಯವಾಯಿತು. ಮುಂದೆ ಮುಂದೆ ಸ್ತ್ರೀ ಪುರುಷರು ಸಮಸಮವಾಗಿಯೇ ಪರಸ್ಪರ ಸ್ಪರ್ಧಿಸುತ್ತಾ ವೇಗದಿಂದ ಸಾಗಿ, ಆ ಪ್ರಭಾವವನ್ನು ಬೆಳೆಸಿಕೊಳ್ಳುವುದರಲ್ಲಿ ಹೆಮ್ಮೆಪಟ್ಟುಕೊಂಡರು. ಇದರಿಂದಾಗಿರುವ ಫಲಿತಾಂಶವು ಸ್ಪಷ್ಟವಾದರೂ ಸಮಸ್ಯಾತ್ಮಕವಾಗಿದೆ. ಸ್ವತಂತ್ರ ಭಾರತಿಯು ಇಪ್ಪತ್ತೈದು ವರ್ಷಗಳು ತುಂಬಿ ಬೆಳೆದ ಪ್ರೌಢೆಯಾದರೂ ಧರ್ಮಾತ್ಮಳಾದ ಆಕೆಗೆ ಮುಖ್ಯ ಪ್ರಾಣವಾದ ನೀತಿ, ಧರ್ಮ, ಅಧ್ಯಾತ್ಮಗಳ ಜೀವಕಳೆಯೇ ತನಗೆ ಕೊಡುವ ಶಿಕ್ಷಣದಲ್ಲಿ ಬೆಳಗಿ ಬರಲಿಲ್ಲವೆಂದು ಕೊರಗುತ್ತಿದ್ದಾಳೆ.

ಸ್ವಾಮಿ ವಿವೇಕಾನಂದರು ಹೇಳಿರುವದೇನೆಂದರೆ,

"We must have life building, man making, character making assimilation of ideas."

"ನಾವು ಅರಗಿಸಿಕೊಳ್ಳುವ ಭಾವನೆಗಳೂ ವಿಚಾರಗಳೂ ನಮ್ಮ ಜೀವನವನ್ನು ರೂಢಿಸಬೇಕು; ನಮ್ಮನ್ನು ಮನುಷ್ಯರನ್ನಾಗಿ ಮಾಡಬೇಕು; ನಮ್ಮ ಗುಣಶೀಲಗಳನ್ನು ರೂಪಿಸಬೇಕು."

ಗುರುದೇವ ಟ್ಯಾಗೂರರು ಹೇಳಿರುವದೇನೆಂದರೆ,

"Unfortunately the education given in our Government Schools and Colleges has very little that is Indian and mostly consists of alms begged from the West."

"ದುರ್ದೈವದಿಂದ ನಮ್ಮ ಗೌರ್ನಮೆಂಟ್ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಕೊಡಲ್ಪಡುತ್ತಿರುವ ಶಿಕ್ಷಣದಲ್ಲಿ ಭಾರತೀಯವಾದುದು ಬಹಳ ಅಲ್ಪವಾಗಿದೆ; ಅದರಲ್ಲಿ ಪಶ್ಚಿಮದಿಂದ ಬೇಡಿ ತಂದ ಭಿಕ್ಷೆಯನ್ನವೇ ಬಹಳವಾಗಿದೆ."

"ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।

"That should be the motto of our Indian educational Institutions."

"ಸಕಲ ಪ್ರಾಣಿಗಳಲ್ಲಿಯೂ ತನ್ನನ್ನೂ, ತನ್ನಲ್ಲಿ ಸಕಲ ಪ್ರಾಣಿಗಳನ್ನೂ ಕಾಣಬೇಕು."

ಈ ಬಗೆಯ ಅಧ್ಯಾತ್ಮ ತತ್ತ್ವದರ್ಶನವೇ ನಮ್ಮ ಭಾರತೀಯ ವಿದ್ಯಾ ಸಂಸ್ಥೆಗಳ ಆದರ್ಶ ಭಾವವಾಗಿರಬೇಕು.

ಯೋಗಿ ಅರವಿಂದರು ಶಿಕ್ಷಣದ ವಿಷಯದಲ್ಲಿ ಹೇಳಿರುವುದೇನೆಂದರೆ :

"To neglect moral and religious education altogether is to corrupt the race."

"ನೈತಿಕ–ಧಾರ್ಮಿಕ ಶಿಕ್ಷಣವನ್ನು ಶುದ್ಧಾಂಗವಾಗಿ ಉಪೇಕ್ಷೆ ಮಾಡುವುದು ಜನಾಂಗವನ್ನೇ ಕುಲಗೆಡಿಸಿದಂತೆ ಅಥವಾ ಭ್ರಷ್ಟಮಾಡಿದಂತೆ ಆಗುತ್ತದೆ."

ಕ್ರಿ.ಶ. 1900 ರಷ್ಟು ಹಿಂದೆಯೇ ಡಾಕ್ಟರ್ ಆನಿಬೆಸೆಂಟರು ಸ್ತ್ರೀಯರ ವಿದ್ಯಾಭ್ಯಾಸವನ್ನೇ ಕುರಿತು ಹೇಳಿರುವುದೇನೆಂದರೆ :

"With regard to that modern education, permit me to say that you will be most unwise, if you adopt for the education of your women, a mere copy of the education given to western women. It would not build up women of the ancient Aryan type. The object of the western education is that, the women, educated on the same lines as men, may be able to compete with them in the various walks of life and earn their own livelihood as men earn theirs. Owing to the social conditions there, a very large number of women remain unmarried, who practically have no supporters. They are left to support themselves and to gain their own livelihood.

"I presume that no Hindu, unless he has lost the Hindu heart, desires to bring about that economic condition of things here. I presume that he does not desire to educate his daughters and then to send them out into the world to struggle with men for gaining a livelihood, to compete with men in the various learned professions, in the various commercial undertakings. Truly, no Hindu can desire to bring about such a

regrettable stage of social evolution. But, if not, why adopt a type of education designed for such a stage?"

"ಪಾಶ್ಚಾತ್ತ್ಯ ಸ್ತ್ರೀಯರಿಗೆ ಕೊಡುತ್ತಿರುವ ಶಿಕ್ಷಣದ ಒಂದು ಪ್ರತಿರೂಪವನ್ನು ಮಾತ್ರ ನಿಮ್ಮ ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ಸ್ವೀಕರಿಸಿದರೆ ನೀವು ಅತ್ಯಂತ ದಡ್ಡರಾಗುವಿರೆಂದು, ಆಧುನಿಕ ವಿದ್ಯಾಭ್ಯಾಸದ ವಿಷಯದಲ್ಲಿ ನಾನು ಹೇಳುವುದಕ್ಕೆ ಅನುಮತಿ ಕೊಡಿ. ನಿಮಗೆ ಬೇಕಾಗಿರುವುದು ಆ ಬಗೆಯ ವಿದ್ಯಾಭ್ಯಾಸವಲ್ಲ. ಪ್ರಾಚೀನ ಆರ್ಯ ಜಾತಿಯ ಮಾದರಿಯ ಸ್ತ್ರೀಯನ್ನು ಅದು ನಿರ್ಮಿಸಲಾರದು. ಪುರುಷರ ವಿದ್ಯಾಭ್ಯಾಸದ ರೀತಿಯಲ್ಲಿಯೇ ಶಿಕ್ಷಣ ಪಡೆದ ಸ್ತ್ರೀಯು, ಜೀವನದ ವಿವಿಧ ಮಾರ್ಗಗಳಲ್ಲಿ ಅವರೊಡನೆ ಸ್ಪರ್ಧಿಸುವುದಕ್ಕೆ ಶಕ್ತಳಾಗಿ, ಪುರುಷರು ತಮ್ಮ ಜೀವಿಕೆಯನ್ನು ಸಂಪಾದಿಸುವಂತೆಯೇ ಅವರೂ ತಮ್ಮ ಸ್ವಂತ ಜೀವನವನ್ನು ಸಂಪಾದಿಸಬೇಕೆಂಬುದೇ ಪಾಶ್ಚಾತ್ತ್ಯ ವಿದ್ಯಾಭ್ಯಾಸದ ಉದ್ದೇಶವಾಗಿದೆ. (ಪ್ರೌಢ ವಿದ್ಯಾಭ್ಯಾಸದ ಬೇಡಿಕೆಗೆ ಆಧಾರವಾಗಿರುವ ಕಾರಣವೇ ಅದು.) ಅಲ್ಲಿರುವ ಸಾಮಾಜಿಕ ಸ್ಥಿತಿಗಳಿಂದಾಗಿ ಅತಿ ದೊಡ್ಡ ಸಂಖ್ಯೆಯ ಸ್ತ್ರೀಯರು ಅವಿವಾಹಿತರಾಗಿಯೇ ಉಳಿದಿದ್ದಾರೆ; ಅವರಿಗೆ ವಾಸ್ತವವಾಗಿಯೂ ರಕ್ಷಕರಿಲ್ಲ. ಅವರು ತಮ್ಮ ಜೀವನವನ್ನು ತಾವೇ ಸಂಪಾದಿಸಿಕೊಂಡು ತಮ್ಮನ್ನು ತಾವೇ ರಕ್ಷಣೆ ಮಾಡಿಕೊಳ್ಳುವದಕ್ಕಾಗಿ ಕೈಬಿಡಲ್ಪಟ್ಟಿದ್ದಾರೆ.

"ಯಾವ ಹಿಂದುವೂ ತನ್ನ ಹಿಂದೂ ಹೃದಯವನ್ನೇ ಕಳೆದುಕೊಂಡಿದ್ದ ಹೊರತು ಆ ಬಗೆಯ ಆರ್ಥಿಕ ಪರಿಸ್ಥಿತಿಯನ್ನು ಇಲ್ಲಿ ತರುವುದಕ್ಕೆ ಇಚ್ಛಿಸಲಾರನೆಂದು ನಾನು ಭಾವಿಸುತ್ತೇನೆ. ಮತ್ತು ಬಗೆಬಗೆಯ ಸುಶಿಕ್ಷಿತ ಉದ್ಯೋಗಗಳಲ್ಲಿಯೂ ವಿವಿಧ ವಾಣಿಜ್ಯ ಉದ್ಯಮಗಳಲ್ಲಿಯೂ ಪುರುಷರೊಡನೆ ಸ್ಪರ್ಧಿಸುವುದಕ್ಕಾಗಿಯೂ ಅವರೊಡನೆ ಹೋರಾಡಿ ತಮ್ಮ ಜೀವಿಕೆಯನ್ನು ಗಳಿಸಿಕೊಳ್ಳುವುದಕ್ಕಾಗಿಯೂ ತನ್ನ ಹೆಣ್ಣುಮಕ್ಕಳನ್ನು ಪ್ರಪಂಚದಲ್ಲಿ ಕಳಿಸುವುದಕ್ಕೆ ಯಾವ ಹಿಂದುವೂ ವಿದ್ಯಾಭ್ಯಾಸ ಮಾಡಿಸಲು ಬಯಸುವುದಿಲ್ಲವೆಂದು ನಾನು ಭಾವಿಸುತ್ತೇನೆ. ಅಂಥಾ ಶೋಚನೀಯವಾದ ಸಮಾಜವಿಕಾಸದ ಹಂತವನ್ನು (ಸ್ಥಿತಿಗತಿಗಳನ್ನು) ಇಲ್ಲಿಯೂ ತರಲು ನಿಜವಾಗಿಯೂ ಯಾವ ಹಿಂದುವೂ ಇಚ್ಛಿಸಲಾರನು. ಹಾಗಾದರೆ, ಅಂಥಾ ಪರಿಸ್ಥಿತಿಯನ್ನು ತರುವುದಕ್ಕಾಗಿಯೇ ಉದ್ದಿಷ್ಟವಾದ ಶಿಕ್ಷಣದ ಮಾದರಿಯನ್ನು ಇಲ್ಲಿಯೂ ಅನುಸರಿಸುವುದೇಕೆ?"

"It is undesirable that Indian girls should be trained along those unsuitable western lines. What you want to do is to devise a system of education which shall make them ideal

Indian women of ancient types, fitting them for the most part, for the life of wives and mothers, and in rare cases, for that knowledge of Brahman, which may make them under these conditions, as it did under the older conditions, the spiritual teachers and helpers of humanity."

"ಭಾರತೀಯ ಬಾಲಕಿಯರು ಆ ಅನನ್ವಯವಾದ ಪಾಶ್ಚಾತ್ತ್ಯ ರೀತಿಗಳಲ್ಲಿ ಶಿಕ್ಷಣ ಪಡೆಯುವುದು ಅನಿಷ್ಟವಾದುದು. ನಿಮಗೆ ಬೇಕಾಗಿರುವುದು ಏನೆಂದರೆ, ಅವರನ್ನು ಬಹಳ ಮಟ್ಟಿಗೆ ಹೆಂಡಿರ ಮತ್ತು ತಾಯಿಯರ ಜೀವನಕ್ಕೆ ಸರಿಹೊಂದತಕ್ಕ ಪ್ರಾಚೀನ ಮಾದರಿಯ ಆದರ್ಶ ಭಾರತೀಯ ಮಹಿಳೆಯರನ್ನಾಗಿ ಮಾಡುವಂಥ ಮತ್ತು ವಿರಳವಾದ ಸಂದರ್ಭಗಳಲ್ಲಿ ಹಿಂದಿನ ಪರಿಸ್ಥಿತಿಗಳಲ್ಲಿ ಹೇಗೋ ಹಾಗೆ ಈಗಿನ ಸ್ಥಿತಿಗತಿಗಳಲ್ಲಿಯೂ ಅವರನ್ನು ಬ್ರಹ್ಮಜ್ಞಾನಕ್ಕೆ ಅರ್ಹರನ್ನಾಗಿಯೂ ಅಧ್ಯಾತ್ಮ ಬೋಧಕರನ್ನಾಗಿಯೂ ಮಾನವ ಜನಾಂಗಕ್ಕೆ ಸಹಾಯಕರನ್ನಾಗಿಯೂ ಮಾಡುವಂಥ ವಿದ್ಯಾಭ್ಯಾಸ ಪದ್ಧತಿಯನ್ನು ರಚಿಸಬೇಕು."

(ಡಾಕ್ಟರ್) ಶ್ರೀಮತೀ ಆನಿಬೆಸೆಂಟರು ಆಂಗ್ಲ ಮಹಿಳೆಯಾದರೂ ಭಾರತೀಯ ಸಂಸ್ಕೃತಿಯಲ್ಲಿಯೂ ಧರ್ಮದಲ್ಲಿಯೂ ಜನಾಂಗದಲ್ಲಿಯೂ ಅಪಾರವಾದ ಭಕ್ತಿ ವಿಶ್ವಾಸಗಳಿಂದ ತಮ್ಮ ಜೀವಮಾನವನ್ನೆಲ್ಲಾ ಭಾರತೀಯ ಉಜ್ಜೀವನಕ್ಕೂ ಸ್ವಾತಂತ್ರ್ಯಕ್ಕೂ ಮುಡುಪಾಗಿಟ್ಟು ಹೋರಾಡಿದವರು. ಒಂದು ಸಲ ಅಖಿಲ ಭಾರತದ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷಿಣಿಯೂ ಆಗಿದ್ದವರು. ಬ್ರಹ್ಮವಿದ್ಯಾ ಸಮಾಜದ ಅಥವಾ ಥಿಯಾಸಫಿಕಲ್ ಸೊಸೈಟಿಯ ಆಜೀವ ಅಧ್ಯಕ್ಷಿಣಿಯೂ ಆಗಿದ್ದವರು. ಇವರು 64 ವರ್ಷಗಳ ಹಿಂದೆಯೇ ನಮಗೆ ಮೇಲಿನ ಉಪದೇಶವನ್ನು ಮಾಡಿದ್ದರೂ ಅಂದಿನಿಂದ ಇಂದಿನವರೆಗೆ ಜಗತ್ತಿನಲ್ಲಿ ಅತ್ಯಂತ ಅನಿರೀಕ್ಷಿತವೂ ಆಶ್ಚರ್ಯಕರವೂ ಆದ ಬದಲಾವಣೆಗಳು ವೇಗದಿಂದ ನಡೆದಿದ್ದರೂ ಇವರ ಆ ಹಿತೋಪದೇಶದಲ್ಲಿ ಭಾರತೀಯರು ಇಂದಿಗೂ ಎಂದಿಗೂ ಆಳವಾಗಿ ಆಲೋಚನೆ ಮಾಡಬೇಕಾದ ಮಹದ್ವಿಚಾರಗಳು ಅಡಗಿರುವಂತೆ ತೋರುತ್ತದೆ.

ಅವರು ಯಾವ ಸಾಮಾಜಿಕ, ಆರ್ಥಿಕ, ಹಾಗೂ ಶೈಕ್ಷಣಿಕ ಪದ್ಧತಿ-ಪರಿಸ್ಥಿತಿಗಳಿಗಾಗಿ ಭಯಪಟ್ಟಿದ್ದರೋ, ಯಾವುದು ಈ ದೇಶದಲ್ಲಿ ಬಂದರೆ ನಮ್ಮನ್ನು ಅನಾರ್ಯರನ್ನಾಗಿ ಮಾಡಬಹುದೆಂದು ಶಂಕಿಸಿದ್ದರೋ ಸಮಸ್ಯಾತ್ಮಕವಾದ ಅದೇ ಈಗ ನಮ್ಮ ಸುತ್ತಲೂ ಆವರಿಸಿ ನಮ್ಮನ್ನು ಗಾಢವಾಗಿ ಆಲಂಗಿಸುತ್ತಲೋ ಉಗ್ರವಾಗಿ ಅಪ್ಪಳಿಸುತ್ತಲೋ ಇರುವಂತೆ ತೋರುತ್ತಿದೆ. "ಕಾಲಾಯ ತಸ್ಮೈ ನಮಃ."

ಶ್ರೀಮತಿ ಆನಿಬೆಸೆಂಟರ ಭಯವೇನಾಗಿತ್ತೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಎಲ್ಲಾ ವ್ಯವಹಾರರಂಗಗಳಲ್ಲಿಯೂ ಸ್ತ್ರೀಯರಿಂದಾಗುವ ಅತಿಯಾದ ಸ್ವೇಚ್ಛಾಸ್ಪರ್ಧೆಯಿಂದಲೂ ಸ್ವೈರವಾದ ಪುರುಷ ಸಂಪರ್ಕದಿಂದಲೂ ತರುಣ ವಿದ್ಯಾರ್ಥಿಗಳೊಡನೆ ಸೇರಿ ಪಡೆಯುವ ಪ್ರೌಢವಿದ್ಯಾಭ್ಯಾಸದಿಂದಲೂ ಕಾಲಾತೀತವಾದ ವಿವಾಹಗಳಿಂದಲೂ ಲಕ್ಷಾಂತರ ಸ್ತ್ರೀಯರು ವಿವಾಹವಿಲ್ಲದಿರುವದರಿಂದಲೂ ಪಾಶ್ಚಾತ್ಯ ದೇಶಗಳಲ್ಲಿ ಪ್ರಸಿದ್ಧವಾಗಿ ಸಾಗಿರುವ ಭಯಂಕರವಾದ ನೈತಿಕ ಪತನವೇ ಭಾರತದಲ್ಲಿಯೂ ಉಂಟಾಗಬಹುದೆಂಬ ಸಂಕಟವೇ ಅದಾಗಿತ್ತು. ಹಾಗಾದರೆ ಈಗ ಇಲ್ಲಿ ಏನಾಗುತ್ತಿದೆಯೆಂಬುದು ನಮ್ಮೆಲ್ಲರ ಅನುಭವವಾಗಿರುವುದರಿಂದ ಅದನ್ನು ವಿವರಿಸುವುದಕ್ಕೆ ಬೇರೆ ವ್ಯಾಖ್ಯಾನವೇನೂ ಬೇಡ. ಆದರೂ ಅದನ್ನು ಒಂದೇ ಮಾತಿನಲ್ಲಿ ಹೀಗೆ ಹೇಳಬಹುದು :

ಮನಸ್ಸನ್ನು ಸೂರೆಗೊಳ್ಳುವ ಮೋಹಕವಾದ ಶೈಲಿಯಲ್ಲಿ ಸ್ವಾತಂತ್ರ್ಯವಾದದ ಸೋಗಿನಿಂದ ಸ್ವೇಚ್ಛಾಕಾಮವನ್ನು ಯಥೇಚ್ಛವಾಗಿ ಪ್ರಚೋದಿಸುತ್ತಿರುವ ಕಾದಂಬರಿಗಳ ಸಾಹಿತ್ಯದಿಂದಲೂ, ಅದನ್ನೇ ಬಣ್ಣಬಣ್ಣಗಳಿಂದ ರಂಜಿತವಾಗಿ ನಮ್ಮ ತರುಣತರುಣಿಯರು ಕಣ್ಣಾರೆ ಕಾಣುವಂತೆ ಮಾಡುತ್ತಿರುವ ಕಲಾಚಾತುರ್ಯವುಳ್ಳ ಚಲಚ್ಚಿತ್ರಗಳ ಆಕರ್ಷಕ ಪ್ರಚಾರದಿಂದಲೂ ತುಂಬಿ ನಿರಂತರ ಉದ್ದೀಪಿತವಾಗಿರುವ ಈಗಿನ ಈ ಭಾರತದ ವಾತಾವರಣದಲ್ಲಿ ಪ್ರಾಚೀನ ಸೀತಾಸಾವಿತ್ರಿಯರೇ ಪ್ರತ್ಯಕ್ಷವಾಗಿ ಪುನಃ ಜನ್ಮವೆತ್ತಿ ಬಂದು ಈ ಹೈಸ್ಕೂಲ್ ಕಾಲೇಜುಗಳಲ್ಲಿ ಓದಿದ್ದಾದರೆ, ತಮ್ಮ ಮನಸ್ಸಿನ ಸ್ವಾಭಾವಿಕವಾದ ಪರಿಶುದ್ಧತೆಯನ್ನು ಉಳಿಸಿಕೊಳ್ಳುವುದಕ್ಕೆ ಅವರೂ ಸಹ ದಿಗ್ಭ್ರಾಂತರಾಗಿ ತಲ್ಲಣಿಸಬೇಕಾದೀತು !

ಈಗ ಜೀವಂತವಾಗಿರುವ ತತ್ತ್ವಜ್ಞಾನಿಗಳಲ್ಲಿ ಅತೀ ಪ್ರಸಿದ್ಧರಾಗಿರುವ ಬೆರ್ಟ್ರ್ಯಾಂಡ್ ರಸೆಲ್ಲರು (Bertrand Russel) ಗಂಭೀರವಾಗಿ ಹೇಳಿರುವುದೇನೆಂದರೆ, "Late marriages have given a wrong direction to sexual propensities in the West."

"ಪಶ್ಚಿಮ ದೇಶಗಳಲ್ಲಿ ಕಾಲಾತೀತ ವಿವಾಹಗಳು ಕಾಮವಾಸನೆಗಳಿಗೆ ಅಯೋಗ್ಯ ದಿಶೆಯನ್ನು ತೋರಿಸಿವೆ." ಎಂದು ಹೇಳಿದ್ದಾರೆ.

ವರ್ತಮಾನ ಕಾಲದಲ್ಲಿ ನಮ್ಮ ದೇಶದಲ್ಲಿಯೂ ನಮ್ಮ ಸಮಾಜದಲ್ಲಿಯೂ ಕೂಡ ಧನಬಲವುಳ್ಳವರೇ ಆಗಲೀ ಧರ್ಮಶ್ರದ್ಧೆ ಉಳ್ಳವರೇ ಆಗಲೀ ಈ ಎರಡೂ ಉಳ್ಳವರಾಗಲೀ ಎಷ್ಟು ಸಾಹಸ ಮಾಡಿದರೂ ತಮ್ಮ ಹೆಣ್ಣುಮಕ್ಕಳಿಗೆ ಅವರ 25 ವಯಸ್ಸಿನ ಒಳಗೇ ಲಗ್ನ ಮಾಡುವುದು ಅನೇಕ ಸಂದರ್ಭಗಳಲ್ಲಿ ವಿಶ್ವಜಿತ್ ಯಾಗವನ್ನು ಮಾಡಿದಷ್ಟು ಕಷ್ಟವಾಗಿದೆಯೆಂಬುದು ನಮ್ಮೆಲ್ಲರ ಅನುಭವವಾಗಿದೆ. ಈ

ಪರಿಸ್ಥಿತಿಗೆ ನಮ್ಮ ಕೈ ಮೀರಿರುವ ಅನೇಕ ಶಕ್ತಿಗಳೂ ಕಾಲಧರ್ಮವೂ ಕಾರಣ ವಿರಬಹುದು. ಇರಲಿ.

ನಮ್ಮ ದೇಶದಲ್ಲಿ ಬೇರೊಂದು ಪರಿಸ್ಥಿತಿಯಿದ್ದ ಅರವತ್ತು ವರ್ಷಗಳ ಹಿಂದೆ, ಪ್ರಪಂಚವನ್ನೆಲ್ಲಾ ಪರ್ಯಟನ ಮಾಡಿ ಬಂದಿದ್ದ ಪ್ರಸಿದ್ಧ ಪಾಶ್ಚಾತ್ಯ ಮಹಿಳೆಯೊಬ್ಬರು ಹೇಳಿದ್ದೇನೆಂದರೆ :

"ನಾನು ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಸಂಚಾರ ಮಾಡಿ ಬಂದಿದ್ದೇನೆ. ಬೇಗೆ ಬೇರೆ ನಾಗರಿಕತೆಗಲ್ಲಿ ಬೆಳೆದಿರುವ ಬಗೆಬಗೆಯ ಸ್ತ್ರೀಯರ ಮಾದರಿಗಳನ್ನು ನೋಡುತ್ತಾ ಆಧುನಿಕ ಜಗತ್ತು ತೋರಿಸಬಲ್ಲ ಎಲ್ಲಾ ಬಗೆಯ ಸ್ತ್ರೀಯರ ನಮೂನೆಗಳನ್ನೂ ಪರಿಶೀಲಿಸಿದ್ದೇನೆ. ಆದರೆ ಆಧುನಿಕ ಭಾರತ ಮಹಿಳೆಯರಲ್ಲಿಯೂ ಕಾಣಬಹುದಾದ ಪರಿಶುದ್ಧವಾದ ಆಧ್ಯಾತ್ಮಿಕತೆಯನ್ನೂ ಕೋಮಲ ಭಕ್ತಿಯನ್ನೂ ನಿಷ್ಕಳಂಕ ಪಾರಿಶುದ್ಧತೆಯನ್ನೂ ನಾನು ಬೇರೆಲ್ಲಿಯೂ ಕಂಡಿಲ್ಲವೆಂದು ಪ್ರತಿಜ್ಞೆ ಮಾಡಿ ಹೇಳುತ್ತೇನೆ."

ಇಂಥಾ ನೈತಿಕ ಪರಿಶುದ್ಧತೆಯೂ ಭಕ್ತಿಯ ತೀವ್ರತೆಯೂ ಯೋಗಸಿದ್ಧಿಯೂ ಆಧ್ಯಾತ್ಮಿಕ ಪರಿಪೂರ್ಣತೆಯೂ ಭೂಮಾನಂದಸ್ಥಿತಿಯೂ ಪ್ರಾಪ್ತಿಯಾಗಿದ್ದ ಅನೇಕ ಜೀವಜ್ಯೋತಿಗಳಲ್ಲಿಯೂ ಮಹಿಳಾರತ್ನಗಳಲ್ಲಿಯೂ ಚೂಡಾಲಾ ದೇವಿಯು ಮಹಾ ಯೋಗಿನಿಯೆಂದು ಪ್ರಸಿದ್ಧಳಾದವಳು. ಈ ಪೀಠಿಕಾಪ್ರಕರಣದಲ್ಲಿ ಪ್ರಾರಂಭದಲ್ಲಿಯೇ ವಿಚಾರ ಮಾಡಿರುವಂತೆ ಜನ್ಮ ಸಾಫಲ್ಯಕ್ಕೆ ಮುಖ್ಯ ಕಾರಣವಾದ ಭೂಮಾನಂದ ಸ್ಥಿತಿಯನ್ನು ಪಡೆದು ಕೃತಕೃತ್ಯಳಾಗಿದ್ದ ಭಗವತೀ ಚೂಡಾಲಾದೇವಿಯ ದಿವ್ಯ ಚರಿತ್ರೆಯನ್ನು ಈ ದಿನ ಯಥಾಶಕ್ತಿ ಕೀರ್ತನ ಮಾಡೋಣ !

ಭಗವತೀ ಚೂಡಾಲೆಯ ಆಖ್ಯಾನ

ಗಣಪತಿಸ್ತವನ

ರಾಗ : ತಿಲಂಗ　　　　　　　　ತಾಳ :

ಓಂ ಗಂ ಗಣಪತೇ ಭಜಿಪೇ ॥ ಧ್ರು. ॥
ಬುದ್ಧಿ ಸಿದ್ಧಿ ಸಂಬುದ್ಧಿದಾಯಕಾ ॥ ಅ. ಧ್ರು. ॥
ಗಂ ಗಣಪತೇ ಭಜಿಪೇ ಓಂ ॥

ವಿನಾಯಕ ಮೋದಕ । ಸುಜನಕೆ-
ವರ ಜಗನ್ನಾಯಕಾ ।
ಸರ್ವವಿಘ್ನಹರ । ಕೃಪಾಭಿಷೇಕಾ ॥ ೧ ॥

ಗಜಾನನ ಮೋಹನ । ಮುನಿಮನ-
ಶರಣ ಸಂಜೀವನಾ ।
ಮೂಲ ಕುಂಡಲಿನೀ । ಪ್ರಭಾಪ್ರಸನ್ನಾ ॥ ೨ ॥

ವಿಮಾನವೆ ಮೂಷಕ । ನಗಿಸಲು
ವಿಕಟ { ಹೇರಂಬಕಾ ।
　　　 ಹೇ ! ಲಂಬಕಾ ! ।
ವಕ್ರಹಾಸ್ಯ ಮುಖ । ಸದಾ ವಿಶೋಕಾ ॥ ೩ ॥

ವಿವೇಕದಿ ತನ್ನಯಾ । ಪತಿಯನು-
ಪೊರೆದ ಚೂಡಾಲೆಯ !
ಧನ್ಯೆಗೈದ { ದಯಾ । ಘನಾಪ್ರಮೇಯ ॥
　　　　　 ಗುರು । ಪ್ರಭೋಽಪ್ರಮೇಯ ॥ ೪ ॥

ಶಿಖಿಧ್ವಜ ಯೋಗಿಯ । ಚರಿತೆಯ–
ವರದೆ ಚೂಡಾಲಿಯ ।
ಕೀರ್ತಿಗಾನ ಸಫಲ । ಗೈಯೊ ಜೀಯಾ ॥ ೫ ॥

ಜಯಪ್ರದ ಮಂಗಳ । ಶುಭಕರ–
{ ಪ್ರಣವರತ ಮಂಗಳ ।
ಪ್ರಣವನುತ ಮಂಗಳ ।
{ ಆದಿಪೂಜ್ಯಬಲ । ಮಹೇಶ ಬಾಲ ॥
ದತ್ತಮೂರ್ತಿ ಬಲ । ಗಣೇಶ ಲೀಲಾ ॥ ೬ ॥

ಶಾರದಾಸ್ತವನ

ರಾಗ : ಪಹಡಿ; ತಾಳ : ಕವಾಲಿ

ಶಾರದೇ-ವಿಧಾತೇ-ಮಾತೇ
ಬ್ರಹ್ಮಬೋಧನಾ ದಾತೇ ॥ ಧ್ರು. ॥

ವೇದರೂಪಿಣೀ ಸುವಾಣೀ
ನಾದರೂಪೆ ವರ ಗೀರ್ವಾಣೀ
ಬೋಧದೀಪೆ ನಾಥೆ ಕಲ್ಯಾಣೀ
ಮೋದಮಾದಿನೀ–ವಾಣೀ ॥ ೧ ॥

ತಾರಕೋನ್ಮನೀ ಸುಷುಮ್ನೇ
ಕೋಟಿ ವಿದ್ಯುದ್ರುತಿ ಲಾವಣ್ಯೇ
ನಾದಬ್ರಹ್ಮಲೋಲೆ ಬ್ರಹ್ಮಾಣೀ
ಸುಧಾಸ್ರಾವಿಣೀ–ಜನನೀ ॥ ೨ ॥

ಕಾವ್ಯಮೋದಿನಿ ಕಲಾತ್ಮೇ
ಸರ್ವಶಾಸ್ತ್ರವಿದೆ ವೇದಾತ್ಮೇ
ವಾಣಿ ! ವೀಣಾ ವಾದನ ವಶಾತ್ಮೇ (ಸ್ವರಾತ್ಮೇ)
ಮಂಗಳಾತ್ಮಕೇ–ರಾಕೇ
ಪರಾಕೇ ॥ ೩ ॥

ಗುರುಸ್ತವನ

ರಾಗ : ಹಿಂಡೋಲ್ ತಾಳ : ತೇವರಾ

ದತ್ತಗುರು ಕರುಣಾ । ಚಿತ್ತಶಾಂತಿಗೆ ಕಾರಣ ॥
ಕೃಪೆಮಾಡೊ ಸ್ಮರಣ ॥ ಧ್ರು. ॥

ಧರೆಯೊಳಸದೃಶಳಾ ಚೂಡಾಲೆ
ವರಪತಿಯ ಭವದುಃಖ ಕಳೆದು
ಭರದಿ ಭೂಮಾನಂದವಿತ್ತಾ
ಗುರುಕೀರ್ತನೆ ಗೈವೆ ಕೃಪೆಮಾಡೋ ॥ ೧ ॥

ಕಥಾರಂಭ

ರಾಗ : ಹಮೀರ್ ತ್ರಿಕಾಲ

ಭೇರಿ ಹೊಡೀ ಮನವ ಜಯಿಸಿ ಜೈ ।
ಚಿತ್ತಚಾಂಚಲ್ಯ ನಿಗ್ರಹಕೇ–ಗುರುಬೋಧ
ಶಮದಮಾದಿಯ ಭಜಿಸು ನೀ ॥ ಧ್ರು. ॥

ಸತಿಯೂ ಪತಿಯೂ ತಪಮಂ ಮಾಡೆ–
ಸಂಸಾರ ವಿಷ–ಸುಧೆಯೈ ನೋಡೆ-
ಯೋಗಿನೀ, ಪತಿಗೇ ಮುಕ್ತಿಯೀವಳೈ
ಭೂಮಾನಂದಕೆ–ವಾಸನೆ ದಹಿಪಳೈ– ॥ ೧ ॥

ದ್ವಾಪರಯುಗದಿ ಏಳನೆಯ ವೈವಸ್ವತ ಮನ್ವಂತರದ ಕೊನೆಯಲ್ಲಿ, ಈ ಭರತ ಖಂಡದಲ್ಲಿ ವಿಂಧ್ಯಪರ್ವತದ ಸಮೀಪವಿರುವ ಅವಂತೀ ದೇಶದಲ್ಲಿ ಉಜ್ಜಯಿನಿಯಲ್ಲಿ ಕುರುಕುಲೋತ್ಪನ್ನನಾದ ಶಿಖಿಧ್ವಜನೆಂಬ ಮಹಾರಾಜನು ರಾಜ್ಯವಾಳುತ್ತಿದ್ದನು. ಮಹಾ ಶ್ರೀಮಂತನಾದ ಆ ಮಾಳವೇಶ್ವರನು ಧೈರ್ಯ, ಔದಾರ್ಯ ಮೊದಲಾದ ಗುಣಗಳಿಂದ ಕೂಡಿದವನೂ ಶಮದಮಾದಿ ಸಂಪನ್ನನೂ ಶೂರನೂ ಪ್ರತಾಪಿಯೂ ಸದಾಚಾರನಿಷ್ಠನೂ (ಮೌನಿಯೂ ಮಿತಭಾಷಿಯೂ ಮೃದುಮಧುರ ಭಾಷಿಯೂ ಶಾಂತನೂ) ಧರ್ಮವತ್ಸಲನೂ ಅಭಿಮಾನಶೂನ್ಯನೂ ಶಾಸ್ತ್ರವೇತ್ತನೂ ಸಜ್ಜನ ಸೇವಕನೂ ಸ್ತ್ರೀ ವ್ಯಸನರಹಿತನೂ ಆಗಿದ್ದನು. ಅವನು ತನ್ನ ಹದಿನಾರನೆಯ ವಯಸ್ಸಿನಲ್ಲಿ ದಿಗ್ವಿಜಯ ಮಾಡಿ, ಶತ್ರುಗಳನ್ನು ಜಯಿಸಿ, ಭೂಮಂಡಲದ

ಸಾಮ್ರಾಟನೆನಿಸಿದನು. ಅವನು ನಿರ್ಭಯವಾಗಿ ಧರ್ಮದಿಂದ ಪ್ರಜಾಪಾಲನೆ ಮಾಡುತ್ತಿದ್ದುದರಿಂದ ಅವನ ಶುಭ್ರ ಕೀರ್ತಿಯು ದಶ ದಿಕ್ಕುಗಳನ್ನೂ ಬೆಳಗುತ್ತಿತ್ತು.

ಚೂಡಾಲೆಯೆಂಬ ಅವನ ಪತ್ನಿಯು ಅವನಿಗೆ ಎಲ್ಲಾ ಬಗೆಯಿಂದಲೂ ಅನುರೂಪಳಾದ ಸೌರಾಷ್ಟ್ರ ಸುಂದರಿಯಾಗಿದ್ದಳು. ಇಬ್ಬರೂ ಪರಸ್ಪರ ಪ್ರೇಮದಿಂದ ಸುಖಜೀವಿಗಳಾಗಿದ್ದರು.

ದಿಂಡಿ :

ಚೂಡಾಲಾ ಸೌರಾಷ್ಟ್ರ ಸುಂದರಾಂಗಿ ।
  ಮಾಳವೇಶ ಶಿಖಿಧ್ವಜ ನೃಪನರ್ಧಾಂಗಿ
ರಾಜರಾಣಿ ಪ್ರೇಮದಿಂದಿರ್ದರಾಗಿ ।
  ಲೋಕದಲಿ ತಾವ್ ವಿಚಿತ್ರ ಯೋಗಿ ಭೋಗಿ ॥

ಚೂಡಾಲೆಯು ಶಿಖಿಧ್ವಜನಿಂದ ಧರ್ಮ ಶಾಸ್ತ್ರವನ್ನೂ ಚಿತ್ರಕಲೆಯನ್ನೂ ಕಲಿತಳು. ಶಿಖಿಧ್ವಜನು ಚೂಡಾಲೆಯಿಂದ ನೃತ್ಯ, ವಾದ್ಯ ಇತ್ಯಾದಿಗಳನ್ನೂ ಕಲಿತನು. ಹೀಗೆ ಇಬ್ಬರೂ ಒಬ್ಬರ ಹೃದಯದಲ್ಲಿ ಇನ್ನೊಬ್ಬರು ಇರುತ್ತಾ ಪರಸ್ಪರ ನಿರುಪಮ ನಿಸ್ಸೀಮ ಪ್ರೇಮಾದರಗಳಿಂದ ಅಭಿನ್ನರೂಪರೂ ಏಕರಸಭಾವವುಳ್ಳವರೂ ಆದರು. ಸಕಲ ಶಾಸ್ತ್ರಾರ್ಥಗಳಲ್ಲಿಯೂ ವಿದ್ಯೆಗಳಲ್ಲಿಯೂ ಕಲೆಗಳಲ್ಲಿಯೂ ಇಬ್ಬರೂ ಸಮಾನ ಪಾಂಡಿತ್ಯವುಳ್ಳವರಾಗಿದ್ದರು. ಹೆಚ್ಚು ಹೇಳುವುದೇನು ! ಅವರಿಬ್ಬರೂ ಪೃಥ್ವಿಯ ಮೇಲಿನ ಪ್ರತ್ಯಕ್ಷ ಶಂಕರ–ಪಾರ್ವತಿಯರಂತೆಯೂ ಲಕ್ಷ್ಮೀ–ನಾರಾಯಣರಂತೆಯೂ ಶೋಭಿಸುತ್ತಿದ್ದರು. ಒಟ್ಟಿನ ಮೇಲೆ ಇಂಥಾ ಸುಸಂಸ್ಕೃತವೂ ಸರ್ವಲೋಕಪ್ರಿಯವೂ ಸಕಲ ಜನಹಿತಸಾಧಕವೂ ಸುಖಿಯೂ ಆದ ದಾಂಪತ್ಯವು ಹಿಂದೆಂದೂ ಇರಲಿಲ್ಲವೆಂಬಂತೆಯೇ ಇತ್ತು. ಏಕೆಂದರೆ ಸುಭಾಷಿತಕಾರರು ಹೇಳಿರುವಂತೆ :

ಯಸ್ಯ ಭಾರ್ಯಾ ಶುಚಿರ್ದಕ್ಷಾ ಭರ್ತಾರಮನುಗಾಮಿನೀ ।
ನಿತ್ಯಂ ಮಧುರವಕ್ತ್ರೀ ಚ ಸಾ ರಮಾ ನ ರಮಾ ರಮಾ ॥

ಯಾರ ಭಾರ್ಯೆಯು ಆಚಾರ ವಿಚಾರಗಳಲ್ಲಿ ಶುಚಿರ್ಭೂತಳೂ ಗೃಹಕೃತ್ಯದಲ್ಲಿಯೂ ಅತಿಥಿ ಸತ್ಕಾರದಲ್ಲಿಯೂ ದಕ್ಷಳೂ ಧರ್ಮದಲ್ಲಿ ಪತಿಯನ್ನು ಅನುಸರಿಸತಕ್ಕವಳೂ ನಿತ್ಯವೂ ಮೃದುಮಧುರವಾಗಿಯೇ ಮಾತನಾಡತಕ್ಕವಳೂ ಆಗಿರುತ್ತಾಳೋ ಆ ಪುಣ್ಯವತಿಯೇ ಸಾಕ್ಷಾತ್ ಲಕ್ಷ್ಮಿಯಲ್ಲದೆ, ವೈಕುಂಠದಲ್ಲಿರಬಹುದಾದ ಲಕ್ಷ್ಮಿಯು ಮಾತ್ರ ಲಕ್ಷ್ಮಿಯಲ್ಲ.

ಹೀಗೆ ಅನೇಕ ವರ್ಷಗಳು ಕಳೆದಿರುತ್ತಿರಲು (ತೂತು ಮಡಕೆಯಲ್ಲಿ ತುಂಬಿರುವ ನೀರು ಬೇಗ ಸೋರಿ ಹೋಗುವಂತೆಯೂ ಪರ್ವತಶಿಖರದಿಂದ ಹರಿಯುತ್ತಿರುವ ನದಿಯ ಓಟದಂತೆಯೂ ಆಯುಷ್ಯವು ವೇಗದಿಂದ ಕ್ಷೀಣವಾಗುತ್ತಿದೆಯೆಂದು ಇಬ್ಬರಿಗೂ ಭಾಸವಾಯಿತು.) ನೀರಿನ ಮೇಲಿನ ಗುಳ್ಳೆಯಂತೆ ಜೀವನವು ಕ್ಷಣಭಂಗುರವೆಂಬ ವಿಚಾರವು ಹೊಳೆದು ಇಬ್ಬರಿಗೂ ವೈರಾಗ್ಯವುಂಟಾಗಿ ಅಧ್ಯಾತ್ಮ ಶಾಸ್ತ್ರ ವಿಚಾರದಲ್ಲಿ ಇಬ್ಬರೂ ಆಸಕ್ತರಾದರು.

ತಚ್ಚಿಂತನಂ ತತ್‌ಕಥನಂ ಅನ್ಯೋನ್ಯಂ ತತ್‌ಪ್ರಬೋಧನಮ್ ।
ತದೇಕಪರತ್ವಂ ಚ ಜ್ಞಾನಾಭ್ಯಾಸಂ ವಿದುರ್ಬುಧಾಃ ॥

ಎನ್ನುವಂತೆ ಇಬ್ಬರೂ ಅಧ್ಯಾತ್ಮವಿಚಾರವನ್ನೇ ಚಿಂತನೆಮಾಡುತ್ತಾ ಕಥನ ಮಾಡುತ್ತಾ ಅನ್ಯೋನ್ಯವಾಗಿ ಬೋಧಿಸುತ್ತಾ ಆತ್ಮವಿಚಾರವೊಂದರಲ್ಲೇ ತಲ್ಲೀನರಾಗಿ ಜ್ಞಾನಾಭ್ಯಾಸವನ್ನು ಮಾಡುತ್ತಿದ್ದರು. ಅವರು ತಮ್ಮ ಸರ್ವ ಪ್ರಾಣವನ್ನೂ ಮನಸ್ಸನ್ನೂ ಆತ್ಮಚಿಂತನೆಯಲ್ಲಿಯೇ ಲೀನಮಾಡಿದರು. ಆತ್ಮಜ್ಞರಾದ ಸಜ್ಜನರನ್ನು ಆಶ್ರಯಿಸಿ ಅವರ ಸೇವೆಯನ್ನು ಮಾಡಿ, ಅನುಗ್ರಹವನ್ನು ಪಡೆದರು.

ಇಂಥಾ ಪುಣ್ಯದಂಪತಿಗಳ ಗೃಹಸ್ಥಧರ್ಮವನ್ನೇ ಮಹಾತ್ಮರು ಧನ್ಯವಾದುದೆಂದು ಹೊಗಳಿರುವರು.

ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾ ನ ದುರ್ಭಾಷಿಣೀ ।
ಸನ್ಮಿತ್ರಂ ಸಧನಂ ಸ್ವಯೋಷಿತಿರತಿಶ್ಚಾಜ್ಞಾಪರಾಸ್ಸೇವಕಾಃ ॥
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ ।
ಸಾಧೋಸ್ಸೇವಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ॥

ಹೆಂಡತಿಯು ಕೆಟ್ಟ ಮಾತುಗಳನ್ನಾಡದೇ ಸರ್ವದಾ ಪ್ರಿಯಭಾಷಿಣಿಯಾಗಿರಬೇಕು; ಮಕ್ಕಳೆಲ್ಲಾ ಬುದ್ಧಿವಂತರೂ ವಿದ್ಯಾವಂತರೂ ಉದ್ಯೋಗಶೀಲರೂ ವಿಧೇಯರೂ ಆಗಿರಬೇಕು; ಮಿತ್ರರೆಲ್ಲಾ ಸಜ್ಜನರೇ ಆಗಿರಬೇಕು; ಬೇಕಾದಷ್ಟು ಐಶ್ವರ್ಯವೂ ಇರಬೇಕು. ಸೇವಕರೆಲ್ಲಾ ಆಜ್ಞಾಪಾಲಕರಾಗಿರಬೇಕು; ಪತ್ನಿಯು ಪತಿವ್ರತೆಯೂ, ಪತಿಯು ತನ್ನ ಪತ್ನಿಯಲ್ಲಿಯೇ ಅನುರಕ್ತನೂ ಆಗಿರಬೇಕು; ಪ್ರತಿದಿನವೂ ಮನೆಯಲ್ಲಿ ಹರಿ-ಗುರು-ಶಿವ ಪೂಜೆಯೂ ಮೃಷ್ಟಾನ್ನಪಾನಗಳಿಂದ ಅತಿಥಿ ಸತ್ಕಾರವೂ ಸಾಧು-ಸಜ್ಜನ-ಸದ್ಗುರುಗಳ ಸೇವೆಯೂ ನಿರಂತರವಾಗಿ ನಡೆಯುತ್ತಿರಬೇಕು. ಹೀಗೆ ಸಕಲ ಸೌಭಾಗ್ಯಗಳಿಂದಲೂ ಗೃಹಸ್ಥನ ಗೃಹವು ಸಂತತ ಆನಂದಪೂರ್ಣವಾಗಿದ್ದರೆ ಇಂಥಾ ಪುಣ್ಯಶಾಲಿಯ ಗೃಹಸ್ಥಾಶ್ರಮವೇ ಧನ್ಯನಾದುದು!

ಇದಕ್ಕೆ ವಿರುದ್ಧವಾಗಿದ್ದರೆ ಅಂಥಾ ಗೃಹಸ್ಥಾಶ್ರಮವು ಶ್ರಮ-ಸಂಕಟಗಳ ತೌರುಮನೆಯಾದ್ದರಿಂದ ಅದಕ್ಕೆ ಧಿಕ್ಕಾರವೆಂದೂ ಸುಭಾಷಿತಕಾರರು ಹೇಳಿದ್ದಾರೆ.

ಆದರೆ ಸುದೈವಿಗಳಾದ ನಮ್ಮ ಚೂಡಾಲಾ-ಶಿಖಿಧ್ವಜರ ದಾಂಪತ್ಯಜೀವನವು ದುಃಖ-ದೈನ್ಯಗಳಿಂದ ತುಂಬಿರಲಿಲ್ಲ. ಅದು ಧರ್ಮವೃದ್ಧಿಯಿಂದಲೂ ಅರ್ಥಸಮೃದ್ಧಿಯಿಂದಲೂ ಭೋಗ-ಭಾಗ್ಯ-ಅಧಿಕಾರ-ವೈಭವಪೂರ್ಣ ಕಾಮದಿಂದಲೂ ಮೋಕ್ಷಸಾಧನೆಯಿಂದಲೂ ಪರಿಪೂರ್ಣತೆಯನ್ನು ಪಡೆದು ಧನ್ಯವೂ ಲೋಕಮಾನ್ಯವೂ ಆಗಿದ್ದಿತು.

ಚೂಡಾಲೆಯು ಆತ್ಮಜ್ಞಾನಿಗಳ ಮುಖದಿಂದ ಶ್ರವಣಮಾಡಿದ ಶಾಸ್ತ್ರಾರ್ಥವನ್ನು ತನ್ನ ಯುಕ್ತಿಗೆ ಹೊಂದಿಸಿಕೊಂಡು ಮನಸ್ಸಿನಲ್ಲಿ ಮನನಮಾಡಿ, ನಿದಿಧ್ಯಾಸನರೂಪ ನಿಶ್ಚಿತವಾದ ಧ್ಯಾನದಿಂದ ನಿತ್ಯವೂ ನಿರಂತರವಾಗಿ ತನ್ನ ಅನುಭವಕ್ಕೆ ತಂದುಕೊಳ್ಳುತ್ತಿದ್ದಳು. ನಿಷ್ಕಾಮವಾದ ಧ್ಯಾನಬಲದಿಂದ ಆಕೆಯ ಚಿತ್ತವು ನಿರ್ಮಲವೂ ನಿಶ್ಚಲವೂ ಆಯಿತು. ವಿಷಯವಾಸನೆಯೆಂಬ ಕೊಳೆಯನ್ನು ವೈರಾಗ್ಯದಿಂದ ಕಳೆದುಕೊಂಡ ಆಕೆಯ ಮನಸ್ಸು ಗಾಳಿಯಾಡದಲ್ಲಿರುವ ದೀಪದಂತೆ ಅಲುಗಾಡದೆ ತನ್ನಲ್ಲಿ ತಾನು ಬೆಳಗುತ್ತಾ ನಿಂತಿತು. ಎಲ್ಲಾ ಭ್ರಮೆಯನ್ನೂ ಬಿಟ್ಟು ಆಕೆಯ ಚಿತ್ತವು ಸಕಲ ಬುದ್ಧಿವೃತ್ತಿಗಳಿಗೂ ಸಾಕ್ಷಿಯಾದ ಚಿದಾಕಾಶದಲ್ಲಿ ಹಾಯಾಗಿ ನಿಂತಿತು. ಕೇವಲ ತತ್ತ್ವವಿಚಾರಬಲದಿಂದಲೇ ಆಕೆಗೆ ಆತ್ಮಜ್ಞಾನವಾಗಿ ನಿತ್ಯವೂ ಸಂತತವಾದ ಅಭ್ಯಾಸದಿಂದ ಆತ್ಮಾನುಭವವು ದೃಢವಾಗುತ್ತಾ ಹೋಯಿತು.

ಆಕೆಯು ಯಾವ ಬಯಕೆಯೂ ಇಲ್ಲದೆ, ಬೇಕು-ಬೇಡ ಎಂಬುದೂ ಇಲ್ಲದೆ, ಭಯವೂ ಸಂಶಯವೂ ಇಲ್ಲದೆ, ಯಾವ ಕರ್ತವ್ಯಕರ್ಮವನ್ನಾದರೂ ಆನಂದದಿಂದ ಮಾಡುತ್ತಾ ಯಾವಾಗಲೂ ಅಂತರ್ಮುಖವಾದ ಮನಸ್ಸಿನಿಂದ ಸ್ವರೂಪಾನಂದದಲ್ಲಿಯೇ ನೆಲೆ ನಿಂತವಳಾಗಿರುತ್ತಿದ್ದಳು. ಹೀಗೆ ಅದ್ವಿತೀಯವಾದ ಶಾಂತಪದದಲ್ಲಿ ಪೂರ್ಣ ವಿಶ್ರಾಂತಿ ಪಡೆದುದರಿಂದ ಚೂಡಾಲೆಯು ಶರತ್ಕಾಲದ ಚಂದ್ರನಂತೆಯೂ ಪ್ರಫುಲ್ಲಿತವಾದ ಪುಷ್ಪದಂತೆಯೂ ಶೋಭಿಸುತ್ತಿದ್ದಳು.

ರಾಗ : ದೇವಗಾಂಧಾರ ತ್ರಿತಾಲ.

ಬೇಕುಬೇಡೆಂಬುವ ಮೋಹವಾ—ನೀಗೇ—ಘನಶಾಂತಿಯು
॥ ಧ್ರು. ॥

ಮನವು ಆತ್ಮದೆ ನಿಲ್ಲೆ ತಾ, ಸ್ವಸ್ಥತಾ,-ಸೌಖ್ಯದೆ ಸನ್ಮುಕ್ತಿಯು
॥ ಅ. ಧ್ರು. ॥

ಪರಮಭೂಮದಿ ಹರ್ಷಿಪಾ ಚೂಡಾ । ವರ ಗಿರಿಜೆಯೋ ।
ಸಿರಿಲಕ್ಷ್ಮಿಯೋ । ಅವರನೂ ಜಯಿಪಳೋ ॥ ೧ ॥

ಹೀಗೆ ಹೊಸದಾಗಿ ತಾರುಣ್ಯವನ್ನು ಪಡೆದವಳಂತೆ ನಿತ್ಯನೂತನವಾಗಿ ಬೆಳೆಯುತ್ತಿರುವ ಆಕೆಯ ಅಪೂರ್ವ ಶೋಭೆಯನ್ನು ಕಂಡು ಆಶ್ಚರ್ಯಭರಿತನಾಗಿ ಶಿಖಿಧ್ವಜನು "ಸುಂದರಿ! ನೀನು ಅತ್ಯಂತ ಶ್ರೇಷ್ಠವಾದ ಇಷ್ಟಾರ್ಥವನ್ನು ಪಡೆದವರಂತೆಯೂ ಅಮೃತಪಾನ ಮಾಡಿದವರಂತೆಯೂ ಆನಂದಪೂರ್ಣಳಾಗಿ ಕಾಣುತ್ತಿ. ನೀನು ಸಕಲ ಪ್ರಪಂಚದ ಸಾರವನ್ನೂ ಹೀರಿ, ಉಳಿದ ಮೂರು ಲೋಕಗಳ ಭೋಗೈಶ್ವರ್ಯಗಳನ್ನು ತೃಣಕ್ಕಿಂತಲೂ ಕಡೆಯಾಗಿ ತಿರಸ್ಕಾರ ಮಾಡಿದಂತೆ ಕಾಣುತ್ತಿ. ಎಲೌ ಪ್ರಿಯೆ! ನಿನ್ನ ಚಿತ್ತವು ಅತಿಶಯ ಶಾಂತವೂ ಗಂಭೀರವೂ ಸೌಮ್ಯವೂ ಸಮತಾಪ್ರಾಪ್ತವೂ ಆಗಿ ತೋರುತ್ತಿದೆ. ಮಹಾಭಾಗೆ! ನೀನು ಹೊಸದಾಗಿ ತಾರುಣ್ಯವನ್ನು ಪಡೆದವಳಂತೆ ಲಾವಣ್ಯಮಯಿಯಾಗಿ ಶೋಭಿಸುತ್ತಿದ್ದಿ. ನೀನು ಅಮೃತಪಾನ ಮಾಡಿದ್ದೀಯೋ ಹೇಗೆ? ಮೂರು ಲೋಕಗಳ ಸಾಮ್ರಾಜ್ಞಿಯಾಗಿದ್ದೀಯೋ ಹೇಗೆ? ಅಥವಾ ನಿನಗೆ ಮಂತ್ರಯೋಗ, ರಾಜಯೋಗಾದಿಗಳ ಸಿದ್ಧಿಯಾಗಿದೆಯೋ? ಅಲೌಕಿಕವೂ ಅಪೂರ್ವವೂ ಆದ ಚಿಂತಾಮಣಿ, ಕಾಮಧೇನು ಇತ್ಯಾದಿಗಳ ಲಾಭವಾಗಿದೆಯೋ? ನಿನ್ನ ಈ ಅಪೂರ್ವವಾದ ಶೋಭೆಗೆ ಏನು ಕಾರಣ?" ಎಂದು ಕೇಳಿದನು.

ಅದಕ್ಕೆ ಚೂಡಾಲೆಯು "ಸ್ವಾಮಿನ್! ಮಂತ್ರ ರಸಾಯನಾದಿ ಯಾವ ಸಿದ್ಧಿಯನ್ನೂ ನಾನು ಪಡೆದಿಲ್ಲ. ಮೂಢ ಜನರಿಗೆ ತೋರುವ ದೇಹವೇ ನಾನೆಂಬ ಭಾವನೆಯನ್ನು ಬಿಟ್ಟು, ತತ್ತ್ವಬೋಧೆಯ ಯೋಗದಿಂದ ನಾಮರೂಪಾದಿರಹಿತವಾದ ಬ್ರಹ್ಮವೇ ನಾನೆಂಬ ನಿಶ್ಚಯಜ್ಞಾನದಲ್ಲಿ ನಿಂತಿದ್ದೇನೆ. ನಾನು ಸರ್ವಕೂಟಸ್ಥವಾದ ಭೂಮಾನಂದ ಸ್ಥಿತಿಯನ್ನು ಪಡೆದಿರುವುದರಿಂದ ಯಾವ ಭೋಗವೂ ಇಲ್ಲದೆ ಸಂತುಷ್ಟಳಾಗಿದ್ದೇನೆ. ನಾನು ದೇಹೇಂದ್ರಿಯಗಳಿಂದ ಎಲ್ಲರಂತೆ ಆಹಾರ-ವಿಹಾರಾದಿ ಯಾವ ವ್ಯವಹಾರವನ್ನು ಮಾಡುತ್ತಿದ್ದರೂ ನನ್ನೊಳಗೇ ನಾನು ಸದಾ ಆತ್ಮಮಧ್ಯದಲ್ಲಿಯೇ ಇರುತ್ತೇನೆ. ನಾನು ದೇಹಾದಿಗಳಲ್ಲವೆಂದೂ ಮೂರು ಲೋಕಗಳ ಪ್ರಭುವೆಂದೂ ತಿಳಿದಿರುವುದರಿಂದ ತಾವು ಹೇಳುವಂತೆ ತ್ರಿಭುವನ ಸಾಮ್ರಾಜ್ಞಿಯಾಗಿ ಶೋಭಿಸುತ್ತೇನೆ. ಇಂದ್ರಿಯಗಳಿಗೂ ಮನಸ್ಸಿಗೂ ತೋರುವ ಯಾವುದೂ ನಿಜವಲ್ಲವೆಂದೂ ಈ ಸಮಸ್ತವನ್ನೂ ವ್ಯಾಪಿಸಿಕೊಂಡಿರುವ ಸ್ವಪ್ರಕಾಶ ಚೈತನ್ಯವೊಂದೇ ಸತ್ಯವಾದ ನಾನೆಂದೂ ತಿಳಿದಿದ್ದೇನೆ. ಇದರಿಂದ ನಾನು ನನ್ನ ಹೃದಯಾಕಾಶದಲ್ಲಿರುವ ಚಿನ್ಮಾತ್ರಸ್ವರೂಪವಾಗಿ ನೆಲೆನಿಂತಿರುವುದರಿಂದ ನಿತ್ಯೋದಿತಳಾಗಿ ಪ್ರಕಾಶಿಸುತ್ತೇನೆ." ಎಂದು ನುಡಿದಳು.

ಆತ್ಮನಿಷ್ಠಳಾದ ಚೂಡಾಲೆಯ ಈ ಉದಾರ ಭಾಷಣದ ನಿಜವಾದ ಆಶಯವು ಅಜ್ಞನಾದ ರಾಜನಿಗೆ ತಿಳಿಯಲಿಲ್ಲ. ಅವನ ಮನಸ್ಸಿನ ಮೇಲೆ ಅದರ ವಿರುದ್ಧ ಪರಿಣಾಮವೇ ಆಯಿತು. ಅವನು ನಗುತ್ತಾ ಆಕೆಯನ್ನು ಹಾಸ್ಯಮಾಡಿದಂತೆ ಹೇಳಿದನು: "ಹೇ ಮುಗ್ಧೇ! ಈ ಅಸಂಬದ್ಧ ಪ್ರಲಾಪವನ್ನು ಏಕೆ ಮಾಡುತ್ತಿ? ವಿಷಯ ಭೋಗವಿಲ್ಲದೆ ತುಷ್ಟಿಯನ್ನು ಪಡೆಯುವುದು ಎಂದಿಗೂ ಸಾಧ್ಯವಲ್ಲ. ಭೋಜನ-ಶಯ್ಯಾದಿ ಸುಖಗಳನ್ನು ತ್ಯಾಗಮಾಡಿ ಶೂನ್ಯ ಹೃದಯದಲ್ಲಿ ರಮಮಾಣ ರಾಗತಕ್ಕವರು ಹೇಗೆ ಶೋಭಿಸಿಯಾರು? ರಾಜಕನ್ಯೆ! ನಿನಗೆ ತಲೆಯಾದರೂ ಕೆಟ್ಟಿರಬೇಕು; ಇಲ್ಲವೆ, ಪಿಶಾಚಿಯಾದರೂ ಹಿಡಿದಿರಬೇಕು. ಎಲೌ ಭೋಳೆ ಸ್ವಭಾವದ ಚಪಲೆ! ಈ ಎಲ್ಲಾ ನಾಟಕೀಯ ವೇಷವನ್ನೂ ಬಿಟ್ಟು ಮೊದಲಿನಂತೆಯೇ ರಾಜವಿಲಾಸಗಳಲ್ಲಿ ರಮಿಸಿ ಸುಖಿಯಾಗು!" ಎಂದು ಹೇಳಿ ಆಕೆಯ ಗೃಹದಿಂದ ಹೊರಟುಹೋದನು.

ತನ್ನ ಅಭಿಪ್ರಾಯವು ರಾಜನಿಗೆ ತಿಳಿಯಲಿಲ್ಲವೆಂದು ಚೂಡಾಲೆಗೆ ಸ್ವಲ್ಪ ಖೇದವಾಯಿತು. ಆದರೆ ಯಾವ ವಿಶೇಷವನ್ನೂ ತೋರಗೊಡದಂತೆ ಆಕೆಯು ಯಥಾಪ್ರಾಪ್ತವಾದ ರಾಜವಿಲಾಸದ ನಿತ್ಯಜೀವನದಲ್ಲಿ ತೊಡಗಿದಳು.

ಚೂಡಾಲೆಯು ನಿರಿಚ್ಛಳೂ ನಿತ್ಯತೃಪ್ತಳೂ ಆಗಿದ್ದರೂ ಸಹ ಆಕೆಗೆ ಒಮ್ಮೆ ಲೀಲೆಗಾಗಿ ಆಕಾಶಗಮನಾದಿ ಸಿದ್ಧಿಗಳನ್ನು ಪಡೆಯಬೇಕೆಂಬ ಬಯಕೆಯುಂಟಾಯಿತು. ಅದಕ್ಕಾಗಿ ಆಕೆಯು ಸರ್ವಭೋಗಗಳನ್ನೂ ತ್ಯಾಗಮಾಡಿ ನಿರ್ಜನವಾದ ಅರಣ್ಯಕ್ಕೆ ಹೋಗಿ ದೀರ್ಘಕಾಲ ಆಸನ-ಪ್ರಾಣಾಯಾಮಾದಿ ಯೋಗವನ್ನು ಅಭ್ಯಾಸ ಮಾಡಿದಳು. ಆಕೆಗೆ ಅಣಿಮಾ, ಮಹಿಮಾ ಮೊದಲಾದ ಅದ್ಭುತ ಸಿದ್ಧಿಗಳು ಪ್ರಾಪ್ತವಾದವು. ಆಕಾಶಸಂಚಾರ, ಜಲಸಂಚಾರ, ಭೂಸಂಚಾರ ಇವುಗಳೆಲ್ಲಾ ಆಕೆಗೆ ಸ್ವಾಭಾವಿಕವಾದವು. ಚೂಡಾಲೆಯು ಪಶುಪಕ್ಷಿ ಕ್ರಿಮಿಕೀಟಾದಿಗಳೊಡನೆಯೂ ಭೂತ–ಪ್ರೇತ–ಪಿಶಾಚಿಗಳೊಡನೆಯೂ ನಾಗಲೋಕದವರೊಡನೆಯೂ ದೇವಾಸುರ, ಗಂಧರ್ವ, ವಿದ್ಯಾಧರಾ, ಅಪ್ಸರಾ ಮತ್ತು ಸಿದ್ಧಚಾರಣಾದಿಗಳೊಡನೆಯೂ ಸಂಭಾಷಣಾದಿ ವ್ಯವಹಾರ ಮಾಡುತ್ತಿದ್ದಳು. ಆಕೆಯು ಹೀಗೆ ಸಕಲ ಸಿದ್ಧಿಗಳನ್ನೂ ಪಡೆದಿದ್ದರೂ ತನ್ನ ಪತಿಯ ವಿಷಯದಲ್ಲಿ ವಿನಯದಿಂದ ನಡೆದುಕೊಳ್ಳುತ್ತಾ, ಬಹುಬಗೆಯಿಂದ ತತ್ತ್ವಜ್ಞಾನವನ್ನು ಬೋಧೆಮಾಡುತ್ತಿದ್ದಳು. ಆದರೂ ಆವನಿಗೆ ಚಿತ್ತಶುದ್ಧಿಯಿರಲಿಲ್ಲವಾದ್ದರಿಂದ ಪ್ರಯೋಜನವಾಗಲಿಲ್ಲ. ಮೂಢಬಾಲಕನಿಗೆ ಎಷ್ಟು ಕಾಲವಾದರೂ ವಿದ್ಯೆಯು ಹೇಗೆ ಗ್ರಹಣವಾಗಲಾರದೋ ಹಾಗೆ ಎಷ್ಟು ವರ್ಷಗಳು ಆ ಮಹಾಮಹಿಮಳ ನಿಕಟ ಸಹವಾಸದಲ್ಲಿದ್ದರೂ ರಾಜನಿಗೆ ಆಕೆಯ ನಿಜವಾದ ಯೋಗ್ಯತೆಯನ್ನು ತಿಳಿಯುವುದು ಸಾಧ್ಯವಾಗಲಿಲ್ಲ. ತನ್ನ ವಲ್ಲಭನು ಆತ್ಮ

ವಿಶ್ರಾಂತಿಯನ್ನು ಪಡೆಯಲಿಲ್ಲವಾದ್ದರಿಂದ ಆತನಿಗೆ ತನ್ನ ಯಾವ ಸಿದ್ಧಿಯ ವೈಭವವನ್ನೂ ಚೂಡಾಲೆಯು ತೋರಿಸದೆ ಸಾಮಾನ್ಯಳಂತೆಯೇ ನಡೆದುಕೊಳ್ಳುತ್ತಿದ್ದಳು.

ಮಹಾಜ್ಞಾನಿಯೂ ಸಮರ್ಥಳೂ ಆದ ಚೂಡಾಲೆಯ ಈ ಸೌಜನ್ಯವೂ ವಿನಯವೂ ಭಾರತ ಮಹಿಳೆಯರಿಗೆ ಪರಮಾದರ್ಶವಾಗಿವೆ. ಕೇವಲ ಭಾರತ ಮಹಿಳೆಯರಿಗೇ ಏಕೆ, ಪ್ರಪಂಚದಲ್ಲಿರುವ ಯಾವ ದೇಶದ ಯಾವ ಕಾಲದ ಮಹಿಳೆಯರಿಗಾದರೂ ಆದರ್ಶವೇ ಆಗಿದೆ. ಈಗಿನ ಕಾಲದಲ್ಲಿ ವಿದ್ಯಾವತಿಯರಾದ ನಮ್ಮ ಬಾಲಕಿಯರೂ ತರುಣಿಯರೂ ವಿನಯಗುಣವನ್ನು ಅಭ್ಯಾಸಮಾಡಿದರೆ ಅವರಿಗೂ ದೇಶಕ್ಕೂ ಕಲ್ಯಾಣವಾದೀತು. ಸ್ತ್ರೀಯರಲ್ಲಾಗಲೀ ಪುರುಷರಲ್ಲಾಗಲೀ ವಿದ್ಯೆಗೆ ವಿನಯವೇ ಭೂಷಣ. ಬುದ್ಧಿಯನ್ನು ಬೆಳೆಸುವ ವಿದ್ಯೆ, ಹೃದಯವನ್ನೂ ಉತ್ತಮ ಸಂಸ್ಕಾರದಿಂದ ವಿಶಾಲಗೊಳಿಸದಿದ್ದರೆ ಮತ್ತು ಪರಿಶುದ್ಧಗೊಳಿಸದಿದ್ದರೆ ವ್ಯರ್ಥವೇ ಸರಿ. ಹೃದಯಪ್ರಧಾನರಾದ ಕೋಮಲೆಯರಲ್ಲಿ ನಯವಿನಯಾದಿ ಮೃದುಮಧುರ ಗುಣಗಳು, ಬುದ್ಧಿಪ್ರಧಾನರಾದ ಪುರುಷರಲ್ಲಿರುವದಕ್ಕಿಂತಲೂ ವಿಶೇಷವಾಗಿರಬೇಕಾದುದು ಧರ್ಮವಾಗಿದೆ. ಹೀಗಿರುವಾಗ ಹಿರಿಯರನ್ನೂ ಹಿರಿಯರ ಸಂಪ್ರದಾಯವನ್ನೂ ಗೌರವಿಸದೇ ಸ್ವಾತಂತ್ರ್ಯಾಭಿಲಾಷೆಯ ಸೋಗಿನಲ್ಲಿ ಗರ್ವದಿಂದ ಮೀರಿ ಮೆರೆಯುವುದು ಯಾರಿಗೂ ಅದರಲ್ಲಿಯೂ ಮಾನಿನಿಯರಿಗೆ ಮರ್ಯಾದೆಯಲ್ಲ ಮತ್ತು ಶ್ರೇಯಸ್ಕರವೂ ಅಲ್ಲ.

ಹಿಂದೆ ಹೇಳಿದಂತೆ ಮಹಾಸಿದ್ಧಯೋಗಿನಿಯಾದ ಚೂಡಾಲೆಯ ಆದರಪೂರ್ಣ ಪ್ರಯತ್ನದಿಂದ ಕೂಡ ಶಿಖಿಧ್ವಜನು ಜ್ಞಾನಿಯಾಗುವುದು ಸಾಧ್ಯವಾಗಲಿಲ್ಲವೆಂದ ಮೇಲೆ ಸಾಮಾನ್ಯರ ಪ್ರಯತ್ನದ ಪಾಡೇನು ? ಜ್ಞಾನಸಾಧನೆಗೆ ಗುರೂಪದೇಶದ ಸಹಾಯಕ್ಕಿಂತಲೂ ಶಿಷ್ಯನ ಅಂತಃಕರಣ ಪರಿಪಾಕವೇ ಅಥವಾ ಶಿಷ್ಯನ ಅಧಿಕಾರ ಸಂಪತ್ತೇ ಹೆಚ್ಚು ಪ್ರಯೋಜನಕಾರಿಯೆಂಬ ಸತ್ಯವು ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ, ಅಧಿಕಾರಿಯಲ್ಲದ ಶಿಷ್ಯನನ್ನು ಬಲಾತ್ಕಾರದಿಂದ ಜ್ಞಾನಿಯನ್ನಾಗಿ ಮಾಡುವ ಸಾಮರ್ಥ್ಯವು ಗುರೂಪದೇಶದಲ್ಲಿ ಸಹ ಇಲ್ಲ. ''ಶಿಷ್ಯ ಪ್ರಜ್ಞೈವ ಕೇವಲಂ'' ಶಿಷ್ಯನ ಶುದ್ಧ ಬುದ್ಧಿಯೇ ಜ್ಞಾನಕ್ಕೆ ಮುಖ್ಯ ಕಾರಣವಾಗಿದೆ. ಕೇವಲ ಶಾಸ್ತ್ರಜ್ಞಾನದಿಂದಾಗಲೀ ಅಥವಾ ಕೇವಲ ಕರ್ಮಾನುಷ್ಠಾನದಿಂದಾಗಲೀ ಆತ್ಮಜ್ಞಾನವಾಗುವದಿಲ್ಲ. ನಿಷ್ಕಾಮ ಕರ್ಮೋಪಾಸನೆಗಳ ಶುದ್ಧಪುಣ್ಯದಿಂದ ಆತ್ಮವಿಚಾರ ವುಂಟಾದರೆ, ಸರ್ಪದ ಹೆಜ್ಜೆಯನ್ನು ಸರ್ಪವೇ ಅರಿಯಬಲ್ಲಂತೆ ಆತ್ಮನು ತನ್ನನ್ನು ತಾನೇ ಅರಿಯುತ್ತಾನೆ. ಆದರೆ ಗುರೂಪದೇಶವು ವ್ಯರ್ಥವಲ್ಲ; ಅದು ಜ್ಞಾನಕ್ಕೆ ಸಾಕ್ಷಾತ್ ಕಾರಣವಲ್ಲವಾದರೂ ಪರಂಪರೆಯಿಂದ ಕಾರಣವಾಗುತ್ತದೆ. ಅತಿ ಸೂಕ್ಷ್ಮವಾದ ಅರುಂಧತೀ ನಕ್ಷತ್ರವು ಒಮ್ಮೆಗೇ ಕಾಣಲಾರದಾದ್ದರಿಂದ, ಅದರ

ಸಮೀಪದಲ್ಲಿರುವ ಒಂದು ದೊಡ್ಡ ನಕ್ಷತ್ರವನ್ನು ತೋರಿಸಿ, ಅದರ ಸಹಾಯದಿಂದ ನಿಜವಾದ ಅರುಂಧತಿಯನ್ನು ಗುರುತುಮಾಡಿಕೊಡುವಂತೆ ಶಿಷ್ಯನ ಮನಸ್ಸನ್ನು ಪ್ರತ್ಯಗಾತ್ಮನ ಕಡೆ ಹರಿಯುವ ಅಭಿರುಚಿಯನ್ನು ಬೆಳೆಸಲು ಗುರೂಪದೇಶವು ಸಹಾಯವಾಗಬಹುದು. ಇದೇ ಗುರೂಪದೇಶದ ಪರಂಪರೆಯ ಕಾರಣ. ಹಸ್ತಾಮಲಕರಂಥ ಉತ್ತಮಾಧಿಕಾರಿಗೆ, ಗುರೂಪದೇಶದ ಶ್ರವಣಮಾತ್ರದಿಂದಲೇ ಜ್ಞಾನವಾಗಬಹುದಾದ್ದರಿಂದ ಅತಿ ವಿರಳವಾದ ಸಂದರ್ಭಗಳಲ್ಲಿ ಗುರೂಪದೇಶವು ಸಾಕ್ಷಾತ್ತಾಗಿಯೂ ಕಾರಣವಾಗಬಹುದು. ಆಗಲೂ ಶಿಷ್ಯನ ಅಧಿಕಾರವೇ ಮುಖ್ಯವಾಗುತ್ತದೆ.

"ಯಸ್ಯ ಪ್ರಸಾದಾನ್ ಮೂಢೋಪಿ ಸರ್ವಜ್ಞತ್ವಂ ಪ್ರಪದ್ಯತೇ" ಎಂಬಂತೆ ಸದ್ಗುರುವಿನ ಪ್ರಜ್ಞಾಪ್ರಸಾದದ ಅನುಗ್ರಹದಿಂದ ಮೂಢನೂ ಜ್ಞಾನಿಯಾಗಬಹುದು. ಆದರೆ ಇದು ಅತ್ಯಂತ ವಿರಳ. ತೋಟಕಾಚಾರ್ಯರ ಉದಾಹರಣೆ ಕೋಟಿಗೋ ಶತಕೋಟಿಗೋ ಒಂದು ಇರಬಹುದು.

ಸಾಮಾನ್ಯವಾಗಿ ಗುರೂಪದೇಶದಿಂದುಂಟಾಗುವ ಪರಂಪರೆಯ ದೂರದ ಪ್ರಯೋಜನಕ್ಕೆ ವಸಿಷ್ಠರು ಒಂದು ದೃಷ್ಟಾಂತವನ್ನು ಕೊಟ್ಟಿದ್ದಾರೆ. ಅತಿಕೃಪಣನಾದ ಒಬ್ಬ ವೈಶ್ಯನು ಒಮ್ಮೆ ವಿಂಧ್ಯಪರ್ವತದ ಒಂದು ಅರಣ್ಯದಲ್ಲಿ ಹೋಗುವಾಗ ಅಕಸ್ಮಾತ್ ಕವಡೆಯೊಂದನ್ನು ಕಳೆದುಕೊಂಡು ಮೂರು ದಿವಸ ಅದನ್ನು ಬಿಡದೆ ಹುಡುಕಿದನು. "ಈ ಒಂದು ಕವಡೆಯು ನನಗೆ ಸಿಕ್ಕರೆ, ಇದರಿಂದ ವ್ಯಾಪಾರಮಾಡಿ ನಾಲ್ಕು ಕವಡೆಗಳನ್ನು ನಾನು ಸಂಪಾದಿಸಬಹುದು. ಅದರಿಂದ ಎಂಟೂ, ಹದಿನಾರೂ, ನೂರೂ ಕೂಡ ಆಗಬಹುದು." ಹೀಗೆಂದು ಅವನು ಮನೋರಾಜ್ಯದಲ್ಲೇ ಗುಣಾಕಾರ ಹಾಕುತ್ತಾ ಜನರ ಅಪಹಾಸ್ಯದ ಕಡೆಗೂ ಗಮನಕೊಡದೆ, ಮೂರು ದಿನಗಳು ಹಗಲೂ ರಾತ್ರಿಯೂ ಹುಡುಕಿದ ಮೇಲೆ ಅವನಿಗೆ ಅತಿಶಯ ಕಾಂತಿಯುಕ್ತವಾದ ಚಿಂತಾಮಣಿಯೇ ಲಭ್ಯವಾಯಿತು. ಅದರಿಂದ ಅವನು ಮಹದೈಶ್ವರ್ಯವಂತನಾಗಿ ಶಾಂತಮನಸ್ಸಿನಿಂದ ಇದ್ದನು. ಇದರಂತೆ, ವೈಶ್ಯನು ಬೇಜಾರುಪಟ್ಟುಕೊಳ್ಳದೆ, ರಾತ್ರಿಹಗಲೂ ಶ್ರದ್ಧೆಯಿಂದ ಕವಡೆಯನ್ನು ಹುಡುಕಿದ್ದರಿಂದಲೇ ಅಮೌಲ್ಯವಾದ ಚಿಂತಾಮಣಿಯು ದೊರಕಿದಂತೆ ಗುರೂಪದೇಶದಿಂದ ಉಂಟಾಗುವ ಶಬ್ದಜ್ಞಾನದಿಂದ ವಿಚಾರಮಾಡಿದರೆ ಆತ್ಮಜ್ಞಾನ ಉಂಟಾಗುತ್ತದೆ. ಗುರೂಪದೇಶವಿಲ್ಲವಾದರೆ, ಸರಿಯಾದ ರೀತಿಯಲ್ಲಿ ಆತ್ಮವಿಚಾರವನ್ನಾದರೂ ಮಾಡುವುದು ಹೇಗೆ ಸಾಧ್ಯವಾದೀತು? ಆತ್ಮವಿಚಾರವೇ ಇಲ್ಲವಾದರೆ ಆತ್ಮಸಾಕ್ಷಾತ್ಕಾರವಾದರೂ ಹೇಗಾದೀತು? "ತತ್ತ್ವಮಸಿ" "ಆ ಬ್ರಹ್ಮವೇ ನೀನಾಗಿದ್ದಿ" ಎಂಬ ಗುರೂಪದೇಶದಿಂದ ಅಧಿಕಾರಿಯಾದ ಶಿಷ್ಯನಲ್ಲಿ "ಅಹಂ ಬ್ರಹ್ಮಾಸ್ಮಿ" "ಆ ಬ್ರಹ್ಮವೇ ನಾನಾಗಿದ್ದೇನೆ"

ಎಂಬ ಬುದ್ಧಿವೃತ್ತಿ ಹುಟ್ಟುತ್ತದೆ. ಈ ಅತಿ ಸ್ವಚ್ಛವಾದ ಅಂತಃಕರಣವೃತ್ತಿಯಲ್ಲಿ ನಿತ್ಯವೂ ಅಪರೋಕ್ಷವಾಗಿರುವ ಆತ್ಮಸ್ವರೂಪ ಬ್ರಹ್ಮವು ಸ್ಫುರಿಸುತ್ತದೆ. ಇದರ ನಿಜವಾದ ಕಾರಣವು ಶಿಷ್ಯನ ಸ್ವಚ್ಛಬುದ್ಧಿಯೂ ಬ್ರಹ್ಮದ ಸ್ವಯಂಪ್ರಕಾಶ ಸ್ವಭಾವವೂ ಆಗಿವೆ. ಗುರೂಪದೇಶವು ಪರಂಪರೆಯ ಕಾರಣವಾದರೂ ಅತ್ಯವಶ್ಯವೇ ಆಗಿದೆ.

ಮಾಯಾಮಹಿಮೆಯು ವಿಚಿತ್ರವಾಗಿದೆ. ಕೆಲವೊಮ್ಮೆ ನಮ್ಮ ಶೋಧವೂ ಪ್ರಯತ್ನವೂ ಉದ್ದಿಷ್ಟವೂ ಒಂದಾದರೆ, ನಮಗೆ ಲಭಿಸುವ ಫಲವೇ ಇನ್ನೊಂದಾಗುತ್ತದೆ. ಭೌತವಿಜ್ಞಾನ ಶೋಧಗಳಲ್ಲಿಯೂ ಇದೇ ಅನುಭವವಾಗಿದೆ. ವಿದ್ಯುಚ್ಛಕ್ತಿ, ರೇಡಿಯೋ ಆಕ್ಟಿವಿಟಿ, ಎಕ್ಸ್‌ರೇ ಮೊದಲಾದ ಆವಿಷ್ಕಾರಗಳೆಲ್ಲಾ ವಿಜ್ಞಾನಿಗೆ ಹೇಗೆ ಹೇಗೋ ಲಭಿಸಿವೆ. ಜೀವನದ ಹಲವು ಕ್ಷೇತ್ರಗಳಲ್ಲಿ ಇದೇ ಅನುಭವವಾಗಿದೆ. ಆತ್ಮಜ್ಞಾನಸಾಧನೆಯಲ್ಲಿಯೂ ಗುರೂಪದೇಶದಿಂದ ಉಂಟಾಗುವ ಪರೋಕ್ಷವಾದ ಶಬ್ದಜ್ಞಾನದಿಂದ ಶ್ರದ್ಧಾಪೂರ್ವಕವಾಗಿ ವಿಚಾರಮಾಡುತ್ತಾ ಜಿಜ್ಞಾಸುವು ಮುಂದುವರಿದರೆ ಅವನಿಗೆ ಅಪರೋಕ್ಷವಾದ ಆತ್ಮಾನುಭವವಾಗುತ್ತದೆ—ಎಂಬುದು ಅನುಭವಿಗಳ ಅಭಿಪ್ರಾಯ. ಇರಲಿ.

ಶಿಖಿಧ್ವಜರಾಜನಿಗೆ ತತ್ತ್ವಜ್ಞಾನದಲ್ಲಿ ವಿಶ್ರಾಂತಿಯಿರಲಿಲ್ಲವಾದ್ದರಿಂದ ಶಾಂತಿಯಿಲ್ಲವಾಯಿತು. ಆದರೆ ಸಜ್ಜನ ಸಹವಾಸದಿಂದಲೂ ಶಾಸ್ತ್ರಜ್ಞಾನದಿಂದಲೂ ಅವನಿಗೆ ಜಗತ್ತು ನಿಸ್ಸಾರವಾಗಿಯೂ ನಶ್ವರವಾಗಿಯೂ ತೋರುತ್ತಿತ್ತು. ಆದ್ದರಿಂದ ರಾಜಭೋಗದಲ್ಲಿ ಅವನಿಗೆ ಆಸಕ್ತಿಯುಂಟಾಗಲಿಲ್ಲ. ನಿಜವಾದ ತತ್ತ್ವಜ್ಞಾನದ ಆನಂದವಾದರೂ ಅವನಿಗೆ ಲಭಿಸಲಿಲ್ಲ. ಆದ್ದರಿಂದ ಬೇಟೆಗಾರನ ಬಾಣದಿಂದ ಗಾಯಗೊಂಡ ಜಿಂಕೆಯಂತೆ ಅರಣ್ಯದಲ್ಲಿಯೂ ಗುಹೆಗಳಲ್ಲಿಯೂ ನದೀತೀರಗಳಲ್ಲಿಯೂ ಅವನು ಏಕಾಂತವಾಸ ಮಾಡುತ್ತಾ ಮನಸ್ಸನ್ನು ಶಾಂತಗೊಳಿಸುವುದಕ್ಕೆ ಪುನಃಪುನಃ ಪ್ರಯತ್ನಮಾಡಿದನು. ಅರಮನೆಯಲ್ಲಿದ್ದಾಗ ಸೇವಕರು ಸಮಯವರಿತು ಉಪಾಯದಿಂದ ಮೇಲಿಂದ ಮೇಲೆ ಪ್ರಾರ್ಥನೆಮಾಡಿ ಅವನಿಂದ ದಿನಚರಿಯ ಕರ್ಮಗಳನ್ನು ಒತ್ತಾಯದಿಂದ ಮಾಡಿಸಬೇಕಾಯಿತು. ರಾಜನ ಮಹಾಭೋಗವೂ ರಾಜ್ಯಲಕ್ಷ್ಮಿಯೂ ಅವನಿಗೆ ತುಚ್ಛವಾಗಿ ಕಾಣತೊಡಗಿದವು. ಅದರಿಂದ ಅವನು ಧನವನ್ನೂ ಭೂಮಿಯನ್ನೂ ಗೋವುಗಳನ್ನೂ ಸುವರ್ಣವನ್ನೂ ಬಡವರಿಗೂ ಯೋಗ್ಯರಿಗೂ ಯಥೇಚ್ಛವಾಗಿ ದಾನಮಾಡಿದನು. ಸಂಸಾರವ್ಯಾಧಿಯ ಪರಿಹಾರಕ್ಕಾಗಿ ಸ್ವತಃ ಸ್ವತಂತ್ರವಾಗಿ ಔಷಧವನ್ನು ಶೋಧಿಸಲು ತೊಡಗಿದನು. ಚಿಂತಾಪರವಶವಾದ ಅವನ ಚಿತ್ತಕ್ಕೆ ವೈಭವಪೂರ್ಣ ರಾಜ್ಯವೂ ವಿಷಪ್ರಾಯವಾಗಿ ತೋರಹತ್ತಿತು. ಹೀಗಿರುವಾಗ ಒಂದಾನೊಂದು ದಿನ ಏಕಾಂತದಲ್ಲಿ ತನ್ನ ಸಮೀಪಕ್ಕೆ ಬಂದ ಚೂಡಾಲೆಗೆ ಶಿಖಿಧ್ವಜರಾಜನು ಮೃದುವಾಗಿ ಹೀಗೆ ಹೇಳಿದನು:

ರಾಗ : ಮಿಶ್ರಭೈರ ತಾಳ : ತೇವರಾ

ಚೂಡಾಲೆ ಬಾಲೇ । ಘನಸತ್ತ್ವ ಶೀಲೇ । ಪ್ರಿಯತಮೆ ಕೇಳೆ ॥ ಧ್ರು ॥
ಆನಂದ ಲೋಲೇ ।

ಭೋಗದಾ ಸುಖ ಬೇಸರವಾಯಿತ್ತೌ ।
ರಾಗವಾ ಕಳೆದು ಏಕಾಂತವಾಯಿತ್ತೌ ॥ ೧ ॥

ಕೇವಲಾತ್ಮವ ಚಿಂತನಗೈವಾ ।
ಜೀವನಸೌಖ್ಯ ಸಂಸಾರನೌಕಾ ॥ ೨ ॥

"ಪ್ರಿಯೆ! ಇಷ್ಟು ದಿನವೂ ನಾನು ಸಮಸ್ತ ರಾಜವೈಭವಗಳನ್ನೂ ವಿಷಯಗಳನ್ನೂ ಭೋಗಿಸಿದ್ದೇನೆ. ಈಗ ನನಗೆ ಅವು ಸಾಕಾಗಿವೆ ; ಅಥವಾ ಬೇಡವಾಗಿವೆ. ನಾನು ವಿರಕ್ತನಾಗಿದ್ದೇನೆ. ನಿರ್ಜನವಾದ ಅರಣ್ಯದ ಏಕಾಂತವಾಸದಲ್ಲಿರುವ ನಿಶ್ಚಿಂತತೆಯೂ ಶಾಂತಿಯೂ ಸುಖವೂ ಇಂದ್ರಲೋಕದಲ್ಲಿಯಾಗಲೀ ಬ್ರಹ್ಮಲೋಕದಲ್ಲಿಯಾಗಲೀ ಇರಲಾರದು. ಏಕೆಂದರೆ ಆ ಎಲ್ಲೆಡೆಯಲ್ಲಿಯೂ ತಾಪತ್ರಯಗಳೂ ಯೋಗಕ್ಷೇಮದ ಚಿಂತಾವ್ಯಥೆಯೂ ಇದ್ದೇ ಇರುತ್ತದೆ. ವನವಾಸಿಗಳಿಗೆ ಯುದ್ಧದಿಂದ ಲಾಭನಷ್ಟಗಳಿಲ್ಲ ; ರಾಷ್ಟ್ರಭಂಗವಾದೀತೆಂಬ ಚಿಂತೆಯಿಲ್ಲ. ಆದ್ದರಿಂದ ನಾನು ಅರಣ್ಯಕ್ಕೆ ಹೋಗಿ ಏಕಾಂತದಲ್ಲಿ ತಪೋಮಯವಾದ ಜೀವನವನ್ನು ನಡೆಸಿಕೊಂಡಿರುತ್ತೇನೆ. ನೀನು ನನ್ನ ಈ ಶುಭಕರವಾದ ಇಚ್ಛೆಗೆ ಅಡ್ಡಿ ಬರಬೇಡ. ತನ್ನ ಪತಿಯ ಇಚ್ಛೆಗೆ ಭಂಗ ತರುವುದನ್ನು ಕುಲಸ್ತ್ರೀಯು ಸ್ವಪ್ನದಲ್ಲಿ ಕೂಡ ಯೋಚಿಸಳು." ಎಂದನು.

ಆದರೆ ಚೂಡಾಲೆಯು ಇದಕ್ಕೆ ಒಪ್ಪಲಿಲ್ಲ. ಮುಪ್ಪು ಬಂದಾಗ ಇಬ್ಬರೂ ಕೂಡಿ ವಾನಪ್ರಸ್ಥಾಶ್ರಮಕ್ಕೆ ಹೋಗಬಹುದೆಂದೂ, ಅಕಾಲದಲ್ಲಿ ಪ್ರಜಾಪಾಲನೆಯನ್ನು ಬಿಟ್ಟು ವನವಾಸಕ್ಕೆ ಹೋಗುವದು ಕ್ಷತ್ರಿಯರಿಗೆ ಧರ್ಮವಲ್ಲವೆಂದೂ ವಿನಯದಿಂದ ವಿಜ್ಞಾಪಿಸಿಕೊಂಡಳು.

ರಾಗ : ಮಿಶ್ರಮಾಂಡ್ ತಾಲ : ಖೇಮ್ಟಾ

ಪ್ರಭುವೇ । ವೃಥಾ ವಿಮೋಹಾ । ಏಕೈ
ಪ್ರಿಯ ತ್ಯಜಿಸು ಪರಮ ಶೋಕಾ । ಸಾಕೈ ॥ ಧ್ರು. ॥
ಹುಸಿಯ ಶೋಕಾ । ಸಾಕೈ

ಪ್ರಭುದೇವಾ । ವಿರತಿಯೋ ರತಿಯೋ–
ಬರಿ ವನವು ಮನೆಯು ಎರಡೂ ಮಾಯೊ
ಆ ಭ್ರಾಂತಿವಿನಾ ಜ್ಞಾನ ನಿರ್ಮಾಯಾ ॥ ೧ ॥
ಓ ಭ್ರಾಂತಿವಿನಾ

ಶಿಖಿಧ್ವಜನು ಆಕೆಯ ಬುದ್ಧಿವಾದವನ್ನು ತಡೆಗಟ್ಟಿ, ತಾನು ಏಕಾಂತವಾಸಕ್ಕಾಗಿ ದೂರ ಅರಣ್ಯಕ್ಕೆ ಹೋಗುವದೇ ಖಂಡಿತವೆಂದೂ ಆಕೆಯು ಮಾತ್ರ ರಾಜ್ಯ ರಕ್ಷಣೆ ಮಾಡಿಕೊಂಡು ಅಲ್ಲಿಯೇ ಇರಬೇಕೆಂದೂ ಆಜ್ಞೆಮಾಡಿದನು.

ಅವನು ಆ ದಿನ ಸರ್ವಕೃತ್ಯಗಳನ್ನೂ ಮಾಡಿ, ಸಂಜೆ ಎಂದಿನಂತೆ ಸಾಯಂಸಂಧ್ಯಾ, ಭೋಜನ, ಕಥಾಶ್ರವಣಾದಿಗಳನ್ನು ಮುಗಿಸಿ ರಾತ್ರಿ ಶಯ್ಯೆಯಲ್ಲಿ ಚೂಡಾಲೆಯೊಡನೆ ಮಲಗಿದನು. ಆದರೆ ಆ ರಾತ್ರಿ ಬಹಳ ಹೊತ್ತಿನವರೆಗೆ ಆಕೆಗೆ ನಿದ್ರೆಯೇ ಬರಲಿಲ್ಲ. ಮಧ್ಯರಾತ್ರಿಯಲ್ಲಿ ಸರ್ವಲೋಕವೂ ನಿದ್ರಾವಶವಾಗಿರುವಾಗ ಚೂಡಾಲೆಯೂ ನಿದ್ರಾಸುಖದಲ್ಲಿ ಮುಳುಗಿ ಮೈಮರೆತಿರುವುದನ್ನು ಅರಿತು ಮೆಲ್ಲನೆ ಆಕೆಯನ್ನು ಹಾಸಿಗೆಯ ಮೇಲೆಯೇ ಬಿಟ್ಟಿದ್ದು, ಸದ್ದುಮಾಡದಂತೆ ಅರಮನೆಯಿಂದ ಹೊರಗೆ ಬಂದನು. ಪಹರೆಯಲ್ಲಿ ಎಚ್ಚರವಾಗಿದ್ದ ಅನುಚರನೊಬ್ಬನು ರಾಜನ ಅಂಗರಕ್ಷಣೆಗಾಗಿ ಜೊತೆಗೆ ಬರತೊಡಗಲು, ತಾನು ನಗರದಲ್ಲಿ ಗೂಢಚರ್ಯೆಗಾಗಿ ಹೋಗುವುದಾಗಿ ಸೂಚಿಸಿ, ಅವನನ್ನು ತಡೆದು ನಿಲ್ಲಿಸಿ, ನಗರದಿಂದ ಹೊರಕ್ಕೆ ಹೋಗಿ, ತಿರುಗಿ ನಿಂತು, "ಎಲೌ ! ರಾಜ್ಯಲಕ್ಷ್ಮಿ ! ನಿನಗೆ ಕೊನೆಯ ನಮಸ್ಕಾರ." ಎಂದು ನಮಸ್ಕರಿಸಿ, ರಾಜಧಾನಿಯನ್ನು ಬಿಟ್ಟು ಬಹುದೂರ ಪ್ರಯಾಣಮಾಡಿ, ಒಂದು ಮಹಾರಣ್ಯದಲ್ಲಿ ಪ್ರವೇಶಮಾಡಿದನು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಎಚ್ಚರಗೊಂಡು, ಪುನಃ ಮಾರ್ಗಕ್ರಮಣ ಮಾಡಿದನು. ಅವನು ಸೂರ್ಯದೇವನಂತೆಯೇ ಹಗಲೆಲ್ಲಾ ದಾರಿಯನ್ನು ನಡೆದು, ರಾತ್ರಿಯಾಗಲು ಒಂದು ಸುಂದರ ಸರೋವರವು ಸಿಕ್ಕಲು, ಅದರಲ್ಲಿ ಸ್ನಾನಸಂಧ್ಯಾಫಲಾಹಾರಾದಿಗಳನ್ನು ತೀರಿಸಿಕೊಂಡನು. ಅವನು ಮರುದಿನ ಪುನಃ ದಾರಿಯನ್ನು ನಡೆಯುವುದಕ್ಕೆ ತೊಡಗಿ, ಅನೇಕ ದೇಶಗಳನ್ನೂ ನಗರಗಳನ್ನೂ ಪರ್ವತಾರಣ್ಯ ನದಿ ಮೊದಲಾದವುಗಳನ್ನೂ ದಾಟಿ ಹನ್ನೆರಡು ದಿವಸಗಳು ಒಂದೇಸಮನೆ ಪ್ರವಾಸಮಾಡಿ ಮಂದರಪರ್ವತದ ಸಮೀಪದಲ್ಲಿ ಸುಂದರವಾದೊಂದು ಅರಣ್ಯವನ್ನು ಸೇರಿದನು.

ಅಲ್ಲಿ ಅನೇಕ ಜಲಝುರಿಗಳೂ ಫಲವೃಕ್ಷಗಳೂ ತುಂಬಿರುತ್ತಿದ್ದವಲ್ಲದೆ, ಯಾರೋ ಮಹಾತ್ಮರು ಹಿಂದೆ ಆಶ್ರಮಗಳನ್ನು ಕಟ್ಟಿಕೊಂಡಿದ್ದಂತೆ ತೋರುತ್ತಿತ್ತು. ಅಲ್ಲಿ ಕ್ರೂರಪ್ರಾಣಿಗಳಾವುವೂ ಇರಲಿಲ್ಲ. ಅಲ್ಲಿ ಸಮೃದ್ಧವಾಗಿದ್ದ ಫಲವೃಕ್ಷಗಳ ಆಶ್ರಯದಿಂದಲೇ ತಪಸ್ವಿಗಳು ತಮ್ಮ ಜೀವನವನ್ನು ಸುಲಭವಾಗಿ ನಡೆಸಬಹುದಾಗಿತ್ತು. ಆದ್ದರಿಂದ ಶುದ್ಧವೂ ಸಮವೂ ಜಲ–ಫಲ ಸೌಕರ್ಯದಿಂದ ಕೂಡಿದುದೂ ತೃಣಯುಕ್ತವೂ ಆದ ಒಂದು ಸ್ಥಳದಲ್ಲಿ ಶಿಖಿಧ್ವಜನೇ ಸ್ವತಃ ಒಂದು ಪರ್ಣಕುಟೀರವನ್ನು ಕಟ್ಟಿಕೊಂಡನು. ಅಲ್ಲಿ ಬಹಳಕಾಲದ ಹಿಂದಿದ್ದ ಆಶ್ರಮವಾಸಿಗಳು ಬಿಟ್ಟು ಹೋಗಿದ್ದ ಬಿದಿರಿನ ದಂಡ, ಫಲಾಹಾರಪಾತ್ರ, ಅರ್ಘ್ಯಪಾತ್ರ, ಪುಷ್ಪಪಾತ್ರ, ಜಪಮಾಲಾ, ಕಮಂಡಲು, ಶೀತನಿವಾರಣಾರ್ಥವಾದ ವಸ್ತ್ರ, ಕೃಷ್ಣಾಜಿನ, ಆಸನ,

ಇವೇ ಮೊದಲಾದ ತಾಪಸಕರ್ಮಕ್ಕೆ ಅವಶ್ಯವಾದ ಪದಾರ್ಥಗಳನ್ನು ಸಂಗ್ರಹಮಾಡಿ, ತಪಸ್ಸು ಮಾಡುವುದಕ್ಕೆ ಪ್ರಾರಂಭಿಸಿದನು.

ಅವನು ಬೆಳಗಿನ ಜಾವ ಮುಂಚೆ ಎದ್ದು, ಶೌಚ, ಸ್ನಾನ, ಸಂಧ್ಯಾ, ಜಪಾದಿಗಳನ್ನು ಮಾಡುತ್ತಿದ್ದನು. ಅನಂತರ ಎರಡನೇ ಪ್ರಹರದಲ್ಲಿ ಅವನು ಪುಷ್ಪಸಂಗ್ರಹ ಮಾಡಿ ತಂದು, ಸ್ನಾನ ದೇವಪೂಜನಗಳನ್ನು ಮಾಡುತ್ತಿದ್ದನು. ಮೂರನೇ ಪ್ರಹರದಲ್ಲಿ ವನದಿಂದ ಗೆಡ್ಡೆಗೆಣಸು ಹಣ್ಣುಗಳನ್ನು ತಂದು ಆಹಾರ ಮಾಡುತ್ತಿದ್ದನು. ನಾಲ್ಕನೇ ಪ್ರಹರದಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಪಡೆದು ಸಾಯಂಸಂಧ್ಯೆಯನ್ನು ಮಾಡುತ್ತಿದ್ದನು. ಅನಂತರ ರಾತ್ರಿಯಲ್ಲಿ ಬಹಳ ಹೊತ್ತು ಅವನು ಜಪಮಾಡುತ್ತಿದ್ದನು. ಹೀಗೆ ಮಾಳವೇಶ್ವರನಾದ ಶಿಖಿಧ್ವಜನು, ತಾನು ಹಿಂದೆ ಅನುಭವಿಸಿದ್ದ ಯಾವ ರಾಜಭೋಗವನ್ನೂ ಸ್ಮರಣೆಗೆ ತಂದುಕೊಳ್ಳದೆ, ಅನೇಕ ದಿವಸಗಳು ಆನಂದದಿಂದ ತಪಸ್ಸನ್ನು ಮಾಡಿಕೊಂಡಿದ್ದನು.

ಭರ್ತೃಹರಿ ಮಹರ್ಷಿಯು ಹೇಳಿರುವಂತೆ :

ಭಕ್ತಿರ್ಭವೇ ಮರಣಜನ್ಮಭಯಂ ಹೃದಿಸ್ಥಂ ।
ಸ್ನೇಹೋ ನ ಬಂಧುಷು ನ ಮನ್ಮಥಜಾ ವಿಕಾರಾಃ ॥

ಸಂಸರ್ಗದೋಷರಹಿತಾ ವಿಜನಾ ವನಾಂತಾ ।
ವೈರಾಗ್ಯಮಸ್ತಿ ಕಿಮತಃ ಪರಮಾರ್ಥನೀಯಮ್ ॥

ಶಿವನಲ್ಲಿ ಭಕ್ತಿಯೂ ಮನಸ್ಸಿನಲ್ಲಿ ಜನನ ಮರಣಗಳ ವಿಷಯಕ್ಕೆ ತೀವ್ರವಾದ ಭಯವೂ ಬಂಧುಬಾಂಧವರಲ್ಲಿ ಸಿಕ್ಕಿಸುವ ಸ್ನೇಹವಿಲ್ಲದಿರುವಿಕೆಯೂ ಕಾಮವಿಕಾರ ರಾಹಿತ್ಯವೂ ಪ್ರಾಪಂಚಿಕ ಜನರ ಸಂಸರ್ಗದೋಷವಿಲ್ಲದ ನಿರ್ಜನವಾದ ಅರಣ್ಯದಲ್ಲಿ ತಪಸ್ಸುಮಾಡಿಕೊಂಡಿರುವ ವೈರಾಗ್ಯವೂ ದೃಢವಾಗಿದ್ದರೆ, ಇದಕ್ಕಿಂತಲೂ ಹೆಚ್ಚಿನ ಪರಮಾರ್ಥವು ಯಾವುದಿದೆ? ಇಷ್ಟೂ ಸಾಧನಗಳು ಆ ರಾಜನಲ್ಲಿದ್ದವು.

ಇತ್ತಕಡೆ, ಮಾಳವೇಶ್ವರನ ಅರಮನೆಯಲ್ಲಿ, ಶಿಖಿಧ್ವಜನು ಚೂಡಾಲೆಯನ್ನೂ ಸಮಸ್ತರಾಜ್ಯವನ್ನೂ ಬಿಟ್ಟು, ಹೊರಟ ರಾತ್ರಿ, ಚೂಡಾಲೆಯ ಸ್ಥಿತಿ ಯೇನಾಯಿತೆಂಬುದನ್ನು ವಿಚಾರ ಮಾಡೋಣ. ಮಹಾರಾಜನು ದೂರ ಹೊರಟು ಹೋಗಿರಲು ಚೂಡಾಲೆಯು ಮಧ್ಯರಾತ್ರಿಯಲ್ಲಿ ಏಕಾಏಕಿ ಭಯಭೀತಳಾಗಿ ಎದ್ದು ನೋಡಲಾಗಿ ಪತಿಯು ಮಲಗಿದ್ದ ಹಾಸಿಗೆಯು ಬರಿದಾಗಿದ್ದಿತು. ಅದನ್ನು ನೋಡಿ ಆಕೆಯ ಮನಸ್ಸೇ ಬರಿದಾದಂತೆ ಆಯಿತು. ಆ ಸಾಧ್ವಿಯು ಕ್ಷಣಕಾಲ ಖಿನ್ನಳೂ ಉದ್ವಿಗ್ನಳೂ ಆದಳು. ಆಕೆಯ ಹೃದಯವೇ ಹರಿದು ಕಿತ್ತುಹೋದಂತೆ ಅನ್ನಿಸಿತು.

ಸ್ವಲ್ಪ ಹೊತ್ತಿನಲ್ಲಿ ಆಕೆಯ ಮನಸ್ಸಿನಲ್ಲಿ ವಿಚಾರವು ಹೊಳೆಯತೊಡಗಿತು. "ನನ್ನ ಪ್ರಭುವು ಮೊದಲೇ ಔದಾಸೀನ್ಯದಿಂದ ಸೂಚಿಸಿದ್ದಂತೆ, ರಾಜ್ಯವನ್ನು ತ್ಯಾಗ ಮಾಡಿ ಅಡವಿಗಾಗಿ ಹೋಗಿರಬೇಕು. ನಾನಾದರೂ ಇಲ್ಲಿ ಒಬ್ಬಳೇ ಇದ್ದು ಏನು ಮಾಡಬೇಕು ? ನಾನೂ ಆತನಲ್ಲಿಗೇ ಹೋಗಿಬಿಡುತ್ತೇನೆ. ಸತಿಗೆ ಪತಿಯೇ ಗತಿಯೆಂದು ಶಾಸ್ತ್ರವೂ ಕೂಡಾ ಹೇಳುತ್ತದೆ. ಎಷ್ಟೆಷ್ಟು ವಿವೇಕವನ್ನು ಮನಸ್ಸಿಗೆ ತಂದುಕೊಂಡರೂ ಅದು ಕಡಿವಾಣವನ್ನು ಕಡಿದೊಗೆದು ಓಡುತ್ತಿರುವ ಕುದುರೆಯಂತೆ ಪತಿಯೆಡೆಗೇ ಕಾತರದಿಂದ ಧಾವಿಸುತ್ತಿರುವ ಮರ್ಮವಾದರೂ ಏನು ? ಅದಕ್ಕೆ ಸಹಜವೂ ಪ್ರಬಲವೂ ಆದ ಕಾರಣವು ಹೀಗಿರಬಹುದೆ ?

ಭಾವಗೀತೆ

ಬಹುರೂಪದಲಿ ಜನಿಸಿ ತಾ ಬಯಸಿ ಪರಶಿವನು,
ವಹಿಸಿದನು ಪಾರ್ವತಿಯನರ್ಧದೇಹದೆ ಪ್ರಿಯನು ;

ಒಡೆಯನೊಂದಿಡಿಯಿರ್ದ ತತ್ತ್ವವೆರಡಾದ ಭಾಸ
ಜಡಚೇತನಾ ಪ್ರಕೃತಿಪುರುಷಾರ್ಧನಾರೀಶ,

ಕಮಲೆಯನು ವಕ್ಷದಲಿ ಕಮಲೇಶ ಧರಿಸಿದನು ;
ಕಮಲಭವ ವಾಣಿಯನು ಮೋಹದಲಿ ವರಿಸಿದನು.

ರುದ್ರನಿಗೆ ರುದ್ರಾಣಿ, ಇಂದ್ರನಿಗೆ ಇಂದ್ರಾಣಿ,
ಭದ್ರದೇವತೆಗಳಲಿ ಶಕ್ತಿಯಿಲ್ಲದೆ ಶಕ್ತನಹನೆ ?

ಶಕ್ತಿಯಿಲ್ಲದ ಶಿವನ ಶವದ ಮೇಲೇರಿ, ಘನ
ಶಕ್ತಿ ತಾ ನರ್ತಿಪಳು ಪಂಚಮುಖಿ ಪ್ರೇತವೆನೆ.

ಭಕ್ತಿದಾತೆಯು ಶಕ್ತಿ ; ಭುಕ್ತಿದಾತೆಯು ಶಕ್ತಿ ;
ಮುಕ್ತಿದಾತೆಯು ಶಕ್ತಿ ; ವಿಶ್ವಮಾತೆಯು ಶಕ್ತಿ.

ಆದೊಡಾ ಶಿವನಿಂದಲೇ ಶಕ್ತಿ ಶಿವೆಯಹಳು ;
ಆದಿಶಿವನಿಲ್ಲದಲಶಿವೆ ಶಕ್ತಿ ಅಶುಭೆಯಹಳು.

ಸಕಲ ಜೀವರೊಳಿರುವ ಶಿವಶಕ್ತಿಯರು ಮನದೆ
ಸುಖದ ಮೋಹವ ಹಚ್ಚಿ ಹೆಣ್ಣುಗಂಡನು ಬಿಡದೆ,

ಮದವೆರೆಸಿ ರಾಗದಿಂ ಭೋಗದಿಂದೆಡೆಬಿಡದೆ
ಮುದದೆ ತಾವನ್ಯೋನ್ಯ ಬಳಸುತಲೆ ಬಳಿವಿಡದೆ,

ಸೆಳೆಯುವರು ನೆಚ್ಚುತಲೆ ಮೆಚ್ಚುತಲೆ ಮುದ್ದಿಸುತೆ
ಬಲಿದ ಪ್ರೇಮದಿ ಶಕ್ತಿ ಶಿವರೊತ್ತುತೊಂದಾಗುತೆ.

ಜಡಸೃಷ್ಟಿಯೊಳು ಸಹಿತಲೀ ವಿಲಾಸವೆ ಬೆಳೆದು
ಬಿಡದೆ ರವಿಚಂದ್ರಮರು ಕುಜಶುಕ್ರ ಮೊದಲಾದ

ಗ್ರಹತಾರೆಗಳು, ಮಿಂಚಿನಲಿ ಹೊಳೆವ ಋಣಧನದೆ
ಅಹಹ! ಸೆಳೆಯುತಿವೆ ತಾವ್ ಸೂಚಿಗಲ್ಲಿನ ತೆರದೆ

ಗಗನ ಭೂಮಿಯು ಮುಸುಕಿ ತಬ್ಬುತಿದೆ ಸುತ್ತಲಿಂದೆ
ಮಿಗಿಲು ಮರ್ತ್ಯವ ಮೆಚ್ಚಿ ಸ್ವರ್ಗ ಮೈತಳೆವುದಿಂದೆ

ತೊರೆಗಳುರೆ ನದಿಗಳಿಗೆ ನದಿಗಳಾ ಸಾಗರಕೆ
ಭರದಿ ಸೇರುತಿವೆ ಸತಿಯರೊಲು ಪತಿರತಿಯ ಭರಕೆ.

ಇಂದ್ರಿಯಂಗಳ ಸೆಳೆಯುತಿದೆ ವಿಷಯಮೋಹವದೇ
ಇಂದ್ರಶಕ್ತಿಯು ಹೆಣ್ಣುಗಂಡುಗಳ ಸೆಳೆಯುತಿದೆ.

ಪ್ರತಿಯೊಂದು ಗುಣಕರ್ಮಧರ್ಮಕ್ಕು ಸೃಷ್ಟಿಯಲಿ
ವಿತತವಾದುದ್ದೇಶ ಸಾಫಲ್ಯವಿದೆ ಪ್ರಬಲ.

ಎರಡೊಂದಗೈಯುವಾ ಅದ್ವೈತ ಶಿವಶಕ್ತಿ
ಇರದೆನ್ನ ಮನವ ಸಹ ಸೆಳೆದಿಹುದು ಪತಿಭಕ್ತಿ

ದೇಹ ತಾನಲ್ಲವೆಂದಿರುವ ಮುಕ್ತಾತ್ಮನಿಗು
ದೇಹಧರ್ಮಗಳಿರ್ಕುಮಾ ಪ್ರಾಣವಿಹ ವರೆಗು

ರಾಜಧರ್ಮವು ಮೇಣ್ ವಯೋಧರ್ಮಗಳಿಹವಲಾ!
ರಾಜರಿಗೆ ರಾಜ್ಯಪಾಲನೆಯೆ ಗುರುಧರ್ಮವಲಾ!

ಆ ಸಾಧ್ವಿಯು ತನ್ನೊಳಗೇ ಹೀಗೆ ವಿಚಾರಮಾಡಿ ಪತಿಯನ್ನು ಜೊತೆಗೂಡಲು ತನ್ನ ಸಿದ್ಧಿಯ ಮಹಿಮೆಯಿಂದ ಸೂಕ್ಷ್ಮರೂಪವನ್ನು ಪಡೆದು ಗವಾಕ್ಷಿಯ ದ್ವಾರದಿಂದ ಹೊರಹೊರಟು ಆಕಾಶದಲ್ಲಿ ತೇಲಿಹೋದಳು. ಆ ಯೋಗಿನಿಯು ಆಕಾಶಮಾರ್ಗದಲ್ಲಿ ಚಲಿಸುತ್ತಾ ಸ್ವಲ್ಪ ಹೊತ್ತಿನಲ್ಲಿ, ಒಂದು ಕೈಯಿಂದ ಕತ್ತಿಯನ್ನು ಹಿಡಿದು ಉನ್ಮತ್ತನಂತೆ ಹೋಗುತ್ತಿದ್ದ ತನ್ನ ದೇವನನ್ನು ಕಂಡಳು. ಆಗ ಆಕೆಯು ಆಕಾಶದಲ್ಲಿದ್ದೇ ತನ್ನ ಪತಿಯ ಭವಿಷ್ಯವೇನಿರಬಹುದೆಂದು ಚಿಂತಿಸಿದಳು. ಅವನು ಮುಂದೆ ಯಾವ ಸ್ಥಳದಲ್ಲಿ ಯಾವ ಪ್ರಕಾರದಿಂದ ಯಾವ ಯಾವ ಕರ್ಮವನ್ನು ಎಷ್ಟೆಷ್ಟು ಮಾಡಿದ ಅನಂತರ ಎಷ್ಟು ಕಾಲದ ಮೇಲೆ ಅವನಿಗೆ ಶಾಂತಿಯು ಲಭಿಸುವುದು ಸಾಧ್ಯವಿದೆ? — ಎನ್ನುವುದನ್ನು ಆಕೆ ನಿರೀಕ್ಷಿಸಿದಳು. ಆಗ ಆಕೆಯು ಸಿದ್ಧಿಯ ಸಾಮರ್ಥ್ಯದಿಂದ ತನ್ನ ಭರ್ತನ ನಿಶ್ಚಿತವಾದ ಭವಿತವ್ಯವನ್ನು ಹೇಗಿದೆಯೋ ಹಾಗೆ ಮನಗಂಡಳು. ಆ ನಿಯತಿಗೆ ಅನುಸಾರವಾಗಿಯೇ ತಾನೂ ನಡೆದುಕೊಳ್ಳಬೇಕೆಂದು

ಆ ವಿವೇಕಿಯು ನಿಶ್ಚಯಿಸಿ ಮನಸ್ಸನ್ನು ಸಮಾಧಾನಮಾಡಿಕೊಂಡು ಅಲ್ಲಿಂದಲೇ ಹಿಂದಿರುಗಿದಳು. ಮೀರಲಾರದ ಅಥವಾ ಮೀರಬಾರದ ನಿಯತಿಯನ್ನು ಪಾಲಿಸುವ ಒಂದೇ ನಿಶ್ಚಯದಿಂದ ಅಂತಃಪುರಕ್ಕೆ ಮರಳಿ ಬಂದು ಸ್ವಸ್ಥವಾಗಿ ಮಲಗಿದಳು.

ಮರುದಿನ, ಕಾರಣಾಂತರದಿಂದ ಒಂದು ಮಹತ್ಕಾರ್ಯಕ್ಕಾಗಿ ರಾಜನು ದೇಶಾಂತರ ಹೋಗಿದ್ದಾನೆಂದು ಚೂಡಾಲೆಯು ರಾಜ್ಯದಲ್ಲಿ ಪ್ರಚಾರಮಾಡಿ, ಪ್ರಜೆಗಳಿಗೆ ಆಶ್ವಾಸನೆಕೊಟ್ಟು, ಮಂತ್ರಿಗಳ ಸಹಾಯದಿಂದ ದಕ್ಷತೆಯಿಂದಲೂ ಸಮದೃಷ್ಟಿಯಿಂದಲೂ ತಾನೇ ರಾಜ್ಯಭಾರ ಮಾಡುವುದಕ್ಕೆ ತೊಡಗಿದಳು.

ಹೀಗಿರಲು, ಸ್ವರಾಜ್ಯದಲ್ಲಿರುವ ಚೂಡಾಲೆಗೂ ಅರಣ್ಯದ ತಪಸ್ಸಾಮ್ರಾಜ್ಯದಲ್ಲಿರುವ ಶಿಖಿಧ್ವಜನಿಗೂ ಹದಿನೆಂಟು ವರ್ಷಗಳು ಕಳೆದವು. ಮಹಾಪರ್ವತದ ಸಮೀಪದಲ್ಲಿ ಅರಣ್ಯಮಧ್ಯ ಪರ್ಣಶಾಲೆಯಲ್ಲಿ ಕೇವಲ ಫಲಾಹಾರದಿಂದ ತಪಸ್ಸು ಮಾಡಿಕೊಂಡಿದ್ದ ಶಿಖಿಧ್ವಜನ ಶರೀರವು ಮುಪ್ಪಿನಿಂದ ಜರ್ಜರಿತವಾಯಿತು. ಇದನ್ನು ಚೂಡಾಲೆಯು ತನ್ನ ಜ್ಞಾನದೃಷ್ಟಿಯಿಂದ ತಿಳಿದು ಅವನ ಸಮೀಪಕ್ಕೆ ಹೋಗಲು ಅದು ಸರಿಯಾದ ಸಮಯವೆಂದು ನಿಶ್ಚಯಿಸಿ ಒಂದು ರಾತ್ರಿ ಅರಮನೆಯಿಂದ ಹೊರಟಳು; ಆಕಾಶ ಮಾರ್ಗದಲ್ಲಿ ಬಂದಳು. ಪಕ್ಷಿಯಂತೆ ವಾಯುಪಥದಲ್ಲಿ ವೇಗದಿಂದ ಚಲಿಸಿದಳು. ಅವಳ ಮಾರ್ಗದಲ್ಲಿ ಅನೇಕ ಸಿದ್ಧರನ್ನು ನೋಡಿದಳು. ಅವರ ಶರೀರದ ಮೇಲೆ ಬೀಸಿ ಬಂದ ಸುಗಂಧವಾಯುವಿನ ಸುಖಸ್ಪರ್ಶವನ್ನೂ ಅನುಭವಿಸಿದಳು. ಚಂದ್ರನೆಂಬ ಅಮೃತಸಾಗರದ ಪತಂಗ ಪರಂಪರೆಯಂತೆ ಸುಖಾವಹವಾದ ಚಂದನಗಂಧದ ಸುಖವನ್ನು ಭೋಗಿಸಿದಳು. ಆಕೆಯು ಮೇಘರಾಶಿಗಳ ಮೇಲೆ ಹಾರಿಹೋಗುತ್ತಿರುವಾಗ ಮಿಂಚಿನ ಕಾಮಿನಿಯರ ಮಂಚದಲ್ಲಿ ಮಲಗಿದಂತಿರುವ ವಿಲಾಸೀ ಮೇಘರಾಜಿಗಳನ್ನು ನೋಡಿ ಮತ್ಸರಗೊಂಡಳು. ಆಕೆಯು ತನ್ನಲ್ಲಿ ತಾನು ಹೀಗೆ ಆಲೋಚಿಸಿದಳು : "ಆಹಾ! ಇದೇನು ಚಮತ್ಕಾರ! ದೇಹಧಾರಿಗಳ ಸ್ವಭಾವ ಎಂದೂ ಶಾಂತವಾಗುವುದಿಲ್ಲ. ಒಂದನ್ನೊಂದು ಒಂದು ನಿಮಿಷವೂ ಬಿಟ್ಟಿರಲಾರದೇ ಕೂಡಿಕೊಂಡಿರುವ ಜೋಡಿಗಳನ್ನು ನೋಡಿ ನನ್ನ ಮನಸ್ಸು ಕೂಡ ಉತ್ಕಂಠಿತವಾಗುವದಲ್ಲ! ನನ್ನ ಮನಸ್ಸು ವಿವೇಕ ಸಂಪನ್ನವಾದುದಾದರೂ ಸಹ, ಸಿಂಹಸ್ಕಂಧನಾದ ಪ್ರೇಮಪೂರ್ಣ ಕಾಂತನನ್ನು ಎಷ್ಟು ಬೇಗ ಕಂಡೇನೋ ಎಂದು ಹಂಬಲಿಸುತ್ತದೆಯಲ್ಲ! ಕುಸುಮ ಮಂಜರಿಯ ಸಮೂಹದಿಂದ ಶೋಭಿಸುತ್ತಿರುವ ಆ ಹೂಬಳ್ಳಿಯು ಆ ವೃಕ್ಷರೂಪಿಯಾದ ತನ್ನ ಪತಿಯನ್ನು ನಿಮಿಷವೂ ಸಹ ಬಿಟ್ಟಿರಲಾರದೆ ಗಾಢಾಲಿಂಗನದಿಂದ ಬಳಸಿಕೊಂಡಿರುವುದನ್ನು ನೋಡಿ ನನ್ನ ತನುವೂ ಪುಳಕಿತವಾಗುತ್ತಿದೆ.

ಇದೇನಾಶ್ಚರ್ಯ! ಎಲೈ ಕಪಿಮನಸ್ಸೇ! ನೀನು ವಿವೇಕದ ವಶವಾಗಿದ್ದರೂ ಧರ್ಮದ ನಿಯಮಿತ ಮೇರೆಯೊಳಗೇ ತಾಂಡವನೃತ್ಯ ಮಾಡುತ್ತಿದ್ದೀಯಲ್ಲ! ಆಕಾಶಸದೃಶವಾದ ನಿನ್ನ ನಿರ್ಮಲ ಸಾಕ್ಷೀಭಾವದ ಪ್ರಜ್ಞೆಯು ಈಗ ಎಲ್ಲಿ ಅಡಗಿ ಹೋಯಿತು? ಆಹಾ! ಎಲ್ಲಿಯೂ ಅಡಗಿಲ್ಲ; ಅಡಗುವುದೂ ಅಲ್ಲ. ಅಬಾಧಿತವಾದ ಆ ಅರಿವು ಈ ಶಂಕೆಯ ಮರೆಯಲ್ಲಿಯೇ ಬಿಡದೆ, ಅಖಂಡವಾಗಿ ನಂದಾದೀಪದಂತೆ ಬೆಳಗುತ್ತಿದೆ. ಆದರೆ ಜೀವಂತ ವ್ಯಕ್ತಿಯಲ್ಲಿ ಅಮರವಾದ ಆ ದೇವತ್ವದ ಆಧಾರದಿಂದ ಜೀವನಸ್ವಭಾವವೂ ತರಂಗಿತವಾದ ಜಲದಂತೆ ತೋರಿಕೊಳ್ಳುವುದು ಸ್ವಭಾವವಾಗಿದೆ. ಇದು ತತ್ತ್ವಜ್ಞಾನವನ್ನೇನೂ ಬಾಧಿಸಲಾರದು. ಸಂಯಮಶೀಲವಾದ ಪರಿಶುದ್ಧ ಮನಸ್ಸೇ! ಸಮಾನ ಮನೋವೃತ್ತಿಯುಳ್ಳ ಸುಜ್ಞರುಭಯರ ಹೃತ್ಪೂರ್ವಕವಾದ ಸಮಾಗಮದಿಂದಾಗುವ ಸುಖವು ಸಕಲ ಸುಖಗಳಲ್ಲಿಯೂ ಶ್ರೇಷ್ಠವಾದುದು. ಇಂಥಾ ಅಭೇದಭಾವದ ಏಕಾಂತ ಸುಖವು ಬೇಕೆಂದು ಬಹು ದಿನಗಳ ನಿನ್ನ ಬಯಕೆಯಿರುವುದರಿಂದ ಪತಿಯ ಬುದ್ಧಿಯನ್ನು ಉಪಾಯದಿಂದ ತತ್ತ್ವಜ್ಞಾನಸಂಪನ್ನವನ್ನಾಗಿ ಮಾಡಿ ಉಳಿದಿರುವ ಪ್ರಾರಬ್ಧ ಭೋಗವನ್ನು ಅನುಭವಿಸುವುದಕ್ಕಾಗಿ ಆ ಮಹಾಭಾಗನೊಡನೆ ನಿನ್ನನ್ನು ಸಮಾಗಮ ಮಾಡಿಸಿಕೊಡುತ್ತೇನೆ. ಸಂಕಲ್ಪವಿಲ್ಲದೆ, ಸ್ವಧರ್ಮವಾಗಿ ಬಂದಿರುವ ರಾಜ್ಯಭಾರವನ್ನು ಕರ್ತವ್ಯದೃಷ್ಟಿಯಿಂದ ನಡೆಸುವುದಕ್ಕೆ ಪತಿಯನ್ನು ನಿಯೋಜಿಸುತ್ತೇನೆ. ಅಂಥಾ ಆತ್ಮಾರಾಮನಾದ ಭರ್ತನೊಡನೆ ಹೇ ಚಿತ್ತ! ನೀನು ಉಳಿದ ಜೀವಿಕೆಯನ್ನು ಪೂರ್ಣಾನಂದದಿಂದ ಕಳೆಯಬಹುದು.''

ರಾಗ : ಶುದ್ಧ ಸಹಡಿ ತಾಳ :

ಸಾಕ್ಷೀಭಾವ ಜೀವಿತೇ ಮನ ॥ ಧ್ರು. ॥

ಪರಮಾನಂದಿತೇ ಮನ । ಹಾ ।
ಆತ್ಮಭಾವ ಸುಸ್ಥಿತೇ ಮನ ॥ ೧ ॥

ಕುಣಿಯಾ ಸ್ವೈರಿಣೀ ಮನ ।
ಧರ್ಮಕಾಮದಲ್ಲಿಯೇ ಘನ ॥ ೨ ॥

ರಸಿಕೇ ಪ್ರೇಮಸಾಗರೇ ।
ಯೋಗಭೋಗ ಸಾಮ್ಯತಾ ಪರೇ ॥ ೩ ॥

ಜಲಧಿ ಕ್ಷುಬ್ಧವಾದರೂ
ಧೀರ ನೋಳ್ಪ ನೀರನಾದರೂ ॥ ೪ ॥

ನೆನೆಯಾ ಭಾವನಾ ಮುಖಿ ।
ತುರ್ಯಭಾವ ಸಾಧಿತೇ ಸುಖಿ ॥ ೫ ॥

ಚೂಡಾಲೆಯು ಹೀಗೆ ತನ್ನಲ್ಲಿಯೇ ತಾನು ಯೋಚಿಸಿ, ಆಕಾಶದಲ್ಲಿಯೇ ಅದೃಶ್ಯಳಾಗಿದ್ದು, ವಾಯುವಿನ ಲಹರಿಯಂತೆ ವನದಲ್ಲಿ ಸೇರಿದಳು. ಆ ವನ ಮಧ್ಯದಲ್ಲಿ ಪರ್ಣಕುಟಿಯಲ್ಲಿದ್ದ ತನ್ನ ಪತಿಯನ್ನು ನೋಡಿದಳು. ಪೂರ್ವದಲ್ಲಿ ಹಾರಕೇಯೂರಾದಿಗಳಿಂದ ಭೂಷಿತವಾಗಿದ್ದ ಅವನ ಬಂಗಾರದ ರಸ ಚಿಮ್ಮು ವಂತಿದ್ದ ಕಾಂತಿಯುಳ್ಳ ಕಾಯವು ಈಗ ತಪಸ್ಸಿನಿಂದ ಕೃಶವೂ ಕಪ್ಪೂ ಜೀರ್ಣವೂ ಆಗಿರುವುದನ್ನು ಶಾಂತಮನಸ್ಸಿನಿಂದ ನೋಡಿದಳು. ಕೌಪೀನ ಮಾತ್ರ ಧಾರಿಯಾಗಿದ್ದ ಏಕಾಂತವಾಸಿಯಾದ ರಾಜನನ್ನು ನೋಡಿ ಅದೃಶ್ಯ ರೂಪದಿಂದ ಚೂಡಾಲೆಯು ತನ್ನಲ್ಲಿಯೇ ತಾನು "ಹರಹರ! ಆತ್ಮಜ್ಞಾನ ವಿಲ್ಲದಿರುವುದೇ ಮಹಾ ಮೂರ್ಖತನವಾಗಿದ್ದು ಸಮಸ್ತ ಸಂಕಷ್ಟಗಳಿಗೂ ಮೂಲವಾಗಿದೆ. ಅದರ ಪ್ರಸಾದದಿಂದಲೇ ಇಂಥಾ ದುರ್ದಶೆಯುಂಟಾಗುತ್ತದೆ. ಮಹದೈಶ್ವರ್ಯ – ವೈಭವಸಂಪನ್ನನಾದ ರಾಜನಾಗಿದ್ದರೂ ನನ್ನ ಪ್ರಿಯ ಪತಿಯು ಘೋರವಾದ ಅಜ್ಞಾನದಿಂದ ಈ ದುರ್ದಶೆಯನ್ನು ಪಡೆದಿದ್ದಾನೆ. ಇರಲಿ; ಈಗ ನಾನು ಇವತ್ತೇ ಈತನನ್ನು ಜ್ಞಾನಸಂಪನ್ನನನ್ನಾಗಿ ಮಾಡುತ್ತೇನೆ. ಇದರಿಂದ ಈತನು ಭೋಗ ಮತ್ತು ಮೋಕ್ಷ ಈ ಎರಡು ಸಂಪತ್ತನ್ನೂ ಏಕಕಾಲದಲ್ಲಿ ಅನುಭವಿಸುವಂತೆ ಮಾಡುತ್ತೇನೆ. ಆದರೆ, ನನ್ನನ್ನು ಈತನು ಕೇವಲ ಸಾಮಾನ್ಯ ಅಜ್ಞಸ್ತ್ರೀಯಳೆಂದು ತಿಳಿದಿರುವುದರಿಂದ, ಈ ಹಿಂದಿನ ಹೆಂಡತಿಯ ರೂಪದಿಂದಲೇ ಈತನಿಗೆ ಕಾಣಿಸಿಕೊಂಡು ಎಂಥಾ ಗಂಭೀರವಾದ ತತ್ತ್ವಜ್ಞಾನವನ್ನು ಬೋಧಿಸಿದರೂ ಕೂಡ ಅದರಲ್ಲಿ ವಿಶ್ವಾಸವುಂಟಾಗುವುದಿಲ್ಲ. ಆದ್ದರಿಂದ ಈ ರೂಪವನ್ನು ಬಿಟ್ಟು ತಾಪಸರೂಪದಿಂದ ತೋರಿಕೊಂಡು ಶ್ರದ್ಧಾದರಗಳನ್ನು ಹುಟ್ಟಿಸಿ ಕ್ಷಣಕಾಲದಲ್ಲಿ ಬೋಧೆಮಾಡುತ್ತೇನೆ. ಹದಿನೆಂಟು ವರ್ಷಗಳ ದೀರ್ಘ ಕಾಲದ ತಪಸ್ಸಿನಿಂದ ಈ ಪುಣ್ಯಾತ್ಮನ ರಾಗದ್ವೇಷಾದಿ ಮನೋದೋಷಗಳೆಲ್ಲಾ ಕ್ಷೀಣವಾಗಿವೆ. ಆದ್ದ ರಿಂದ ವಾಸ್ತವವಾಗಿ ಈಗ ಇವನ ಶುದ್ಧಚಿತ್ತದಲ್ಲಿ ಆತ್ಮತತ್ತ್ವವು ಅನಾಯಾಸವಾಗಿ ಪ್ರತಿಬಿಂಬಿತವಾಗುವದರಲ್ಲಿ ಯಾವ ಸಂಶಯವೂ ಇಲ್ಲ."

ಹೀಗೆ ಚೂಡಾಲೆಯು ತನ್ನಲ್ಲಿಯೇ ತಾನು ಬಹಳ ವಿಚಾರವಾಡಿ ಸ್ವಲ್ಪ ಧ್ಯಾನ ಮಾಡುವದರಿಂದಲೇ ಬ್ರಾಹ್ಮಣಕುಮಾರನಾದಳು. ಮಂದಹಾಸದಿಂದ ಮನೋಹರ ಮುಖವುಳ್ಳ ಅ ತೇಜಸ್ವೀ ಕುಮಾರನು ಆ ರಾಜನೆದುರು ಬರು ತ್ತಿದ್ದನು. ರಾಜನೂ ಕೂಡ ತನ್ನ ಸಮ್ಮುಖದಲ್ಲಿ ಬರುತ್ತಿರುವ ಆ ಮಹಾತ್ಮ ನನ್ನು ಕಂಡು ಚಕಿತನಾದನು. ಅವನು ಬೇರೊಂದು ವನದಿಂದ ಬರುತ್ತಿರುವ ಸಾಕ್ಷಾತ್ ತಪೋಮೂರ್ತಿಯಂತೆ ಕಂಡನು. ಅವನ ಮೈ ಕಾಂತಿಯು ಸುವರ್ಣ ರಸದಂತಿತ್ತು. ಮುತ್ತಿನ ಹಾರವನ್ನೂ ಶುಭ್ರವಾದ ಯಜ್ಞೋಪವೀತವನ್ನೂ ಎರಡು ಶುಕ್ಲವಸ್ತ್ರಗಳನ್ನೂ ಧರಿಸಿ ಆ ಸುಂದರ ವಟುವು ಕೈಯಲ್ಲಿ ಕಮಂಡಲು

ವನ್ನು ಹಿಡಿದು ಶೋಭಿಸುತ್ತಿದ್ದನು. ಅವನ ತಲೆಯು ಕೇಶದಿಂದ ತುಂಬಿತ್ತು; ಕಿವಿಗಳು ಕುಂಡಲಗಳಿಂದ ಭೂಷಿತವಾಗಿದ್ದವು. ವಿಶಾಲಫಾಲದಲ್ಲಿ ಶುಭ್ರವಾದ ಭಸ್ಮದ ತ್ರಿಪುಂಡ್ರವನ್ನು ಧರಿಸಿದ್ದನು. ಅವನ ಶರೀರವು ಹೆಚ್ಚು ಎತ್ತರವಿಲ್ಲದೆ, ಸುಂದರ ವಾಗಿದ್ದು, ತನ್ನ ಅಂಗಕಾಂತಿಯಿಂದ ಸುತ್ತಲ ಪ್ರದೇಶವನ್ನು ಉದಯಸೂರ್ಯ ನಂತೆ ಪ್ರಕಾಶಪಡಿಸುತ್ತಿದ್ದಿತು. ಅವನು ಸರ್ವೇಂದ್ರಿಯಗಳನ್ನೂ ಜಯಿಸಿದಂತಿದ್ದನು. ಇಂಥಾ ಅಲೌಕಿಕ ಬ್ರಾಹ್ಮಣಕುಮಾರನನ್ನು ನೋಡಿ ಶಿಖಿಧ್ವಜನು, ತನ್ನ ಪುಣ್ಯ ವಿಶೇಷದಿಂದ ಯಾವನೋ ದೇವಕುಮಾರನೇ ಬಂದಿದ್ದಾನೆಂದು ಭಾವಿಸಿ, ಥಿಗ್ಗನೆದ್ದು ತನ್ನ ಪಾದುಕೆಗಳನ್ನು ತೆಗೆದಿಟ್ಟು, ಗೌರವದಿಂದ ಮುಂದುವರಿದು, ಸ್ವಲ್ಪ ದೂರ ಎದುರಾಗಿ ಹೋಗಿ ಸಂಭ್ರಮದಿಂದ ಸ್ವಾಗತ ಮಾಡಿದನು.

"ಹೇ ದೇವಪುತ್ರ! ನಿನಗೆ ನಮಸ್ಕಾರ. ದಯಮಾಡಿ ಈ ಆಸನದ ಮೇಲೆ ಕುಳಿತುಕೊಳ್ಳಬೇಕು."

ಹೀಗೆ ಹೇಳಿ, ಶಿಖಿಧ್ವಜನು ಅವನಿಗೆ ಆಸನವನ್ನು ಕೊಟ್ಟು ಅವನ ಕೈಗಳಲ್ಲಿ ಪುಷ್ಪಾಂಜಲಿಯನ್ನು ಅರ್ಪಣಮಾಡಿದನು.

ಆಗ ಆ ದೇವಪುತ್ರನು "ಎಲೈ ರಾಜರ್ಷಿಯೇ ನಿನಗೆ ನಮಸ್ಕಾರ" ಎಂದು ಹೇಳಿ ಪುಷ್ಪಗಳನ್ನು ಸ್ವೀಕರಿಸಿ ಆಸನದ ಮೇಲೆ ಕುಳಿತನು.

ಆಗ ಮಹಾರಾಜನು "ಹೇ ಮಹಾಭಾಗಾ ದೇವಪುತ್ರಾ! ತಾವು ಎಲ್ಲಿಂದ ದಯಮಾಡಿಸಿದಿರಿ? ನಿಮ್ಮ ದರ್ಶನವಾದ ಈ ದಿವಸವೇ ಸಫಲವಾದಂತೆ ನನಗೆ ಭಾಸವಾಗುತ್ತಿದೆ. ಈ ಅರ್ಘ್ಯ, ಈ ಪಾದ್ಯ, ಈ ಪುಷ್ಪಗಳನ್ನು ಸ್ವೀಕರಿಸಿ; ಈ ಹೂಮಾಲೆಯನ್ನೂ ತಮಗೆ ಒಪ್ಪಿಸಿದ್ದೇನೆ. ನಿಮಗೆ ಕಲ್ಯಾಣವಾಗಲಿ!" ಎಂದನು.

ಹೀಗೆ ಹೇಳಿ ರಾಜನು ಅರ್ಘ್ಯಪಾದ್ಯಾದಿ ಉಪಚಾರಗಳನ್ನು ಆ ವೇಷಧಾರಿ ಯಾದ ಭಾರ್ಯೆಗೆ ಅರ್ಪಣಮಾಡಿದನು.

ಆಗ ಚೂಡಾಲೆಯು "ಭೋ ರಾಜನ್! ನಾನು ಈ ಭೂತಲದ ಮೇಲೆ ಅನೇಕ ಪುಣ್ಯಕ್ಷೇತ್ರಗಳಲ್ಲಿ ಸಂಚಾರಮಾಡಿದ್ದೇನೆ. ಆದರೆ, ನಿನ್ನಿಂದ ಈ ದಿನ ಎಷ್ಟು ಪ್ರೇಮದಿಂದ ಪೂಜೆಯು ಸಂದಿತೋ ಅಷ್ಟು ಪ್ರೇಮಭಾವದಿಂದ ಬೇರೆ ಯಾರಿಂದಲೂ ಆಗಿರಲಿಲ್ಲ. ಈ ನಿನ್ನ ಪ್ರಶಂಸನೀಯವಾದ ವಿನಯದಿಂದ, ನೀನು ಖಂಡಿತ ಅಮರನಾಗುತ್ತಿ—ಎಂದು ನನಗನಿಸುತ್ತದೆ. ಎಲೈ ಸಾಧುವೇ! ನೀನು ಉದಾರ ಮನಸ್ಸಿನಿಂದ ಸರ್ವಸಂಕಲ್ಪಗಳ ತ್ಯಾಗಮಾಡಿ ನಿರ್ವಾಣಶಾಂತಿಯ ಪ್ರಾಪ್ತಿ ಗಾಗಿ ತಪಸ್ಸುಮಾಡುತ್ತಿರುವೆಯಲ್ಲವೆ? ಎಲೈ ಸೌಮ್ಯಪುರುಷಾ; ಮಹಾರಾಜ್ಯವನ್ನು

ತ್ಯಾಗಮಾಡಿ, ಈ ಅರಣ್ಯಮಧ್ಯದಲ್ಲಿ ತಪಸ್ಸುಮಾಡಿಕೊಂಡಿರುವ ನಿನ್ನ ಪ್ರಶಾಂತ ವ್ರತವೇ ಮಹಾ ಅಸಿಧಾರಾವ್ರತವಾಗಿದೆ !" ಎಂದಳು.

ಅದಕ್ಕೆ ಶಿಖಿಧ್ವಜನು, "ಹೇ ದೇವಾ ! ನೀನು ದಿವ್ಯದೃಷ್ಟಿಯಿಂದ ಎಲ್ಲವನ್ನೂ ಅರಿತಿರುವೆ. ಆದ್ದರಿಂದ ನನ್ನ ವೃತ್ತಾಂತವೆಲ್ಲಾ ನಿನಗೆ ತಿಳಿದೇ ಇದೆ. ಇದರಲ್ಲಿ ಹೊಸದೇನಿದೆ ? ನಿನ್ನ ಲೋಕೋತ್ತರವಾದ ಸೌಂದರ್ಯಸಂಪತ್ತಿನಿಂದಲೇ ನಿನ್ನ ದೇವತ್ವವು ವ್ಯಕ್ತವಾಗುತ್ತಿದೆ. ಚಂದ್ರಕಾಂತಿಯಿಂದಲೇ ನಿನ್ನ ಅವಯವಗಳನ್ನು ನಿರ್ಮಾಣಮಾಡಿದಂತಿದೆ. ಹೆಚ್ಚು ಹೇಳಿದ್ದರಿಂದೇನು ? ನಿನ್ನ ಪ್ರೇಮ ದೃಷ್ಟಿಯೂ ಅಂಗಕಾಂತಿಯೂ ಅಮೃತದ ಸೋನೆಯಂತೆ ನನ್ನನ್ನು ತೃಪ್ತಿಪಡಿಸುತ್ತಿವೆ. ಎಲೈ ಸುಂದರನೆ ! ನನ್ನ ರಾಜ್ಯವನ್ನು ರಕ್ಷಣಮಾಡುತ್ತಿರುವ ನನ್ನ ಪ್ರೇಮಪುತ್ಥಳಿಯಾದ ಚೂಡಾಲೆಯಂತೆ ನಿನ್ನ ರೂಪವಾದರೂ ನನಗೆ ತೋರುತ್ತಿದೆ. ಇಗೋ, ಈ ಹೂಮಾಲೆಯನ್ನು ದೇವಪೂಜೆಗಾಗಿ ರಚಿಸಿದ್ದೆ ; ಬಿಸಿಲಿಂದ ಬಳಲಬಹುದಾದ ಕುಸುಮದಂತಿರುವ ನಿನ್ನ ಕೋಮಲಕಾಯವನ್ನು ನಖಶಿಖಾಂತವಾಗಿ ಈ ಹೂಮಾಲೆಯಿಂದ ಮುಚ್ಚಿಕೋ. ನಿನ್ನ ಅಂಗಸಂಗದಿಂದ ಈ ಕುಸುಮವಾದರೂ ಕೃತಾರ್ಥವಾಗಲಿ ! ಅಭ್ಯಾಗತ ಜನರು ದೇವತೆಗಳಿಗಿಂತಲೂ ಪೂಜ್ಯರಿರುತ್ತಾರೆ. ನಿಜವಾಗಿಯೂ ತಾವು ಯಾರಿದ್ದೀರಿ ? ನನ್ನ ಮೇಲೆ ಕೃಪೆಮಾಡಿ ತಾವು ಯಾವ ಕಾರಣಕ್ಕಾಗಿ ಇಲ್ಲಿಗೆ ಬಿಜಯಮಾಡಿದ್ದೀರಿ ? ಎಂಬುದನ್ನು ನನಗೆ ಹೇಳಿ" ಎಂದನು.

ರಾಗ : ಮಿಶ್ರಗಾರಾ ತ್ರಿತಾಲ

ಶಿವಸಂಕಾಶನೋ । ವೈಕುಂಠವಾಸನೋ । ಏನೋ ! ಭಾನೋ ॥ ಧ್ರು ॥

ಈ ಪ್ರಭಾವ ದಿವ್ಯಭಾವ । ರಾಜಿಪುದೋ ದೇವನ ಸಮಭಾವ ॥
ಯೋಗೀಂದ್ರರ ಸಾಮ್ರಾಟನೋ । ಕಾರುಣ್ಯಪೂರ್ಣನೋ ॥ ಜೇನೋ ॥ ೧ ॥

ರಾಗ : ಗಾರಾ ತಾಲ : ದಾದರಾ

ಚಂದ್ರಚೂಡನೋ–
ಈ ಮುನಿವರ
ಮನೋಹರ
ಸುಧಾಕರ ॥ ಧ್ರು ॥

ದೇವಕುಮಾರನೆ । ಸ್ವಾಗತ ! ಮಹಿಮನೆ ।
ಪಾವನ ನೀನೆ । ಭುವನಪಾಲನೆ ॥ ೧ ॥

ಅದಕ್ಕೆ ಆ ಪ್ರಚ್ಛನ್ನ ವೇಷಧಾರಿಯಾದ ಚೂಡಾಲೆಯು ಹೇಳತೊಡಗಿದಳು :

"ರಾಜಾ ! ನಿನ್ನ ಪ್ರಶ್ನೆಗಳಿಗೆ ಉಚಿತವಾದ ಉತ್ತರವನ್ನು ಕೊಡುತ್ತೇನೆ ; ಕೇಳು. ಶುದ್ಧಾತ್ಮನಾದ ನಾರದ ಮಹರ್ಷಿಯು ಒಮ್ಮೆ ಗಂಗಾನದಿಯ

ರಣ್ಯತಟದಲ್ಲಿರುವ ಒಂದು ಗುಹೆಯಲ್ಲಿ ಕುಳಿತು ಧ್ಯಾನಮಾಡುತ್ತಿದ್ದನು. ಅವನು ಧ್ಯಾನವನ್ನು ವಿಸರ್ಜಿಸಿ ಹೊರಗೆ ಬಂದಾಗ ಇಂಪಾದ ಕಂಕಣಧ್ವನಿಯನ್ನು ಕೇಳಿ ಕುತೂಹಲದಿಂದ ಆ ದಿಶೆಯ ನದಿಯಲ್ಲಿ ನೋಡಿದನು. ಪುರುಷರಹಿತವಾದ ಆ ಸ್ಥಳದಲ್ಲಿ ರಂಭಾ, ತಿಲೋತ್ತಮಾ ಮೊದಲಾದ ದೇವಸುಂದರಿಯರು, ವಸ್ತ್ರಗಳನ್ನು ಕಳೆದು ದಂಡೆಯ ಮೇಲಿಟ್ಟು, ಭಾಗೀರಥಿಯಲ್ಲಿ ಬರೀ ಮೈಯಿಂದ, ಸ್ವಚ್ಛಂದವಾಗಿ ಜಲಕ್ರೀಡೆಯಾಡುತ್ತಿದ್ದುದನ್ನು ನಾರದರು ನೋಡಿದರು. ಆ ದಿವ್ಯ ಲಾವಣ್ಯವತಿಯರ ನಗ್ನಸೌಂದರ್ಯವನ್ನು ನೋಡಿ, ಮಹಾತ್ಮರಾದ ನಾರದರ ಚಿತ್ತವು ಕೂಡ ಚಂಚಲವಾಯಿತು; ವಿವೇಕವು ಹಾರಿಹೋಯಿತು; ಪ್ರಾಣವೂ ಕ್ಷುಬ್ಧವಾಯಿತು; ಮನಸ್ಸು ಆನಂದಿತವಾಯಿತು; ಮೈ ಪುಳಕಿತವಾಯಿತು. ಅಂತರಂಗದಲ್ಲಿ ಕಾಮದ ಪ್ರಾದುರ್ಭಾವವಾಯಿತು; ಅವರ ಸರ್ವಧೈರ್ಯವೂ ನಷ್ಟವಾಗಿ, ವೀರ್ಯವು ಸ್ಖಲನವಾಯಿತು. ನಿರಿಚ್ಛರೂ ಅಹಂಭಾವರಹಿತರೂ ಬಹುಶ್ರುತರೂ ಸರ್ವಜ್ಞರೂ ಆದ ನಾರದರಂಥ ಸ್ಥಿತಪ್ರಜ್ಞರಿಗೂ ಪ್ರಾರಬ್ಧಯೋಗದ ಪ್ರಾಬಲ್ಯದಿಂದ ಕ್ಷಣಿಕವಾಗಿ ಮನೋವಿಕಾರವಾಗಬಹುದು. ಆದರೆ ಆ ಶಿಥಿಲವಾದ ವಾಸನೆಯು ಅವರ ತತ್ತ್ವಜ್ಞಾನವನ್ನು ಕಳೆದು ಜನ್ಮವನ್ನು ಕೊಡುವಷ್ಟು ತೀವ್ರವೂ ದೃಢವೂ ಆಗಲಾರದು. ಹುರಿದ ಬೀಜವು ನಾಲಿಗೆಗೆ ರುಚಿಯನ್ನೂ ಹಸಿವಿಗೆ ತೃಪ್ತಿಯನ್ನೂ ಉಂಟುಮಾಡಬಹುದೇ ಹೊರತು, ಭೂಮಿಯಲ್ಲಿ ಬಿತ್ತಲ್ಪಟ್ಟರೂ ಸಹ ಅದು ಹುಟ್ಟಿ ಬೆಳೆಯಲಾರದು. ಮೂರು ಲೋಕಗಳಲ್ಲಿಯೂ ದೇವ-ಮಾನವಾದಿ ಸಕಲ ಜೀವರೂ ಮರಣಪರ್ಯಂತರವೂ ಪ್ರಳಯಪರ್ಯಂತರವೂ ತಮ್ಮ ತಮ್ಮ ಸ್ವಭಾವಾನುಗುಣವಾಗಿಯೂ ಪ್ರಾರಬ್ಧಾನುಸಾರವಾಗಿಯೂ ವರ್ತನಮಾಡುತ್ತಾರೆ. ಅಜ್ಞರು "ನಾನು ಮಾಡುತ್ತೇನೆ, ನಾನು ಅನುಭವಿಸುತ್ತೇನೆ" ಎಂಬ ಭ್ರಮೆಯಿಂದ ಸಂಸಾರಬದ್ಧರಾಗುತ್ತಾರೆ; ಆದರೆ, ಸುಜ್ಞರು ಅಥವಾ ಆತ್ಮಜ್ಞರು, ಸರ್ವಸಾಕ್ಷಿಯಾದ ಆತ್ಮವು ನಿಷ್ಕ್ರಿಯ-ನಿರ್ವಿಕಾರವಾದುದೆಂಬ ನಿಶ್ಚಯಜ್ಞಾನವುಳ್ಳವರಾದುದರಿಂದ ನಿಶ್ಚಿಂತೆಯಿಂದ ಇರುತ್ತಾರೆ. ಇರಲಿ.

ಅನಂತರ, ನಾರದ ಮಹರ್ಷಿಗಳು ತಮ್ಮ ಮನೋರೂಪ ಮದ್ದಾನೆಯನ್ನು ಶುದ್ಧ ಬುದ್ಧಿರೂಪ ಉಕ್ಕಿನ ಮಿಣಿಯಿಂದ ವಿವೇಕವೆಂಬ ಕಂಬಕ್ಕೆ ಕಟ್ಟಿಹಾಕಿ, ತನ್ನ ಸ್ಥಾನದಿಂದ ಜಾರಿದ ಚಂದ್ರದ್ರವದಂತಿರುವ ಪವಿತ್ರ ವೀರ್ಯವನ್ನು ಒಂದು ಕುಂಭದಲ್ಲಿ ಸ್ಥಾಪನೆಮಾಡಿದರು. ಆ ವೀರ್ಯವು ಶಂಭುವಿನ ವೀರ್ಯವಾದ ಪಾದರಸವನ್ನೂ ಬೆಳ್ಳಿಯನ್ನೂ ಬಂಗಾರವನ್ನೂ ಹೋಲುವಂತಿತ್ತು. ನಾರದರು ತಮ್ಮ ಸಂಕಲ್ಪಬಲದಿಂದ ಆ ಕುಂಭವನ್ನು ಹಾಲಿನಿಂದ ತುಂಬಿಟ್ಟರು. ಆ ಹಾಲು ಅಮೃತದಂತೆ ಆ ವೀರ್ಯವನ್ನು ವೃದ್ಧಿಮಾಡುವುದಕ್ಕೆ ತೊಡಗಿತು. ಒಂದು ತಿಂಗಳೊಳಗೇ ಅದು ಪೂರ್ಣಚಂದ್ರನಂತೆ ಬೆಳೆದು ಪೂರ್ಣಿಮಾಚಂದ್ರಕಾಂತಿಯಿಂದ ಕೂಡಿದ

ಸುಂದರ ಕುಮಾರನ ಜನನವಾಯಿತು. ನಾರದಮುನಿಯ ಶುಭಸಂಕಲ್ಪದಿಂದ ಸ್ವಲ್ಪ ದಿನಗಳಲ್ಲಿಯೇ ಆ ಕುಮಾರನು, ಶುಕ್ಲಪಕ್ಷದ ಚಂದ್ರನಂತೆ ಬೆಳೆದು ದೊಡ್ಡವನಾದನು. ಯೋಗ್ಯವಾದ ಸಮಯದಲ್ಲಿ ನಾರದರು, ಆ ಕುಮಾರನಿಗೆ ಸಕಲ ಸಂಸ್ಕಾರಗಳನ್ನು ನಡೆಸಿ ತಮ್ಮ ಸಮಸ್ತ ವಿದ್ಯೆಯನ್ನೂ ಅವನ ಹೃದಯದಲ್ಲಿ ಸ್ಥಾಪನೆಮಾಡಿದರು. ಸ್ವಲ್ಪ ದಿನಗಳಲ್ಲಿ ಅವನಿಗೆ ಸರ್ವವಾಙ್ಮಯದ ಜ್ಞಾನವಾಯಿತು. ನಾರದ ಮಹರ್ಷಿಯು ಆ ಬಾಲಕನನ್ನು ತಮ್ಮ ಪ್ರತಿಬಿಂಬದಂತೆಯೇ ಮಾಡಿದನು.

ಅನಂತರ ಒಮ್ಮೆ ಆ ಮುನಿವರ್ಯನು ತನ್ನ ಪುತ್ರನನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋದರು. ನಾರದರು ತನ್ನ ತಂದೆಯಾದ ಬ್ರಹ್ಮನಿಗೆ ನಮಸ್ಕಾರ ಮಾಡುತ್ತಿರುವಾಗ, ಅವರ ಪುತ್ರನೂ ಕೂಡ ತನ್ನ ಪಿತಾಮಹನಾದ ಬ್ರಹ್ಮನಿಗೆ ನಮಸ್ಕಾರಮಾಡಿದನು. ಆಗ ಬ್ರಹ್ಮದೇವನು ತನ್ನ ಮೊಮ್ಮಗನ ಗ್ರಹಣ-ಧಾರಣ-ಪಟುತ್ವ ಮೊದಲಾದವು ಎಷ್ಟಿವೆಯೆಂಬುದನ್ನು ಪರೀಕ್ಷೆಮಾಡಿ ಅವನು ವೇದಾದಿ ಸರ್ವವಿದ್ಯೆಗಳ ಭಂಡಾರವಿರುವುದನ್ನು ತಿಳಿದು ಪ್ರೇಮದಿಂದ ಅವನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ತನ್ನ ಕೇವಲ ಆಶೀರ್ವಾದದಿಂದಲೇ ಸಕಲ ವಿದ್ಯಾ ಪಾರಂಗತನನ್ನಾಗಿಯೂ ಸರ್ವಜ್ಞನನ್ನಾಗಿಯೂ ಮಾಡಿದನು. ಬ್ರಹ್ಮದೇವನು ಆ ತನ್ನ ಪ್ರೀತಿಯ ಮೊಮ್ಮಗನನ್ನು ಮಮತೆಯಿಂದ ಕುಂಭನೆಂದು ಕರೆದನು.

ಎಲೈ ಸಾಧುವೆ ! ಆ ಕುಂಭನೇ ನಾನು !

ನಾನು ನಾರದರ ಪುಣ್ಯಕುಂಭದೊಳಗಿಂದ ಉದಯವಾದ ಪುತ್ರನಾಗಿದ್ದೇನೆ. ನಾನು ನನ್ನ ತಂದೆಯೊಡನೆ ಬ್ರಹ್ಮಲೋಕದಲ್ಲಿ ಸುಖದಿಂದ ವಾಸಮಾಡುತ್ತಿದ್ದೇನೆ. ಮೂರ್ತಿಮಂತವಾದ ನಾಲ್ಕು ವೇದಗಳೇ ನನ್ನೊಡನೆ ಆಟವಾಡುವ ಬಾಲ ಮಿತ್ರರು. ಸರಸ್ವತಿಯೇ ನನ್ನ ತಾಯಿ ; ಬ್ರಹ್ಮಲೋಕವೇ ನನ್ನ ಮನೆ. ತ್ರಿಲೋಕಗಳಲ್ಲಿ ಎಲ್ಲಿ ಯಾದರೂ ಸ್ವೇಚ್ಛೆಯಿಂದ ವಿಹಾರಮಾಡುವದು ನನ್ನ ಸಹಜ ಲೀಲೆಯಾಗಿದೆ. ಆದರೆ ನನಗೆ ಯಾವ ಕರ್ತವ್ಯವೂ ಇಲ್ಲ. ನಾನು ಭೂಮಿಯ ಮೇಲೆ ಸಂಚಾರ ಮಾಡು ತ್ತಿದ್ದರೂ ಸಹ ನನ್ನ ಪಾದಗಳು ಭೂಮಿಯನ್ನು ಸೋಕುವುದಿಲ್ಲ. ನನ್ನ ಮೈಯನ್ನು ಧೂಳು ಮುಸುಕುವುದಿಲ್ಲ. ನನ್ನ ಶರೀರವು ಕೊಳೆಯೇ ಆಗುವುದಿಲ್ಲ. ಇವತ್ತು ಆಕಾಶಮಾರ್ಗದಲ್ಲಿ ಹೋಗುತ್ತಿರುವಾಗ ಕೆಳಗೆ ನಿನ್ನನ್ನು ನೋಡಿ, ಇಲ್ಲಿಗೆ ಬಂದೆ. ರಾಜಾ ! ಸಜ್ಜನರು ಏನೇನು ಕೇಳಿದರೂ ಸಂತರು ನಿರಭಿಮಾನದಿಂದ ಅದೆಲ್ಲವನ್ನೂ ಹೇಳುತ್ತಾರೆ. ಆದ್ದರಿಂದ ನನ್ನ ಸಕಲ ವೃತ್ತಾಂತವನ್ನೂ ನಿನಗೆ ಹೇಳಿದ್ದೇನೆ. ಆದರೆ ಇನ್ನೇನಾದರೂ ತಿಳಿಯಬೇಕೆಂದು ನಿನಗೆ ಇದ್ದರೆ, ವಿಚಾರ ಮಾಡಬಹುದು." ಎಂದಳು.

ಯಾರಿಗಾದರೂ ಇಲ್ಲಿ ಒಂದು ಸಂದೇಹವು ಬರಬಹುದು. ಚೂಡಾಲೆಯಂಥ ಮಹಾಮಹಿಮಳು ದೇವಸಮಾನನಾದಂಥ ತನ್ನ ಪತಿಗೆ ಇಂಥಾ ಸುಳ್ಳು ಕತೆಯನ್ನು ಕಲ್ಪಿಸಿ ಹೇಳಬಹುದೇ ? ಅಸತ್ಯಭಾಷಣದ ಸಮಾನ ಪಾಪವಿಲ್ಲವೆಂದೂ ಸತ್ಯ ಭಾಷಣದ ಸಮಾನ ಪುಣ್ಯವಿಲ್ಲವೆಂದೂ ವೇದಾದಿ ಸಕಲ ಶಾಸ್ತ್ರಗಳೂ ಸಾರುತ್ತಿರು ವಾಗ ಸಾಧ್ವಿಯೂ ಧರ್ಮಜ್ಞಳೂ ಆದ ರಾಜಕನ್ಯೆ ಚೂಡಾಲೆಯು ಅಸತ್ಯವನ್ನು ಏಕೆ ನುಡಿದಳು ? ಈ ಶಂಕೆಯು ಈ ಸಂದರ್ಭದಲ್ಲಿ ಬರುವ ಸಂಭವವಿದೆ. ಆದರೆ ಇದಕ್ಕೆ ಕಾರಣವಿಲ್ಲ. ಏಕೆಂದರೆ, ಸತ್ಯ ಯಾವುದು; ಅಸತ್ಯ ಯಾವುದು ಎನ್ನುವು ದನ್ನು ಅವುಗಳಿಂದಾಗುವ ಪರಿಣಾಮದಿಂದಲೇ ನಿರ್ಣಯಿಸಬೇಕು. ಯಾವುದರ ಪರಿಣಾಮವು ಶುಭವಾಗುವುದೋ ಅದು ವ್ಯವಹಾರ ದೃಷ್ಟಿಯಿಂದ ಅಸತ್ಯವಾದರೂ ಧರ್ಮದೃಷ್ಟಿಯಿಂದ ಸತ್ಯವೇ ಸರಿ. ಆದರೆ ಯಾವುದರ ಪರಿಣಾಮವು ಅಶುಭ ವಾಗುವುದೋ ಅದು ವ್ಯವಹಾರದೃಷ್ಟಿಯಿಂದ ಸತ್ಯವಾದರೂ ಧರ್ಮದೃಷ್ಟಿಯಿಂದ ಅಸತ್ಯವೇ ಸರಿ. ಏಕೆಂದರೆ, ಭಗವಾನ್ ಶ್ರೀಕೃಷ್ಣನೇ ಭಾರತದಲ್ಲಿ ಅರ್ಜುನನಿಗೆ ಹೀಗೆ ಹೇಳಿದ್ದಾನೆ :

ಸತ್ಯಮೇವ ಹಿ ವ್ಯಕ್ತವ್ಯಂ ।
ವ್ಯಕ್ತವ್ಯಂ ಚಾನೃತಂ ಭವೇತ್ ॥
ಯತ್ರಾನೃತಂ ಭವೇತ್ ಸತ್ಯಂ ।
ಸತ್ಯಂ ಚಾನೃತಂ ಭವೇತ್ ॥

ಸತ್ಯವನ್ನೇ ಹೇಳಬೇಕಾದುದು ಧರ್ಮನೆಂಬುದು ನಿಜ ; ಆದರೆ ಅನೃತವನ್ನು ಹೇಳುವುದೂ ಧರ್ಮವಾಗುತ್ತದೆ. ಯಾವ ಸಂದರ್ಭದಲ್ಲಿ ಸುಳ್ಳನ್ನು ಹೇಳುವುದ ರಿಂದ ಸತ್ಯ ಹೇಳುವುದರಿಂದಾಗಬೇಕಾದ ಹಿತಪರಿಣಾಮವುಂಟಾಗುವುದೋ ಮತ್ತಾವ ಸಂದರ್ಭದಲ್ಲಿ ಸತ್ಯವನ್ನು ಹೇಳುವುದರಿಂದಲೇ ಸುಳ್ಳು ಹೇಳುವುದರಿಂದಾಗುವ ಅನಿಷ್ಟ ಪರಿಣಾಮವುಂಟಾಗುವುದೋ ಆ ಸೂಕ್ಷ್ಮವನ್ನು ತಿಳಿದು ನಡೆಯಬೇಕು. ಏಕೆಂದರೆ,

ಯದ್ಭೂತ ಹಿತಮತ್ಯಂತಂ । ತತ್ ಸತ್ಯಮಿತಿ ಧಾರಣಾ ॥

ಪ್ರಾಣಿಗಳಿಗೆ ಯಾವುದು ಆತ್ಯಂತಿಕ ಹಿತವೋ ಅದೇ ಸತ್ಯವೆಂಬ ಧರ್ಮ ಎಂದು ಶ್ರೀಕೃಷ್ಣನು ಹೇಳಿದ್ದಾನೆ.

ತನ್ನಲ್ಲಿಯೂ ತಾನು ಉಪದೇಶಮಾಡುವ ತತ್ತ್ವಜ್ಞಾನದಲ್ಲಿಯೂ ರಾಜನಿಗೆ ಪೂರ್ಣ ವಿಶ್ವಾಸವು ಉದಿಸಲೋಸ್ಕರ ಚೂಡಾಲೆಯು ಈ ಬಗೆಯ ಸುಳ್ಳು ಚರಿತ್ರೆ ಯನ್ನು ಕಲ್ಪಿಸಿ ಹೇಳಿ ಅವನ ವಿಶ್ವಾಸವನ್ನು ಸಂಪಾದನೆ ಮಾಡಿದಳು. ರಾಜನಿಗೆ ಯಾವುದೇ ಬಗೆಯ ಅಹಿತಮಾಡಬೇಕೆಂಬ ಉದ್ದೇಶವು ಆಕೆಗಿರಲಿಲ್ಲ; ಅವನಿಗೆ

ಪರಮಹಿತ ಮಾಡಬೇಕೆಂಬುದೇ ಆಕೆಯ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ಆಕೆಗೆ ಅಸತ್ಯಭಾಷಣದ ದೋಷವು ಸ್ವಲ್ಪವೂ ಹತ್ತುವ ಸಂಭವವಿಲ್ಲ.

ಈ ರೀತಿ ಚೂಡಾಲೆಯ ಕಲ್ಪಿತವಾದ ಆತ್ಮಚರಿತ್ರೆಯು ಶಿಖಿಧ್ವಜನಿಗೆ ಪರಮ ಸತ್ಯವಾಗಿ ತೋರಿ, ವಿಶ್ವಾಸವನ್ನು ಹುಟ್ಟಿಸಿ ಉದ್ದಿಷ್ಟವಾದ ಪರಿಣಾಮವನ್ನೇ ಉಂಟು ಮಾಡಿತು. ಅವನು ಬಹಳ ಸಂತೋಷದಿಂದ ಹೇಳಿದನು :

"ದೇವಪುತ್ರಾ ! ನನ್ನ ಮಹಾ ಪೂರ್ವಪುಣ್ಯದ ಪ್ರಭಾವದಿಂದಲೇ ತಾವು ಇವತ್ತು ಇಲ್ಲಿಗೆ ದಯಮಾಡಿಸಿದ್ದೀರಿ. ನಾನು ಇಂದು ಧನ್ಯಪುರುಷರಲ್ಲೆಲ್ಲಾ ಶ್ರೇಷ್ಠನಾಗಿದ್ದೇನೆ. ಅಮೃತಸಮಾನ ಮಧುರಭಾಷಣ ಮಾಡತಕ್ಕಂಥ ತಮ್ಮ ಸಮಾಗಮವಾಯಿತು. ಅನೇಕ ದುಃಖಗಳನ್ನೂ ಚಿಂತೆಯನ್ನೂ ಹೊತ್ತು ತರತಕ್ಕ ರಾಜ್ಯ ಲಾಭಕ್ಕಿಂತಲೂ ಪರಮಾನಂದವನ್ನೇ ತರುವ ಸಾಧುಸಮಾಗಮವು ಅನಂತ ಗುಣ ದಿಂದ ಮೇಲಾದುದು.

ರಾಜನ ಮಾತನ್ನು ಮಧ್ಯದಲ್ಲಿಯೇ ತಡೆದು ಮುನಿಪುತ್ರರೂಪಿಣಿಯಾದ ಚೂಡಾಲೆಯು "ರಾಜಾ ! ಈ ಹೊಗಳಿಕೆಯು ಸಾಕು ; ಎಲೈ ಸಾಧುವೆ ! ನೀನು ಯಾರು ? ಈ ವನವಾಸದಲ್ಲಿ ಏನು ಮಾಡುತ್ತಿದ್ದೀಯೆ ? ನಿನ್ನ ಉದ್ದೇಶವೇನು ? ಇದನ್ನು ಮುಚ್ಚಿಡದೆ ನನಗೆ ನಿಜವಾಗಿ ಹೇಳು." ಎಂದಳು.

ಅದಕ್ಕೆ ರಾಜನು, "ದೇವಪುತ್ರ ! ನೀನು ಸರ್ವಲೋಕಗಳ ವೃತ್ತಾಂತವನ್ನೂ ತಿಳಿದ ಸರ್ವಜ್ಞನೇ ಆಗಿದ್ದೀಯೆ. ನೀನು ತಿಳಿದಿರುವುದಕ್ಕಿಂತಲೂ ಹೆಚ್ಚಿಗೆ ಏನು ಹೇಳಲಿ ? ಆದರೂ ನೀನು ಕೇಳುತ್ತಿರುವುದರಿಂದ ಸಂಕ್ಷೇಪವಾಗಿ ಹೇಳುತ್ತೇನೆ.

ನಾನು ಶಿಖಿಧ್ವಜ ರಾಜನಿದ್ದೇನೆ. ಪುನಃ ಪುನಃ ತಪ್ಪದೇ ಬಾಧಿಸುತ್ತಿರುವ ಜನನ–ಮರಣ, ಸುಖ–ದುಃಖ ಇವೇ ಮೊದಲಾದ ದ್ವಂದ್ವಗಳಿಂದ ಸಂತಪ್ತನಾಗಿದ್ದೆ. ತಪಸ್ಸಿನಿಂದ ಅದನ್ನು ಕಳೆದುಕೊಳ್ಳುವುದಕ್ಕಾಗಿ ಅರಣ್ಯಕ್ಕೆ ಬಂದೆ. ಇಲ್ಲಿ ಏಕಾಂತ ವಾಸದಲ್ಲಿ ಶಾಂತಿ ದೊರಕಬಹುದೆಂದು ಆಶಿಸಿದ್ದೆ. ಆದರೆ ನನ್ನ ಪ್ರಯತ್ನವು ಫಲ ಶೂನ್ಯವಾಗಿದೆ. ಶಾಂತಿಯೂ ವಿಶ್ರಾಂತಿಯೂ ಇಲ್ಲದ ಶ್ರಮಮಾತ್ರವಾಗಿದೆ. ತಪಸ್ಸನ್ನೇನೋ ನಿಯಮಬದ್ಧವಾಗಿಯೂ ನಿಷ್ಠೆಯಿಂದಲೂ ಎಡೆಬಿಡದೆ ಸಂತತವಾಗಿ ನಡೆಸುತ್ತಿದ್ದೇನೆ. ಆದರೂ ಹುಳ ಹತ್ತಿರುವ ಗಿಡದಂತೆ ಒಣಗುತ್ತಿದ್ದೇನೆ. ನನಗೆ ಸುಖವೇ ತೋರುತ್ತಿಲ್ಲ. ಅದರ ವಿರುದ್ಧವಾಗಿ ದುಃಖವೇ ಆಗುತ್ತಿದೆ. ನನಗೆ ಅಮೃತವೂ ವಿಷದಂತೆ ಆಗಿದೆ.

ಅತಿಶಯ ವ್ಯಾಕುಲದಿಂದ ಶಿಖಿಧ್ವಜನು ಹೀಗೆ ಹೇಳಲು ಚೂಡಾಲೆಯು,

"ರಾಜಾ ! ನಾನು ಪೂರ್ವದಲ್ಲಿ ಒಮ್ಮೆ ಪಿತಾಮಹನಾದ ಬ್ರಹ್ಮನನ್ನು ಕುರಿತು 'ಪ್ರಭೋ ! ಕ್ರಿಯಾ ಮತ್ತು ಜ್ಞಾನ ಈ ಎರಡರಲ್ಲಿ ಯಾವುದೊಂದು ಶ್ರೇಯಸ್ಕರವೋ ಅದನ್ನು ನನಗೆ ಹೇಳು' ಎಂದು ಕೇಳಿದೆ."

ಅದಕ್ಕೆ ಅವನು ನನಗೆ ಹೇಳಿದನು : "ಜ್ಞಾನ ಒಂದೇ ಪರಮ ಶ್ರೇಯಸ್ಕರವಾದುದು. ಜ್ಞಾನಯೋಗದಿಂದಲೇ ಕೈವಲ್ಯಪ್ರಾಪ್ತಿಯಾಗುವದು. ಎಲ್ಲಾ ಕರ್ಮವನ್ನೂ ಕಾಲ ಕಳೆಯುವದಕ್ಕಾಗಿಯೂ ಚಿತ್ತವಿನೋದಕ್ಕಾಗಿಯೂ ಹೇಳಿದೆ. ಆದರೆ, ಯಾರಿಗೆ ಜ್ಞಾನದೃಷ್ಟಿ ಬಂದಿಲ್ಲವೋ ಅವರಿಗೆ ಕರ್ಮವೇ ಆಧಾರ; ಕರ್ಮವೇ ಗತಿ. ಕೆಲವು ಜ್ಞಾನಿಗಳೂ ಲೋಕಹಿತಾರ್ಥವಾಗಿ ತಮಗೆ ವರ್ಣಾಶ್ರಮೋಚಿತವಾದ ಕರ್ಮವನ್ನು ಮಾಡುತ್ತಿರುವಂತೆ ಅನುಭವಕ್ಕೆ ಬರುತ್ತದೆ. ಆದರೆ, ಕರ್ಮಫಲದ ವಾಸನೆಯಿಂದ ಕರ್ಮಮಾಡಿದರೆ ಮಾತ್ರ ಶುಭ ಅಥವಾ ಅಶುಭ ಫಲವನ್ನು ಕರ್ಮವು ಕೊಡಲು ಶಕ್ಯವಾಗುತ್ತದೆ. ನೀರನ್ನು ಹಾಕದಿದ್ದರೆ, ಹೇಗೆ ಗಿಡಬಳ್ಳಿಗಳು ಫಲ–ಪುಷ್ಪ ಶೂನ್ಯವಾಗುತ್ತವೆಯೋ ಹಾಗೆ ವಾಸನೆಯಿಲ್ಲವಾದರೆ, ಅಥವಾ ಫಲದಾಶೆಯಿಲ್ಲದೆ ಕರ್ಮವನ್ನು ಮಾಡಿದರೆ ಶುಭಾಶುಭಗಳು ಬಾಧಿಸುವುದಿಲ್ಲ. ಲೋಕಸಂಗ್ರಹಾರ್ಥವಾಗಿ ಕರ್ಮಮಾಡತಕ್ಕ ವಾಸನಾಶೂನ್ಯ ಜ್ಞಾನಿಗೆ ಶುಭಾಶುಭ ಕರ್ಮಗಳು ನಾಶವಾಗುತ್ತವೆ. ಮುಂದಿನ ಋತು ಬಂದೊಡನೆ, ಹಿಂದಿನ ಋತುಧರ್ಮಗಳೆಲ್ಲಾ ಹೇಗೆ ಕಣ್ಮರೆಯಾಗುವುವೋ ಹಾಗೆ ವಾಸನಾಕ್ಷಯವಾದೊಡನೆ ಕರ್ಮಫಲಗಳು ನಾಶವಾಗುತ್ತವೆ. ನಿಜವಾಗಿ ನೋಡಿದರೆ, ಚಿನ್ಮಾತ್ರಸ್ವರೂಪವಾದ ಅದ್ವಿತೀಯ ಆತ್ಮನಲ್ಲಿ, ನಾನು ಮಾಡುತ್ತೇನೆ ; ನಾನು ಅನುಭವಿಸುತ್ತೇನೆ ಎಂಬ ರೂಪದ ಯಾವ ವಾಸನೆಯೂ ಇಲ್ಲ. ಆದರೆ ಅಜ್ಞದಶೆಯಲ್ಲಿ ಅಜ್ಞಾನದ ಪ್ರಭಾವದಿಂದ ಈ ವಾಸನೆಗಳು ಅಥವಾ ಭಾವನೆಗಳು, ದೂರ ಬಯಲಿನ ಬಿಸಿಲಿನ ಜಳದಲ್ಲಿ ನೀರಿನ ತೆರೆಗಳು ಕಾಣುವಂತೆ ತೋರುತ್ತವೆ. ಆದ್ದರಿಂದಲೇ ಸರ್ವವೂ ಬ್ರಹ್ಮವಾಗಿದೆ ಎಂಬ ನಿಜವಾದರಿವಿನಿಂದ ಯಾರ ಅಜ್ಞಾನ ಕ್ಷೀಣವಾಗಿದೆಯೋ ಅವರ ಮನಸ್ಸಿನಲ್ಲಿ ವಾಸನೆಯೇ ಏಳುವದಿಲ್ಲ. ಆದ್ದರಿಂದ ಕೇವಲ ವಿಷಯವಾಸನೆಯನ್ನೂ ನಾನು ಕರ್ತಾ ನಾನು ಭೋಕ್ತಾ ಎಂಬ ವಾಸನೆಯನ್ನೂ ತ್ಯಾಗಮಾಡುವುದರಿಂದಲೇ ಜೀವನು ಜರಾಮರಣರಹಿತವೂ ಜನ್ಮಶೂನ್ಯವೂ ಆದ ಪದವನ್ನು ಪಡೆಯುತ್ತಾನೆ. ವಾಸನಾಯುಕ್ತವಾದ ಮನಸ್ಸೇ ಮನಸ್ಸು ಎನ್ನಿಸಿಕೊಳ್ಳುತ್ತದೆ; ವಾಸನಾರಹಿತವಾದ ಮನಸ್ಸೇ ಜ್ಞಾನವಾಗಿದೆ."

"ಎಲೈ ರಾಜ ; ಬ್ರಹ್ಮದೇವನು ನನಗೆ ಹೀಗೆ ಬೋಧಿಸಿದನು. ಬ್ರಹ್ಮದೇವನೇ ಮೊದಲಾದ ಮಹಾಪುರುಷರು ಹೇಳಿರುವ ಜ್ಞಾನವನ್ನು ಆಶ್ರಯಮಾಡದೇ, ಎಲೈ ರಾಜರ್ಷೇ ನೀನು ಏಕೆ ಅಜ್ಞಾನಿಯಂತೆ ಇದ್ದೀಯೆ ? ನಾನು ಯಾರು ? ಈ ಸರ್ವವೂ ಹೇಗಾಯಿತು ? ಇದು ಹೇಗೆ ಶಾಂತವಾದೀತು ? ಬಂಧವು ಹೇಗಾಯಿತು ? ಮೋಕ್ಷವು ಹೇಗಾದೀತು ? ಇವೇ ಮೊದಲಾದ ವಿಚಾರಮಾಡುತ್ತಾ ಸಮದೃಷ್ಟಿಯುಳ್ಳ ತತ್ತ್ವಜ್ಞಾನಿಗಳಾದ ಸದ್ಗುರುಗಳ ಚರಣಕಮಲಗಳನ್ನು ಸೇರಿ ಸೇವೆ ಮಾಡುತ್ತಾ ಅವರಿಂದ ಮುಕ್ತಿಗೆ ಕಾರಣವಾದ ಯುಕ್ತಿಯನ್ನು ತಿಳಿಯಬೇಕು.

ಈ ದಂಡ, ಕಮಂಡಲು, ಆಸನಾದಿಗಳಲ್ಲಿ ರಮಿಸುವ ಕ್ಲೇಶಕರವಾದ ಬಹಿರ್ಮುಖ ತಪಸ್ಸಿನಿಂದ ಯಾವ ಪ್ರಯೋಜನವೂ ಇಲ್ಲ. ಸದ್ಗುರುವಿನ ಉಪದೇಶದಂತೆ ನೀನು ಸಾಧನೆ ಮಾಡಿದರೆ ಈ ಎಲ್ಲಾ ಅನರ್ಥಗಳಿಂದ ಪಾರಾದೀಯೆ."

ದೇವರೂಪಿಣಿಯಾದ ತನ್ನ ಕಾಂತೆಯಿಂದ ಇಂಥಾ ಉತ್ತಮ ಬೋಧೆಯನ್ನು ಕೇಳುತ್ತಿರುವಾಗ ಶಿಖಿಧ್ವಜನು ಕಂಬನಿಗರೆಯುತ್ತಾ ಹೀಗೆ ಹೇಳಿದನು :

"ಎಲೈ ದೇವಪುತ್ರ ! ನಿಜವಾಗಿಯೂ ಎಷ್ಟೋ ವರ್ಷಗಳಿಂದ ನಾನು ಕೇಳಿಲ್ಲದಿದ್ದ ಸದುಪದೇಶವನ್ನು ನೀನು ಈಗ ಮಾಡಿದ್ದಿ. ನಾನು ಕೇವಲ ಅಜ್ಞಾನದ ದೆಸೆಯಿಂದ ಶ್ರೇಷ್ಠ ಸಜ್ಜನರ ಸಮಾಗಮವನ್ನು ಬಿಟ್ಟು ಈ ನಿರ್ಜನವನದಲ್ಲಿ ಬಂದಿದ್ದೇನೆ. ಅಹಹಾ! ನನ್ನ ಸರ್ವಪಾಪವೂ ಇವತ್ತು ಕ್ಷೀಣವಾಗಿ ಹೋಯಿತು ಎಂದು ತಿಳಿಯುತ್ತೇನೆ. ಆದ್ದರಿಂದಲೇ ಇವತ್ತು ಅನಾಯಾಸವಾಗಿ ನಿನ್ನ ಸಮಾಗಮವಾಗಿ ನೀನು ಬೋಧಮಾಡುತ್ತಿದ್ದಿ. ಎಲೈ ಮಹಾತ್ಮಾ ! ನೀನೇ ನನ್ನ ಗುರು, ತಂದೆ ಮತ್ತು ಮಿತ್ರ, ಎಲ್ಲಾ ಆಗಿದ್ದಿ. ನಾನು ನಿನ್ನ ಶಿಷ್ಯನಾಗಿದ್ದೇನೆ. ನಾನು ನಿನಗೆ ನಮಸ್ಕಾರ ಮಾಡುತ್ತೇನೆ. ನೀನು ನನ್ನ ಮೇಲೆ ಕೃಪೆಮಾಡು. ಯಾವ ಅತಿ ಶ್ರೇಷ್ಠ ತತ್ತ್ವವು ನಿನಗೆ ತಿಳಿದಿದೆಯೋ, ಯಾವುದರ ಜ್ಞಾನದಿಂದ ಶೋಕಮಾಡುವ ಪ್ರಸಂಗವೇ ಇಲ್ಲವೋ, ಯಾವುದರ ಯೋಗದಿಂದ ನಾನು ಆತ್ಮನಲ್ಲಿ ವಿಶ್ರಾಂತಿ ಪಡೆದೇನು ಅಂಥಾ ಬ್ರಹ್ಮವನ್ನು ನನಗೆ ಹೇಳು. ಗಡಿಗೆ-ಬಟ್ಟೆ ಇತ್ಯಾದಿಗಳ ಜ್ಞಾನವೂ ಜ್ಞಾನವೇ ಆಗಿದೆ. ಆದರೆ ಈ ಸರ್ವ ವೃತ್ತಿಜ್ಞಾನಗಳಿಗಿಂತಲೂ ಅತಿ ಶ್ರೇಷ್ಠವಾದ ಜ್ಞಾನ ಯಾವುದಿದೆ? ಸಂಸಾರ ಸಾಗರದಿಂದ ನನ್ನನ್ನು ಪಾರುಮಾಡತಕ್ಕಂಥ ಜ್ಞಾನವು ನನಗೆ ಹೇಗಾದೀತು ?"

ಇದಕ್ಕೆ ಚೂಡಾಲೆಯು ಹೇಳತೊಡಗಿದಳು : "ರಾಜಾ ! ನಾನು ಹೇಳುವುದು, ನಿನಗೆ ಯೋಗ್ಯವೆಂದು ತೋರಿದರೆ, ನನಗೆ ತಿಳಿದಷ್ಟನ್ನು ನಿನಗೆ ಹೇಳಬಹುದು. ಏಕೆಂದರೆ, ಶ್ರದ್ಧೆಯೇ ಇಲ್ಲದಿರುವ ಪುರುಷನೆದುರು ಮಾಡಿದ ಉಪದೇಶವು ಒಂದು ಕಂಬದ ಮುಂದೆ ಮಾಡಿದ ಉಪದೇಶದಂತೆ ವ್ಯರ್ಥವೇ ಸರಿ ; ಹಾಗೆ ಮಾಡುವುದು ನಿಂದ್ಯವೂ ಕೂಡ ಆಗಿದೆ. ಕತ್ತಲೆಯಲ್ಲಿ ಕಣ್ಣು ತೆರೆದು ನೋಡಿದಂತೆ ಅದು ನಿರರ್ಥಕವೇ ಸರಿ. ಆದ್ದರಿಂದ ನೀನು ಮೊದಲು ಶ್ರದ್ಧಾವಂತನಾಗು ; ನನ್ನ ಮೇಲೆ ನಿನ್ನ ಪೂರ್ಣ ವಿಶ್ವಾಸವಿದ್ದರೆ ನಾನು ನಿನಗೆ ಜ್ಞಾನಸಂಪ್ರಾಪ್ತಿಗೆ ಉಪಾಯವನ್ನೂ ಜ್ಞಾನದ ಸ್ವರೂಪವನ್ನೂ ಹೇಳುತ್ತೇನೆ. ನೀನು ನಿನ್ನ ತರ್ಕಬುದ್ಧಿಯನ್ನು ಶಿಥಿಲಮಾಡಿ, ಯಾವ ಶಂಕೆಯೂ ಇಲ್ಲದಂತೆ, ಬಾಲಕನು ತಂದೆಯ ಮಾತನ್ನು ಕೇಳುವಂತೆಯೂ ಇಂಪಾದ ಗಾನವನ್ನು ಕೇಳಿದಂತೆಯೂ ಪ್ರೇಮದಿಂದ ಕೇಳು. ನಿನಗೆ ಶುಭವೇ ಆಗುತ್ತದೆ.

ನೀನು ಶಾಸ್ತ್ರಾರ್ಥದಲ್ಲಿ ನಿಪುಣನಾದರೂ ತತ್ತ್ವಾರ್ಥದಲ್ಲಿ ವಿಶ್ರಾಂತಿಯನ್ನು ಪಡೆಯಲಿಲ್ಲ. ಸರ್ವತ್ಯಾಗದಿಂದಲೇ ಸರ್ವಪ್ರಾಪ್ತಿಯಾಗುತ್ತದೆ. ಸರ್ವತ್ಯಾಗವೇ ಆತ್ಯಂತಿಕ ಪೂರ್ಣಕಾಮವಾಗಿದೆ. ಚಕ್ರವರ್ತಿಯ ಆನಂದದಿಂದ ಹಿಡಿದು ಹಿರಣ್ಯಗರ್ಭ ಆನಂದದವರೆಗೆ ಒಂದಕ್ಕಿಂತಲೂ ಒಂದು ನೂರು ಪಟ್ಟು ಹೆಚ್ಚಿನ ಜಗತ್‌ಪ್ರಸಿದ್ಧವಾದ ಸಮಸ್ತ ಐಶ್ವರ್ಯಗಳನ್ನೂ ತುಚ್ಛವಾಗಿ ಮಾಡುವದು ವಿದ್ಯಾರೂಪವಾದ ನಿರತಿಶಯ ಆನಂದವೇ ಆಗಿದೆ. ಇದು ದೊರಕುವದೇ ಸರ್ವತ್ಯಾಗದಿಂದಾಗಿದೆ. ಯಾವುದನ್ನು ಸ್ವಲ್ಪವಾದರೂ ಚಿಂತೆಮಾಡುತ್ತೇವೋ ಅದನ್ನು ತ್ಯಾಗ ಮಾಡಿದಂತೆ ಹೇಗಾಯಿತು? ಚಿಂತೆಯೇ ಚಿತ್ತವಾಗಿದೆ. ಇದಕ್ಕೆ ಸಂಕಲ್ಪವೆನ್ನುವ ಇನ್ನೊಂದು ಹೆಸರೂ ಇದೆ. ಚಿಂತೆಯು ಸ್ಫುರಣವಾಗುತ್ತಲೇ ಇದ್ದರೆ, ಚಿತ್ತದ ತ್ಯಾಗವಾದರೂ ಹೇಗಾದೀತು? ಚಿತ್ತವು ಚಿಂತಾಮಯವಾದರೆ, ಮೂರು ಲೋಕಗಳೂ ಕಾಣುವುದಕ್ಕೆ ತೊಡಗುತ್ತದೆ. ನಿಶ್ಚಿಂತತೆಯೇ ಸರ್ವತ್ಯಾಗದ ಫಲವಾಗಿದೆ. ನೀನು ಮೊಟ್ಟಮೊದಲು ವಾಸನಾಶೂನ್ಯವಾದ ಮನಸ್ಸಿನಿಂದಲೂ ಅನಾಸಕ್ತಿಯಿಂದಲೂ ಸರ್ವತ್ಯಾಗದ ಆರಂಭವನ್ನೇನೋ ಮಾಡಿದೆ. ಆದ್ದರಿಂದಲೇ ನೀನು ಸ್ತ್ರೀ, ಧನ ಸಹಿತವಾದ ಸರ್ವರಾಜ್ಯವನ್ನೂ ತ್ಯಾಗ ಮಾಡಿದೆ. ಆದರೆ ದುಃಖಪ್ರದವಾದ ಅಜ್ಞಾನದಿಂದ ಬದ್ಧನಾಗಿ ಈ ವನವಾಸದಲ್ಲಿ ವಾಸನಾಯುಕ್ತವಾದ ತಪಸ್ಸನ್ನು ಸ್ವೀಕಾರಮಾಡಿದೆ. ದುಃಖಪೂರ್ಣವಾದ ರಾಜ್ಯಬಂಧದಿಂದ ಅತಿಶಯ ಧೈರ್ಯವನ್ನು ತಳೆದು ಹೊರಬಿದ್ದರೂ ನೀನು ವನವಾಸವೆಂಬ ದೃಢವಾದ ಬಂಧದಿಂದ ಪುನಃ ಬದ್ಧನಾದೆ. ನಿನ್ನ ದೇಶವನ್ನು ಬಿಟ್ಟು ಇಷ್ಟು ದೂರ ಬಂದು, ಇಲ್ಲಿ ಆಶ್ರಮವಾಸ ಮಾಡಿದರೂ ಇದರಿಂದ ಎಷ್ಟೆಲ್ಲಾ ತ್ಯಾಗ ಮಾಡಿದರೂ ಕೂಡ, ನೀನು ಅಹಂಭಾವನೆಯನ್ನು ಬಿಡಲಿಲ್ಲ. ಅಹಂಕಾರ ಬುದ್ಧಿಯನ್ನು ತ್ಯಾಗ ಮಾಡಿದರೆ, ಉಳಿಯುವುದೇ ಆನಂದವು. ಆ ಪೂರ್ಣಾನಂದವೇ ಪರಮ ಪುರುಷಾರ್ಥವು. ಅದು, ನಾನು ಎನ್ನುವ ಭಾವನೆಯನ್ನು ಪೂರ್ಣವಾಗಿ ಬಿಟ್ಟ ಪುರುಷನ ಹೃದಯದಲ್ಲಿ ತಾನೇ ತಾನಾಗಿ ಸ್ಫುರಣವಾಗುತ್ತದೆ. ಸಮಸ್ತ ವಿಷಯಗಳ ಜೊತೆಗೆ ಅಹಂಕಾರವನ್ನೂ ತ್ಯಾಗ ಮಾಡಬೇಕು. ನಿಜವಾಗಿ ನೋಡಿದರೆ, ಸರ್ವಕ್ಕೂ ಅಹಂಕಾರವೇ ಮೂಲವಾದ್ದರಿಂದ ಅಹಂಕಾರವನ್ನು ಬಿಟ್ಟರೆ ಸಕಲವನ್ನೂ ಬಿಟ್ಟಂತೆಯೇ ಆಯಿತು. ಇದರಿಂದ ನಿಶ್ಚಿಂತತೆಯು ಪ್ರಾಪ್ತವಾಗುತ್ತದೆ. ನಿಶ್ಚಿಂತೆಯೇ ಚಿಂತಾಮಣಿಯು. ನೀನು ತಪಸ್ಸನ್ನೇ ಚಿಂತಾಮಣಿಯೆಂದು ಭ್ರಮಿಸಿದ್ದೀಯೆ. ಈ ತಪಸ್ಸಿನಿಂದ ನಿನಗೆ ಒಂದು ಸ್ಫಟಿಕದ ತುಂಡು ಸಹ ಸಿಕ್ಕಿಲ್ಲವೆಂದು ನಿಶ್ಚಯವಾಗಿ ತಿಳಿ. ಈಗಲಾದರೂ ನೀನು ಶುದ್ಧಬುದ್ಧಿಯಿಂದ ವಿಚಾರಮಾಡು. ಸರ್ವತ್ಯಾಗ ಮತ್ತು ತಪಸ್ಸು ಈ ಎರಡರಲ್ಲಿ ಯಾವದು ಕಲ್ಯಾಣಕರವೋ ಅದನ್ನು ಸಾಧಿಸಿ ಸುಖಿಯಾಗು. ರಾಜಾ! ನಿನ್ನ ಭಾರ್ಯೆಯಾದ ಚೂಡಾಲೆಯು ತತ್ತ್ವಜ್ಞಾನಿಯಾದ ಶ್ರೇಷ್ಠಜೀವಿಯಾಗಿದ್ದಾಳೆ, ಆಕೆಯು ನುಡಿಯುವುದೆಲ್ಲಾ ಸತ್ಯ; ನಡೆಯುವುದೆಲ್ಲಾ ಧರ್ಮ. ಆಕೆಯು ನಿನಗೆ

ಬೋಧಿಸುತ್ತಿದ್ದ ತತ್ತ್ವಜ್ಞಾನವನ್ನು ನೀನು ಸ್ವೀಕರಿಸಿದ್ದರೆ, ನಿನಗೆ ಇಷ್ಟು ಕಷ್ಟವಾಗುತ್ತಿರಲಿಲ್ಲ. ಆದರೆ "ಸ್ತ್ರೀಬುದ್ಧಿಃ ಪ್ರಲಯಂಕರೀ" ಎಂಬ ಲೌಕಿಕ ನ್ಯಾಯವನ್ನು ಅನುಸರಿಸಿ ನೀನು ಆಕೆ ಹೇಳಿದ್ದನ್ನು ಉಪೇಕ್ಷೆ ಮಾಡಿದೆ. ನೀನು "ಆತ್ಮ ಬುದ್ಧ್ಯಾ ಚಿರಂ ಜೀವೇತ್, ಗುರುಬುದ್ಧ್ಯಾ ವಿಶೇಷತಃ" ಎಂಬಂತೆ ಸ್ವಂತ ಬುದ್ಧಿಬಲದಿಂದಲೂ ವಿಶೇಷವಾಗಿ ಗುರುಗಳ ಬುದ್ಧಿವಾದದಂತೆಯೂ ನಡೆಯತಕ್ಕ ಪುರುಷನು ದೀರ್ಘಕಾಲ ಸುಖವಾಗಿ ಜೀವಿಸುತ್ತಾನೆ,—ಎಂಬ ನ್ಯಾಯವನ್ನೇ ಅನುಸರಿಸಿದೆ. ಇದರಿಂದ ನೀನು ಸರ್ವತ್ಯಾಗವನ್ನೇ ಶ್ರೇಷ್ಠವೆಂದು ಭಾವಿಸಿ, ಉತ್ಸಾಹದಿಂದ ಅದರ ಪ್ರಯೋಗವನ್ನು ಪ್ರಾರಂಭಿಸಿದೆ. ಆದರೆ, ಆ ಪ್ರಯತ್ನವನ್ನೇ ಮುಂದುವರಿಸಿ ಸ್ಥಿರವಾಗಿ ಸಾಧಿಸಲಿಲ್ಲವೇಕೆ?"

ಹೀಗೆ ಚೂಡಾಲೆಯು ಕೇಳಿದ್ದಕ್ಕೆ ಶಿಖಿಧ್ವಜನು,

"ದೇವಕುಮಾರಾ! ನಾನು ಅರಮನೆಯನ್ನೂ ಸಿರಿಸಂಪತ್ತನ್ನೂ ಚೂಡಾಲೆಯಂಥ ರೂಪವತಿಯೂ ಗುಣವತಿಯೂ ಜ್ಞಾನಸಂಪನ್ನೆಯೂ ಆದ ಪತ್ನಿಯನ್ನೂ ರಾಜವೈಭವವನ್ನೂ ವಿಸ್ತಾರವಾದ ಶ್ರೀಮಂತದೇಶವನ್ನೂ ಸಕಲರಾಜ್ಯವನ್ನೂ ತ್ಯಾಗ ಮಾಡಿದ್ದೇನೆ. ಆದರೂ ಸರ್ವತ್ಯಾಗ ಮಾಡಿಲ್ಲವೆಂದು ಹೇಳುತ್ತಿದ್ದೀಯೆ. ಇದರ ಅರ್ಥವೇನು?" ಎಂದನು.

ಚೂಡಾಲೆಯು "ಮಹಾರಾಜ! ಗೃಹ, ಧನ, ಭೂಮಿ, ಸ್ತ್ರೀ, ರಾಜ್ಯ—ಈ ಸರ್ವವೂ ಎಂದೂ ನಿನ್ನದಾಗಿಯೇ ಇರಲಿಲ್ಲ. ಹುಟ್ಟಿಬಂದಾಗ ಯಾರೂ ಯಾವುದನ್ನೂ ತಂದಿರುವುದಿಲ್ಲ; ಈ ದೇಹವನ್ನೇ, ಈ ಮಣ್ಣಿನಲ್ಲಿ, ಇಲ್ಲಿಯೇ ಬಿಟ್ಟುಹೋಗಬೇಕಾಗಿರುವಾಗ, ಯಾರೂ ಯಾವದನ್ನೂ ತಮ್ಮ ಜೊತೆಯಲ್ಲಿ ಒಯ್ಯಲಾಗುವುದಿಲ್ಲ. ಅಲ್ಲದೆ, ನಡುವೆ ಕೆಲವು ಕಾಲ ನಮ್ಮದಾಗಿ ತೋರುವ ಯಾವದನ್ನೂ ನಮ್ಮ ಇಚ್ಛೆಯಂತೆ ಪೂರ್ಣವಾಗಿ ಬಳಸಿಕೊಳ್ಳಲಾಗುವದಿಲ್ಲ. ಮಮತೆಗೆ ಮೂಲವಾದ ಈ ದೇಹವೇ ನಮ್ಮದಲ್ಲದಿರುವಾಗ, ಯಾವದು ತಾನೇ ನಮ್ಮದಾಗಬಲ್ಲದು? ಆದ್ದರಿಂದ ಯಾವದು ಎಂದೂ ನಮ್ಮದಲ್ಲವೋ ಅದನ್ನೆಲ್ಲಾ ಬಿಡುವುದರಿಂದ ಸರ್ವತ್ಯಾಗ ಹೇಗಾಗಬಲ್ಲದು? ಆ ಎಲ್ಲವನ್ನೂ ಬಿಟ್ಟಮೇಲೂ ಆ ಎಲ್ಲಕ್ಕಿಂತಲೂ ಉತ್ತಮವಾದ, ಸ್ವತಃ ನಿನ್ನದೇ ಆಗಿರುವ, ಆದರೂ ಇನ್ನೂ ಬಿಟ್ಟಿಲ್ಲದಿರುವ ಅತ್ಯಂತ ಮುಖ್ಯವಾದೊಂದು ಈಗಲೂ ನಿನ್ನಲ್ಲಿಯೇ ಇದೆ. ಒಂದು ವೇಳೆ ಆ ಒಂದನ್ನು ನೀನು ಪೂರ್ಣವಾಗಿ ಬಿಡಬಲ್ಲೆಯಾದರೆ, ಆಗಲೇ ಶೋಕರಹಿತನಾಗುತ್ತಿ."

ಆಗ ಶಿಖಿಧ್ವಜನೆಂದನು: "ರಾಜ್ಯವು ಒಂದು ವೇಳೆ ನನ್ನದಲ್ಲವಾದರೆ, ಗಿಡ, ಮರ, ಬಳ್ಳಿ, ಪರ್ವತಗಳಿಂದ ತುಂಬಿದ ಈ ಅರಣ್ಯವಾದರೂ ಆಶ್ರಮವಾದರೂ ನನ್ನದಾಗಿವೆ. ಆದ್ದರಿಂದ ಇವುಗಳನ್ನೂ ಸಂಕಲ್ಪಪೂರ್ವಕವಾಗಿ ಬಿಡುತ್ತೇನೆ."

ರಾಜನು ಹೀಗೆ ಹೇಳಿ ಆ ಎಲ್ಲವುಗಳ ಆಸೆಯನ್ನು ಬಿಟ್ಟು ಹಾಗೆಯೇ ಪ್ರತಿಜ್ಞೆ ಮಾಡಿದನು. ಆದರೆ, ಅದಕ್ಕೆ ಕುಂಭನು ಮೊದಲಿನಂತೆಯೇ ಹೇಳಿದನು. "ಇವುಗಳಲ್ಲಿ ಯಾವದೂ ನಿನ್ನದಾಗಿಲ್ಲ. ಆದ್ದರಿಂದ ಅವುಗಳನ್ನು ಬಿಟ್ಟರೆ ಏನಾಗುತ್ತದೆ? ಈ ಎಲ್ಲವುಗಳಿಗಿಂತಲೂ ಉತ್ತಮವಾದುದೊಂದು ಭಾಗವನ್ನು ಈಗಲೂ ನಿನ್ನಲ್ಲಿಯೇ ಇಟ್ಟುಕೊಂಡಿದ್ದೀಯೆ. ಅದನ್ನು ಬಿಟ್ಟದ್ದೇ ಆದರೆ ನಿನಗೆ ಆನಂದಾನುಭವ ವಾಗುತ್ತದೆ."

ಆಗ ರಾಜನು "ಹಾಗಾದರೆ ನನ್ನ ಹತ್ತಿರವಿರುವ ಪಾತ್ರಾದಿಗಳನ್ನು ಬಿಡುತ್ತೇನೆ." ಎಂದು ಅವುಗಳಲ್ಲಿರುವ ಆಸಕ್ತಿಯನ್ನು ನಿಜವಾಗಿಯೂ ಬಿಟ್ಟು ಹಾಗೆಯೇ ಪ್ರತಿಜ್ಞೆ ಮಾಡಿದನು. ಅಲ್ಲಿಂದ ಅವನು ಆಸನದಿಂದೆದ್ದನು; ಮೈಮೇಲಿದ್ದ ಕೃಷ್ಣಾಜಿನವನ್ನು ಹರಿದೊಗೆದನು. ಪಾದುಕೆಗಳನ್ನು ದೂರ ಎಸೆದನು ; ದಂಡ ಕಮಂಡಲುಗಳನ್ನು ಮುಟ್ಟಬಾರದೆಂದು ನಿಶ್ಚಯ ಮಾಡಿದನು.

ಕುಂಭನು ವಿಸ್ಮಿತನಾಗಿ ಅವನ ಪ್ರತಿಯೊಂದು ಕ್ರಿಯೆಯನ್ನೂ ಕುತೂಹಲದಿಂದ ನೋಡುತ್ತಾ "ರಾಜನು ಮಾಡುವದನ್ನೆಲ್ಲಾ ಮಾಡಲಿ; ಈ ಸರ್ವವೂ ಅವನನ್ನು ಪರಮ ಪವಿತ್ರನನ್ನಾಗಿ ಮಾಡುತ್ತದೆ." ಎಂದು ಮನಸ್ಸಿನಲ್ಲಿಯೇ ಆಲೋಚಿಸುತ್ತಾ ಮೌನವಾಗಿ ಕುಳಿತಿದ್ದನು.

ಶಿಖಿಧ್ವಜನು ತನ್ನ ಆಶ್ರಮದೊಳಗಿನ ಸಕಲ ಪಾತ್ರೆಗಳನ್ನೂ ತಪಸ್ಸಾಮಗ್ರಿಗಳನ್ನೂ ಆಶ್ರಮದ ಹೊರಗೆ ಒಂದು ಕಡೆ ಸಂಗ್ರಹಮಾಡಿ ಅವುಗಳ ಮೇಲೆ ಒಣ ಕಟ್ಟಿಗೆಗಳನ್ನು ಹಾಕಿ ಬೆಂಕಿಯನ್ನು ಹಚ್ಚಿದನು. ತನ್ನ ಜಪಸರವನ್ನು ಹಿಡಿದು "ಎಲೈ ಸ್ವಾಮಿಭಕ್ತೆ ! ಇದುವರೆಗೆ ಜಪದ ಭ್ರಮೆಯಿಂದ ನಾನಾ ಮಂತ್ರರೂಪಿಯಾದ ಅರಣ್ಯದಲ್ಲಿ ನಾನೂ ತಿರುಗಿ ನಿನ್ನನ್ನೂ ತಿರುಗಿಸಿದೆ. ಈಗ ನಾನೂ ವಿಶ್ರಾಂತಿ ಪಡೆಯುತ್ತೇನೆ ; ನೀನೂ ವಿಶ್ರಾಂತಿ ಹೊಂದು. ಜಪತಪಾದಿಗಳು ಅವಶ್ಯವೆಂದು ಇದುವರೆಗೆ ತಿಳಿದಿದ್ದೆ. ಈ ಭ್ರಾಂತಿಯನ್ನು ಮೀರಿ ಈಗ ನಾನು ಬಹಳ ದೂರ ಹೋಗಿದ್ದೇನೆ. ಇನ್ನು ನಿನ್ನಿಂದ ಉಪಯೋಗವಿಲ್ಲ. ನಿನಗೆ ನಮಸ್ಕಾರ" ಎಂದು ಹೇಳುತ್ತಾ ಆ ಸ್ಫಟಿಕ ಮಣಿಮಾಲೆಯನ್ನು ಬೆಂಕಿಯಲ್ಲಿ ಎಸೆದನು. ಹಾಗೆಯೇ ಕೃಷ್ಣಾಜಿನವನ್ನೂ ದರ್ಭಾಸನವನ್ನೂ ಪಾತ್ರೆಗಳನ್ನೂ ಸರ್ವಸಾಮಗ್ರಿಗಳನ್ನೂ ಬೆಂಕಿಯಲ್ಲಿ ಹಾಕಿ ಸುಟ್ಟನು. ಆ ಪರ್ಣಕುಟೀರದ ಎಲ್ಲಾ ಭಾಗಗಳನ್ನೂ ಎಳೆದೆಳೆದು ಬೆಂಕಿಗೆ ಹಾಕಿದನು. ಮೈಮೇಲಿದ್ದ ಬಟ್ಟೆಗಳನ್ನೂ ಹರಿದು ಬೆಂಕಿಯಲ್ಲಿ ಒಗೆದನು.

"ಇವೆಲ್ಲವೂ ಅಗ್ನಿಯಲ್ಲಿ ಭಸ್ಮವಾಗಿ ಹೋದರೆ ನನಗೆ ಸರ್ವತ್ಯಾಗ ಮಾಡಿದೆನೆಂಬ ಸಂತೋಷವಾಗುತ್ತದೆ. ಅಪ್ಪ ಕುಂಭ ! ನನ್ನ ಸರ್ವತ್ಯಾಗ ವಿಷಯದಲ್ಲಿ ನೀನು

ಖೇದಪಡಬಾರದು. ನಿಷ್ಕ್ರಿಯ ಪುರುಷನಾದ ನನಗೆ ಇನ್ನು ಮೇಲೆ ಕ್ರಿಯಾಸಾಧನವಾದ ಈ ಉಪಕರಣಗಳು ನಿರುಪಯೋಗವೇ ಸರಿ." ಎಂದು, ದೇಹಮಾತ್ರವೇ ಉಳಿದಿರುವ ರಾಜನು ಅತ್ಯಂತ ಸಂತುಷ್ಟಿಯಿಂದ ಹೇಳತೊಡಗಿದನು.

"ದೇವಪುತ್ರಾ! ಈಗ ನಾನು ಸರ್ವವನ್ನೂ ತ್ಯಾಗಮಾಡಿರುವದರಿಂದ ಕೇವಲ ಪರಿಶುದ್ಧನೂ ಜ್ಞಾನಿಯೂ ಆಗಿದ್ದೇನೆ. ಹೇಗೆ ಹೇಗೆ ಬಂಧಹೇತುವಾದ ವಿಷಯಗಳು ಕ್ಷೀಣವಾಗುವವೋ ಹಾಗೆ ಹಾಗೆ ಮನಸ್ಸುಪರಸು ಶಾಂತವಾಗುತ್ತದೆ. ಆಹಾ! ಈಗ ನಾನು ಅತಿಶಯ ಶಾಂತನೂ ಸುಖಿಯೂ ಆಗಿದ್ದೇನೆ. ನಾನೀಗ ದಿಗಂಬರನಾಗಿದ್ದೇನೆ. ದೇವಕುಮಾರಾ! ಮಹಾತ್ಯಾಗದಲ್ಲಿ ಈಗ ಉಳಿದಿರುವದಾದರೂ ಏನು? ಹೇಳು." ಎಂದು ಕೇಳಿದನು.

ಇದಕ್ಕೆ ಕುಂಭನು "ರಾಜಾ! ನೀನು ಈಗಲೂ ಕೂಡ ಸರ್ವತ್ಯಾಗವನ್ನು ಮಾಡಿಲ್ಲ. ಸರ್ವತ್ಯಾಗದಿಂದಾಗುವ ಆನಂದವನ್ನು ವ್ಯರ್ಥವಾಗಿ ನಟನೆಮಾಡಿ ತೋರಿಸಬೇಡ. ನೀನು ಬಿಡದಿರುವ ಉತ್ತಮ ಭಾಗವು ಈಗಲೂ ನಿನ್ನಲ್ಲಿಯೇ ಇದೆ. ಅದೊಂದನ್ನು ಬಿಟ್ಟರೆ, ನೀನು ಶೋಕರಹಿತನಾಗುತ್ತಿ." ಎಂದು ಹೇಳಿದನು.

ಕುಂಭನ ಈ ಮಾತನ್ನು ಕೇಳಿ ರಾಜನು ತನ್ನೊಳಗೇ ವಿಚಾರ ಮಾಡಿ "ಹೇ ದೇವಪುತ್ರಾ! ತಿಳಿಯಿತು. ಸರ್ವತ್ಯಾಗದಲ್ಲಿ ಈ ದೇಹ ಒಂದೇ ಉಳಿದಿದೆ. ಆ ಪರ್ವತ ಶಿಖರವನ್ನು ಹತ್ತಿ ಅದರ ತುದಿಯಿಂದ ಇದನ್ನು ಕೆಡವಿ, ಸರ್ವತ್ಯಾಗವನ್ನು ಸಾಧಿಸುತ್ತೇನೆ." ಹೀಗೆ ಹೇಳಿ ಪರ್ವತಶಿಖರವನ್ನು ಹತ್ತಿ ಬೀಳುವದಕ್ಕಾಗಿ ಉತ್ಸಾಹದಿಂದ ವೇಗವಾಗಿ ಎದ್ದನು.

ಇದನ್ನು ನೋಡಿ ಕುಂಭನು, "ರಾಜಾ! ಮದವೇರಿದ ಹೋರಿಯು ತನ್ನ ಕರುವನ್ನೇ ಕೋಡಿನಿಂದ ಚುಚ್ಚಿ ಕೊಲ್ಲುವಂತೆ ಮೋಹವೇರಿದ ನೀನೂ ನಿರಪರಾಧಿಯಾದ ದೇಹವನ್ನು ವ್ಯರ್ಥವಾಗಿ ಕೊಲ್ಲುತ್ತಿದ್ದಿ. ಜಡ-ಮೂಢವಾದ ದೇಹವು ನಿನಗೆ ವಿರೋಧಿಯಾಗಿಲ್ಲ. ಇದನ್ನು ಪ್ರೇರಣೆ ಮಾಡಿ ಸಂಚಾಲನ ಮಾಡುತ್ತಿರುವದು ಯಾವದೊಂದು ನಿನ್ನ ಒಳಗಿದೆಯೋ ಅದನ್ನೇ ವಾಸ್ತವವಾಗಿ ದಂಡಿಸಬೇಕು. ಒಂದು ವೇಳೆ ನೀನು ಶರೀರವನ್ನು ಬಿಟ್ಟರೂ ಅದು ಸರ್ವತ್ಯಾಗವಾಗಲಾರದು. ಈ ಶರೀರವನ್ನು ಕಳೆದುಕೊಂಡ ಮೇಲೆ ಧರ್ಮಸಾಧನೆಗೆ ಅನುಕೂಲವಾದ ಮತ್ತೊಂದು ಅಧಿಕಾರ ಸಂಪನ್ನ ಶರೀರವು ಬರುವದೆಂಬ ಭರವಸೆಯಿಲ್ಲ. ಆದ್ದರಿಂದ ಈಗಿರುವದನ್ನು ಕಳೆದುಕೊಂಡರೆ, ಸರ್ವತ್ಯಾಗವು ಮತ್ತಷ್ಟು ದುರ್ಲಭವೇ ಆದೀತು. ಯಾವದೊಂದನ್ನು ತ್ಯಾಗ ಮಾಡಬೇಕೋ ಅದನ್ನು ಮಾಡಿದರೇ ಸರ್ವವನ್ನೂ ತ್ಯಾಗ ಮಾಡಿದಂತಾಗುತ್ತದೆ. ಅದು ಯಾವುದೆಂಬುದನ್ನು ನಿನ್ನೊಳಗೇ ಶೋಧಿಸು." ಎಂದನು.

ಶಿಖಿಧ್ವಜನು : "ದೇವತನಯ ! ಈ ದೇಹದ ಚಾಲಕ ಯಾವುದು ? ಜನ್ಮ ಕರ್ಮಗಳ ಬೀಜ ಯಾವುದು ? ಈ ಸರ್ವವೂ ಯಾವುದು ? ಸರ್ವಕಾರಣ ಯಾವುದು ? ಯಾವುದನ್ನು ಬಿಡುವುದರಿಂದ ಎಲ್ಲವನ್ನೂ ಬಿಟ್ಟಂತೆ ಆಗುತ್ತದೆ ?" ಎಂದು ಕೇಳಿದನು.

ಕುಂಭನು : ರಾಜಾ ! ವೃಕ್ಷದ ಕಾರಣವು ಹೇಗೆ ಬೀಜವಾಗಿದೆಯೋ ಹಾಗೆ ಸರ್ವಕ್ಕೂ ಕಾರಣವು ಮನಸ್ಸೇ ಆಗಿದೆ. ಬೀಜದ ತ್ಯಾಗ ಮಾಡಿದರೆ ಸರ್ವ ಕಾರ್ಯದ ತ್ಯಾಗ ಮಾಡಿದಂತೆಯೇ ಆಗುತ್ತದೆ.

ರಾಗ : ಭೀಮಪಲಾಸ್ ಜಲದ್ ಏಕ್ತಾ

ಬಂಧ-ಮೋಕ್ಷಕಾರಣ ಮನ ।
ದೋಷೀ ಮನ, ಭವಬಂಧನ । ನಿರ್ಮನ ನಿರ್ವಾಣಾ ॥ ಧ್ರು. ॥

ಬೀಜವೃಕ್ಷ ಸಂಸಾರಾ । ಮನ ಬೀಜ, ಜಗವೃಕ್ಷ ।
ಬೀಜಾ ಹುರಿಯಲು ನಿರ್ಮನ । ತತ್‌ಕ್ಷಣ ನಿಜಮೋಕ್ಷ ॥ ೧ ॥

ಚಿತ್ತ ತ್ಯಾಗ ಸರ್ವತ್ಯಾಗ ! ಜಗತ್ಯಾಗ ನಿಜಶಾಂತಿ ॥
ವಿದ್ಯಾಫಲ, ಘನಜ್ಞಾನ । ಸಚ್ಚಿನ್ಮಯ ಸ್ಫೂರ್ತಿ ॥ ೨ ॥

ಚಿತ್ತವೇ ವಿವರ್ತವಾಗಿ (ಅಂದರೆ ಮಿಥ್ಯಾಪರಿಣಾಮವಾಗಿ) ಜಗದ್ರೂಪದಿಂದ ತೋರುತ್ತದೆ. ಬೀಜವು ಹೇಗೆ ವೃಕ್ಷಾಕಾರವಾಗಿ ತೋರುತ್ತದೆಯೋ ಹಾಗೆ ಚಿತ್ತವೇ ದೇಹಾದಿ ಆಕಾರವನ್ನು ಹೊಂದುತ್ತದೆ. ದೇಹವನ್ನು ಚಿತ್ತವೇ ಚಾಲನ ಮಾಡುತ್ತದೆ. ಜರಾಮರಣಾದಿ ದೇಹಧರ್ಮದ ಕಾರಣವೂ ಮಹಾಮುನಿಗಳ ಶಮದಮಾದಿ ಧರ್ಮದ ಆಶ್ರಯವೂ ವಾಸನಾಯುಕ್ತ ಚಿತ್ತವೇ ಆಗಿದೆ. ಅಶಾಂತಚಿತ್ತವೇ ಮನನದಿಂದ ಮನೋಮಯವಾಗುತ್ತದೆ. ಸರ್ವವೂ ಚಿತ್ತವೇ ಆಗಿರುವುದರಿಂದ ಚಿತ್ತವನ್ನು ತ್ಯಾಗಮಾಡಿದರೆ ಸರ್ವತ್ಯಾಗವಾಗುತ್ತದೆ ; ಸರ್ವ ಆಧಿವ್ಯಾಧಿಗಳ ನಾಶವೂ ಆಗುತ್ತದೆ. ಮಹಾತ್ಯಾಗಿಗಳಾದ ಮಹಾತ್ಮರು ಚಿತ್ತತ್ಯಾಗವನ್ನೇ ಸರ್ವತ್ಯಾಗವೆನ್ನುತ್ತಾರೆ. ಚಿತ್ತದ ತ್ಯಾಗವನ್ನು ಮಾಡಿಬಿಟ್ಟರೆ ಪರಮಶಾಂತವೂ ನಿರ್ಮಲವೂ ಆನಂದವೂ ಆದ ಸತ್ಯ ವಸ್ತುವಿನ ಅನುಭವವು ಹೇಗೆ ಬಾರದೆ ಹೋಗುತ್ತದೆ ? ನೀರು ತೆರೆನೊರೆಗಳಾದಂತೆ ವಿಚಿತ್ರ ವಾಸನಾಯುಕ್ತ ಚಿತ್ತವೇ ಅಹಂಭಾವಾದಿ ವಿಲಾಸದಿಂದ ವಿವರ್ತವಾಗುತ್ತದೆ. ಸರ್ವತ್ಯಾಗದಿಂದಲೇ ಸರ್ವಪ್ರಾಪ್ತಿಯು, ಸರ್ವ ಮಹತ್ತ್ವವು, ಪರಮಾನಂದವೂ ಉಂಟಾಗುತ್ತದೆ. ಮಿಕ್ಕ ಸರ್ವವೂ ದಾರುಣ ದುಃಖವೇ ಆಗಿದೆ.

“ಹೇ ಮಹಾತ್ಮಾ! ನೀನು ಯಾವ ಅಹಂಕಾರದ ಯೋಗದಿಂದ ಎಲ್ಲವನ್ನೂ ತ್ಯಾಗಮಾಡಿದ್ದೀಯೋ, ಆ ಅಹಂಕಾರವನ್ನೂ ತ್ಯಾಗಮಾಡು ; ಅಂದರೆ 'ನಾನು ತ್ಯಾಗಮಾಡಿದ್ದೇನೆ' ಎಂಬ ರೂಪದ ಅಭಿಮಾನವನ್ನೂ ಬಿಟ್ಟು ವಿಮುಕ್ತನಾಗು.

“ಆದರೆ, ವಾಸನೆಯೇ ಚಿತ್ತದ ಸ್ವರೂಪವಾಗಿದೆ. ವಾಸನೆಗೆ ಇನ್ನೊಂದು ಹೆಸರೇ ಚಿತ್ತವೆಂದಿದೆ. ಆದ್ದರಿಂದ ವಾಸನಾಕ್ಷಯವೇ ಚಿತ್ತದ ಕ್ಷಯವಾಗಿದೆ. ವಾಸನಾ ಕ್ಷಯಕ್ಕೆ ಅಥವಾ ವಾಸನಾನಾಶಕ್ಕೆ ಎರಡು ಸಾಧನಗಳಿವೆ. ಸರ್ವವಿಷಯಗಳಲ್ಲಿಯೂ ವ್ಯವಹಾರಗಳಲ್ಲಿಯೂ ಅನಾಸಕ್ತಿಯೂ ಒಂದು ಸಾಧನ. ಆತ್ಮ ವಿಚಾರವು ಇನ್ನೊಂದು ಸಾಧನ. ಚಿತ್ತವೃಕ್ಷದ ಬೇರನ್ನು ಸುಡುವ ಬೆಂಕಿಯು ಆತ್ಮಸ್ವರೂಪ ವಿಚಾರವೇ ಆಗಿದೆ. ವಾಸನೆಯ ಬೇರು ಅಹಂಕಾರವಾಗಿಯೂ ಅಹಂಕಾರದ ಮೂಲವು ಅಜ್ಞಾನವಾಗಿಯೂ ಇದೆ. ಸರ್ವಾನರ್ಥಗಳಿಗೂ ಮೂಲವಾದ ಅಜ್ಞಾನವು ಆತ್ಮ ಸ್ವರೂಪದ ವಿಜ್ಞಾನದಿಂದಲೇ ನಾಶವಾಗುತ್ತದೆ. ಆತ್ಮ ಅಥವಾ ಬ್ರಹ್ಮವು ಪ್ರಪಂಚ ದಿಂದ ವಿಲಕ್ಷಣವೂ ಅಸಂಗವೂ ಪರಿಶುದ್ಧವೂ ಆಗಿರುವುದರಿಂದ ಅದು ಯಾವದರ ಕಾರ್ಯವೂ ಆಗಿಲ್ಲ ; ಕಾರಣವೂ ಆಗಿಲ್ಲ. ಆತ್ಮ ಸ್ವರೂಪಿಯಾದ ನೀನು ಕರ್ತನೂ ಆಗಿಲ್ಲ ; ಭೋಕ್ತನೂ ಆಗಿಲ್ಲ. ಸರ್ವಶಾಂತ ಶಿವಸ್ವರೂಪಿಯಾಗಿದ್ದಿ. ಯೋಗ್ಯವಾದ ಕಾರಣವೇ ಇಲ್ಲವಾದುದರಿಂದ, ಕಾರ್ಯರೂಪವಾಗಿ ತೋರುವ ಜಗತ್ತಿನ ಭಾಸವು ಭ್ರಮೆಯೇ ಆಗಿದೆ. ಅಂದರೆ ಈ ಸೃಷ್ಟಿಯೇ ನಿಜವಲ್ಲ ; ಸುಳ್ಳಾಗಿದೆ. ಪದಾರ್ಥವೇ ಸಿದ್ಧವಾಗದಿದ್ದರೆ ವೇದನೆ ಯಾರಿಗಾಗಬೇಕು? ಸಂವೇದನೆಯೇ ಇಲ್ಲವಾದರೆ ಅಹಂಕಾರದ ಕಾರಣವಾದರೂ ಎಲ್ಲಿದೆ? ಆದ್ದರಿಂದ ರಾಜಾ! ನೀನು ಪರಿಶುದ್ಧನೂ ಅತ್ಯಂತ ಮುಕ್ತನೂ ಆಗಿದ್ದಿ.”

ಚೂಡಾಲೆಯು ಈ ಬೋಧೆಯನ್ನು ಕೇಳಿ ಶಿಖಿಧ್ವಜನು :

“ಭಗವನ್! ನಿಜವಾಗಿಯೂ ನೀನು ಬಹಳ ಉತ್ತಮ ಯುಕ್ತಿ ಯುಕ್ತವಾದ ಬೋಧಮಾಡಿದ್ದಿ. ಕಾರಣವೇ ಇಲ್ಲವಾದುದರಿಂದ, ಬ್ರಹ್ಮ ಕರ್ತೃವೂ ಅಲ್ಲ. ಕರ್ತನೇ ಇಲ್ಲವಾದುದರಿಂದ ಕಾರ್ಯರೂಪ ಜಗತ್ತೂ ಇಲ್ಲ. ಜಗತ್ತು ಇಲ್ಲವೆಂದರೆ ಪದಾರ್ಥ ದೃಷ್ಟಿ ಇಲ್ಲ. ಅದರಿಂದಲೇ ಅದರ ಬೀಜವಾದ ಚಿತ್ತವಿಲ್ಲ ; ಚಿತ್ತದ ಬೀಜವಾದ ಅಹಂತೆಯೂ ಇಲ್ಲ. ಆದ್ದರಿಂದ ನಾನು ಶುದ್ಧ-ಬುದ್ಧ-ಶಿವನಾಗಿದ್ದೇನೆ. ನನಗೆ ನಮಸ್ಕಾರವಿರಲಿ! ಚಿತ್‌ಸ್ವರೂಪದಿಂದ ಭಿನ್ನವಾದ ಚಿದ್ವಿಷಯವಿಲ್ಲ. ಇಲ್ಲದಿರುವುದೇ ಇದ್ದಂತೆ ತೋರುತ್ತಿದೆ. ನಾನು ಆಕಾಶದಂತೆ ನಿರ್ಮಲನೂ ಶಾಂತನೂ ಇದ್ದು ಅದರಲ್ಲಿಯ ಮೋಡದಂತೆ ಈ ಜಗತ್ತು ತೋರಿ ಅಡಗುತ್ತಿದೆ. ನನ್ನ ಭ್ರಮೆಯೆಲ್ಲಾ ಅಡಗಿ, ಅಹಹಾ! ನಾನು ಶಾಂತಬ್ರಹ್ಮನಾಗಿ ಉಳಿದಿದ್ದೇನೆ. ನಾನು ಅತಿಶಯ

ಸುಖಿಯೂ ಪೂರ್ಣರೂಪನೂ ಆಗಿದ್ದೇನೆ. ನಿನ್ನ ಆತ್ಮನೇ ನನ್ನ ಆತ್ಮನಾಗಿರುವದ ರಿಂದ ಈಗ ನನಗೆ ಭೇದಭಾವನೇ ತೋರುವುದಿಲ್ಲ. ನಾನು ನಿರ್ಭಯನೂ ಶಾಂತ, ಶಿವ, ವಶವಾಗಿದ್ದೇನೆ. ಭಗವನ್ ! ಹೀಗೆಯೇ ನಾನು ಸುಖದಿಂದಿರುತ್ತೇನೆ.

ಹೀಗೆ ಹೇಳುತ್ತಾ ಶಿಖಿಧ್ವಜನು ಬ್ರಹ್ಮಾನಂದದಲ್ಲಿ ವಿಶ್ರಾಂತಿಯನ್ನು ಪಡೆದು, ಎರಡು ಘಟಿಗಳ ಕಾಲ, ಗಾಳಿಯಿಲ್ಲದ ಸ್ಥಳದಲ್ಲಿರುವ ದೀಪದಂತೆ ಅತಿಶಯ ಶಾಂತ ಚಿತ್ತನೂ ನಿಶ್ಚಲನೂ ಆಗಿದ್ದನು.

ಆದರೆ, ಅವನಿಗಿನ್ನೂ ಬೋಧಮಾಡಬೇಕಾದ ವಿಚಾರವಿದ್ದುದರಿಂದ ನಿರ್ವಿಕಲ್ಪ ಸಮಾಧಾನ ಪರಾಯಣನಾದ ಕುಂಭನು ರಾಜನನ್ನು ಸಮಾಧಿಯಿಂದ ಎಚ್ಚರಗೊಳಿಸಿದನು. ಶಿಖಿಧ್ವಜನಿಗೆ ಕುಂಭನು ಪುನಃ ಹೀಗೆ ಹೇಳಿದನು :

"ರಾಜಾ ! ವಸ್ತುತಃ ಶುದ್ಧಬ್ರಹ್ಮವು ಯಾವ ಕಾರ್ಯಕ್ಕೂ ಕಾರಣವಾಗಿಲ್ಲ. ಆದ್ದರಿಂದ ಕಾರಣವೇ ಇಲ್ಲದಿರುವ ಸೃಷ್ಟಿಯು ನಿಜವಲ್ಲ. ಬೇರೆ ಯಾವ ರೀತಿಯಿಂದಲೂ ಜಗತ್ತು ಸತ್ಯವೆಂದು ಸಿದ್ಧಮಾಡುವುದು ಸಾಧ್ಯವಲ್ಲ. ಚಿನ್ಮಾತ್ರದ ಹೊರತು ಜಡಸಂಸಾರ ಇಲ್ಲವೇ ಇಲ್ಲ. ತೋರುವುದೆಲ್ಲಾ ಚಿತ್ತದ ವಿಲಾಸವೇ ಆಗಿದೆ. ಚಿತ್ತದ ಚಮತ್ಕಾರವೆಲ್ಲಾ ಅಡಗಿಹೋಯಿತೆಂದರೆ, ಒಳಗಡೆ ಅಹಂಭಾವದ ಉದಯಕ್ಕಾಗಲೀ ಹೊರಗಡೆ ಪದಾರ್ಥದ ತೋರಿಕೆಗಾಗಲೀ ಅವಕಾಶವೇ ಇಲ್ಲ. ಅಹಂಭಾವವೇ ಇಲ್ಲವಾದರೆ ಚಿತ್ತವೆಂದು ಯಾವುದಕ್ಕೆ ಹೇಳಬೇಕು ? ಶುದ್ಧವಾದ ಚಿತ್ ಒಂದೇ ಸತ್ಯವೆಂಬ ದೃಷ್ಟಿಯು ಬಂದರೆ ಜಡಪದಾರ್ಥವೇ ಉಳಿಯುವುದಿಲ್ಲ. ಚಿತ್ತವೂ ಎಂದೂ ಎಲ್ಲಿಯೂ ಇಲ್ಲವೇ ಇಲ್ಲ. ಆದರೆ ಈ ಯಾವುದು ಚಿತ್ತದಂತೆ ತೋರುತ್ತಿದೆಯೋ ಅದು ಅವ್ಯಯ ಬ್ರಹ್ಮವೇ ಆಗಿದೆ. ಈ ಎಲ್ಲಾ ಜಗತ್ತೂ ಬ್ರಹ್ಮವೇ ಆಗಿದೆ. ಅಜ್ಞಾನದಿಂದಲೇ ಅಹಂಕಾರಾದಿ ಸರ್ವ ಜಗತ್ತೂ ತೋರುತ್ತಾ ಇದೆ. ಇರುವದು ಬ್ರಹ್ಮ ಒಂದೇ ಎಂಬ ಜ್ಞಾನದಿಂದ ಅಜ್ಞಾನದ ನಾಶವಾದರೆ, ಸ್ವಪ್ರಕಾಶ ಪೂರ್ಣಾನಂದವು ಅನುಭವಕ್ಕೆ ಬರುತ್ತದೆ. ಇದರಿಂದಾಗಿ ಅನಾಯಾಸವಾಗಿ ಪರಮ ಪುರುಷಾರ್ಥವು ಸಿದ್ಧಿಯಾಗುತ್ತದೆ."

ಕುಂಭಮುನಿಯ ಈ ಅಮೃತಮಯವಾದ ವಚನವನ್ನು ಶ್ರವಣ ಮನನ ಮಾಡುತ್ತಾ ಶಿಖಿಧ್ವಜನು ಆ ಆತ್ಮಸ್ವರೂಪದಲ್ಲಿ ಕ್ಷಣಕಾಲ ವಿಶ್ರಾಂತಿ ಪಡೆದನು. ಅವನ ನೇತ್ರಗಳೂ ಮನಸ್ಸೂ ಮುಚ್ಚಿಕೊಂಡವು. ಮಾತು ನಿಂತಿತು. ಅವನು ಕಲ್ಲಿನ ಮೇಲೆ ಕೆತ್ತಿದ ಮೂರ್ತಿಯಂತೆ ನಿಶ್ಚಲಭಾವವನ್ನು ತಳೆದನು. ಎರಡು ಘಳಿಗೆ ಆ ಅವಸ್ಥೆಯಲ್ಲಿಯೇ ಇದ್ದು, ರಾಜನು ಸ್ವಲ್ಪ ಎಚ್ಚೆತ್ತು ಕಣ್ಣುಗಳನ್ನು ತೆರೆದನು.

ಆಗ ಕುಂಭನು "ರಾಜಾ! ಈಗ ನೀನು ಅಜ್ಞಾನ ನಿದ್ರೆಯಿಂದ ಎಚ್ಚರಗೊಂಡಿದ್ದೀಯೆ. ಅಪ್ಪಾ! ಈಗ ನೀನು ಸರ್ವಸಂಕಲ್ಪಶೂನ್ಯನಾಗಿರುವುದರಿಂದ ಜೀವನ್ಮುಕ್ತನಾಗಿದ್ದಿ. ಅಜ್ಞಾನವಿರುವವರೆಗೂ ಆನಂದಸಾಗರವು ದುರ್ಲಭವಾಗಿರುತ್ತದೆ. ಆದರೆ ಅಜ್ಞಾನದ ನಾಶವಾದರೆ ಆತ್ಮಸ್ವರೂಪವಾದ ಆನಂದವು ಸದಾ ಸುಲಭವಾಗುತ್ತದೆ. ಮಹಾರಾಜಾ! ನಿನ್ನೊಳಗೆ ಈಗ ನಿಜವಾದ ಬೋಧೆಯುಂಟಾಗಲಿಲ್ಲವೆ? ನೀನು ಸರ್ವಭ್ರಾಂತಿಗಳನ್ನೂ ತ್ಯಾಗಮಾಡಿ ಆನಂದಪದದಲ್ಲಿ ಸುಖವಾಗಿ ವಿಶ್ರಾಂತಿ ಪಡೆದಿದ್ದೀಯಲ್ಲವೆ?" ಎಂದು ಕೇಳಿದನು.

ಅದಕ್ಕೆ ಶಿಖಿಧ್ವಜನು: "ಭಗವನ್! ನಿನ್ನ ಮಹಾಪ್ರಸಾದದಿಂದ ನಾನು ನಿರತಿಶಯ ಆನಂದಲಕ್ಷಣವುಳ್ಳ ಮಹಾಪದವಿಯನ್ನು ಪಡೆದಿದ್ದೇನೆ. ನಾನು ಈಗ ಹಿರಣ್ಯಗರ್ಭನ ಆನಂದವನ್ನೂ ಮೀರಿದ ಆನಂದದ ಪರಮ ಸೀಮೆಯಲ್ಲಿ ನಿಂತಿದ್ದೇನೆ. ಅಹಹಾ! ಮಹಾತ್ಮನಾದ ತತ್ತ್ವಜ್ಞಾನಿಯ ಸಂಗವು ಅಪೂರ್ವವೂ ಅಲೌಕಿಕವೂ ಅಮೃತಮಯವೂ ಆದುದು. ಅನೇಕ ಸಹಸ್ರ ಜನ್ಮಗಳಿಂದ ನನಗೆ ಸಿಗದಿದ್ದ ಮಹಾ ಅಮೃತವು ನಿನ್ನ ಸಮಾಗಮದಿಂದ ತಾನಾಗಿಯೇ ಪ್ರಾಪ್ತವಾಗಿದೆ. ನಿನಗೆ ನಾನು ಚಿರಋಣಿಯಾಗಿದ್ದೇನೆ." ಎಂದು ನಮಸ್ಕರಿಸಿದನು.

ರಾಗ: ಮಿಶ್ರಪೀಲು ತಾಳ:

ಗುರುದೇವ ನಿನ್ನ ಬೋಧಾ-ದಯದಿಂದ ಧನ್ಯನಾದೆ ॥ ಧ್ರು ॥

ಭವದುಃಖ ನಾಶವಾಗೇSSS । ಸುಖಾತ್ಮ ಪ್ರಾಪ್ತಿಯಾಗೆ ॥ ೧ ॥

ಭಗವನ್! ಮಹೋಪಕಾರಾ । ಅಪೂರ್ವವಾಯ್ತುಪಾರಾ ॥ ೨ ॥

ಪರಮಾತ್ಮ ಸೌಖ್ಯಸೀಮಾ { ಕೃಪಾಳುವಿತ್ತ ಭೂಮಾ ॥
ಕೃಪಾನುಭೂತ ಭೂಮಾ ॥ ೩ ॥

ಆಗ ಕುಂಭನು ಅತಿ ಸಂತೋಷದಿಂದ "ರಾಜಾ! ನಿನ್ನ ಭೂಮಾನುಭವವನ್ನರಿತು ಪರಮ ಸಂತೋಷವಾಯಿತು. ಈಗ ನಾನು ಸ್ವರ್ಗಕ್ಕೆ ಹೋಗುತ್ತೇನೆ. ಈ ಸರ್ವಸಮಯದಲ್ಲಿ ನಾರದ ಮುನಿಯು ಬ್ರಹ್ಮಲೋಕದಿಂದ ದೇವಸಭೆಯಲ್ಲಿ ಬಂದಾಗ ಅವನು ನನ್ನನ್ನು ಅಲ್ಲಿ ನೋಡದಿದ್ದರೆ ನನ್ನ ಮೇಲೆ ಸಿಟ್ಟುಮಾಡಬಹುದು. ಸಂಕಲ್ಪಶೂನ್ಯ, ನಿರಿಚ್ಛ ಪುರುಷನು ಎಂದಿಗೂ ಗುರುವಿಗೆ ಉದ್ವೇಗವನ್ನುಂಟುಮಾಡಬಾರದೆಂದು ನೀತಿಯಿದೆ." ಎಂದನು.

ಶಿಖಿಧ್ವಜನು ಇದನ್ನು ಕೇಳಿ ಕೈಯಲ್ಲಿರುವ ಪುಷ್ಪಾಂಜಲಿಯನ್ನರ್ಪಿಸಿ ಪ್ರಣಾಮಮಾಡಿ ಏನೋ ಪ್ರತಿವಚನವನ್ನು ಹೇಳಬೇಕೆಂದಿದ್ದನು ; ಆದರೆ, ಅಷ್ಟರಲ್ಲಿ ದೇವಕುಮಾರನು ಅಂತರ್ಧಾನ ಹೊಂದಿದನು. ಪತಿಯ ಪ್ರಣಾಮವನ್ನು ಸಾಧ್ವಿಯರು ಸ್ವೀಕರಿಸಬಾರದಾದ್ದರಿಂದ ಚೂಡಾಲೆಯು ಆತುರವಾಗಿ ಗುಪ್ತವಾದಳು. ಆಗ ಅದನ್ನೇ ವಿಚಾರ ಮಾಡುತ್ತಾ ವಿಸ್ಮಿತನಾಗಿದ್ದ ರಾಜನು ಚಿತ್ರದಂತೆ ಸ್ತಬ್ಧವಾದನು. ವಿಧಿಯ ಆ ವಿಚಿತ್ರ ಗತಿಗಾಗಿ ಆಶ್ಚರ್ಯಪಟ್ಟನು. “ ಎಷ್ಟೋ ವರ್ಷಗಳ ಅನಂತರ ಕುಂಭನಿಂದ ನನಗೆ ನಿತ್ಯೋದಿತ ಆತ್ಮನ ವಿಚಾರವು ಉಪದೇಶವಾಯಿತು. ನಾರದ ಪುತ್ರನಾದ ಕುಂಭ ಎಲ್ಲಿ? ಶಿಖಿಧ್ವಜನಾದ ನಾನೆಲ್ಲಿ? ಕೇವಲ ಭಾಗ್ಯೋದಯ ವಶದಿಂದಲೇ ನನಗೆ ಜ್ಞಾನಲಾಭವಾಗಿದೆ. ದೇವಪುತ್ರನು ನನಗೆ ಸರ್ವಯುಕ್ತಿಯುಕ್ತ ವಾದ ತತ್ತ್ವವನ್ನೇ ಹೇಳಿದ್ದಾನೆ. ಕ್ರಿಯಾಕಲಾಪರೂಪ ಕೆಸರಿನಲ್ಲಿ ಮುಳುಗಿ ಹೋಗಿದ್ದೆ. ಇದು ಕಾರ್ಯ, ಇದು ಅಕಾರ್ಯ ಎಂಬ ಮಿಥ್ಯಾಭ್ರಾಂತಿಯ ಚಕ್ರ ವ್ಯೂಹದಲ್ಲಿ ಸಿಕ್ಕಿಕೊಂಡು ಪೇಚಾಡುತ್ತಿದ್ದೆ. ಆದರೆ ಈಗಿನ ನಿಜಮಾರ್ಗವು ಶುದ್ಧವೂ ಶೀತಲವೂ ಶಾಂತವೂ ಆಗಿದೆ. ನನ್ನ ನಿರ್ವಾಸನ ಮನಸ್ಸೇ ನನಗೆ ಶೀತಲವೆನಿಸುತ್ತಿದೆ. ಈಗ ನಾನು ಶಾಂತವಾಗುತ್ತಿದ್ದೇನೆ. ಈಗ ನಾನು ಏನನ್ನೂ ಇಚ್ಛೆಮಾಡುತ್ತಿಲ್ಲ. ಹೀಗೆ ವಿಚಾರಮಾಡುತ್ತಾ ಶಿಲಾಮೂರ್ತಿಯಂತೆ ನಿಶ್ಚಲನಾದನು. ಆ ಮಹಾತ್ಮನು ಯೋಗನಿದ್ರೆಯನ್ನು ಅನುಭವ ಮಾಡುತ್ತಿದ್ದನು.

ಇತ್ತಲಾಗಿ ಅದೃಶ್ಯಳಾಗಿದ್ದ ಚೂಡಾಲೆಯು ಆಕಾಶಮಾರ್ಗದಿಂದ ನಗರಕ್ಕೆ ಬಂದು, ಅಂತಃಪುರದಲ್ಲಿ ಕುಂಭನ ವೇಷವನ್ನು ಬಿಟ್ಟು, ಚೂಡಾಲೆಯಾಗಿ ಎಂದಿನಂತೆ ಅವಶ್ಯವಾದ ರಾಜಕಾರ್ಯಗಳನ್ನು ನಡೆಸಿದಳು. ಮೂರು ದಿನಗಳ ಅನಂತರ ತನ್ನ ಯೋಗಶಕ್ತಿಯಿಂದ ಪುನಃ ಅರಣ್ಯಕ್ಕೆ ಬಂದಳು. ನಿರ್ವಿಕಲ್ಪ ಸಮಾಧಿಯಲ್ಲಿ ನಿಶ್ಚಲ ನಾಗಿ ಚಿತ್ರಾರ್ಪಿತ ಮೂರ್ತಿಯಂತಿದ್ದ ಶಿಖಿಧ್ವಜನನ್ನು ನೋಡಿ ಅತಿಶಯ ಸಂತೋಷ ಪಟ್ಟಳು.

“ ಈಗ ನಾನು ಈ ಪುಣ್ಯಾತ್ಮನನ್ನು ಇವನು ಲೀನನಾಗಿರುವ ಪರಮಪದದಿಂದ ಎಚ್ಚರಗೊಳಿಸುತ್ತೇನೆ. ಪ್ರಾರಬ್ಧ ಕರ್ಮವಿನ್ನೂ ಇರುವಾಗ ಹೀಗೆ ದೇಹತ್ಯಾಗ ಮಾಡುವದು ಉಚಿತವಲ್ಲ. ಇವನು ಕೆಲವು ಕಾಲ ಅರಣ್ಯದಲ್ಲಿಯೂ ರಾಜ್ಯದಲ್ಲಿಯೂ ಭೋಗವನ್ನು ಅನುಭವಿಸುತ್ತಾ ಇರಲಿ. ಇವನು ಈಗಲೇ ದೇಹತ್ಯಾಗವನ್ನು ಮಾಡಿ ದರೆ ನಾನು ಮಾಡಿದ ಉಪದೇಶವು ಸಪ್ತಭೂಮಿಕೆಗಳ ಪರ್ಯಂತ ಪರಿಪಕ್ವವಾಗುವು ದಿಲ್ಲ ; ಇದರ ದೆಸೆಯಿಂದ ಇವನಿಗೆ ಜೀವನ್ಮುಕ್ತಿಯ ಸುಖ ಲಭಿಸುವುದಿಲ್ಲ. ಆದ್ದರಿಂದ ಈಗ ನಾನು ಇವನನ್ನು ಎಚ್ಚರಿಸುತ್ತೇನೆ.”

ಚೂಡಾಲೆಯು ಹೀಗೆ ವಿಚಾರಮಾಡಿ, ಅರಣ್ಯದಲ್ಲಿ ಸಂಚಾರ ಮಾಡತಕ್ಕವರಿಗೂ ಭಯುವನ್ನು ಹುಟ್ಟಿಸುವಷ್ಟು ಉಚ್ಚವಾಗಿ ತನ್ನ ಪ್ರಭುವಿನ ಮುಂದೆ ಪುನಃ ಪುನಃ ಸಿಂಹನಾದ ಮಾಡಿದಳು.

ರಾಗ : ರಾಗೇಸ್ರಿ ತ್ರಿತಾಲ :

ತೊರೆದು ಬಾ ಹೊರಗೆ ಯೋಗೀಂದ್ರಾ । ರಾಜೇಂದ್ರಾ ।
ಪರಮಸುಖ ಸುಧೆಯ ನೀನೀಗಾ ಬಾ ಬೇಗಾ ಭೋಂ ॥ ಧ್ರು ॥

ಓಂ ತತ್ ಸಚ್ಚಿತ್ ಸುಖವ ಪೀರ್ದೇಳ್ಳೈ । ಮುಳುಗಿ ಮರೆಯಬೇಡ್ಯೆಯಾ–
ನೋಡ್ಯೆಯಾ । ಪರಮೇಶೋಽಽ ! ಜಗವನೆ ತೊರೆಯದೆ ಚಿತ್ತ್ರೈಸ್ಯೆ ।
ಝುಗ್ ಝುಗ್ ಝುಗ್ ಝುಗಿಸುತೆ, ಝುಗಿಸುತಲೆ ಜಗದೆ ॥ ೧ ॥

ಚೂಡಾಲೆಯು ಇಷ್ಟು ತೀವ್ರವಾಗಿ ಎಚ್ಚರಿಸಿದರೂ ರಾಜನು ಪರ್ವತಶಿಖರದಂತೆ ಅಲ್ಲಾಡಲಿಲ್ಲ. ಮತ್ತೆ ಮತ್ತೆ ಮಾಡಿದ ಘೋರನಾದದಿಂದಲೂ ಅವನಿಗೆ ದೇಹಭಾನವು ಬಾರದಿರಲು ಕೈಗಳಿಂದ ಅವನನ್ನು ಹಿಡಿದು ಅಲ್ಲಾಡಿಸಿದಳು. ಇದರಿಂದ ಭೂಮಿಯ ಮೇಲೆ ಬಿದ್ದ ಅವನನ್ನು ಹಿಡಿದು ಉರುಳಾಡಿಸಿದಳು. ಆದರೂ ಅವನಿಗೆ ಎಚ್ಚರವಾಗಲಿಲ್ಲ. ಆಗ ಕುಂಭರೂಪಿಣೀ ಚೂಡಾಲೆಯು ತನ್ನ ಮನಸ್ಸಿನಲ್ಲಿಯೇ "ಅಹಹಾ ! ಈ ಸಾಧು ಭಗವಾನ್, ಆತ್ಮಸ್ವರೂಪಸ್ಥಿತಿಯಲ್ಲಿ ಪೂರ್ಣಪರಿಣತನಾಗಿದ್ದಾನೆ. ಈಗ ಅವನನ್ನು ಯಾವ ಉಪಾಯದಿಂದ ಎಚ್ಚರಗೊಳಿಸಲಿ ? ಅಥವಾ ಈ ಮಹಾತ್ಮನನ್ನು ಎಚ್ಚರಗೊಳಿಸಿಯಾದರೂ ನಾನು ಮಾಡುವದೇನಿದೆ? ಇವನು ಈಗಿರುವ ವಿದೇಹ ಕೈವಲ್ಯದಲ್ಲಿಯೇ ಸುಖವಾಗಿರಲಿ ! ನಾನೂ ಈ ಸ್ತ್ರೀ ಶರೀರವನು ಬಿಟ್ಟು, ಪುನಃ ಜನ್ಮಪರಂಪರೆಯಲ್ಲಿ ಬೀಳದಂತೆ ಇವನ ಜೊತೆಗೇ ಹೋಗುತ್ತೇನೆ. ಏಕೆಂದರೆ, ಈ ಮಹಾತ್ಮನ ಸಹವಾಸವಿಲ್ಲದೆ, ಇಲ್ಲಿ ಜೀವಿಸಿರುವುದರಿಂದ ಯಾವ ಅಧಿಕ ಸುಖವಿದೆ ?

ರಾಗ : ಖಂಬಾವತಿ (ಮಾಂಡ್)

ಆತ್ಮನ ಧ್ಯಾನಿಪ ಗುರುಜನರಾ । ನಾ ಕ್ಷಣವು ತೊರೆದು ಜೀವಿಸಲಾರೆ ।
ಸ್ವಾತ್ಮ ಸನ್ನಿಷ್ಠೆಯ ಪತಿಯಾಽಽ ಮೀರೇ ॥ ಧ್ರು ॥

ಕ್ಷಣವು ತೊರೆದು ಜೀವಿಸಲಾರೆ ।
ಘೋರವಾ ಪತಿವಿರಹಾ–ಸಹಿಸೆ ।
ಬಾರೆಲ್ಯೆ ದೇವನೆ / ದತ್ತನೆ } ಬಾಳನೆ ವಹಿಸೆ ॥ ೧ ॥

ಹೀಗೆ ತನ್ನೊಳಗೇ ಆಲೋಚಿಸಿ ದೇಹತ್ಯಾಗ ಮಾಡಲು ಆ ಸಾಧ್ವಿಯು ಉದ್ಯುಕ್ತಳಾದಳು. ಆದರೆ ಅಷ್ಟರಲ್ಲೇ ಇನ್ನೊಂದು ವಿಚಾರವೂ ಹೊಳೆಯಿತು : "ಈ ರಾಜನ ಶರೀರವನ್ನು ಚೆನ್ನಾಗಿ ಪರೀಕ್ಷೆಮಾಡುತ್ತೇನೆ. ಈತನ ಹೃದಯದ ಒಳಗಾದರೂ ಬೋಧಬೀಜವಾದ ಸ್ರಾಣಸತ್ತ್ವ ಇದೆಯೋ ಇಲ್ಲವೋ ; ಅದು ಮಾತ್ರ ಇದ್ದರೆ, ಜೀವಂತವೃಕ್ಷದಲ್ಲಿ ಮುಂದೆಂದೋ ಪ್ರಕಟವಾಗುವ ಪುಷ್ಪದಂತೆ ಕೆಲವು ಕಾಲದ ಮೇಲೆ ಈ ಮಹಾತ್ಮನು ದೇಹಭಾನದ ಮೇಲೆ ಬಗಬಹುದು. ಅನಂತರ ಯದೃಚ್ಛೆಯಿಂದ ವಿಹಾರಮಾಡುವ ಈತನಿಗೆ ಜೀವನ್ಮುಕ್ತ ದಶೆಯ ಅನುಭವ ಬರಬಹುದು. ಆದರೆ, ಹೃದಯಾಕಾಶವನ್ನು ಜೀವಸತ್ತ್ವವು ಬಿಟ್ಟು ಹೊರಟುಹೋಗಿದ್ದರೆ, ನಾನೂ ದೇಹತ್ಯಾಗವನ್ನು ಮಾಡಿ ಮುಕ್ತಳಾದೇನು !"

ಹೀಗೆ ವಿಚಾರಮಾಡಿ ಚೂಡಾಲೆಯು ತನ್ನ ಕೈಯಿಂದ, ಪತಿಯ ಶರೀರದಲ್ಲಿ ಸತ್ತ್ವಗುಣವಾದ ಉಷ್ಣತೆಯು ಇದೆಯೋ ಇಲ್ಲವೋ ಎಂದು ಪರೀಕ್ಷಿಸಿ ನೋಡಿದಳು. ಆಗ, ಒಳಗೆ ಕಾಖವಿದೆಯೆಂದು ನಿಶ್ಚಯಿಸಿ ಸಂತೋಷಿಸಿದಳು. ಚಿತ್ತಸ್ಪಂದರಹಿತವಾಗಿಯೂ ದ್ವೈತಾದ್ವೈತ ಭಾವನಾಶೂನ್ಯವಾಗಿಯೂ ಇರುವ ಪುರುಷನ ದೇಹವು ಮ್ಲಾನವಾಗುವುದಿಲ್ಲ. ಆದ್ದರಿಂದ ಚೂಡಾಲೆಯು ಇಂದ್ರಿಯಗಳ ಪಂಜರವಾಗಿರುವ ತನ್ನ ದೇಹವನ್ನು ಬಿಟ್ಟು, ಸರ್ವವ್ಯಾಪಿಯಾದ ಶುದ್ಧ ಚಿತ್-ತತ್ತ್ವದಲ್ಲಿ ಪ್ರವೇಶಮಾಡಿ, ಅಲ್ಲಿ ಲೀನವಾಗಿದ್ದ ತನ್ನ ಪ್ರಭುವಿನ ಚೇತನವನ್ನು ಸಂಚಲನಮಾಡಿ, ಎಚ್ಚರಗೊಳಿಸಿ, ಪುನಃ ತನ್ನ ಶರೀರದಲ್ಲಿ ಬಂದು ಸೇರಿಕೊಂಡಳು. ಪ್ರಭುವಿನ ಎದುರು ಪುಷ್ಪಮಯವಾದ ಸ್ಥಳದಲ್ಲಿ ಕುಳಿತು ಮಂಜುಲಸ್ವರದಿಂದ ಸಾಮಗಾನ ಮಾಡತೊಡಗಿದಳು. ಆ ಮನೋಹರವಾದ ಸಾಮಧ್ವನಿಯನ್ನು ಕೇಳಿ ಶಿಖಿಧ್ವಜನ ಶರೀರದೊಳಗಿನ ಸತ್ತ್ವಗುಣಶಾಲಿನಿಯಾದ ಚಿತ್ ಸಾವಧಾನವಾಯಿತು. ಅವನು ಸಾವಕಾಶವಾಗಿ ನೇತ್ರಗಳನ್ನು ಬಿಚ್ಚಿದೊಡನೆಯೇ, ಸಾಮಗಾನ ಮಾಡುತ್ತಿದ್ದ ಕುಂಭನ ದಿವ್ಯ ಮೂರ್ತಿಯ ದರ್ಶನವಾಯಿತು. ಅದರಿಂದ ಆನಂದ ಹೊಂದಿದ ರಾಜನು "ಭಗವನ್! ನನ್ನ ಮಹಾಭಾಗ್ಯದಿಂದಲೇ ನನಗೆ ಪುನಃ ದರ್ಶನ ಕೊಡುವ ಸ್ಮರಣೆಯು ತಮ್ಮ ಚಿತ್ತದಲ್ಲಿ ಬಂದಿತು. ಇದು ನನ್ನನ್ನು ಪಾವನ ಮಾಡುವದಕ್ಕೇ ಇರಬೇಕು." ಎಂದು ಹೇಳಿ ಪುಷ್ಪವನ್ನು ಅರ್ಪಣೆ ಮಾಡಿದನು.

ಕುಂಭನು ಅದಕ್ಕೆ "ರಾಜಾ! ಇಲ್ಲಿಂದ ರಮ್ಯವಾದ ಉತ್ಕೃಷ್ಟ ಸ್ವರ್ಗಕ್ಕೆ ಹೋದರೂ ಕೂಡ ನನ್ನ ಮನಸ್ಸು ನಿನ್ನಲ್ಲಿಯೇ ಇದ್ದಿತು. ನಿನ್ನ ಸಮಾನ ಬಂಧುವೂ ಆಪ್ತನೂ ಸುಹೃತ್ತೂ ಮಿತ್ರನೂ ಸಖನೂ ವಿಶ್ವಾಸಪಾತ್ರನೂ ಶಿಷ್ಯನೂ ನನಗೆ ಜಗತ್ತಿನಲ್ಲಿ ಬೇರೆ ಯಾರೂ ಕಾಣುವುದಿಲ್ಲ." ಎಂದನು.

ಶಿಖಿಧ್ವಜನು "ಪ್ರಭೋ ! ತಮಗೆ ಸ್ವರ್ಗವೂ ಪ್ರಿಯವೆನಿಸದಿದ್ದರೆ ಈ ತಮ್ಮ ಭೃತ್ಯನಿರುವ ಈ ಅರಣ್ಯಾಶ್ರಮದಲ್ಲಿಯೇ ತಾವು ಸುಖದಿಂದಿರಬಹುದು. ತಾವು ಬೋಧಿಸಿರುವ ಯುಕ್ತಿಯಿಂದ ನನಗೆ ಯಾವ ವಿಶ್ರಾಂತಿ ದೊರಕಿದೆಯೋ ಅಂಥಾ ವಿಶ್ರಾಂತಿ ಸ್ವರ್ಗದಲ್ಲಿಯೂ ಕೂಡ ಇರಲಾರದು. ಆ ಯೋಗಯುಕ್ತಿಯಿಂದಲೇ ತಾವು ಇಲ್ಲಿಯೇ ಆ ಆನಂದವನ್ನು ಅನುಭವಿಸುತ್ತಾ ಇರಬಹುದು. ನಾನು ತಮ್ಮ ಕೃಪಾ ಪ್ರಸಾದದಿಂದ ಸಂಸಾರಸಾಗರವನ್ನು ದಾಟಿದ್ದೇನೆ. ನಾನು ಸತತ ತೃಪ್ತನಾಗಿದ್ದೇನೆ. ನನ್ನ ವಾಸನಾಶೂನ್ಯ ಚಿತ್ತದಲ್ಲಿ ನಿರಂತರ ಆತ್ಮನ ಸಚ್ಚಿದಾನಂದ ಸ್ವರೂಪದ ಸ್ಫುರಣ ವಾಗುತ್ತಿದೆ. ಅದರಿಂದಲೇ ನಾನು ರಾಗರಹಿತನೂ ಮೋಹರಹಿತನೂ ಭಯಭ್ರಾಂತಿ ರಹಿತನೂ ಸಂಕಲ್ಪಶೂನ್ಯನೂ ಸೌಮ್ಯ-ಸಮ ಸ್ವಭಾವದವನೂ ಆಗಿದ್ದೇನೆ." ಎಂದನು.

ಹೀಗೆ ಅನ್ಯೋನ್ಯಪ್ರೇಮದಿಂದ ಸಂಭಾಷಣೆ ಮಾಡುತ್ತಾ, ಆ ಮಹಾನುಭಾವ ರಿಬ್ಬರೂ ಪರ್ವತಶಿಖರಗಳಲ್ಲಿಯೂ ರಮ್ಯವನಗಳಲ್ಲಿಯೂ ಸುಂದರ ಸರೋವರ ಗಳಲ್ಲಿಯೂ ಯಥೇಚ್ಛೆಯಾಗಿ ವಿಹಾರಮಾಡುತ್ತಾ ಅನೇಕ ದಿವಸಗಳನ್ನು ಕಳೆದರು. ಆ ಮಹಾತ್ಮರಿಬ್ಬರೂ ಒಬ್ಬರ ಇಚ್ಛೆಗೆ ಇನ್ನೊಬ್ಬರು ಅನುಮೋದಿಸಿ ಪ್ರೋತ್ಸಾಹಿ ಸುತ್ತಾ, ಅನೇಕ ಗ್ರಾಮ, ಪಟ್ಟಣ ನಗರಗಳಲ್ಲಿಯೂ ತೀರ್ಥಕ್ಷೇತ್ರಗಳಲ್ಲಿಯೂ ಸಾಧು ಸತ್ಪುರುಷರ ದರ್ಶನಮಾಡುತ್ತಾ ದೇವ, ದ್ವಿಜ, ಪ್ರಾಜ್ಞ, ಪಿತೃಗಳ ಪೂಜನ ಮಾಡುತ್ತಾ ಸಂಚರಿಸಿದರು. ಸಮಾನ ಸತ್ತ್ವ, ಸಮಾನ ಸ್ನೇಹ, ಸಮಾನ ಸೌಂದರ್ಯ, ಸಮಾನ ಪ್ರಜ್ಞೆ, ಸಮಾನ ಅನುಭವ ಇತ್ಯಾದಿಗಳನ್ನುಳ್ಳ ಈ ದೇವ ಪುರುಷರಿಬ್ಬರನ್ನೂ ನೋಡಿದ ಜನರೆಲ್ಲಾ ಬಹಳ ಕೌತುಕಪಡುತ್ತಿದ್ದರು. ಅವರು ನಿಜವಾಗಿ ದಂಪತಿಗಳಾಗಿದ್ದರೂ ಕೂಡ ಆದರ್ಶ ಮಿತ್ರರಂತೆ ತೋರುತ್ತಿದ್ದರು. ಕುಂಭನ ಸಹವಾಸದಿಂದ ರಾಜನ ಸ್ಥಿತಿಯೂ ಕೂಡ ಹೆಚ್ಚು ಪರಿಪಕ್ವತೆಯನ್ನು ಪಡೆಯಿತು.

ಆದರೆ, ದೇವತಾಸ್ತ್ರೀಯಾದ ಚೂಡಾಲೆಯ ಮಹಾಸಮಸ್ಯೆಯಲ್ಲಿ ಅರ್ಧಭಾಗವು ಮಾತ್ರ ಪರಿಹಾರವಾಗಿತ್ತು. ತನ್ನ ಪತಿಯನ್ನು ಪೂರ್ಣ ತತ್ತ್ವಜ್ಞಾನಿಯನ್ನಾಗಿ ಮಾಡಬೇಕಾಗಿದ್ದ ಪಾರಮಾರ್ಥಿಕ ಕರ್ತವ್ಯವು ಮಾತ್ರ ಸಾಧಿಸಿತ್ತು; ಆ ಮಹಾ ಪುರುಷನಿಗೆ ಪತ್ನಿಯಾದ ತನ್ನಲ್ಲಿ ವಿಶ್ವಾಸವನ್ನು ಹುಟ್ಟಿಸಿ, ಕ್ಷಾತ್ರಧರ್ಮವಾದ ರಾಜ್ಯ ಪರಿಪಾಲನಮಾಡುವ ಲೋಕಸಂಗ್ರಹ ಕಾರ್ಯವನ್ನು ಆತನು ನೆರವೇರಿಸುವಂತೆ ಮಾಡಬೇಕಾಗಿದ್ದ ಪ್ರಾಪಂಚಿಕ ಕರ್ತವ್ಯವನ್ನು ಆಕೆಯು ಸಾಧಿಸಬೇಕಾಗಿತ್ತು. ಯೋಗಿ ಯಾಗುವುದಕ್ಕೆ, ಸಂಸಾರಕಾರಣವಾದ ರಾಗಭಾವಗಳನ್ನು ತ್ಯಾಗಮಾಡುವದು ಹೇಗೆ ಮೊದಲು ಅವಶ್ಯವೋ ಹಾಗೆಯೇ ಯೋಗಸಿದ್ಧನಾದ ಮೇಲೆ ರತಿ-ವಿರತಿಗಳ ಭೇದ ವಿಲ್ಲದೆ ತ್ಯಾಗ-ಭೋಗಗಳ ಮೋಹವಿಲ್ಲದೆ, ನಿಯಮ-ನಿರ್ಬಂಧಗಳ ಆಗ್ರಹವಿಲ್ಲದೆ,

ಲೋಕಹಿತಾರ್ಥವಾದ ಧರ್ಮವನ್ನು ತನ್ನ ಜೀವನ್ಮುಕ್ತಸ್ಥಿತಿಯಲ್ಲಿ ಲೀಲೆಯಿಂದ ಆಚರಿಸುವುದು ಶಿಖಿಧ್ವಜನಿಗೆ ಅವಶ್ಯವೆನಿಸುವಂತೆ, ಚೂಡಾಲೆಯು ಪ್ರಯತ್ನ ಮಾಡ ಬೇಕಾಗಿತ್ತು. ರಾಜನಿಗೆ ತಾರಕಗುರುವಾಗಿ, ಪರಮಪೂಜ್ಯನೆನಿಸಿದ್ದ ಕುಂಭನೇ ತಾನೆಂದು ಚೂಡಾಲೆಯು ಮೊದಲು ಪ್ರಕಟಪಡಿಸಬೇಕಾಗಿತ್ತು. ಅನಂತರ ತನ್ನನ್ನು ನೋಡಿ, ರಾಜನಿಗೆ ತನ್ನಲ್ಲಿ ರತಿವುಂಟಾಗುವಂತೆ ಚೂಡಾಲೆಯು ಮಾಡಬೇಕಾಗಿತ್ತು. ಆದ್ದರಿಂದ ಚೂಡಾಲೆಯು ಇದನ್ನೆಲ್ಲಾ ಆಲೋಚಿಸಿ ಒಂದು ಉಪಾಯ ಮಾಡ ಬೇಕೆಂದು ರಾಜನನ್ನು ಕುರಿತು,

"ಮಹಾರಾಜ ! ಇವತ್ತು ಚೈತ್ರಮಾಸದ ಪ್ರಥಮ ದಿವಸ, ಯುಗಾದಿ ಪ್ರಾಪ್ತ ವಾಗಿದೆ. ಇವತ್ತು ಇಂದ್ರನ ಸಭೆಯಲ್ಲಿ ದೊಡ್ಡ ಸಮಾರಂಭವೊಂದು ನಡೆಯಲಿದೆ ; ನಿಜವಾಗೆಂದರೆ, ನಾನು ನನ್ನ ತಂದೆಯೊಡನೆ ಆ ವೇಳೆಯಲ್ಲಿ ಅಲ್ಲಿ ಇರಬೇಕು. ನಿಯತಿ ಯನ್ನು ಸುಜ್ಞಾನಿಯು ಎಂದೂ ಮೀರಬಾರದು. ಇದಕ್ಕಾಗಿ ಇವತ್ತು ನಾನಲ್ಲಿಗೆ ಹೋಗುತ್ತೇನೆ. ನೀನು ಇಲ್ಲಿಯೇ ನನ್ನ ಮಾರ್ಗ ನಿರೀಕ್ಷೆ ಮಾಡುತ್ತಾ ಇರು. ಇವತ್ತು ಸಾಯಂಕಾಲವೇ ನಾನು ಪುನಃ ಇಲ್ಲಿಗೆ ಹಿಂದಿರುಗುತ್ತೇನೆ; ಏಕೆಂದರೆ, ನಿನ್ನ ಸಹವಾಸವೇ ನನಗೆ ಸ್ವರ್ಗಕ್ಕಿಂತಲೂ ಹೆಚ್ಚು ಪ್ರಿಯವಾಗಿ ತೋರುತ್ತದೆ.'' ಹೀಗೆಂದು ಹೇಳಿ, ತನ್ನಷ್ಟೇ ಸುಂದರವಾಗಿದ್ದ ಕಲ್ಪವೃಕ್ಷದ ಒಂದು ಪುಷ್ಪಮಂಜರಿ ಯನ್ನು ಅವನ ಕೈಯಲ್ಲಿ ಕೊಟ್ಟು ಆಕಾಶದಲ್ಲಿ ಕರಗಿಹೋದಳು. ಸಂಜೆ, ಬೇಗ ಬರಬೇಕೆಂದು ಕುಂಭನನ್ನು ಬೇಡುತ್ತಾ ರಾಜನು, ಅದೃಶ್ಯನಾಗುತ್ತಿದ್ದ ಅವನಲ್ಲಿಯೇ ಪ್ರೀತಿ–ಕಾತರಗಳಿಂದ ನೋಟವನ್ನು ಕೀಲಿಸಿ ನೋಡುತ್ತಿದ್ದನು.

ಕುಂಭರೂಪವನ್ನು ಬಿಟ್ಟು, ರಮ್ಯವಾದ ತನ್ನ ಪೂರ್ವರೂಪವನ್ನು ಧರಿಸಿ, ಆಕಾಶಮಾರ್ಗದಿಂದ ಚೂಡಾಲೆಯು ತನ್ನ ನಗರಕ್ಕೆ ಹೋಗಿ ಅಂತಃಪುರದಲ್ಲಿ ಪ್ರವೇಶ ಮಾಡಿದಳು. ಅಲ್ಲಿ ಆ ದಿವಸದ ರಾಜಕಾರ್ಯಗಳನ್ನೆಲ್ಲಾ ಮುಗಿಸಿಕೊಂಡು ಸಾಯಂಕಾಲ ದಲ್ಲಿ ಪುನಃ ಕುಂಭವೇಷದಿಂದ ಪತಿಯ ಸನ್ನಿಧಿಗೆ ಬಂದಳು. ಆಗ ಮರದ ಮೇಲಿಂದ ಹಣ್ಣು ಕೆಳಬೀಳುವಂತೆ ಆಕಾಶದಿಂದ ರಾಜನ ಮುಂದೆ ಅಕಸ್ಮಾತ್ ಕುಂಭನು ತೋರಿ ಕೊಂಡನು. ಯಾವಾಗಲೂ ಆನಂದೋತ್ಸಾಹದಿಂದ ಕಳಕಳಿಸುತ್ತಿದ್ದ ಅವನ ಮುಖವು ಆಗ ಏಕೋ ಬಹಳ ಖಿನ್ನವಾಗಿದ್ದಂತೆ ನಿಸ್ತೇಜವಾಗಿ ತೋರಿತು. ಅದನ್ನು ನೋಡಿದ ರಾಜನೂ ವಿಸ್ಮಯವಿಷಾದದಿಂದ ಧಿಗ್ಗನೆದ್ದು ಆದರದಿಂದ '' ದೇವಪುತ್ರ ! ನಿನಗೆ ನಮಸ್ಕಾರ; ಇದೇನು ? ಇಷ್ಟೊಂದು ಖಿನ್ನನಾಗಿ ತೋರುತ್ತಿ ? ನೀನು ಕ್ಷೋಭೆ ಯನ್ನು ಬಿಟ್ಟು ಈ ಆಸನದ ಮೇಲೆ ಕುಳಿತುಕೋ. ಕಮಲದ ಎಲೆಯು ಹೇಗೆ ನೀರನ್ನು ಅಂಟಿಸಿಕೊಳ್ಳುವದಿಲ್ಲವೋ ಹಾಗೆ ಜ್ಞಾನಿ ಪುರುಷನು ಹರ್ಷವಿಷಾದಗಳನ್ನು ಅಂಟಿಸಿ ಕೊಳ್ಳುವುದಿಲ್ಲ ; ಅಲ್ಲವೆ ?'' ಎಂದನು.

ರಾಜನು ಹೀಗೆ ಸಮಾಧಾನ ಮಾಡುತ್ತಿರಲು ಆಸನದ ಮೇಲೆ ಕುಳಿತ ಕುಂಭನು ಖಿನ್ನವಾಣಿಯಿಂದ "ರಾಜಾ! ನೀನು ಹೇಳಿದ್ದು ಸರಿ. ದೇಹವಿರುವ ಪರಿಯಂತವೂ ಯಾರಿಗಾದರೂ ತಪ್ಪದೇ ಪ್ರಾಪ್ತವಾಗುವ ಬೇರೆ ಬೇರೆ ಅವಸ್ಥೆಗಳ ಮಧ್ಯದಲ್ಲಿ ಸಮಚಿತ್ತತೆಯನ್ನು ಕಾದುಕೊಳ್ಳದಿದ್ದರೆ, ಅವನು ತತ್ತ್ವವೇತ್ತನಾಗಲಾರ. ಆದರೆ, ಮೂಢರು ಸುಖಕ್ಕೆ ಕಾರಣವಾದ ಸಮಚಿತ್ತತೆಯನ್ನು ಕಾದುಕೊಳ್ಳಲಾರದೆ, ಅವಶ್ಯ ಭೋಗಿಸಲೇಬೇಕಾದ ದುಃಖಪ್ರದವಾದ ಪ್ರಾರಬ್ಧದಿಂದ ಜಾರಿಕೊಳ್ಳಲು ಹವಣಿಸುತ್ತಾರೆ. ಎಳ್ಳು ಇರುವವರೆಗೂ ಅದರೊಳಗೆ ಎಣ್ಣೆಯೂ ಹೇಗೆ ಇದ್ದೇ ಇರುವುದೋ ಹಾಗೆ, ಸುಖದುಃಖಗಳನ್ನು ಕೊಡತಕ್ಕ ಪ್ರಾರಬ್ಧದೆಶೆಗಳೂ ಇದ್ದೇ ಇರುತ್ತವೆ.

ರಾಗ : ಚಂದ್ರಕಂಸ್

ದೇಹ ಬದುಕಿರುವನಕ। ದುಃಖಸುಖ ತಪ್ಪವೋ।
ಮೋಹವನು ಬಿಡದನಕ। ಮಾತ್ರ ಸಂತಾಪವೋ ॥ ಧ್ರು ॥

ಸಾಕ್ಷಿರೂಪವನರಿತು। ಸಮತೆಯನು ಸಾಧಿಪಗೆ।
ಮೋಕ್ಷವದು ಜೀವಂತ। ಅಕ್ಷಯಾನಂದ ನಿಧಿಗೆ ॥ ೧ ॥

ಪ್ರಾರಬ್ಧ, ವಿಧಿಯಿದುವೆ। ಮೀರಲಾರಿಗುಮಳವೆ।
ಸಾರಜ್ಞ ಮೀರುವನು। ದತ್ತಮೂರ್ತಿಯ ಸುತನು ॥ ೨ ॥

ಜ್ಞಾನಿಯಾದರೂ, ಬದುಕಿರುವವರೆಗೆ ದೇಹಸಂಬಂಧವಾದ ಸುಖದುಃಖಗಳು ಅವನಿಗೂ ತಪ್ಪುವುದಿಲ್ಲ. ಆದರೆ ದೇಹವೇ ನಾನೆಂಬ ಮೋಹವನ್ನು ಬಿಟ್ಟಿರುವುದರಿಂದ ಅವನಿಗೆ ಅವುಗಳಿಂದ ಸಂತಾಪವಾಗುವದಿಲ್ಲ. ಪ್ರತ್ಯಗಾತ್ಮನ ಸಾಕ್ಷಿಸ್ವರೂಪವನ್ನರಿತು ಅಂತಃಕರಣದ ಸಮತೋಲಸೆಯನ್ನು ಸಾಧಿಸಿಕೊಂಡಿರುವವನಿಗೆ ಜೀವನ್ಮುಕ್ತಸ್ಥಿತಿಯೂ ಅಕ್ಷಯಾನಂದವೂ ಸ್ವಭಾವಸಿದ್ಧವಾದುವು. ಪ್ರಾರಬ್ಧ ಭೋಗವನ್ನು ಮೀರುವದು ಸಾಮಾನ್ಯವಾಗಿ ಯಾರಿಗೂ ಸಾಧ್ಯವಿಲ್ಲವಾದರೂ ಗುರುಕೃಪೆಯಿಂದ ಬ್ರಹ್ಮ ಒಂದೇ ಸತ್ಯವೆಂಬ ಸಾರವನ್ನರಿತವನು "ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ" ಎಂಬಂತೆ ಕರ್ಮರಹಿತನಾಗುತ್ತಾನೆ. ಆದರೆ ವ್ಯವಹಾರ ದೃಷ್ಟಿಯಿಂದ ಸುಖದುಃಖಗಳನ್ನು ಇಲ್ಲದಂತೆ ಮಾಡಿಕೊಳ್ಳುವದೆಂದರೆ ಆಕಾಶವನ್ನು ಖಡ್ಗದಿಂದ ಛೇದಿಸಿದಂತೆ ವ್ಯರ್ಥ ಪ್ರಯತ್ನವೇ ಸರಿ. ದೇಹದಿಂದ ಉಂಟಾಗುವ ದುಃಖವನ್ನು ತಪ್ಪಿಸಿಕೊಳ್ಳಬೇಕೆಂಬುದು ಯಾರಿಗಾದರೂ ಇಷ್ಟವಾದುದೇ. ಆದರೆ ಅದು ಯಾವಾಗಲೂ ಸಾಧ್ಯವಲ್ಲ. ಅದನ್ನೇ ಚಿತ್ತವನ್ನು ಸಮಸ್ಥಿತಿಯಲ್ಲಿಟ್ಟುಕೊಳ್ಳುವುದರಿಂದ ಸಾಧಿಸುವುದೇ ಶಕ್ಯವಾಗಿದೆ. ಬ್ರಹ್ಮದೇವನೇ ಮೊದಲಾದ ಸರ್ವ

ಜೀವನ್ಮುಕ್ತರೂ ಪ್ರಾರಬ್ಧಾನುಗುಣವಾದ ಭೋಗವನ್ನು ಮೀರದೇ ನಿಷಿದ್ಧವಲ್ಲದ ಕರ್ಮಗಳನ್ನು ಆಚರಿಸುತ್ತಾ ಲೋಕಕ್ಕೆ ಆದರ್ಶವಾಗಿರುತ್ತಾರೆ. ರಾಜಾ! ಅಜ್ಞಾನಿಯಾಗಲೀ ತತ್ತ್ವಜ್ಞಾನಿಯಾಗಲೀ ಪ್ರತ್ಯೇಕ ದೇಹಧಾರಿಯಾದ ಜೀವನು ಪ್ರಾರಬ್ಧ ಕರ್ಮರೂಪವಾದ ನಿಯತಿಯನ್ನು ಮೀರಲಾಗುವದಿಲ್ಲ. ಆದ್ದರಿಂದಲೇ ತತ್ತ್ವಜ್ಞಪುರುಷರು ಬುದ್ಧಿ ಮೊದಲಾದುವುಗಳನ್ನು ಸಮತೆಯಲ್ಲಿಟ್ಟುಕೊಂಡು, ಕೇವಲ ಕರ್ಮೇಂದ್ರಿಯಗಳಿಂದ ಕರ್ಮಮಾಡುತ್ತಾ ತಮ್ಮ ಸಾಕ್ಷಿಸ್ವರೂಪವನ್ನು ಕ್ಷಣವೂ ಮರೆಯದೆ ದೇಹವಿರುವವರೆಗೂ ಪ್ರಾರಬ್ಧವನ್ನು ಅನುಭವಿಸುತ್ತಾರೆ. ಅಜ್ಞರಾದರೋ ಸಾಕ್ಷಿಸ್ವರೂಪವನ್ನಾಗಲೀ ಸಮತಾ ಸ್ಥಿತಿಯನ್ನಾಗಲೀ ಅರಿಯದಿರುವುದರಿಂದ ಪ್ರಾರಬ್ಧಾಧೀನವಾದ ಹರ್ಷ ಶೋಕಗಳಿಗೆ ವಶರಾಗಿ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಕ್ಷುಬ್ಧರಾಗುತ್ತಾರೆ. ಸುಖಭೋಗವನ್ನು ಬೆಳೆಸಿಕೊಳ್ಳಬೇಕೆಂದೂ ದುಃಖಭೋಗವನ್ನು ಕಳೆದುಕೊಳ್ಳಬೇಕೆಂದೂ ಮಾಡುವ ಪ್ರಯತ್ನದಿಂದ ಅಜ್ಞರು ಅನಂತ ಜನ್ಮಗಳನ್ನು ಎತ್ತುತ್ತಾರೆ. ಸಾರಾಂಶವೇನೆಂದರೆ, ಪ್ರತಿಯೊಂದು ಜೀವಿಯೂ ಅದರದರ ಪೂರ್ವಕರ್ಮಗಳಿಗೆ ಅನುಸಾರವಾಗಿ, ಹೀಗೆ ಇಷ್ಟೊಂದು ಸುಖಪಡಬೇಕು, ಹೀಗೆ ಇಷ್ಟು ದುಃಖಪಡಬೇಕು ಎಂದು ಯಾವ ಹಣೆಯಬರಹವನ್ನು ಅದು ಸಂಪಾದಿಸಿದೆಯೋ ಅದನ್ನು ಆ ಜೀವಿಯು ಅನುಭವಿಸಲೇಬೇಕಾಗುತ್ತದೆ. ಆ ಜೀವಿಯು ಅಜ್ಞನೇ ಆಗಿರಬಹುದು ; ಸುಜ್ಞನೇ ಆಗಿರಬಹುದು. ಅವನವನ ಅಂತರಂಗದ ನೋಟದಲ್ಲಿಯೂ ನಿಲುಮೆಯಲ್ಲಿಯೂ ವ್ಯತ್ಯಾಸವಿದೆಯೇ ಹೊರತು ಅವರ ಬಹಿರಂಗದ ಭೋಗದಲ್ಲಿ ವ್ಯತ್ಯಾಸವಿರುವದಿಲ್ಲ. ಈ ರೀತಿಯಲ್ಲಿ ಪ್ರಾರಬ್ಧವಿಲಾಸವು ದುರ್ಲಂಘ್ಯವಾದುದೇ ಸರಿ.'' ಎಂದು ಹೇಳಿದನು.

ಅದಕ್ಕೆ ಶಿಖಿಧ್ವಜನು, ''ಮಹಾಭಾಗಾ! ನೀನು ಹೇಳುವದು ನಿಜವಿದೆ. ಆದರೆ, ಸಾಕ್ಷಾತ್ ದೇವತಾಸ್ವರೂಪನಾದ ನಿನಗೂ ಹೀಗೆ ಉದ್ವೇಗವನ್ನುಂಟುಮಾಡುವದಕ್ಕೆ ಕಾರಣವು ಏನಾಗಿರಬಹುದು? ಅದನ್ನು ನನಗೆ ಹೇಳು.'' ಎಂದನು.

ಕುಂಭನು ಆವನನ್ನು ಕುರಿತು, ''ರಾಜನ್! ಇವತ್ತು ಸ್ವರ್ಗದೊಳಗೆ ಏನಾಯಿತೋ ಆ ಎಲ್ಲವನ್ನೂ ನಿನಗೆ ಹೇಳುತ್ತೇನೆ. ಕೇಳು. ಏಕೆಂದರೆ, ತನ್ನ ದುಃಖವನ್ನು ಮಿತ್ರನೊಂದಿಗೆ ಹೇಳಿದರೆ ಅದು ಕೆಲವುಮಟ್ಟಿಗಾದರೂ ಹಗುರವಾಗುತ್ತದೆ. ಮಿತ್ರ! ಇವತ್ತು ಬೆಳಿಗ್ಗೆ ನಾನು ನಿನಗೆ ಪುಷ್ಪಮಂಜರಿಯನ್ನು ಕೊಟ್ಟು ಆಕಾಶ ಮಾರ್ಗದಿಂದ ಸ್ವರ್ಗಕ್ಕೆ ಹೋದೆನಲ್ಲ; ಇಂದ್ರಸಭೆಯೊಳಗೆ ಹೋಗಿ ನನ್ನ ತಂದೆಯೊಡನೆ ಕುಳಿತುಕೊಂಡೆ. ಸಭೆಯ ಸರ್ವಕಾರ್ಯಗಳೂ ನಡೆದವು; ಸಭಾವಿಸರ್ಜನೆಯಾದ ನಂತರ ತಂದೆಯ ಆಜ್ಞೆಯನ್ನು ಪಡೆದು, ನೇರವಾಗಿ ಆಗಿಂದಾಗಲೇ ಇತ್ತಕಡೆ ಬರಲು ಹೊರಟೆ. ವಾಯುಮಾರ್ಗ ಮಧ್ಯದಲ್ಲಿ ಸೂರ್ಯನ ರಥದ ಎದುರಿಗೆ

ಬರುತ್ತಿದ್ದೆ. ಆದರೆ, ಮುಂದೆ ಭಗವಾನ್ ಸೂರ್ಯನು ಒಂದು ಮಾರ್ಗದಿಂದ ಹೋದ; ನಾನು ಇನ್ನೊಂದು ಮಾರ್ಗದಿಂದ ಕೆಳಗೆ ಇಳಿಯತೊಡಗಿದೆ. ಸ್ವಲ್ಪ ಹೊತ್ತಿನಲ್ಲಿ ನಾನು ಮೇಘಾಚ್ಛಾದಿತವಾದ ಆಕಾಶಭಾಗವನ್ನು ಸೇರಿದೆ. ಇಷ್ಟರಲ್ಲಿ ಜಲಭರಿತವಾದ ಮೋಡಗಳ ಸಂದಿಯಿಂದ ತ್ವರಿತವಾಗಿ ಬರುತ್ತಿರುವ ದೂರ್ವಾಸ ಮುನಿಯನ್ನು ನೋಡಿದೆ. ಜಲಬಿಂದುಗಳಿಂದ ಮೈಮೇಲಿನ ಚಂದನವು ಸುಗಂಧವನ್ನು ಬೀರುತ್ತಿರಲು, ಮೇಘವಸ್ತ್ರವನ್ನು ಧರಿಸಿ, ಮಿಂಚಿನ ಆಭರಣಗಳಿಂದ ಅಲಂಕೃತನಾದ ಮುನಿಯನ್ನು ನೋಡಿದ ನನಗೆ, ಅವನಲ್ಲಿರುವ ತಪೋಲಕ್ಷ್ಮಿಯ ದರ್ಶನವಾಯಿತು. ಆಗ ನಾನು ಎದುರಿಗೆ ಬರುತ್ತಿದ್ದ ಆ ಕೋಪಿಷ್ಠ ಮುನಿಗೆ ನಮಸ್ಕರಿಸಿ ಆಕಾಶದೊಳಗಿಂದ ಹೋಗುತ್ತಿರುವಾಗಲೇ 'ರುದ್ರಮುನಿಯೇ! ನಿನ್ನಲ್ಲಿರುವ ಉಗ್ರ ತಪಶ್ಶಕ್ತಿ ರುದ್ರಾಣಿಯು, ಈ ದಿವಸ ನಿನ್ನನ್ನು ಅಲಂಕರಿಸಿರುವ ಮೋಡ ಮಿಂಚುಗಳ ಮನೋಹರ ಸನ್ನಿವೇಶದಿಂದ ಪ್ರಸನ್ನ ಲಕ್ಷ್ಮಿಯಂತೆ ಶೋಭಿಸುತ್ತಿದ್ದಾಳೆ!' ಎಂದು ಮುಗುಳುನಗೆಯಿಂದ ಹೇಳಿದೆ. ಎಲೈ ರಾಜ! ಇದರಲ್ಲಿ ತಪ್ಪೇನಿದೆ? ಆದರೂ ಅಕಾರಣಕೋಪಿಯೆಂದು ಪ್ರಸಿದ್ಧನಾದ ದೂರ್ವಾಸನು ನನ್ನ ಮಾತನ್ನು ಕೇಳಿದೊಡನೆ ನಿರ್ದಯೆಯಿಂದ 'ಮೂರ್ಖಾ! ನಿನ್ನ ಈ ಅಪಹಾಸ್ಯದ ದೆಸೆಯಿಂದ, ನೀನು ನಿತ್ಯವೂ ರಾತ್ರಿಯ ವೇಳೆಯಲ್ಲಿ ಸ್ತನಕೇಶಗಳಿಂದಲೂ ಹಾವಭಾವವಿಲಾಸಗಳಿಂದಲೂ ಒಪ್ಪುವ ಕಾಮಿನಿಯಾಗು!' ಎಂದು ಶಾಪವಿತ್ತನು. ಆ ಸಿಡಿಲಿನ ಸ್ವಭಾವದ ವೃದ್ಧಮುನಿಯ ಮುಖದಿಂದ ಸಿಡಿಲಿನಂತೆ ಬಂದೆರಗಿದ ಆ ಅಮಂಗಳ ವಚನವನ್ನು ಕೇಳಿ ನಾನು ಮನಸ್ಸಿನಲ್ಲಿಯೇ ತಲ್ಲಣಿಸಿ ಏನೋ ವಿಚಾರಮಾಡುತ್ತಿರಲು ಆ ಮುನಿಯು ಅದೃಶ್ಯನಾದನು. ಎಲೈ ಸಾಧುವೆ! ಅದರ ದೆಸೆಯಿಂದಲೇ ನಾನು ಹೀಗೆ ವ್ಯಥೆಪಡುತ್ತಿದ್ದೇನೆ. ರಾಜ! ನಡೆದ ವಿಚಾರವನ್ನು ನಿನಗೆ ಹೇಳಿದ್ದೇನೆ. ಈಗ ನಾನು ಏನು ಮಾಡಲಿ? ನಾನು ರಾತ್ರಿ ಸ್ತ್ರೀಯಾಗುವುದಂತು ನಿಶ್ಚಿತವಾದುದು. ಆದರೆ ಸ್ತನವತಿಯಾದ ತರುಣಿಯಾಗಿ ನಾನೊಬ್ಬಳೇ ರಾತ್ರಿಯನ್ನು ಕಳೆಯುವುದು ಹೇಗೆ? ಹರಹರಾ! ನನ್ನ ತಂದೆಗೆ ನಾನು ಏನು ಹೇಳಲಿ? ಈ ಸಂಸಾರದಲ್ಲಿ ಯಾರಾರು ಯಾವ ಯಾವ ಕಾಲಕ್ಕೆ ಏನೇನನ್ನು ಅನುಭವಿಸಬೇಕಾಗುವದೋ ಹೇಳಲು ಸಾಧ್ಯವಲ್ಲ. ಇದನ್ನು ನೋಡು! ಇವತ್ತು ನಾನು ದೈವಯೋಗದಿಂದ ತರುಣನಿಗೆ ಉಪಭೋಗ್ಯಳಾದ ತರುಣಿಯಾಗಲಿದ್ದೇನೆ!! ಇದರ ದೆಸೆಯಿಂದ ಸ್ವರ್ಗದಲ್ಲಿ ನನ್ನ ವಿಷಯವಾಗಿ ಕಾಮಾತುರರಾದ ದೇವಕುಮಾರರಲ್ಲಿ ದೊಡ್ಡ ಕಲಹವೇ ಆಗಬಹುದು; ಅವರ ಅಪಹಾರದಿಂದ ನಾನು ದೊಡ್ಡ ದುಃಖವನ್ನೇ ಭೋಗಿಸಬೇಕಾಗಬಹುದು. ಈಗ ರಾತ್ರಿ ಹೆಣ್ಣಾಗುವಂತಿರುವ ನಾನು ಲಜ್ಜಾವಶಳಾಗಿ ಗುರು, ದೇವ, ಬ್ರಾಹ್ಮಣರ ಎದುರಿನಲ್ಲಿ ಹೇಗಿರಲಿ?" ಎಂದನು.

ಚೂಡಾಲೆಯು ಹೀಗೆ ಹೇಳಿ ಒಂದು ಕ್ಷಣ ಸ್ತಬ್ಧವಾಗಿ ಕುಳಿತು ಕುಂಭರೂಪದಿಂದ ಧೈರ್ಯ ತಳೆದು, "ರಾಜಾ! ದೂರ್ವಾಸರ ಶಾಪದಿಂದ ನನ್ನ ದೇಹವು

ರೂಪಾಂತರವನ್ನು ಹೊಂದಿದರೂ ಅದರಿಂದ ನನ್ನ ಆತ್ಮಕ್ಕೆ ಯಾವ ಹಾನಿಯೂ ಆಗ ಲಾರದು." ಎಂದಳು.

ಇದನ್ನು ಕೇಳಿ ಶಿಖಿಧ್ವಜನು "ದೇವಪುತ್ರ! ದೇಹಕ್ಕೆ ಯಾವ ಕಾಲಕ್ಕೆ ಏನು ಸುಖದುಃಖವಾಗಬೇಕೋ ಅದು ಆಗಿಯೇ ತೀರುತ್ತದೆ. ಅದನ್ನು ತಪ್ಪಿಸುವದಕ್ಕೆ ಯಾರಿಂದಲೂ ಸಾಧ್ಯವಲ್ಲ. ಆದರೆ ಸರ್ವಸಾಕ್ಷಿಯೂ ಅಲಿಪ್ತನೂ ಆದ ಆತ್ಮನಿಗೆ ಅದ ರಿಂದ ಯಾವ ಹಾನಿಯೂ ಇಲ್ಲ. ದುಃಖಪ್ರಸಂಗದಲ್ಲಿ, ಲೋಕರೂಢಿಯಂತೆ, ದುಃಖಿತ ನಾದಂತೆಯೇ ಕೆಲವುಮಟ್ಟಿಗೆ ಮಾತನಾಡುವುದು ಜ್ಞಾನಿಗೂ ಸ್ವಭಾವವೇ ಸರಿ. ಇದರಿಂದ ಜನರ ಸಹಾನುಭೂತಿಯನ್ನು ಗಳಿಸಿ ಲೋಕಸಂಗ್ರಹ ಮಾಡುವದಕ್ಕೆ ಸಹಾಯವಾಗುತ್ತದೆಯೆಂದು ನೀನೇ ಹೇಳಿರುತ್ತಿ. ಅದರಂತೆ ಇಷ್ಟು ಹೊತ್ತೂ ನೀನು ಆ ನಿಯತಿಯನ್ನು ಪಾಲಿಸುವದಕ್ಕಾಗಿ, ತುಂಬಾ ಖೇದವಾದಂತೆ ಮಾತನಾಡಿ ಯಾಯಿತು. ದೇವಕುಮಾರ! ಈಗ ಅದನ್ನು ಸರ್ವಥಾ ತ್ಯಾಗಮಾಡಿ, ಮನಸ್ಸನ್ನು ಸಮತೆಗೆ ತಂದುಕೊಂಡು ದುಃಖರಹಿತನಾಗಿರು."

ಹೀಗೆ ಪರಸ್ಪರವಾಗಿ ಸಮಾಧಾನಪಡಿಸುವ ಮಾತನಾಡುತ್ತಾ ಮಿತ್ರಪ್ರೇಮ ದಿಂದ ಆನಂದವಾಗಿರಲು, ಕುಂಭನನ್ನು ಹೆಣ್ಣಾಗಿ ಮಾಡುವದಕ್ಕಾಗಿಯೇ ಎನ್ನುವಂತೆ ಸೂರ್ಯನು ಅಸ್ತಹೊಂದಿದನು. ಆಗ ಇಬ್ಬರೂ ಸಮೀಪದ ಸರೋವರಕ್ಕೆ ಹೋಗಿ ಸಂಧ್ಯೋಪಾಸನೆ ಮಾಡಿ ಬಹಳ ಹೊತ್ತು ಜಪವನ್ನೂ ಮಾಡಿದ ಮೇಲೆ ಹತ್ತಿರದ ಒಂದು ಮರದಡಿಗೆ ಹೋಗಿ ಕುಳಿತರು. ಇಷ್ಟರೊಳಗೆ ಸ್ತ್ರೀ ಶರೀರಧಾರಣೆ ಮಾಡು ತ್ತಿರುವ ಕುಂಭನು "ರಾಜಾ! ನನ್ನ ಅಂಗಗಳಲ್ಲಿ ಕಂಪನವಾಗುತ್ತಿದೆ; ಮೈಯೆಲ್ಲಾ ನೀರಿಳಿಯುತ್ತಿದೆ; ನನ್ನ ಶರೀರದಲ್ಲಿ ಏನೋ ಬದಲಾವಣೆಯಾಗುತ್ತಿರುವಂತೆ ಕಾಣು ತ್ತದೆ. ನಿಜವಾಗಿಯೂ ನೋಡು; ನನ್ನ ಕೇಶವು ನೀಳವಾಯಿತು; ಸ್ತನಗಳು ಉಬ್ಬಿ ಬೆಳೆಯುತ್ತಿವೆ. ಪ್ರತಿಯೊಂದು ಪುರುಷ ಅವಯವವೂ ಕಣ್ಮರೆಯಾಗಿ ಸ್ತ್ರೀ ಅವ ಯವವು ಉತ್ಪನ್ನವಾಗುತ್ತಿದೆ. ನಿನ್ನ ಮುಂದೆ ಕುಳಿತುಕೊಳ್ಳಲು ನನಗೆ ನಾಚಿಕೆ ಯಾಗುತ್ತಿದೆ. ಕೇವಲ ಶರೀರವೇ ಅಲ್ಲ; ವಸ್ತ್ರ, ಭೂಷಣ, ಮತ್ತು ಸ್ತ್ರೀಯರಿಗೆ ಅವಶ್ಯವಾದ ಇತರ ಅಲಂಕಾರಗಳೂ ನನಗೆ ಅನಾಯಾಸವಾಗಿ ತಾವಾಗಿಯೇ ಪ್ರಾಪ್ತ ವಾಗುತ್ತಿವೆ. ಹರಹರಾ! ನಾನು ಸಂಪೂರ್ಣ ಸ್ತ್ರೀಯೆ ಆಗಿಬಿಟ್ಟೆ. ನನಗೆ ಬಹಳ ದುಃಖವಾಗುತ್ತಿದೆ. ಅಯ್ಯೋ! ಈ ಸ್ತ್ರೀತ್ವಕ್ಕೆ ಧಿಕ್ಕಾರ! ಈಗ ನಾನು ಏನು ಮಾಡಲಿ? ನನ್ನ ಅಂತಃಕರಣದಲ್ಲಿಯೂ ಸಕಲ ಸ್ತ್ರೀಭಾವನೆಗಳೇ ಮೂಡುತ್ತಿವೆ" ಎಂದು ಶೋಕಮಾಡಿದಳು.

ರಾಗ : ಕಾಲಿಂಗಡಾ ತಾಲ : ಖವಾಲಿ

ಪ್ರಿಯಪ್ರಭೋ ನಾನಹೋ ! { ಭಾಮಿನಿಯಾದೆ / ಕಾಮಿನಿಯಾದೆ } ದೈವವಿಲಾಸಾ ! ॥ ಧ್ರು ॥

ಓ ದೇವಾ । ಹರಹರಾऽऽ ! ವಿಧಿಯೇ । ಕಷ್ಟವೈ ।
ಗತಿಮತಿ ಕಾಣೆನೇಗೈವೇ । ॥ ೧ ॥ ದೈವವಿಲಾಸಾ ।

ಆಶ್ಚರ್ಯ । ತನುಮನಾऽऽ ಜೊತೆಗೇ–ಈ ಪರಿ–
ವಿಭುವಿಗೇ ದ್ರೋಹ ಬಗೆದಂತೆ ॥ ೨ ॥ ದೈವವಿಲಾಸಾ ।

ಸೌಭಾಗ್ಯ । ದತ್ತನಾऽऽ ದಯದೇ–ಸಾಕ್ಷಿ ನಾನಿಹುದರಿಂ
ಧೀರಳಾಗಿಹೆ ನಾ ॥ ೩ ॥ ದೈವವಿಲಾಸಾ ।

ತತ್ತ್ವಜ್ಞಾನಿಗೂ ಇಂಥಾ ಪ್ರಾರಬ್ಧಯೋಗವು ತಪ್ಪದಿರುವದು ದೈವವಿಲಾಸವೇ ಸರಿ ! ಆದರೆ, ದತ್ತರಾಜನ ದಯದಿಂದ ನನಗೆ ಬಂದಿರುವ ಸಾಕ್ಷಿಯ ಅನುಭವವು ನನ್ನನ್ನು ಧೀರಳನ್ನಾಗಿ ಮಾಡಿದೆ ; ಇದೇ ನನ್ನ ಸೌಭಾಗ್ಯ.

ಹೀಗೆ ಹಂಬಲಿಸುತ್ತಾ ಕುಂಭನು ಮೌನವಾಗಿ ಕುಳಿತನು. ರಾಜನೂ ಅವನ ಶರೀರದಲ್ಲಿ ಆದ ವಿಲಕ್ಷಣ ವ್ಯತ್ಯಾಸಗಳನ್ನು ಪ್ರತ್ಯಕ್ಷವಾಗಿ ನೋಡಿ ಖಿನ್ನನೂ ವಿಸ್ಮಿತನೂ ಆದನು. ಮಹಾ ಸತ್ತ್ವಶೀಲನಾದ ದೇವಪುತ್ರನೂ ಸುಂದರ ಸ್ತ್ರೀಯಾದನಲ್ಲಾ ಎಂದು ಮನಸ್ಸಿನಲ್ಲಿಯೇ ಆಲೋಚಿಸಿ ಕುಂಭನಿಗೆ ಪುನಃ ಪುನಃ ಸಮಾಧಾನ ಹೇಳಿದನು. ನಿಯತಿಯನ್ನು ಮೀರುವುದಕ್ಕೆ ಸಾಧ್ಯವಿಲ್ಲವಾದುದರಿಂದ ನಿತ್ಯವೂ ರಾತ್ರಿಯಲ್ಲಿ ಪ್ರಾಪ್ತವಾಗುವ ಸ್ತ್ರೀತ್ವದ ಅನುಭವವನ್ನು ಪಡೆದು ಅದರಂತೆಯೇ ನಡೆದುಕೊಳ್ಳುವದಾಗಿ ಕುಂಭನೂ ಹೇಳಿ ಇಬ್ಬರೂ ಕ್ರಮೇಣ ತಮ್ಮ ದುಃಖವನ್ನು ಕಡಿಮೆ ಮಾಡಿಕೊಂಡರು.

ಅನಂತರ ಇಬ್ಬರೂ ಒಂದೇ ಹಾಸಿಗೆಯ ಮೇಲೆ ನಿರ್ವಿಕಾರ ಚಿತ್ತದಿಂದ ಮಲಗಿ ಆ ರಾತ್ರಿಯನ್ನು ಕಳೆದರು. ಮರುದಿನ ಬೆಳಗಾದ ಕೂಡಲೇ ಆ ತರುಣ ಸ್ತ್ರೀರೂಪವನ್ನು ಬಿಟ್ಟು ಮೊದಲಿನಂತೆಯೇ ಕುಂಭನಾದನು. ಈ ಪ್ರಕಾರವಾಗಿ ಆ ಮಹಾಸಿದ್ಧಳಾದ ಚೂಡಾಲೆಯು ಹಗಲು ಹೊತ್ತು ಕುಂಭನಾಗಿಯೂ ರಾತ್ರಿಯಲ್ಲಿ ಸ್ತ್ರೀಯಾಗಿಯೂ ಪತಿಯ ಸಮೀಪದಲ್ಲಿ ಇರಲು ತೊಡಗಿದಳು. ರಾತ್ರಿಯಲ್ಲಿ ಆಕೆ ಕುಮಾರೀಧರ್ಮದಲ್ಲಿಯೇ ಇರುತ್ತಿದ್ದಳು. ಯೋಗಸಾಮರ್ಥ್ಯ ಸಂಪನ್ನಳೂ ಜ್ಞಾನಿಯೂ ಆದ ಆಕೆಯು ಪ್ರಿಯಮಿತ್ರನಾದ ಶಿಖಿಧ್ವಜನೊಂದಿಗೆ ಕೈಲಾಸ, ಮಂದರ ಮೊದಲಾದ

ಪರ್ವತಶಿಖರಗಳಲ್ಲಿಯೂ ಉಪವನಗಳಲ್ಲಿಯೂ ತೀರ್ಥಕ್ಷೇತ್ರಗಳಲ್ಲಿಯೂ ಯಥೇಚ್ಛೆಯಾಗಿ ವಿಹಾರ ಮಾಡುತ್ತಿದ್ದಳು.

ಹೀಗೆ ಅನೇಕ ದಿನಗಳು ಆನಂದವಾಗಿ ಕಳೆದವು. ಒಂದು ದಿನ ಕುಂಭನು ಶಿಖಿಧ್ವಜನನ್ನು ಕುರಿತು, "ಕಮಲನಯನ ರಾಜಾ! ನನ್ನ ಮಾತನ್ನು ಲಕ್ಷ್ಯಪೂರ್ವಕವಾಗಿ ಕೇಳು. ನಾನಾದರೋ ಪ್ರತಿ ರಾತ್ರಿಯೂ ಹೆಣ್ಣಾಗುತ್ತಿದ್ದೇನೆ. ಆದ್ದರಿಂದ ಸ್ವಭಾವಾನುಗುಣವಾಗಿ ಸ್ತ್ರೀಧರ್ಮವನ್ನು ಪೂರ್ಣಗೊಳಿಸಲು ನಾನು ಬಯಸುತ್ತೇನೆ. ನಾನು ವಿವಾಹಪದ್ಧತಿಯಿಂದ ಯಾವನಾದರೊಬ್ಬ ಯೋಗ್ಯ ಪುರುಷನಲ್ಲಿ ಆತ್ಮಸಮರ್ಪಣೆ ಮಾಡುತ್ತೇನೆ. ಆದರೆ ಮೂರು ಲೋಕಗಳಲ್ಲಿ ಹುಡುಕಿದರೂ ನನಗೆ ನಿನಗಿಂತಲೂ ಹೆಚ್ಚು ಪ್ರಿಯರಾದವರೂ ಯೋಗ್ಯರಾದವರೂ ಕಾಣುವುದಿಲ್ಲ. ಆದ್ದರಿಂದ ಎಲೈ ಮಾನವಂತ! ಈ ರಾತ್ರಿಯೇ ನೀನು ದಯಮಾಡಿ ನನ್ನ ಪಾಣಿಗ್ರಹಣ ಮಾಡು. ನನ್ನ ಇಚ್ಛೆಯಾಗಲೀ ಪ್ರಯತ್ನವಾಗಲೀ ಇಲ್ಲದೆ ತಾನಾಗಿಯೇ ಪ್ರಾಪ್ತವಾಗಿರುವ ಈ ಸ್ತ್ರೀತ್ವದ ಸುಖವನ್ನು ಸುಹೃದನಾದ ನಿನ್ನ ಸಹವಾಸದಿಂದ ಪಡೆಯಲು ಇಚ್ಛಿಸುತ್ತೇನೆ. ನನಗೆ ನೀನು ಅಡ್ಡಿಮಾಡಬೇಡ. ಪ್ರಪಂಚ ಸೃಷ್ಟಿಯಿಂದ ಹಿಡಿದು ಇಂದಿನವರೆಗೂ ದೇವ, ಋಷಿ, ಮಾನವ ಮೊದಲಾದ ಎಲ್ಲಾ ಜೀವಜಾತಿಗಳಲ್ಲಿಯೂ ನಡೆದು ಬಂದಿರುವ ಸ್ವಾಭಾವಿಕವಾದ ಪ್ರವೃತ್ತಿಯನ್ನು ತಿಳಿದವರು ತಿರಸ್ಕರಿಸಬಾರದು. ನಾವು ಯಾವುದನ್ನೂ ಬೇಕೆನ್ನುವುದೂ ಇಲ್ಲ; ಬೇಡವೆನ್ನುವುದೂ ಇಲ್ಲ. ತಾನಾಗಿಯೇ ಒದಗಿದ ವ್ಯವಹಾರವನ್ನು ಸಮದೃಷ್ಟಿಯಿಂದ ನಡೆಸುವವರಾದ್ದರಿಂದ ವಿವಾಹ ಮಾಡಿಕೊಳ್ಳುವುದರಿಂದ ನಮಗೆ ಯಾವ ದೋಷವೂ ಬರುವುದಿಲ್ಲ; ಅಲ್ಲವೆ? ರಾಜಾ!" ಎಂದನು.

ಅದಕ್ಕೆ ಶಿಖಿಧ್ವಜನು "ಮಿತ್ರ! ಈ ಕಾರ್ಯ ಮಾಡುವದರಿಂದ ಶುಭವಾಗಲೀ ಅಶುಭವಾಗಲೀ ಯಾವದೂ ಆಗುವದಿಲ್ಲವೆಂಬುದನ್ನು ನಾನು ಬಲ್ಲೆ. ಈ ತ್ರಿಭುವನವೂ ನನ್ನ ಸ್ವರೂಪವಾಗಿಯೇ ಇದೆಯೆಂಬುದನ್ನು ನಾನು ಅನುಭವ ಮಾಡುತ್ತಿರುವದರಿಂದ ನಿನ್ನ ಇಚ್ಛೆಯಿದ್ದಂತೆ ಮಾಡಲಡ್ಡಿಯಿಲ್ಲ." ಎಂದನು.

ಕುಂಭನು ಅವನನ್ನು ಕುರಿತು, ರಾಜಾ! ಹಾಗಾದರೆ, ಇವತ್ತು ಶ್ರಾವಣ ಪೂರ್ಣಿಮಾ ಇರುವದರಿಂದ, ಇವತ್ತೇ ಶುಭಮುಹೂರ್ತವಿದೆ. ನಾನು ಮೊದಲೇ ಇದನ್ನು ಆಲೋಚನೆ ಮಾಡಿಕೊಂಡಿದ್ದೆ. ಇವತ್ತು ರಾತ್ರಿ ಚಂದ್ರೋದಯವಾದ ಒಡನೇ ಮನೋಹರವಾದ ಮಹೇಂದ್ರಪರ್ವತದ ಶಿಖರದಲ್ಲಿ ನಮ್ಮ ವಿವಾಹವಾಗತಕ್ಕದ್ದಿದೆ. ಆ ಸ್ಥಾನವು ಪುಷ್ಪಫಲಯುಕ್ತವಾದ ಗಿಡಮರಬಳ್ಳಿಗಳಿಂದ ಅತಿ ಶೋಭಾಯಮಾನವಾಗಿದೆ. ಆ ಪರ್ವತದ ರತ್ನಖಚಿತವಾದ ಗುಹೆಯೇ ನಮ್ಮ ಸುಂದರ ಮಂದಿರ

ಆಗುತ್ತದೆ. ಇವತ್ತು ರಾತ್ರಿ ಅಂತರಿಕ್ಷದಲ್ಲಿ ತಾರೆಯರು ತಮ್ಮ ಪತಿಯಾದ ಪೂರ್ಣ ಚಂದ್ರನೊಡನೆ ನಮ್ಮ ನೂತನ ದಾಂಪತ್ಯವನ್ನು ನೋಡಿ ಆನಂದಪಡಲು ಬರುತ್ತಾರೆ. ಇರಲಿ; ಭೂಪಾಲ! ಏಳು; ವಿವಾಹನಿಮಿತ್ತವಾದ ಸಾಮಗ್ರಿಗಳನ್ನು ಸಿದ್ಧ ಮಾಡೋಣ; ಬಾ."

ಹೀಗೆ ಹೇಳಿ, ಕುಂಭನು ರಾಜನೊಡನೆ ಅರಣ್ಯದಲ್ಲಿ ಹೋದನು. ಯೋಗಬಲ ದಿಂದ ಇಬ್ಬರೂ ಒಂದು ನಿಮಿಷದಲ್ಲಿ ಮನೋಜ್ಞವಾದ ಮಹೇಂದ್ರ ಪರ್ವತದಲ್ಲಿ ಸುವರ್ಣಮಯವಾದ ಗುಹಾಮಂದಿರದಲ್ಲಿದ್ದರು. ಸಮೀಪದ ಮಂದಾಕಿನಿಯಲ್ಲಿ ಕುಂಭನು ಪರಮಾದರದಿಂದ ರಾಜನಿಗೆ ಮಂಗಳಸ್ನಾನ ಮಾಡಿಸಿದನು. ಅನಂತರ ರಾಜನೂ ರಾತ್ರಿ ಸ್ತ್ರೀಯಾಗುವ ಕುಂಭನಿಗೆ ಪ್ರೇಮಾತಿಶಯದಿಂದ ಉತ್ತಮವಾದ ಸ್ನಾನ ಮಾಡಿಸಿದನು. ಆ ಇಬ್ಬರು ಮಹಾ ಮಿತ್ರರೂ ಗುಹಾಮಂದಿರದಲ್ಲಿ ದೇವ, ಪಿತೃ, ಮುನಿ ಮೊದಲಾದವರನ್ನು ಪೂಜೆ ಮಾಡಿದರು. ಇಬ್ಬರಿಗೂ ಇಷ್ಟವಾದ ಮೃಷ್ಟಾನ್ನವನ್ನು ಭೋಜನ ಮಾಡಿದರು. ಕಲ್ಪವೃಕ್ಷದಿಂದ ನೀಡಲ್ಪಟ್ಟ ಶುಭ್ರವಾದ ರೇಷ್ಮೆ ವಸ್ತ್ರವನ್ನು ಇಬ್ಬರೂ ಧಾರಣಮಾಡಿ ದಿವ್ಯವಾದ ಫಲಗಳನ್ನು ಭುಜಿಸಿ ರತ್ನ ಮಯವಾದ ವಿವಾಹಮಂಟಪಕ್ಕೆ ಬಂದರು. ಅಲ್ಲಿ ಆ ಮಹಾಪುರುಷರೀರ್ವರೂ ಸಂಧ್ಯಾವಂದನಾದಿ ಅನುಷ್ಠಾನ ಕ್ರಮವನ್ನು ಪೂರೈಸಿದರು. ಕುಂಭನು ತನ್ನ ಸಿದ್ಧಿಯ ಮಹಿಮೆಯಿಂದ ಆ ಪರ್ವತಶಿಖರವೆಲ್ಲಾ ರತ್ನದೀಪಗಳಿಂದ ಬೆಳಗುವಂತೆ ಮಾಡಿದನು. ರಾಜನನ್ನು ವಿಧ ವಿಧ ವಸ್ತ್ರಭೂಷಣಗಳಿಂದ ಭೂಷಿತನನ್ನಾಗಿ ಮಾಡಿದನು. ಇಷ್ಟರಲ್ಲಿ ವಿವಾಹೋತ್ಸುಕರಾದ ಈ ಭವ್ಯ ಪುರುಷರೀರ್ವರಿಗೂ ಸಂತೋಷವನ್ನುಂಟು ಮಾಡುವುದಕ್ಕೋಸ್ಕರವೇ ಎನ್ನುವಂತೆ ಸೂರ್ಯನು ಅಸ್ತಾಚಲಕ್ಕೆ ವೇಗದಿಂದ ನಡೆ ದನು. ತಾರಾಮಂಡಲವು ಈ ಕೌತುಕವನ್ನು ನೋಡಲು ಉದಯವಾಯಿತು. ಕುಂಭನು ಅಷ್ಟರಲ್ಲೇ ಅಪ್ರತಿಮ ಸೌಂದರ್ಯವುಳ್ಳ ತರುಣಿಯಾದನು. ವಸ್ತ್ರಭೂಷಣಾದಿಗಳಿಂದ ಅಲಂಕೃತಳಾಗಿ ಸ್ವರ್ಗಸುಂದರಿಯಂತೆ ಶೋಭಿಸುತ್ತಿದ್ದ ಚೂಡಾಲೆಯು ತನ್ನ ಎದುರಿ ನಲ್ಲಿ ಸೂರ್ಯನಂತೆ ಪ್ರಕಾಶಮಾನವಾಗಿ ಕುಳಿತಿದ್ದ ರಾಜನಲ್ಲಿಗೆ ಹೋಗಿ,

"ಮಹಾರಾಜಾ! ಮದನಿಕಾ ಎನ್ನುವ ಹೆಸರಿನ ನಿನ್ನ ಪತ್ನಿಯಾಗಿ ನಿನ್ನ ಚರಣ ಕಮಲಗಳಲ್ಲಿ ನಮಸ್ಕರಿಸುತ್ತಿದ್ದೇನೆ."

ಎಂದು ನಯವಿನಯದಿಂದ ಬಿನ್ನಹಮಾಡುತ್ತಾ ಸುಗಂಧವನ್ನು ಸೂಸುತ್ತಿರುವ ಆಕೆಯ ನೀಳವಾದ ಸ್ನಿಗ್ಧ ಸುಂದರ ಕೇಶರಾಶಿಯು ಗಾಳಿಯಿಂದ ಒಲೆದಾಡುತ್ತಿರಲು ಲಜ್ಜೆಯಿಂದ ಕೆಂಪೇರಿದ ಮುಖವುಳ್ಳವಳಾಗಿ ಪತಿಯ ಪಾದಗಳಲ್ಲಿ ಮೈಯಿಕ್ಕಿದಳು. ಮದನಿಕೆಯು ಪುನಃ ಹೀಗೆ ಹೇಳಿದಳು:

"ಎಲೈ ನಾಥ! ರತಿಯ ವಿವಾಹಕಾಲದಲ್ಲಿ ಶೋಭಿಸುತ್ತಿದ್ದ ಮನ್ಮಥನಿಗಿಂತಲೂ ಮಿಗಿಲಾದ ಸೌಂದರ್ಯದಿಂದ ನೀನೀಗ ಶೋಭಿಸುತ್ತಿದ್ದಿ. ನಿನ್ನ ಮೈಮೇಲಿರುವ ಹೂವುಗಳು ಚಂದ್ರಕಿರಣಗಳಂತೆಯೂ ವಕ್ಷಸ್ಥಳದ ಮೇಲಿರುವ ಪುಷ್ಪಮಾಲಿಕೆಯು ಮೇರುಪರ್ವತದ ಮೇಲೆ ಹರಿಯುತ್ತಿರುವ ಮಂದಾಕಿನೀ ಪ್ರವಾಹದಂತೆಯೂ ಪ್ರಕಾಶಿಸುತ್ತಿವೆ. ಪ್ರಭುವೆ! ನೀನು ಈ ಆಭರಣಗಳಿಂದ ನನ್ನನ್ನು ಅಲಂಕರಿಸಿ, ಈ ಅಗ್ನಿಯನ್ನೂ ಪ್ರದೀಪ್ತ ಮಾಡಿ, ಕ್ರಮವಾಗಿ ನನ್ನನ್ನು ಅಗ್ನಿಸಾಕ್ಷಿಯಾಗಿ ಪಾಣಿಗ್ರಹಣ ಮಾಡು." ಎಂದಳು.

ಮದನಿಕೆಯ ಮಧುರವಾದ ಮಾತುಗಳನ್ನು ಕೇಳಿ ಶಿಖಿಧ್ವಜನಿಗೆ ತುಂಬಾ ಆನಂದವಾಯಿತು. ಅವನೂ ಸುವರ್ಣಪರ್ಯಂಕದ ಮೇಲೆ ಕುಳಿತು ಮಹಾರಾಣಿಗೊಪ್ಪುವ ವಸ್ತ್ರಭೂಷಣಾದಿಗಳಿಂದ ಆಕೆಯನ್ನು ಅಲಂಕರಿಸಿ ಸಾಕ್ಷಾತ್ ರತಿಯಂತೆಯೂ ಗೌರೀದೇವಿಯಂತೆಯೂ ಶೋಭಿಸುತ್ತಿದ್ದ ಆಕೆಯನ್ನು ಕುರಿತು "ಎಲೌ ಹರಿಣಾಕ್ಷಿ! ನೀನು ಈಗ ಹೊಸದಾಗಿ ಉದಯವಾದ ಲಕ್ಷ್ಮೀದೇವಿಯಂತೆ ಬೆಳಗುತ್ತಿದ್ದಿ. ಇಂದ್ರನೊಡನೆ ಶಚೀದೇವಿಗೂ ಹರಿಯೊಡನೆ ಲಕ್ಷ್ಮಿಗೂ ಶಂಕರನೊಡನೆ ಗಿರಿಜೆಗೂ ಹೇಗೆ ಮಂಗಳವಾಯಿತೋ ಹಾಗೆ ನನ್ನೊಡನೆ ವಿವಾಹವಾಗುವ ನಿನಗೆ ಮಂಗಳವಾಗಲಿ. ರಮಣೀಮಣಿ! ನೀನೀಗ ನನಗೆ ಕಾಮಕಲ್ಪತರುವಿನ ಕುಸುಮದಂತೆ ಕಾಣುತ್ತಿದ್ದಿ. ನಿನ್ನನ್ನು ನೋಡಿದೊಡನೆ ನನಗೆ ಅವರ್ಣನೀಯವಾದ ಆನಂದವಾಗುತ್ತಿದೆ. ಎಲೌ ಸುಂದರಿ! ಏಳು, ವಿವಾಹವೇದಿಕೆಯ ಮೇಲೆ ನಡೆ." ಎಂದು ಹೇಳಿ ರಾಜನು ಮೃದುವಾಗಿ ಮದನಿಕೆಯ ಕೈಹಿಡಿದು ಕುಂಭನಿಂದ ಮೊದಲೇ ಸಿದ್ಧಪಡಿಸಲ್ಪಟ್ಟಿದ್ದ ಶಾಸ್ತ್ರೋಕ್ತವಾದ ವೇದಿಕೆಯ ಮೇಲೆ, ಪೂರ್ವಾಭಿಮುಖವಾಗಿ ಕುಳಿತು ವಿಧಿವತ್ತಾಗಿ ಹವನಮಾಡಿ ಅಗ್ನಿಸಮಕ್ಷಮದಲ್ಲಿ ತನ್ನ ಪ್ರಿಯಳ ಪಾಣಿಗ್ರಹಣ ಮಾಡಿದನು. ಅನಂತರ ಇಬ್ಬರೂ ಪರಸ್ಪರ ಕೈಹಿಡಿದು ಅಗ್ನಿ ಪ್ರದಕ್ಷಿಣೆಯನ್ನು ಮಾಡಿದರು. ಅಗ್ನಿಯಲ್ಲಿ ಲಾಜಾಹೋಮವನ್ನೂ ಮಾಡಿದರು. ಇಬ್ಬರಿಗೂ ಮಹದಾನಂದವಾಯಿತು. ಸ್ವಲ್ಪ ಹೊತ್ತಿನಲ್ಲಿ ಅವರು ಸುವರ್ಣಗುಹೆಯಲ್ಲಿ ಮೊದಲೇ ಸಿದ್ಧವಾಗಿದ್ದ ಪುಷ್ಪಶಯ್ಯೆಯ ಮೇಲೆ ಪ್ರೇಮದಿಂದ ಪವಡಿಸಿದರು. ಮಂದಾರಾದಿ ವಿವಿಧ ದಿವ್ಯಪುಷ್ಪಗಳ ಪರಿಮಳದಿಂದ ಗುಹೆಯು ತುಂಬಿ ಸೂಸುತ್ತಾ ಮದವೇರಿಸುತ್ತಿತ್ತು. ಆ ಏಕಾಂತದಲ್ಲಿ ಆ ದಿವ್ಯದಂಪತಿಗಳು ಅನೇಕ ಪ್ರಿಯಭಾಷಣಗಳಲ್ಲಿಯೂ ಸರಸ ಸಲ್ಲಾಪಗಳಲ್ಲಿಯೂ ರಮ್ಯ ವಿಲಾಸಗಳಲ್ಲಿಯೂ ತತ್ತ್ವಪ್ರಬೋಧನದಲ್ಲಿಯೂ ಆನಂದದಿಂದ ಮೈಮರೆತಿರಲು ಕ್ಷಣಾರ್ಧದಲ್ಲಿ ಬೆಳಗಾಯಿತು.

ಆಗ ಸೂರ್ಯನು ಉದಯವಾಗುತ್ತಿರಲು, ಕುಂಭರೂಪವನ್ನು ಪಡೆಯುತ್ತಿರುವ ಪ್ರಿಯೆ ಮದನಿಕೆಯನ್ನು ಕಂಡು ರಾಜನಿಗೆ ವಿಸ್ಮಯವೂ ವಿಷಾದವೂ ಆಯಿತು. ಹೀಗೆ

ಅವರೀರ್ವರೂ ನಿತ್ಯವೂ ಹಗಲೆಲ್ಲಾ ಪ್ರಿಯ ಮಿತ್ರರಾಗಿಯೂ ರಾತ್ರಿಯೆಲ್ಲಾ ಇಷ್ಟದಂಪತಿಗಳಾಗಿಯೂ ಒಬ್ಬರನ್ನೊಬ್ಬರು ನಿಮಿಷವೂ ಬಿಡದೆ ದೀಪ ಮತ್ತು ಅದರ ಪ್ರಭೆಯಂತೆ, ಪುಷ್ಪ ಮತ್ತು ಅದರ ಪರಿಮಳದಂತೆ ಅವಿನಾಭಾವದಿಂದ ಸುಖಿಸುತ್ತಿದ್ದರು. ಅವರು ಸಹ್ಯಾದ್ರಿ, ಕೈಲಾಸ, ಮಹೇಂದ್ರ, ಮಲಯ, ಗಂಧಮಾದನ, ಮೊದಲಾದ ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ಅನೇಕ ದಿವಸಗಳು ಸ್ವೇಚ್ಛೆಯಿಂದ ವಿಹಾರಮಾಡುತ್ತಿದ್ದರು.

ಪ್ರತಿ ಮೂರನೇ ದಿನ ರಾತ್ರಿಯಲ್ಲಿ ಪತಿಗೆ ನಿದ್ರೆಯು ಬಂದ ಕೂಡಲೇ ಚೂಡಾಲೆಯು ಸೂಕ್ಷ್ಮರೂಪದಿಂದ ತನ್ನ ರಾಜಧಾನಿಗೆ ಬಂದು, ಅಲ್ಲಿ ತನ್ನ ನಿಜ ರೂಪದಿಂದ ರಾಜಕಾರ್ಯಗಳನ್ನು ನಡೆಸಿ, ರಾಜನಿಗೆ ಎಚ್ಚರವಾಗುವದರೊಳಗೆ ಹಿಂದಿರುಗಿ ಬರುತ್ತಿದ್ದಳು.

ಹೀಗೆ ಅನೇಕ ದಿವಸಗಳು ಕಳೆದಿರಲು, ಶಿಖಿಧ್ವಜನಿಗೆ ಭೋಗದಲ್ಲಿ ಆಸಕ್ತಿಯಿಲ್ಲದಿರುವ ಅನಾಸಕ್ತಿ ಗುಣವನ್ನು ಪರೀಕ್ಷಿಸುವುದಕ್ಕೋಸ್ಕರ ಚೂಡಾಲೆಯು ತನ್ನ ಯೋಗಮಹಿಮೆಯಿಂದ ಇಂದ್ರನೇ ಪರಿವಾರ ಸಹಿತನಾಗಿ ಬಂದು ಶಿಖಿಧ್ವಜನ ಸದ್ಗುಣಗಳಿಗೆ ಮೆಚ್ಚಿ ಅವನನ್ನು ಸ್ವರ್ಗಲೋಕಕ್ಕೆ ಬರಲು ಕರೆಯುವಂತೆ ಮಾಡಿದಳು. ಆದರೆ ಶಿಖಿಧ್ವಜನು ದೇವೇಂದ್ರನನ್ನು ಪೂಜ್ಯಭಾವದಿಂದ ಕಂಡು ಅವನು ಸಂತುಷ್ಟನಾಗುವಂತೆ ಸತ್ಕರಿಸಿದರೂ ಅವನ ಪ್ರಲೋಭನಗಳಿಂದ ಮರುಳಾಗಲಿಲ್ಲ. ಮನಸ್ಸಿನಲ್ಲಿ ಯಾವ ಆಶೆಯೂ ಇಲ್ಲದಿರುವದರಿಂದ ತಾನು ಸರ್ವತ್ರ, ಸರ್ವದಾ ಸಂತುಷ್ಟನಾಗಿರುವದಾಗಿಯೂ ಸ್ವರ್ಗದಲ್ಲಿ ಮಾತ್ರ ಲಭಿಸಬಹುದಾದ ಸೀಮಿತ ಸುಖವು ತನಗೆ ಬೇಕಿಲ್ಲವೆಂದೂ, ಬೇಕು ಬೇಡೆಂಬುವ ರಾಗದ್ವೇಷಗಳು ಇಲ್ಲದ ನಿರ್ಮಲ ಮನಸ್ಸಿನಲ್ಲಿ ಸ್ಫುರಿಸುವ ಆತ್ಮಾನಂದದ ಸಹಸ್ರಾಂಶಕ್ಕೂ ಸ್ವರ್ಗಸುಖವು ಸಾಟಿಯಲ್ಲವೆಂದೂ ಶಿಖಿಧ್ವಜನು ಇಂದ್ರನಿಗೆ ಹೇಳಿ, ಅವನ ಅನುಗ್ರಹವನ್ನು ನಿರಾಕರಿಸಿದ್ದಕ್ಕಾಗಿ ಕ್ಷಮೆ ಬೇಡಿದನು. ಆಗ ಸಮುದ್ರದಲ್ಲಿ ತರಂಗಗಳು ಶಾಂತವಾಗುವಂತೆ ದೇವತೆಗಳಿಂದಲೂ ಅಪ್ಸರೆಯರಿಂದಲೂ ಸಹಿತನಾದ ಇಂದ್ರನು ಕಣ್ಮರೆಯಾದನು.

ಇಂದ್ರಾದಿಗಳ ಪ್ರಾರ್ಥನೆಯಿಂದ ಸಹ ಭೋಗೇಚ್ಛೆಗೆ ವಶನಾಗದಿರುವ ರಾಜನ ದೃಢವಾದ ವಿರಕ್ತಿಯನ್ನೂ ಅನಾಸಕ್ತಿಯನ್ನೂ ಕಂಡು ಚೂಡಾಲೆಯು ಅತಿಶಯ ಸಂತೋಷಪಟ್ಟಳು.

ಆದರೆ, ಎಂಥಾ ವಿದ್ವಾಂಸರಿಗಾದರೂ ರಾಗದ್ವೇಷಗಳನ್ನು ಹುಟ್ಟಿಸಿ, ಚಿತ್ತಕ್ಷೋಭೆಯನ್ನುಂಟುಮಾಡುವ ಪ್ರಾಪಂಚಿಕ ವಿಷಮ ಸನ್ನಿವೇಶದಲ್ಲಿ ಶಿಖಿಧ್ವಜನು

ತನ್ನ ಸಮಚಿತ್ತತೆಯನ್ನೂ ಶಾಂತಿಯನ್ನೂ ಹೇಗೆ ಕಾದುಕೊಳ್ಳುವನೆಂಬುದನ್ನು ಪರೀಕ್ಷಿಸುವದಕ್ಕಾಗಿ ಚೂಡಾಲೆಯು ಒಂದು ಉಪಾಯವನ್ನು ಮಾಡಿದಳು.

ಒಂದು ರಾತ್ರಿ, ಚಂದ್ರೋದಯವಾದಾಗ ಶಿಖಿಧ್ವಜನು ಸಮೀಪದಲ್ಲಿರುವ ನದೀ ತೀರದಲ್ಲಿ ಸಂಧ್ಯೋಪಾಸನೆ ಮಾಡುತ್ತಾ ಕುಳಿತಿದ್ದನು. ಆ ವನದಲ್ಲಿ ಸುಗಂಧ ಶೀತಲವಾದ ಮಂದಮಾರುತವು ಬೀಸುತ್ತಾ ಯೋಗಿಗಳಿಗೆ ಉನ್ಮನಿಯನ್ನೂ ವಿಲಾಸಿಗಳಿಗೆ ಪ್ರಣಯೋನ್ಮಾದವನ್ನೂ ಉಂಟುಮಾಡುವಂತಿತ್ತು. ಪುಷ್ಪಗುಚ್ಛಗಳಿಂದ ಆಚ್ಛಾದಿತವಾದ ಆ ವನಸ್ಥಲಿಯು ವನದೇವಿಯ ಅಂತಃಪುರದಂತಿತ್ತು. ಪುಷ್ಪಗಳಿಂದ ಅಲಂಕೃತವಾದ ಆ ಲತಾಗೃಹದಲ್ಲಿ ಸಂಕಲ್ಪದಿಂದ ನಿರ್ಮಿತವಾದ ಪುಷ್ಪಶಯ್ಯೆಯ ಮೇಲೆ ಆ ಮದನಿಕೆಯು ಸುಂದರ ತರುಣನೋರ್ವನನ್ನು ದೃಢವಾಗಿ ಆಲಿಂಗನ ಮಾಡಿಕೊಂಡು ಕುಳಿತಿದ್ದಳು.

ಜಪಯೋಗವು ಮುಗಿದ ಮೇಲೆ ರಾಜನು, ತನ್ನ ಪ್ರಿಯಳನ್ನು ಹುಡುಕುತ್ತಾ ಅಲ್ಲಿಗೆ ಬಂದನು. ಮನೋಹರ ಪುರುಷನೋರ್ವನನ್ನು ದೃಢವಾಗಿ ಆಲಿಂಗಿಸಿಕೊಂಡು ಕುಳಿತಿದ್ದ ಆ ತರುಣಿ ಮದನಿಕೆಯನ್ನು ಕಂಡನು. ಹಾಸಿಗೆಯ ಮೇಲೆ ಹೊರಳಾಡಿದ್ದರಿಂದ ಆಕೆಯ ಕೇಶವು ಅಸ್ತವ್ಯಸ್ತವಾಗಿತ್ತು. ಅವರಿಬ್ಬರೂ ಕಾಮಾತುರತೆಯಿಂದ ನಿರ್ಭಯರೂ ನಿರ್ಲಜ್ಜರೂ ಆಗಿರುವಂತೆ ತೋರಿತು. ಆನಂದಭರದಲ್ಲಿರುವ ಅವರ ಭೋಗಸುಖಕ್ಕೆ ಭಂಗ ತರಬಾರದೆಂದೂ ಅವರವರ ಮನೋರಥವನ್ನು ಪೂರ್ಣಮಾಡಿಕೊಳ್ಳುವುದಕ್ಕೆ ಅವರವರು ಸ್ವತಂತ್ರರೆಂದೂ ಬಗೆದು ರಾಜನು ಆ ಲತಾಗೃಹದಿಂದ ಹೊರಗೆ ಬಂದು ಕ್ರೋಧವನ್ನು ಜಯಿಸಿ ಸ್ವಸ್ಥಮನಸ್ಸಿನಿಂದ ಕುಳಿತನು.

ಅನಂತರ ಸ್ವಲ್ಪ ಹೊತ್ತಿನಲ್ಲೇ ವಿಲಾಸದಿಂದ ಬಳಲಿದ ಶರೀರವುಳ್ಳ ಮದನಿಕೆಯು ರಾಜನ ಹತ್ತಿರ ಬಂದಳು. ಒಂದು ಶಿಲಾಫಲಕದ ಮೇಲೆ ಶಾಂತ ಮನಸ್ಸಿನಿಂದ ಕುಳಿತಿದ್ದ ರಾಜನಲ್ಲಿಗೆ ಬಂದು ಮದನಿಕೆಯು ಲಜ್ಜಿತಳೂ ಖಿನ್ನಳೂ ಆಗಿ ಮೌನದಿಂದ ಕುಳಿತಿದ್ದಳು. ಸ್ವಲ್ಪ ಹೊತ್ತಿನ ಮೇಲೆ ರಾಜನು ಧ್ಯಾನವನ್ನು ಬಿಟ್ಟು ಆಕೆಗೆ ಮಧುರವಾದ ಮಾತಿನಿಂದ ಹೀಗೆ ಹೇಳಿದನು :

"ಸುಂದರಿ ! ನಿನ್ನ ರತಿಸುಖವನ್ನು ತ್ಯಜಿಸಿ ಇಷ್ಟು ಆತುರದಿಂದ ಏಕೆ ಬಂದೆ ? ಸರ್ವ ಪ್ರಾಣಿಗಳೂ ಆನಂದಕ್ಕಾಗಿಯೇ ನಿರಂತರ ಪ್ರಯತ್ನಮಾಡುತ್ತಿರುವುದರಿಂದ ನೀನು ನಿಜವಾಗಿಯೂ ನಿರ್ಭಯ ಮನಸ್ಸಿನಿಂದಲೂ ಪೂರ್ಣ ಪ್ರೇಮದಿಂದಲೂ ನಿನ್ನಾ ಕಾಂತನನ್ನು ಪುನಃ ಸಂತುಷ್ಟಪಡಿಸಿ ಬಾ. ನಾನು ಇಷ್ಟಕ್ಕಾಗಿ ಉದ್ವಿಗ್ನನಾಗುವುದಿಲ್ಲ. ನಮಗೆ ಯಾವಯಾವದು ಇಷ್ಟವೋ ಇನ್ನೊಬ್ಬರಿಗೂ ಅವೇ ಇಷ್ಟವಾಗ

ಬಹುದೆಂದು ನಾವು ತಿಳಿಯಬೇಕು. ಎಲೌ ಮಾನಿನಿ! ನಾನೂ ಕುಂಭನೂ ವಿರಕ್ತ ರಾಗಿದ್ದೇವೆ. ದೂರ್ವಾಸರ ಶಾಪದಿಂದ ಹುಟ್ಟಿದ ನೀನು ಪೂರಾ ಬೇರೆಯವಳಾಗಿದ್ದಿ. ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು."

ರಾಜನ ಈ ಮಾತಿಗೆ ಮದನಿಕೆಯು,

"ಮಹಾರಾಜ! ಸ್ತ್ರೀಯರ ಸ್ವಭಾವವೇ ಚಂಚಲವಾದುದು. ಅವರ ಕಾಮವು ಪುರುಷರ ಕಾಮಕ್ಕಿಂತಲೂ ಎಂಟು ಪಟ್ಟು ಹೆಚ್ಚಾಗಿರುವದು. ನಾನು ವನಮಧ್ಯದಲ್ಲಿ ಏಕಾಂತದಲ್ಲಿರುವುದನ್ನೂ ನೀನು ದೂರದಲ್ಲಿ ಜಪಮಾಡುತ್ತಿರುವು ದನ್ನೂ ನೋಡಿದ ಆ ಕಾಮುಕನು ನನ್ನನ್ನು ಪ್ರಾರ್ಥಿಸಿದನು. ಅಬಲೆಯಾದ ನಾನು ಆಗ ಅವನನ್ನು ತಿರಸ್ಕರಿಸಲಾರದವಳಾದೆ. ಸ್ತ್ರೀಸ್ವಭಾವಕ್ಕನುಗುಣವಾಗಿ ನನ್ನಿಂದ ಆ ಅಪರಾಧವಾಯಿತು. ನನ್ನ ಮೇಲೆ ದಯವಿಟ್ಟು ಕೋಪಮಾಡಿಕೊಳ್ಳದೆ ಕ್ಷಮಾ ಮಾಡು. ಸಾಧುಪುರುಷರು ಸರ್ವದಾ ಕ್ಷಮಾಶೀಲರಲ್ಲವೆ?" ಎಂದಳು.

ಶಿಖಿಧ್ವಜನು "ಬಾಲೆ! ಆಕಾಶದಲ್ಲಿಯ ವೃಕ್ಷದಂತೆ ನನ್ನಲ್ಲಿ ಕ್ರೋಧದ ಅತ್ಯಂತ ಅಭಾವವಿದೆ. ನಾವು ಮೊದಲಿನಂತೆಯೇ ಸ್ನೇಹದಿಂದಿರಬಹುದು. ಆದರೆ, ಸಜ್ಜನರು ಈ ವರ್ತನೆಯನ್ನು ನಿಂದ್ಯವೆಂದು ತಿಳಿಯುವುದರಿಂದ ನಾನು ನಿನ್ನನ್ನು ಇಂದಿನಿಂದ ನನ್ನ ಪತ್ನಿಯನ್ನಾಗಿ ತಿಳಿಯುವುದಿಲ್ಲ." ಎಂದನು.

ಶಿಖಿಧ್ವಜನ ರಾಗದ್ವೇಷರಹಿತವಾದ ಸಮಚಿತ್ತತೆಯನ್ನು ಕಂಡು ಚೂಡಾ ಲೆಯು ಅತಿಶಯ ಸಂತೋಷಪಟ್ಟಳು. ಸಂಪೂರ್ಣ ಜೀವನ್ಮುಕ್ತ ಸ್ಥಿತಿಯಲ್ಲಿರುವ ರಾಜನ ಮಹಾಯೋಗ್ಯತೆಯನ್ನು ಮೆಚ್ಚಿ ಚೂಡಾಲೆಯು ತನ್ನ ಮೂಲರೂಪವನ್ನು ರಾಜನಿಗೆ ತೋರಿಸಿದಳು. ಒಂದು ಭರಣಿಯೊಳಗಿಂದ ಹೊರಹೊರಡುವ ಒಂದು ವಸ್ತುವಿನಂತೆ ಮದನಿಕೆಯ ದೇಹದೊಳಗಿಂದ, ರಾಜನು, ನೋಡುನೋಡು ತ್ತಿದ್ದಂತೆಯೇ ಚೂಡಾಲೆಯು ಹೊರಬಂದಳು. ಅಕಸ್ಮಾತ್ ಆವಿರ್ಭೂತಳಾದ ಲಕ್ಷ್ಮಿಯಂತೆ ತನ್ನೆದುರಿನಲ್ಲಿಯೇ ಉದಿಸಿದ ಚೂಡಾಲೆಯನ್ನು ನೋಡಿ ರಾಜನು ಆಶ್ಚರ್ಯಚಕಿತನಾಗಿ ಕಣ್ಣುಗಳನ್ನು ಅರಳಿಸಿ ನೋಡಿದನು. ಮತ್ತು ಆಶ್ಚರ್ಯಾ ಕುಲಿತ ವಾಣಿಯಿಂದ ರಾಜನು "ಎಲೌ ಕಮಲನಯನೆ! ನೀನು ಯಾರು? ಎಲ್ಲಿಂದ ಬಂದೆ? ಏತಕ್ಕೆ ಬಂದೆ? ಇಲ್ಲಿ ಎಷ್ಟು ದಿನಗಳಿಂದ ಇದ್ದಿ? ನಿನ್ನ ಶರೀರದ ಮಾಟ, ನಿಲುವು, ರೂಪ, ಮಂದಹಾಸ, ವಿನಯ, ವಿಲಾಸ, ವ್ಯವಹಾರ, ಇವೇ ಮೊದಲಾ ದುವುಗಳನ್ನು ನೋಡಿದರೆ ನೀನು ನನ್ನ ಪತ್ನಿಯಾದ ಚೂಡಾಲೆಯಂತೆ ಅಥವಾ ಅವಳ ಛಾಯೆಯಂತೆ ಆದರೂ ಕಾಣುತ್ತಿ." ಎಂದು ಉದ್ಗಾರಮಾಡಿದನು.

ಚೂಡಾಲೆಯು, "ಪ್ರಭುವೆ! ತಾವು ಹೇಳುವದು ನಿಜವಿದೆ. ನಾನು **ಚೂಡಾಲೆಯೇ** ಇದ್ದೇನೆ. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ರಾಗ : ಜಯಜಯವಂತಿ ತಾಲ : ಝಂಪ

ನಿನ್ನ ಮೋಹವ ಕಳೆಯೆ । ಸನ್ಮತನೆ ! ಸಾಹಸದಿ ॥
ಭಿನ್ನ ರೂಪವ ತಳೆದೆ । ಘನ್ನ ಸಿದ್ಧಿಯ ಬಲದೆ ॥ ಧ್ರು ॥

ಚೂಡಾಲಿ ನಾನೆಂದು । ನಾಡಾಳಿ ಬಂದೊಡೆ ॥
ಓಡುವೆಯೊ ನೀನೆಂದು । ಹೂಡಿದೆನು ಈ ಮೋಡಿ ॥ ೧ ॥

ವರಕುಂಭರೂಪದಲಿ । ಪರಮಾರ್ಥವನೆ ತಿಳುಪಿ ॥
ಭರದಿ ಭೂಮಾಸುಖವ । ನಿರದೆ ನಿನಗಿತ್ತೆ ಪ್ರಭೊ ॥ ೨ ॥

ಮದನಿಕೆಯ ನೆಪದಿಂದೆ । ಮೃದುವಾಗಿ ಮನವೊಲಿಸಿ ॥
ಸದಯ ನಿನ್ನನು ಗೆಲಿದೆ । ಮಧುರ ಪ್ರೇಮವ ಬೆಳೆಸಿ ॥ ೩ ॥

ತ್ಯಾಗದಾ ಮೋಹದಲಿ । ಯೋಗದನುರಾಗದಲಿ ॥
ನೀಗುತಿರಲಸುವ ನೀ ! ಸಾಗಿ ಬಂದೆನು ಪ್ರಿಯನೆ ॥ ೪ ॥

ತ್ಯಾಗಭೋಗಗಳೀಗ । ರಾಗದಿಂದೊಂದಾಗಿ ॥
ತೂಗುತಿಲ್ಲವೆ ಸಮದಿ । ನೀಗಿ ಭೇದವ ದೊರೆಯೆ ॥ ೫ ॥

ನಿಮಗೆ ಬೋಧಮಾಡುವದರ ದೆಸೆಯಿಂದಲೇ ಕುಂಭಾದಿ ದೇಹಗಳನ್ನು ಧಾರಣ ಮಾಡಿದೆ; ಮತ್ತು ಈ ವನದಲ್ಲಿ ಅನೇಕ ಉಪಾಯಗಳಿಂದ ತಮ್ಮ ಜೊತೆಜೊತೆಗೆ ಇರುತ್ತಿದ್ದೆ. ತಾವು ಮೋಹವಶದಿಂದ ರಾಜ್ಯತ್ಯಾಗ ಮಾಡಿ ಎಂದಿನಿಂದ ಈ ವನದಲ್ಲಿ ತಪಸ್ಸನ್ನು ಮಾಡುವದಕ್ಕೆ ಬಂದಿರೋ ಅಂದಿನಿಂದಲೂ, ತಮಗೆ ನಿಜವಾದ ಜ್ಞಾನವನ್ನೂ ಧರ್ಮವನ್ನೂ ಬೋಧಿಸಬೇಕೆಂದೇ ಉದ್ಯುಕ್ತಳಾಗಿದ್ದೇನೆ. ಈ ಕುಂಭರೂಪದಿಂದ ನಾನೇ ನಿಮಗೆ ಬೋಧಮಾಡಿದೆ. ಅದಕ್ಕಾಗಿಯೇ ನಾನು ಮಾಯೆಯಿಂದ ಕುಂಭ, ಮದನಿಕಾ, ಮೊದಲಾದ ವ್ಯಕ್ತಿನಿರ್ಮಾಣದ ಸಾಹಸ ಮಾಡಿದೆ. ಮಹಾರಾಜ ! ಕುಂಭ, ಅವನ ಸ್ವರ್ಗಗಮನ, ದೂರ್ವಾಸಶಾಪ, ಅದರಿಂದುಂಟಾದ ಸ್ತ್ರೀತ್ವ, ಮದನಿಕೆಯೊಡನೆ ನಿಮ್ಮ ವಿವಾಹ, ಇಂದ್ರಾದಿ ದೇವತೆಗಳ ಪ್ರಲೋಭನ, ಮದನಿಕೆಯ ಪರಪುರುಷ ವಿಲಾಸ, ಇತ್ಯಾದಿಗಳಲ್ಲಿ ಯಾವದೊಂದೂ ಎಳ್ಳಷ್ಟೂ ನಿಜವಲ್ಲ. ತಾವೀಗ ಜ್ಞಾನಿಗಳಾಗಿದ್ದೀರಿ. ತಾವು ಧ್ಯಾನಸ್ಥರಾಗಿ ಯೋಗದೃಷ್ಟಿಯಿಂದ ನೋಡಿಪ್ಪಾದರೆ ನಿಜದ ನಿಶ್ಚಯಜ್ಞಾನವಾಗುವದರಲ್ಲಿ ಸಂಶಯವಿಲ್ಲ.

ಚೂಡಾಲೆಯು ಹೀಗೆ ಹೇಳುತ್ತಿರುವಾಗಲೇ ರಾಜನು ಕಣ್ಣನ್ನು ಮುಚ್ಚಿಕೊಂಡು ಧ್ಯಾನಸ್ಥನಾಗಿ ತನ್ನ ಸಕಲ ವೃತ್ತಾಂತಗಳನ್ನೂ ವಿಶೇಷ ರೀತಿಯಿಂದ ನೋಡಿದನು. ತಾನು ರಾಜ್ಯವನ್ನು ಬಿಟ್ಟು ಹೊರಟ ನಿಮಿಷದಿಂದಲೂ ಒಂದು ಗಳಿಗೆಯ ಮುಂಚೆ ಚೂಡಾಲೆಯ ದರ್ಶನವಾಗುವವರೆಗೂ ಸಮಸ್ತ ವಿವರವೂ ಅವನ

ಎರಡು ಗಳಿಗೆಯ ಧ್ಯಾನದಲ್ಲಿ ಗೋಚರವಾಯಿತು. ಅನಂತರ ಶಿಖಿಧ್ವಜನು ಧ್ಯಾನವನ್ನು ಬಿಟ್ಟು, ಅತ್ಯಾನಂದದಿಂದ ಕಣ್ಣುಗಳಲ್ಲಿ ಹರ್ಷಾಶ್ರು ತುಂಬಿರಲು ತನ್ನ ಪ್ರಿಯೆಯನ್ನು ಗಾಢಾಲಿಂಗನ ಮಾಡಿಕೊಂಡನು. ಆ ಅತ್ಯಂತ ಮಧುರ ಪ್ರಸಂಗದ ರಸನಿಮಿಷದಲ್ಲಿ ಅವರೀರ್ವರಿಗೂ ಆದ ಅನ್ಯಾತಾನಂದವನ್ನು ವರ್ಣಿಸುವದು ಆದಿಶೇಷನ ಎರಡು ಸಹಸ್ರ ನಾಲಿಗೆಗಳನ್ನು ಉಪಯೋಗಿಸಿದರೂ ಸಾಕ್ಷಾತ್ ವಾಗ್ದೇವತೆಗೂ ಸಾಧ್ಯವಾಗಲಾರದು. ಇಬ್ಬರಿಗೂ ಮೈಯಲ್ಲಿ ಕಂಪನವೂ ರೋಮಾಂಚನವೂ ಉಂಟಾಯಿತು; ಒಂದೇ ಸಮನೆ ಆನಂದಾಶ್ರುವು ಸುರಿಯಿತು. ಕಂಠವು ಗದ್ಗದಿತವಾಯಿತು. ಇಬ್ಬರೂ ಪರಸ್ಪರ ಗಾಢಾಲಿಂಗನದಲ್ಲಿ ಎರಡು ಗಳಿಗೆಗಳ ಕಾಲ ಕಂಬದಂತೆ ಸ್ತಬ್ಧರಾಗಿದ್ದರು. ಅನಂತರ ರಾಜನು ಪ್ರಿಯಳ ತಲೆಯನ್ನೂ ಮುಖವನ್ನೂ ಪ್ರೀತ್ಯಾದರಗಳಿಂದ ನೇವರಿಸುತ್ತಾ ಕೈಯನ್ನು ಹಿಡಿದು ನಯವಾಗಿ,

"ಪ್ರಿಯೆ! ನೀನು ಇಷ್ಟು ಕೋಮಲೆಯಾಗಿದ್ದೂ ನನ್ನ ದೆಸೆಯಿಂದ ಎಷ್ಟೆಷ್ಟು ಕ್ಲೇಶಗಳನ್ನು ಸಹಿಸಿದೆ! ಯಾವ ಅಲೌಕಿಕ ಬುದ್ಧಿಯಿಂದ ನೀನು ನನ್ನನ್ನು ಘೋರವಾದ ಸಂಸಾರ ಸಾಗರದಿಂದ ಪಾರುಮಾಡಿದೆಯೋ ಆ ಮಹಾತ್ಮಳಾದ ಈ ನಿನಗೆ ಯಾವ ಉಪಮಾನವನ್ನು ತಾನೇ ಕೊಡಬಹುದು? ನಿನ್ನ ಗುಣವನ್ನೂ ಸಾಮರ್ಥ್ಯವನ್ನೂ ನೋಡಿ ಅರುಂಧತಿಯೂ ಶಚಿಯೂ ಗೌರಿಯೂ ಗಾಯತ್ರಿಯೂ ಸಾವಿತ್ರಿಯೂ ಸರಸ್ವತಿಯೂ ಲಕ್ಷ್ಮಿಯೂ ಸಹ ನಾಚಿಕೆಪಡುತ್ತಾರೆ! ನೀನು ದಿವ್ಯ ಸ್ತ್ರೀಯರಾದ ಧೀ, ಶ್ರೀ, ಕಾಂತಿ, ಕ್ಷಮಾ, ಮೈತ್ರೀ, ಕರುಣಾ ಮೊದಲಾದವರಿಗಿಂತಲೂ ಶ್ರೇಷ್ಠಳಾಗಿ ಕಾಣುತ್ತಿ. ನೀನು ನಿಜವಾಗಿಯೂ ನನಗೆ ಮಹಾ ದೃಢ ನಿಶ್ಚಯದಿಂದ ಬೋಧಮಾಡಿದ್ದಿ. ಅಪಾರವಾದ ಶ್ರದ್ಧೆಯನ್ನೂ ಶ್ರಮವನ್ನೂ ವಹಿಸಿದ್ದಿ. ಅಮೋಘವಾದ ಬುದ್ಧಿಯನ್ನೂ ಸಿದ್ಧಿಯನ್ನೂ ವಿನಿಯೋಗಿಸಿದ್ದಿ! ಅಲೌಕಿಕವಾದ ಪ್ರೇಮದಿಂದ ಭೂಮಾನಂದವನ್ನು ನನಗೆ ಕೃಪೆಮಾಡಿದ್ದಿ! ಆದರೆ, ನಾನೀಗ ನಿನ್ನ ಈ ಮಹೋಪಕಾರವನ್ನು ಯಾವ ಪ್ರತ್ಯುಪಕಾರದಿಂದ ತೀರಿಸಲಿ? ನೀನು ಆತ್ಮಜ್ಞಾನದಿಂದ ಕೃತಾರ್ಥಳಾಗಿರುವದರಿಂದ ನಿನ್ನ ಮನಸ್ಸು ಯಾವ ಉಪಕಾರದಿಂದ ಸಂತುಷ್ಟವಾಗಬಹುದೋ ಅದೇ ನನಗೆ ತೋರುತ್ತಿಲ್ಲ.

ರಾಗ: ರವಿ ತಾಲ: ದಾದರಾ

ಪ್ರಿಯತಮೆ! ಮಿಗಿಲಾಯ್ತು ಮಹಾ ಸಾಹಸೋಪಕಾರಾ।
ನಿರುಪಮವಹ! ನಿನ್ನ ಮಹಾ ಸಾಹಸೋಪಕಾರಾ। ಧ್ರು।

ಜಾಣತನದೆ ಕುಂಭನಾಗಿ। ಪ್ರಾಣಸಖನೆ ಯೋಗಿಯಾಗಿ।
ಗುರುವರ ಮಹಿಮಾಪ್ರಯೋಗಿ। ಅಮರಗೈದೆಯಾಗಿ ॥೧॥

ಜ್ಞಾನ ಬಲದೆ ಜ್ಞಾನ ನೀಡಿ! ಪ್ರೇಮ ಬಲದೆ ಪ್ರೇಮ ಮಾಡಿ!
ಮದನಿಕೆ! ಮಧುರಾತ್ಮ ಮೋಡಿ! ಕೃಪೆಯಗೈದೆ ಚೂಡಾ ‼ ೨‼

ಭಾವಗೀತೆ

ಸಕಲಲೋಕದಲಿ ಮಿಗಿಲೆನಿಪ ಶಿವಸಂಪದವ–
ಸುಕರವಾಗೆನಗಿತ್ತ ನಿನಗೀಗ ನಾನಾವ–

ಅಧಿಕವಾದೈಶ್ವರ್ಯ ಕುಡಬಲ್ಲೆ ಕರುಣಿ ಗುರೋ!
ಹೃದಯೈಕ್ಯ ಧನ್ಯತೆಯ ದಕ್ಷಿಣೆಯ ಸ್ವೀಕರಿಸೈ ‖

ಅನಾದಿಯೂ ಗಹನವೂ ಆದ ಮೋಹದಲ್ಲಿ ಬಿದ್ದಿರುವ ಪತಿಯನ್ನು, ನಿಷ್ಠರಾದ ಬ್ರಹ್ಮವಾದಿನೀ ಸಾಧ್ವಿಯರು ಹೇಗೆ ಉದ್ಧಾರಮಾಡಬಲ್ಲರೋ ಹಾಗೆ ಶಾಸ್ತ್ರಾರ್ಥವಾಗಲೀ, ಮಂತ್ರೋಪದೇಶವಾಗಲೀ ಮಾಡುವದು ದುರ್ಲಭವೇ ಸರಿ. ಕುಲಸ್ತ್ರೀಯರು ತಮ್ಮ ಪತಿಯ ಮೇಲೆ ಹೇಗೆ ಪ್ರೇಮವನ್ನು ಮಾಡುವರೋ ಹಾಗೆ ತಂದೆತಾಯಿಗಳನ್ನು ಬಿಟ್ಟರೆ ಬೇರೆ ಯಾರೂ ಮಾಡಲಾರರು. ಪತಿಗೆ ನಿಜವಾದ ಸಖರೂ ಸಖಿಯರೂ ಸಹೋದರ ಸಹೋದರಿಯರೂ ಸುಹೃದರೂ ಸೇವಕರೂ, ಮಿತ್ರ, ಬಾಂಧವ, ಗುರು, ಧನ, ಸಂಪತ್ತು, ಸುಖ ಇತ್ಯಾದಿಗಳೆಲ್ಲವೂ ಕುಲಸ್ತ್ರೀಯರೇ ಆಗಿದ್ದಾರೆ. ಆದ್ದರಿಂದ ಸರ್ವಪ್ರಕಾರದಿಂದಲೂ ಸರ್ವದಾ ಕುಲಾಂಗನೆಯರನ್ನು ಆದರಿಸಬೇಕು; ಆರಾಧಿಸಬೇಕು; ಏಕೆಂದರೆ, ಇಹ, ಪರ ಎರಡು ಲೋಕಗಳಲ್ಲಿಯೂ ಸರ್ವಸುಖವೂ ಸಾಧ್ವೀಪತ್ನಿಯರ ಅಧೀನದಲ್ಲಿರುತ್ತವೆ. ನಿನ್ನಂಥ ಬ್ರಹ್ಮನಿಷ್ಠೆಯರಾದ ಯೋಗಿನಿಯರು ತಮ್ಮ ಪತಿಗಳಿಗೆ ಧರ್ಮಾರ್ಥಕಾಮಗಳನ್ನಲ್ಲದೆ, ಪರಮಾರ್ಥ ಜ್ಞಾನದಾನದಿಂದ ತಾರಕಗುರುಗಳಾಗಿ ಮೋಕ್ಷವನ್ನೂ ನೀಡಬಲ್ಲರು. ಅಂದಮೇಲೆ ಸಕಲ ಸುಖಸೌಭಾಗ್ಯಗಳ ವರದಾತೆಯರಾದ ಭಾಗ್ಯದೇವತೆಯರನ್ನು ಎಷ್ಟು ಹೊಗಳಿದರೂ ಕಡಿಮೆಯೇ! ಸುಂದರಿ! ಸಂಸಾರಸಾಗರದಿಂದ ಪಾರಾಗಿ ನಿರಿಚ್ಛಳಾಗಿರುವ ಅಂಥಾ ಸೌಭಾಗ್ಯಲಕ್ಷ್ಮಿಯಾದ ನಿನ್ನ ಅಲೌಕಿಕವಾದ ಉಪಕಾರವನ್ನು ಹೇಗೆ ತೀರಿಸಲಿ? ಈ ಲೋಕದಲ್ಲಿ ನೀನು ಎಲ್ಲಾ ಕುಲಾಂಗನೆಯರನ್ನೂ ಜಯಿಸಿದ್ದೀಯೆ. ತಮಗಿಂತಲೂ ಹೆಚ್ಚು ಗುಣವತಿಯೂ ಯೋಗ್ಯತಾವತಿಯೂ ಆದ ನಿನ್ನನ್ನು ನಿರ್ಮಾಣಮಾಡಿದ್ದಕ್ಕಾಗಿ ಆ ಬ್ರಹ್ಮನ ವಿಷಯದಲ್ಲಿ ಅರುಂಧತಿ ಮೊದಲಾದವರಿಗೆ ಅಸಮಾಧಾನವೇ ಉಂಟಾಗಿರಬೇಕು, ಎಂದು ನನಗೆ ತೋರುತ್ತದೆ. ಸೌಜನ್ಯಾದಿ ಸದ್ಗುಣಗಳಿಗೆ ಆಧಾರವಾಗಿರುವ ಭಾಮಿನೀ! ನೀನೇ ನಿಜವಾದ ಪತಿವ್ರತೆಯು. ನಿನ್ನ ಅಸಾಧಾರಣ ಸದ್ಗುಣಗಳಿಗೆ ಮೆಚ್ಚಿ ಮುಗ್ಧನಾದ ನನಗೆ ಪುನಃ ಆಲಿಂಗನವನ್ನು ಕೊಡು.”

ರಾಗ : ಸಾರಂಗ ತಾಲ : ಝಂಪಾ

ನೀಡು ಆಲಿಂಗನವ { ಭಾಗ್ಯವತಿ ತಾರಕೆ
ಸ್ವಾಮಿನಿಯೆ || ಧ್ರು ||

ಪೂರ್ಣಕಾಮಳೆ { ಪ್ರೇಮ ! ಪೂರ್ಣಮನದಲಿ ಕಲಾ । ಪೂರ್ಣ
ಭಾವೆ
ಕುಶಲತೆಯ ನೀ । ಮೆರೆದು ಪೊರೆ, ಚಂದ್ರಿಕೇ || ೧ ||

ಪ್ರೇಮಸಾಗರೆ ಭೂಮೆ । ಭಾವಿನೀಮಣಿ, ಸದಾ । ನಂದ ನಿಧಿ,
ನಿನಗೆ ನಾ । ಪರಮುಖುಣಿ ದೇಶಿಕೇ || ೨ ||

ಭಾವಗೀತೆ

ಪುಣ್ಯತಮೆ ! ನಿನ್ನಯ ಪವಿತ್ರಕಾಯವ ಕವಿದು ।
ಬಿಗಿದಪ್ಪಿ ತನುಮನಗಳೈಕ್ಯಭಾವದ ಭರದಿ ||

ನಿನ್ನಾತ್ಮದೊಳಗಿರ್ಪನುಭವಾಮೃತ ಸವಿದು ।
ಧನ್ಯಾತ್ಮನಹೆನು, ಕೃತಕೃತ್ಯ, ಜಯಧನ್ಯೆ ! ಚೂಡಾ ||

ಹೀಗೆಂದು ರಾಜನು ಆ ಹರಿಣಾಕ್ಷಿಯನ್ನು ಪುನಃ ಆಲಿಂಗಿಸಿಕೊಂಡನು.

ಆಗ ಚೂಡಾಲೆಯು ಹೇಳಿದಳು :

“ದೇವ ! ತಾವು ರಾಜ್ಯಭಾರ ಮಾಡುವಾಗ, ನಿಸ್ಸಾರವಾದ ವ್ಯವಹಾರಜಾಲದಲ್ಲಿ ಕಾತರತೆಯಿಂದ ಆಸಕ್ತರಾದಾಗಲೆಲ್ಲಾ ನನಗೆ ಪುನಃ ಪುನಃ ಮನಸ್ಸಿಗೆ ಅತೀವ ನೋವಾಗುತ್ತಿತ್ತು. ಆ ಕಾರಣದಿಂದಲೇ ನಾನು ನನ್ನ ದುಃಖವನ್ನು ಕಳೆದುಕೊಳ್ಳುವುದಕ್ಕಾಗಿಯೇ ತಮಗೆ ಆತ್ಮಬೋಧ ಮಾಡುವುದರ ಮೂಲಕ ನನ್ನ ಸ್ವಾರ್ಥವನ್ನು ನಾನು ಸಂಪಾದಿಸಿಕೊಂಡೆ. ಆದ್ದರಿಂದ ತಾವು ನನ್ನನ್ನು ಇಷ್ಟು ಗೌರವಿಸುವುದಕ್ಕೆ ಏನೂ ಕಾರಣವಿಲ್ಲ.”

ಆಗ ಶಿಖಿಧ್ವಜನು “ಸುಂದರಿ ! ನಿಜವಾಗಿಯೂ ನೀನು ಹೇಗೆ ನಿನ್ನ ಶುಭಕರವಾದ ಸ್ವಾರ್ಥವನ್ನು ಸಂಪಾದಿಸಿದೆಯೋ ಹಾಗೆ ಸರ್ವಕುಲಾಂಗನೆಯರೂ ಪರಮಾರ್ಥವಾದ ತಮ್ಮ ತಮ್ಮ ಸ್ವಾರ್ಥವನ್ನು ಸಾಧಿಸಲು ಶಕ್ತರಾಗುತ್ತಾರೋ ಹೇಗೆ ? ಸರ್ವಥಾ ಇಲ್ಲ. ಆದ್ದರಿಂದಲೇ ನೀನು ಎಲ್ಲರಿಗಿಂತಲೂ ಹೆಚ್ಚಿನ ಗೌರವಕ್ಕೆ ಪಾತ್ರಳಾಗಿದ್ದಿ.” ಎಂದು ಹೇಳಿದನು.

ಅದಕ್ಕೆ ಚೂಡಾಲೆಯು,

"ಎಲೈ ಕಾಂತ! ನಾನು ಮಾಡತಕ್ಕವನು; ಇದರ ಫಲವನ್ನು ನಾನು ಅನುಭವಿಸತಕ್ಕವನು" ಎಂದು ಬುದ್ಧಿಯಲ್ಲಿ ಸ್ವಾಭಾವಿಕವಾಗಿ ಬರಬಹುದಾದ ಕ್ಷುದ್ರ ಭಾವನೆಗಳನ್ನು ಕಂಡು ನಿಮಗೆ ಮನಸ್ಸಿನ ಒಳಗೇ ನಗು ಬರುವದಿಲ್ಲವೇ ಹೇಗೆ? ಪೂರ್ವದ ವ್ರತೋಪವಾಸಾದಿಗಳು ನಿಮಗೆ ಮೋಹಜನ್ಯವೆಂದು ತೋರುವದಿಲ್ಲವೆ? ತುಚ್ಛವಾದ ತೃಷ್ಣೆಗಳೂ ಕುಕಲ್ಪನೆಗಳೂ ಸಂಕಲ್ಪಗಳೂ ಈಗ ನಿಮ್ಮ ಮನಸ್ಸಿನಲ್ಲಿ ಏಳುವದಿಲ್ಲ ಅಲ್ಲವೆ? ಹೇ ದೇವ! ಈಗ ನಿಮ್ಮ ನಿಷ್ಠೆಯೂ ಸ್ಥಿತಿಯೂ ಏನಾಗಿದೆ? ಈಗ ತಮ್ಮ ಇಚ್ಛೆ ಏನಿದೆ?" ಎಂದು ಕೇಳಿದಳು.

ಶಿಖಿಧ್ವಜನು: "ಎಲೌ ಸುಂದರಿ! ನಾನು ಏನು ಹೇಳಲಿ? ನೀನೇ ನನ್ನ ಅಂತರಾತ್ಮಳಾಗಿದ್ದಿ. ಆದ್ದರಿಂದ ನನ್ನ ಸ್ಥಿತಿ ಏನೆಂಬುದನ್ನು ನೀನೇ ನಿನ್ನ ಅನುಭವದಿಂದ ತಿಳಿದುಕೋ. ನಾನು ನಿರಿಚ್ಛನೂ ಆಕಾಶದಂತೆ ಸ್ವಚ್ಛನೂ ಶಾಂತನೂ ಪರಮಾರ್ಥ ಸತ್ಯಸ್ವರೂಪನೂ ಆಗಿದ್ದೇನೆ. ದೇಹಾದಿಗಳಲ್ಲಿದ್ದ ಅಹಂ ಭ್ರಮೆಯನ್ನು ಬಿಟ್ಟು, ಬಹಳ ದಿನಗಳಿಂದ ನಾನು ನಿಜವಾದ ನಾನೇ ಆಗಿದ್ದೇನೆ. ಹರಿಹರಾದಿ ಪ್ರಭಾವಶಾಲಿಗಳು ಕೂಡ ಕಳೆಯಲಾರದ ಭೂಮಾನಂದವನ್ನು ಪಡೆದಿದ್ದೇನೆ. ಆಕಾಶಸದೃಶವಾದ ಚಿನ್ಮಾತ್ರಬ್ರಹ್ಮದಲ್ಲಿ ಸ್ವಸ್ಥನಾಗಿದ್ದೇನೆ. ಎಲೌ ಪತಿವ್ರತೆ! ನೀನು ನನಗೆ ಗುರು ಆಗಿದ್ದಿ. ನಿನಗೆ ನಾನು ನಮಸ್ಕಾರ ಮಾಡುತ್ತೇನೆ. ನಿನ್ನ ಅನುಗ್ರಹದಿಂದ ನಾನು ಸಂಸಾರಸಾಗರವನ್ನು ದಾಟಿಹೋಗಿದ್ದೇನೆ. ನನಗೆ ಯಾವ ಇಚ್ಛೆಯೂ ಇಲ್ಲ; ಭಾವನೆಯೂ ಇಲ್ಲ; ಚಿಂತೆಯೂ ಇಲ್ಲ. ಕೇವಲ ಪ್ರತಿಬಿಂಬದಂತೆ ನಿನ್ನನ್ನು ನಾನು ಅನುಸರಿಸುತ್ತೇನೆ. ನಿನಗೆ ಹೇಗೆ ತೋರಿದರೆ ಹಾಗೆ ಮಾಡು. ನಿನ್ನ ಯಾವ ಆಚರಣೆಯನ್ನೂ ನಾನು ಆಕ್ಷೇಪಿಸುವದಿಲ್ಲ." ಎಂದು ಹೇಳಿದನು.

ಚೂಡಾಲೆಯು "ಪ್ರಭೋ! ಹಾಗಿದ್ದರೆ ನಾನು ಹೇಳಿದಂತೆ ಕೇಳಿ, ಅದರಂತೆ ಮಾಡಿ. ಅಜ್ಞಾನವು ನಾಶವಾಗಿರುವುದರಿಂದಲೂ ಸರ್ವತ್ರ ಆತ್ಮನೊಬ್ಬನೇ ಇರುವನೆಂಬ ಜ್ಞಾನವಾಗಿರುವದರಿಂದಲೂ ಆಕಾಶದಂತೆ ನಿರ್ಮಲರೂ ಸ್ವಚ್ಛರೂ ಆಗಿದ್ದೇವೆ. ನಮಗೆ ಇಚ್ಛೆಯೂ ನಿರಿಚ್ಛೆಯೂ ಒಂದೇ ಆಗಿವೆ. ನಾವು ದೇಹೇಂದ್ರಿಯಗಳಲ್ಲಿ ನಾನೆಂಬ ಭಾವನೆಯನ್ನು ಇಟ್ಟಿಲ್ಲವಾದುದರಿಂದ ಅವುಗಳ ಸ್ವಾಭಾವಿಕವಾದ ವ್ಯಾಪಾರಗಳನ್ನು ತಡೆಹಿಡಿಯುವುದರಿಂದ ನಮಗೆ ಯಾವ ಹೆಚ್ಚಿನ ಲಾಭವಾಗಬೇಕಾಗಿದೆ? ನಾವು ನಮ್ಮ ಜೀವನದ ಮೊದಲನ್ನೂ ಮಧ್ಯವನ್ನೂ ಕೊನೆಯನ್ನೂ ನೋಡಿದರೆ, ರಾಜ್ಯಭಾರವನ್ನು ಮಾಡುವದೇ ನಮಗೆ ಜನ್ಮದಿಂದ ಬಂದಂಥ ಕರ್ತವ್ಯವಾಗಿದೆ.

ಆದ್ದರಿಂದ ತಾನಾಗಿಯೇ ಪ್ರಾಪ್ತವಾದ ಭೋಗದ ಯೋಗದಿಂದ ಪ್ರಾರಬ್ಧವನ್ನು ಕ್ಷಯಮಾಡುತ್ತಾ ಆಯುಷ್ಯವನ್ನು ಕಳೆದು ಯೋಗ್ಯ ಸಮಯದಲ್ಲಿ ವಿದೇಹ ಕೈವಲ್ಯ ವನ್ನು ಪಡೆಯೋಣ. ನಾವು ಒಂದು ಮೋಹವನ್ನು ಬಿಡುವ ಸಂಭ್ರಮದಲ್ಲಿ ಇನ್ನೊಂದು ಮೋಹಕ್ಕೆ ಬಲಿಯಾಗುವ ಸಂಭವವಿದೆ. ಆದ್ದರಿಂದ ಸ್ವಾಮಿನ್! ತಾವು ಪೂರ್ವದಿಂದಲೂ ಬಂದಿರುವ ತಮ್ಮ ರಾಜಾಸನದ ಮೇಲೆ ಕುಳಿತುಕೊಂಡು ರಾಜರಾಗಿರಿ. ನಾನು ತಮ್ಮ ಮುಖ್ಯ ರಾಣಿ, ಪಟ್ಟಮಹಿಷಿಯಾಗುತ್ತೇನೆ. ಈ ನಿಮಿತ್ತದಿಂದ ನಮ್ಮ ರಾಜಧಾನಿಯಲ್ಲಿ ಮಹೋತ್ಸವವುಂಟಾಗಲಿ!" ಎಂದು ಹೇಳಿದಳು.

ಆಗ ರಾಜನು ನಗುತ್ತಾ ವಿನೋದದಿಂದ,

"ಪ್ರಿಯೇ! ನಿನ್ನ ಭೋಗೇಚ್ಛೆಯು ಇಷ್ಟು ತೀವ್ರವಾಗಿದ್ದರೆ, ಇಂದ್ರನ ಪ್ರಾರ್ಥನೆಯಂತೆ ಸ್ವರ್ಗಕ್ಕೆ ಹೋಗಿ, ಅಲ್ಲಿಯ ದಿವ್ಯ ಭೋಗಗಳನ್ನೇ ಭೋಗಿಸುವ ದಕ್ಕೆ ಏನು ಅಡ್ಡಿ ಇದೆ? ಈ ಕ್ಷುದ್ರಮಾನುಷ ಭೋಗವನ್ನು ಏಕೆ ಬಯಸಬೇಕು?" ಎಂದು ಕೇಳಿದನು.

ಚೂಡಾಲೆಯು "ಪ್ರಾಣನಾಥ! ನನಗೆ ಭೋಗದ ಅಥವಾ ವಿಭೂತಿಯ (ಸಿದ್ಧಿಯ) ಇಚ್ಛೆಯಿಲ್ಲ. ಆದರೆ, ತಾನಾಗಿಯೇ ಸ್ವಾಭಾವಿಕವಾಗಿ ಬಂದ ಭೋಗ ವನ್ನು ತಿರಸ್ಕರಿಸದಿರುವದೇ ಜ್ಞಾನಿಗಳ ಸ್ಥಿತಿಯಾಗಿದೆ. ರಾಜ್ಯವಾಗಲೀ ಸ್ವರ್ಗ ವಾಗಲೀ ಭೋಗವಾಗಲೀ ನಮ್ಮ ಸುಖಕ್ಕೆ ಕಾರಣವಾಗಲಾರವು. ಆದರೆ ಯಾವ ದಶೆಯಲ್ಲಾಗಲೀ ಕ್ಷುಬ್ಧಳಾಗದೇ ಇರುತ್ತೇನೆ. ಇದು ಸುಖ, ಇದು ದುಃಖ ಎನ್ನುವ ಭಾವನೆಯೇ ಕ್ಷೀಣವಾದ ಮೇಲೆ ನಿತ್ಯ ನಿರಂತರವಾದ ಸಮತಾನಂದವನ್ನು ಬಿಟ್ಟಿರು ವದು ಹೇಗೆ ಸಾಧ್ಯ?" ಎಂದು ಹೇಳಿದಳು.

ಶಿಖಿಧ್ವಜನು "ಪ್ರಿಯೆ! ಅದು ಸತ್ಯವಾದುದು. ಸುಖದುಃಖಗಳ ಚಿಂತೆ ಯನ್ನು ಬಿಟ್ಟು, ಕಾಮಾದಿಗಳ ಕಾಟವಿಲ್ಲದಂತೆ, ತಾನಾಗಿಯೇ ಬಂದ ಸ್ಥಿತಿಗತಿಗಳಲ್ಲಿ ಸ್ವಸ್ಥರಾಗಿರುವವರು, ರಾಜ್ಯಭಾರ ಮಾಡಿದರೂ ಬಿಟ್ಟರೂ ಪರಮಾರ್ಥ ದೃಷ್ಟಿಯಿಂದ ಒಂದೇ ಆಗಿರುತ್ತದೆ." ಎಂದು ಹೇಳಿದನು.

ಹೀಗೆ ಮಧುರ ಸಂಭಾಷಣೆ ನಡಸುತ್ತಿದ್ದ ಆ ದಿವ್ಯ ದಂಪತಿಗಳ ದಿವಸವು ಕ್ಷಣಾರ್ಧದಂತೆ ಕಳೆದುಹೋಯಿತು.

ಮರುದಿನ ಪ್ರಾತಃಕಾಲದಲ್ಲಿ ರಾಜನೂ ರಾಣಿಯೂ ಸ್ನಾನ ಸಂಧ್ಯಾದಿಗಳನ್ನು ಪೂರೈಸಿಕೊಂಡು ಕುಳಿತಿರುವಾಗ ಚೂಡಾಲೆಯು ತಮ್ಮ ಮುಂದೆ ಒಂದು ರತ್ನಕಲಶ ವನ್ನು ಕಲ್ಪನೆ ಮಾಡಿದಳು. ಅದರಲ್ಲಿ ಸಂಕಲ್ಪದಿಂದ ಸಪ್ತಸಾಗರ ಜಲವನ್ನು ತುಂಬಿ,

ರಾಜನಿಗೆ ಸ್ವಸಾಮ್ರಾಜ್ಯದ ಸಾಮ್ರಾಟನಾಗುವಂತೆ ಮಂಗಳಕರವಾದ ಅಭಿಷೇಕ ಮಾಡಿದಳು. ಅನಂತರ ಸಂಕಲ್ಪಮಾತ್ರದಿಂದ ಪ್ರಾಪ್ತವಾದ ನವರತ್ನ ಸಿಂಹಾಸನದ ಮೇಲೆ ಮಹಾರಾಜನನ್ನು ಕುಳ್ಳಿರಿಸಿ ಚೂಡಾಲೆಯು ಹೇಳಿದ್ದೇನೆಂದರೆ, ''ಎಲೈ ಪ್ರಭುವೆ! ಮುನಿಗಳಿಗೆ ಯೋಗ್ಯವಾದ ಈ ಶಾಂತ ತೇಜಸ್ಸನ್ನು ಒಳಗಡಗಿಸಿಕೊಂಡು ಶಾಸನ ಮಾಡುವುದಕ್ಕೆ ಯೋಗ್ಯವಾದ ಇಂದ್ರಾದಿಗಳ ತೇಜಸ್ಸನ್ನು ಧಾರಣಮಾಡು.''

ರಾಣಿಯ ಈ ಪ್ರಾರ್ಥನೆಯನ್ನು ಸನ್ಮಾನಿಸಿ ''ಒಳ್ಳೆಯದು ಆಗಲಿ'' ಎಂದು ರಾಜನು, ರಾಜಶ್ರೀ ತೇಜಸ್ಸಿನಿಂದ ಬೆಳಗತೊಡಗಿದನು. ಅನಂತರ, ಪಟ್ಟಾಭಿಷೇಕ ವಾಗದಿರುವುದರಿಂದ ಸೇವಕಿಯ ಸ್ಥಾನದಲ್ಲಿ ವಿನಯದಿಂದ ನಿಂತಿದ್ದ ಚೂಡಾಲೆಯನ್ನು ಕರೆದು ರಾಜನು ''ಪ್ರಿಯೆ ! ಈಗ ನಿನಗೆ ಮಹಾರಾಣಿಯ ಪದವಿಯಲ್ಲಿ ಅಭಿಷೇಕ ಮಾಡುತ್ತೇನೆ.'' ಎಂದು ಆಕೆಗೆ ಸರೋವರದಲ್ಲಿ ಸ್ನಾನಮಾಡಿಸಿ ಕರತಂದನಂತರ ಪಟ್ಟಾಭಿಷೇಕ ಮಾಡಿದನು.

ಅನಂತರ ರಾಜನು ಚೂಡಾಲೆಗೆ ''ಸುಂದರಿ! ಮಹಾ ವೈಭವಪೂರ್ಣವಾದ ಉದ್ದಾಮ ಸೈನ್ಯವನ್ನು ಸೃಷ್ಟಿಮಾಡು.'' ಎಂದನು.

ಆಗಲೇ ಭಯಂಕರವಾದ ಚತುರಂಗ ಸೈನ್ಯವು ಚೂಡಾಲೆಯ ಸಂಕಲ್ಪಮಾತ್ರ ದಿಂದ ಸೃಷ್ಟಿಯಾಯಿತು; ಅದರ ಪತಾಕೆಗಳಿಂದ ಅಂತರಿಕ್ಷವೆಲ್ಲಾ ತುಂಬಿ ಹೋಯಿತು. ಮದಗಜವೊಂದರ ಮೇಲೆ ರಾಜದಂಪತಿಗಳು ಮಂಡಿಸಿ ಆ ಮಹಾ ಸೈನ್ಯಕ್ಕೆ ಹೊರಡಲು ಆಜ್ಞೆಮಾಡಿದರು. ಝುಂಝಾಮಾರುತನಿಂದ ಪ್ರೇರಿತವಾದ ಸಮುದ್ರದ ಪ್ರಚಂಡ ತರಂಗಸಂಘಾತಗಳಂತೆ, ರಥ, ಅಶ್ವ, ಗಜ, ಪದಾತಿಗಳಿಂದ ಕೂಡಿದ ಆ ಮಹಾಸೈನ್ಯವು ಸ್ವಲ್ಪ ಕಾಲದಲ್ಲಿಯೇ ಸ್ವರ್ಗದಂತೆ ಶೋಭಿತವಾದ ತಮ್ಮ ರಾಜಧಾನಿಗೆ ಬಂದು ಆ ರಾಜದಂಪತಿಗಳು ತಲ್ಪಿದರು. ತಮ್ಮ ಕೃತಕೃತ್ಯ ನಾದ ಮಹಾರಾಜನು ಚೂಡಾಲಾ ದೇವಿಯ ಸಹಿತ ಮಹಾಸೈನ್ಯ ಸಮೇತನಾಗಿ ಬಿಜಯಮಾಡಿರುವುದನ್ನು ತಿಳಿದು, ಸಾಮಂತ ರಾಜರೂ, ಮಂತ್ರಿ, ಸೇನಾಧಿಪತಿ ಮೊದಲಾದ ಅಧಿಕಾರಿಗಳೂ ಚತುರಂಗ ಸೈನ್ಯವೂ ನಾಗರಿಕರೂ ಪರಮಾನಂದದಿಂದ ಜಯಘೋಷ ಮಾಡುತ್ತಾ ನಗರದ ಹೊರಗೆ ಬಂದು ಮಹಾದರದಿಂದ ರಾಜದಂಪತಿ ಗಳಿಗೆ ಸ್ವಾಗತ ನೀಡಿದರು.

ಸಾಮಂತ ರಾಜರಿಗೂ, ಉನ್ನತ ಅಧಿಕಾರಿಗಳಿಗೂ ಸನ್ಮಾನಮಾಡಿ ಸಮಸ್ತ ಪ್ರಜೆಗಳ ಯೋಗಕ್ಷೇಮವನ್ನೂ ವಿಚಾರಿಸಿ, ರಾಜದಂಪತಿಗಳು ಎಲ್ಲರೊಡನೆ ನಗರ ವನ್ನು ಪ್ರವೇಶಮಾಡಿದರು. ನಗರದಲ್ಲಿ ಸ್ತ್ರೀಯರು ಅವರ ಮೇಲೆ ಲಾಜಾ ಪುಷ್ಪಾಂಜಲಿಗಳನ್ನು ವರ್ಷಣಮಾಡಿದರು. ಬಗೆಬಗೆಯಾದ ಅಲಂಕಾರಗಳಿಂದ

ಶೋಭಿತವಾದ ರಾಜವೀಧಿಗಳಲ್ಲಿ ನೃತ್ಯಗಾನಗಳ ಮಧ್ಯದಲ್ಲಿ ವಾದ್ಯಘೋಷ–ಜಯಘೋಷಗಳಿಂದ ರಾಜರಾಣಿಯರು ತಮ್ಮ ಭವ್ಯ ಮಂದಿರಕ್ಕೆ ಬಂದು ಸೇರಿದರು. ಅಲ್ಲಿ ತಮ್ಮ ಪ್ರಧಾನಾದಿಗಳಿಗೆ ಉಚಿತ ಸನ್ಮಾನ ಮಾಡಿದರು. ಏಳು ದಿನಗಳು ನಗರದಲ್ಲಿ ಉತ್ತಮವಾದ ಉತ್ಸವವನ್ನು ಮಾಡಿದರು.

ಮಹಾ ವಿವೇಕಿಯೂ ಸಮರ್ಥನೂ ಚತುರನೂ ಜ್ಞಾನಿಯೂ ಆದ ರಾಜನು ಹೃತ್ಪೂರ್ವಕವಾದ ಪ್ರಜಾವಾತ್ಸಲ್ಯದಿಂದ ತನ್ನ ಪ್ರಜಾಕೋಟಿಯ ಸರ್ವತೋಮುಖವಾದ ಅಭ್ಯುದಯವನ್ನು ಅನೇಕ ಬಗೆಯಿಂದ ಸಾಧಿಸುತ್ತಾ ಬಹು ಕಾಲ ರಾಜ್ಯಭಾರ ಮಾಡಿದನು. ಯಾವ ವ್ಯವಹಾರದಲ್ಲಿಯೂ ಭೋಗದಲ್ಲಿಯೂ ಆ ರಾಜದಂಪತಿಗಳ ಬುದ್ಧಿಯು ವಿಷಯರಾಗರಹಿತವೂ ಸಮತೆಯುಳ್ಳದೂ ಆಗಿರುತ್ತಿದ್ದಿತು. ಅವರು ಪ್ರಾರಬ್ಧವಶದಿಂದ ಪ್ರಾಪ್ತವಾದ ಅನೇಕ ಭೋಗಗಳನ್ನು ಭೋಗಿಸಿದರೂ ವಾಸನಾ ಶೂನ್ಯವಾದ ಚಿತ್ತವುಳ್ಳವರಾದುದರಿಂದ ಇಲ್ಲಿ ಯಾವದನ್ನೂ ಅಂಟಿಸಿಕೊಳ್ಳದೆ, ಮುಂದೆ ಜನ್ಮಕ್ಕೂ ಕಾರಣವಾಗದೆ, ತಮ್ಮ ಆತ್ಮಸ್ವರೂಪದಲ್ಲಿ ಸೇರಿ, ತೈಲ ತೀರಿದ ದೀಪದಂತೆ, ದೇಹತ್ಯಾಗವನ್ನು ಮಾಡಿ ಮಹಾನಿರ್ವಾಣಪದವನ್ನು ಪಡೆದು ಅಮೃತಾತ್ಮರಾದರು.

ಭಕ್ತಶ್ರೇಷ್ಠರಾದ ಶ್ರೋತೃಮಹಾಶಯರೆ! ಮೊದಲೇ ಪೀಠಿಕಾಪ್ರಸಂಗದಲ್ಲಿ ಹೇಳಿರುವಂತೆ ಚೂಡಾಲಾ-ಶಿಖಿಧ್ವಜರ ಈ ಪುಣ್ಯಾಖ್ಯಾನವು ತ್ಯಾಗ, ತಪಸ್ಸು, ಯೋಗ, ಜ್ಞಾನ, ಇವುಗಳ ಸ್ವರೂಪವೇನೆಂಬುದನ್ನೂ ಈ ಸಾಧನಗಳಿಂದ ಯಾವ ವ್ಯಕ್ತಿಗಾದರೂ ಸದ್ಗುರುವಿನ ಉಪದೇಶಾನುಗ್ರಹಗಳಿಂದ ಭೂಮಾನಂದರೂಪವಾದ ಕೈವಲ್ಯಪ್ರಾಪ್ತಿಯು ಹೇಗಾಗುವದೆಂಬುದನ್ನೂ ಬೋಧಿಸುತ್ತದೆ. ಗೃಹಸ್ಥ ಜೀವನದಲ್ಲಿಯೇ ಧರ್ಮಾರ್ಥಕಾಮಗಳಿಗೆ ವಿರೋಧವಿಲ್ಲದಂತೆ ಪರಮಪುರುಷಾರ್ಥವಾದ ಮೋಕ್ಷವನ್ನೂ, ದಂಪತಿಗಳುಭಯರೂ ಹೇಗೆ ಸಾಧಿಸಬಹುದೆಂಬುದನ್ನೂ ಇದು ತಿಳಿಸುತ್ತದೆ. ಅಸಾಧಾರಣವಾದ ಯೋಗಸಿದ್ಧಿಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸದೆ, ಪರರ ಉದ್ಧಾರಕ್ಕಾಗಿ ಹೇಗೆ ವಿನಿಯೋಗಿಸಬಹುದೆಂಬುದನ್ನೂ ಈ ಕಥೆಯು ತೋರಿಸುತ್ತದೆ.

ಶಾಸ್ತ್ರಗಳನ್ನು ಹೆಚ್ಚಾಗಿ ಪುರುಷರೇ ಬರೆದಿರುವುದರಿಂದ, ಹಿಂದೂ ದೇಶದಲ್ಲಿ ಹೆಣ್ಣು ಯಾವಾಗಲೂ ಗಂಡಿನ ಗುಲಾಮಳಾಗಿಯೇ ನಡೆದುಕೊಳ್ಳಬೇಕೆಂಬ ನೀತಿಯನ್ನು ಪುರುಷರೇ ರೂಪಿಸಿದ್ದಾರೆಂಬ ಮಿಥ್ಯಾಪವಾದವನ್ನು ಈ ಪುಣ್ಯಪ್ರಸಂಗವು ಸ್ಪಷ್ಟವಾಗಿ ಕಳೆಯುತ್ತದೆ.

ಬ್ರಹ್ಮವಿದ್ಯಾ ಸಾಧನೆಯಿಂದ ತಾನೂ ಉದ್ಧಾರವಾಗಿ ಇನ್ನೊಬ್ಬರನ್ನೂ ಉದ್ಧಾರಮಾಡಬಹುದಾದ ಯೋಗ್ಯತೆಯೂ ತಾರಕಗುರುವಾಗುವ ಅರ್ಹತೆಯೂ ಗಂಡಿಗೇ ಗುತ್ತಿಗೆಯೆಂಬ ಅಪ್ರಬುದ್ಧರ ಕಲ್ಪನೆಯನ್ನು ಪ್ರಬುದ್ಧಳಾದ ಚೂಡಾಲೆಯ ಸಾತ್ತ್ವಿಕ ಸಾಹಸವು ಸುಳ್ಳುಮಾಡುತ್ತಿದೆ.

"ಜ್ಞಾನಾದೇವ ತು ಕೈವಲ್ಯಂ" ಜ್ಞಾನದಿಂದಲೇ ಕೈವಲ್ಯ ಅಥವಾ ಮೋಕ್ಷ ಎಂಬ ಪರಮ ಸತ್ಯಕ್ಕೆ ಹೆಣ್ಣು ಗಂಡೆಂಬ ಲಿಂಗಭೇದದ ಹಂಗಿಲ್ಲ ಎಂಬ ಬೆಳಕನ್ನೂ ಚೂಡಾಲೆಯ ಸಾಧನೆಯು ಲೋಕಕ್ಕೆಲ್ಲಾ ಚೆಲ್ಲುತ್ತದೆ.

ನಿತ್ಯವೂ ಸ್ವಲ್ಪ ಕಾಲವಾದರೂ ಜಪಧ್ಯಾನಗಳನ್ನು ಮಾಡುವ ಯೋಗ ಸಂಸ್ಕಾರವುಳ್ಳ ಹೆಂಡತಿಯರನ್ನು ಕಂಡ ಕೂಡಲೇ ಕೆಂಡವನ್ನು ಕಾರುವ ಮೂರ್ಖ ಗಂಡಂದಿರಿಗೆ ಕಣ್ಣನ್ನು ತೆರೆಸುವ ವಿವೇಕಾಂಜನವೇ ಇದಾಗಿದೆ.

ಅಧ್ಯಾತ್ಮ ಸಾಧನೆಯಲ್ಲಿ ಮುಂದುವರಿಯುತ್ತಿರುವ ಮಡದಿಯರನ್ನು ಕಂಡು ತಮ್ಮ ಸಂಸಾರಸುಖಕ್ಕೆ ಎಲ್ಲಿ ಹುಳು ಬಿಡಿದೀತೋ ಎಂದು ಕೊರಗಿ ಹಾರ್ಟ್ ಫೆಯಿಲ್ಯೂರ್ ಹೊಂದುವಂತಿರುವ ಗಂಡಂದಿರಿಗೆ ಇದೇ ಕಾಯಕಲ್ಪವಾಗಬಹುದು.

ಒಂದು ದೇಶದ ಸಂಸ್ಕೃತಿಯಲ್ಲಿಯೂ ನಾಗರೀಕತೆಯಲ್ಲಿಯೂ ಆ ಜನತೆಯು ಸ್ತ್ರೀತ್ವಕ್ಕೆ ಕೊಟ್ಟಿರುವ ಸ್ಥಾನಮಾನ ಗೌರವಗಳಿಂದಲೇ ಆ ಸಂಸ್ಕೃತಿ ನಾಗರಿಕತೆಗಳ ವಿಕಾಸದ ಅಥವಾ ಔನ್ನತ್ಯದ ತಾರತಮ್ಯಗಳನ್ನು ಅಳೆಯಬಹುದೆಂಬ ತತ್ತ್ವವನ್ನು ಲೋಕವೆಲ್ಲಾ ಒಪ್ಪುವುದಾದರೆ, ಆ ಪರಮಾವಧಿಯ ವಿಕಾಸದ ಕೀರ್ತಿಯೂ ಆ ಪರಮೋನ್ನತ ಗೌರೀಶಂಕರ ಪದವಿಯೂ ಭಾರತೀಯ ಸಂಸ್ಕೃತಿ–ನಾಗರಿಕತೆಗಳಿಗೇ ನಿರ್ವಿವಾದವಾಗಿ ಮೀಸಲಾಗಿವೆ ಎಂಬುದನ್ನು ಚೂಡಾಲೆಯ ಅಲೌಕಿಕ ಸಾಹಸ–ಸಾಮರ್ಥ್ಯಗಳೇ ಪ್ರಕಾಶಪಡಿಸುತ್ತವೆ. ಇದಕ್ಕೆ ನಿದರ್ಶನವಾಗಿ, ಜ್ಞಾನಿಯಾದ ಶಿಖಿಧ್ವಜನು ಕೃತಜ್ಞತಾಪೂರ್ಣನಾಗಿ ಪರಮಾದರದಿಂದ ಕೊನೆಯಲ್ಲಿ ಆಡಿರುವ ಮೆಚ್ಚಿನ ಮಾತುಗಳೇ ಸಾಕ್ಷಿಯಾಗಿವೆ.

ಶತಮಾನ-ಸಹಸ್ರಮಾನಗಳಿಂದಲೂ ಹಿಂದೂ ದೇಶದಲ್ಲಿ ಹೆಣ್ಣನ್ನು ತುಳಿದಿಡ ಬೇಕೆಂಬ ಮನೋಭಾವವೂ ಶಾಸ್ತ್ರಪದ್ಧತಿಯೂ ಸಮಾಜ ಸಂಪ್ರದಾಯವೂ ಬೆಳೆದು ಬಂದಿವೆ ಎಂಬ ದುರ್ವಿದಗ್ಧರ ದೋಷಾರೋಪಣೆಯು ನಿರಾಧಾರವೂ ಮತ್ಸರ ಪೀಡಿತವೂ ಆಗಿದೆ ಎಂಬುದಕ್ಕೆ ಚೂಡಾಲಾ ಮಾತೆಯ ದಿವ್ಯಚರಿತ್ರೆಯು ಹಗಲು ಬೆಳಕಾಗಿದೆ.

ಪಾಶ್ಚಾತ್ತ್ಯ ನಾಗರಿಕತೆಯ ಗುಣಗಳ ಕಾಂತಿಯಿಂದ ಕುರುಡಾದ ನಮ್ಮ ನಾರಿಯರು ಅದರ ದೋಷಗಳನ್ನೂ ಗುಣಗಳೆಂದು ಭ್ರಮಿಸಿ ಸ್ವೇಚ್ಛಾಚಾರಿಣಿಯ ರಾಗುವುದು ಆತ್ಮಘಾತುಕ ಮೂರ್ಖತನವೆಂದು ಧರ್ಮಚಾರಿಣಿಯಾದ ಚೂಡಾಲೆಯು ಬೋಧಿಸುತ್ತಾಳೆ.

ಪುರುಷರಿಗೆ ತಾನು ಸರಿಸಮಾನಳೆಂದೂ ಅಥವಾ ಶ್ರೇಷ್ಠಳೇ ಎಂದೂ ಅಹಂಕಾರ ದಿಂದ ಮೆರೆಯಬೇಕೆಂಬ ಮಹಿಳೆಗೆ, ರಾಜಸ-ತಾಮಸ ತೇಜಸ್ಸುಗಳ ದುರಹಂಕಾರ-ದರ್ಪಗಳಿಗಿಂತಲೂ ಸಾತ್ತ್ವಿಕ ತೇಜಸ್ಸಿನ ಸೌಜನ್ಯವೇ ಪುರುಷರ ಹೃದಯದ ಮೇಲೆ ಪ್ರೇಮದಿಂದ ಪ್ರಭುತ್ವ ನಡೆಸುವುದಕ್ಕೆ, ಹೆಚ್ಚು ಪ್ರಭಾವಶಾಲಿಯಾದುದೆಂದು, ತಾನು ಸಾಮ್ರಾಜ್ಞಿಯಾದರೂ ವಿನಯಗುಣಚೂಡಾಮಣಿಯಾದ ಚೂಡಾಲೆಯು ಪ್ರೇಮ ದಿಂದ ಪಾಠ ಕಲಿಸುತ್ತಾಳೆ.

ಆಧುನಿಕವಾದ ಸ್ವಾತಂತ್ರ್ಯಯುಗದಲ್ಲಿ, ಪುರುಷರಿಗೆ ಸರಿಸಮಾನವಾದ ಹಕ್ಕು ಬಾಧ್ಯತೆಗಳೂ ಸ್ಥಾನಮಾನಗಳೂ—ಸಾಮಾಜಿಕ, ಆರ್ಥಿಕ, ರಾಜಕೀಯ, ಅಂತರ ರಾಷ್ಟ್ರೀಯ ಸರ್ವಕ್ಷೇತ್ರಗಳಲ್ಲಿಯೂ—ತಮಗೆ ಸಲ್ಲಬೇಕೆಂದೂ ತಾವು ಸರ್ವಸ್ವತಂತ್ರ ರೆಂದೂ ಸೆಣಸಾಡುವ ಸ್ತ್ರೀ ಸುಧಾರಕಿಯರಿಗೆ ಮಮತೆಯಿಂದ ಚೂಡಾಲಾಮಾತೆಯು ಗಲ್ಲವನ್ನು ಹಿಡಿದು ಮುದ್ದಿಸಿ, ಅವರಾ ಶ್ಲಾಘ್ಯವಾದ ಆಶಾ ಆಕಾಂಕ್ಷೆಗಳು ಅವರವರ ನಿಜವಾದ ಅರ್ಹತೆಯನ್ನೂ ಯೋಗ್ಯತೆಯನ್ನೂ ಸಾಮರ್ಥ್ಯವನ್ನೂ ಅವಲಂಬಿಸಿ, ಭಾರತೀಯ ಶ್ರೇಷ್ಠ ಆದರ್ಶವಾದ ಸತೀತ್ವದ ನೀತಿ ಧರ್ಮಗಳಿಗೆ ಅಂಕಿತವಾಗಿ ಜಯ ಭೇರಿ ಹೊಡೆಯಲಿ,—ಎಂದು, ಸ್ವತಃ ದಕ್ಷತೆಯಿಂದಲೂ ಚಾಣಾಕ್ಷತೆಯಿಂದಲೂ ರಾಜ್ಯಭಾರವನ್ನು ನಡೆಸಿದ ಸಾಮ್ರಾಜ್ಞೀ ಚೂಡಾಲೆಯು ಆಶೀರ್ವದಿಸುತ್ತಾಳೆ.

ಹಕ್ಕುಬಾಧ್ಯತೆಗಳಿಗಾಗಿ ಹೋರಾಡತಕ್ಕವರು ಮೊದಲು ತಮ್ಮ ತಮ್ಮ ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಮುಂತಾದ ಲೌಕಿಕವಾದ ಕರ್ತವ್ಯ ಕರ್ಮ ಗಳನ್ನೂ ಪಾರಮಾರ್ಥಿಕ ಧರ್ಮವನ್ನೂ ಪರ್ಯಾಲೋಚಿಸಿ, ಅವುಗಳನ್ನು ಶ್ರದ್ಧೆ ಯಿಂದ ಸಾಧಿಸಿ ಆತ್ಮಕಲ್ಯಾಣವನ್ನೂ ಲೋಕಕಲ್ಯಾಣವನ್ನೂ ಸಂಪಾದಿಸಬೇಕೆಂದು ಈ ಇತಿಹಾಸವು ಪ್ರೇರಿಸುತ್ತದೆ.

ಗಂಡುಬೀರಿಯರಂತೆ ಸಮವಸ್ತ್ರವನ್ನು ಧರಿಸಿ ಪೋಲೀಸ್ ಪ್ಯಾಡೆಗಳಾಗಿ, ರಾಜಮಾರ್ಗಗಳಲ್ಲಿ ಸಾರಿಗೆ ವ್ಯವಸ್ಥೆಗಳನ್ನು ನಿರ್ದೇಶಮಾಡುತ್ತಲೋ (ಅಂದರೆ, ಟ್ರಾಫಿಕ್ ಕಂಟ್ರೋಲ್ ಮಾಡುತ್ತಲೋ) ಮಿಲಿಟರಿಯಲ್ಲಿ ಸೈನಿಕರಾಗಿ ಸೇರಿಯೋ

ಮೆರೆಯಬೇಕೆಂಬ ಪ್ರಮದೆಯರಿಗೆ, ವೀರಪತ್ನಿಯರಾಗಿಯೂ ವೀರಮಾತೆಯರಾಗಿಯೂ ರಾಷ್ಟ್ರದಿಂದ ಪೂಜೆಗೊಳ್ಳುವ ಸೌಭಾಗ್ಯವು ಭಾರತೀಯ ಆರ್ಯ ಗೃಹಿಣಿಯರಿಗೆ ಪ್ರೇಮಳ ಕುಟುಂಬ ಜೀವನದ ಕೋಮಲ ಸ್ವಭಾವದಲ್ಲಿಯೇ ಅಡಗಿದೆಯೆಂಬುದನ್ನು ನಯಶೀಲೆಯಾದ ಚೂಡಾಲೆಯ ಚರಿತ್ರೆಯು ಸಾರಿ ಹೇಳುತ್ತದೆ.

ತನ್ನ ಪತಿಯು ಮೋಹವಶನಾಗಿ ತಪ್ಪುದಾರಿಯಲ್ಲಿಯೇ ಇದ್ದರೂ ಸಾಧ್ವಿಯಾದ ಪತ್ನಿಯು ಅವನಲ್ಲಿ ಗೌರವಭಾವವನ್ನು ಬಿಡದೆ, ವಿನಯಪೂರ್ಣವಾದ ಉಪಾಯಗಳಿಂದ ಹೇಗೆ ಅವನಿಗೆ ಸರಿಯಾದ ತಿಳಿವಳಿಕೆಯನ್ನು ನೀಡಿ, ಬೆಳಕನ್ನಿತ್ತು, ಪ್ರಬುದ್ಧನಾದ ಪತಿಯ ಆದರ–ಗೌರವಗಳಿಗೆ ತಾನು ಪಾತ್ರಳಾಗಬಹುದೆಂಬುದನ್ನು ಚೂಡಾಲಾ ವೃತ್ತಾಂತವು ಬಿತ್ತರಿಸುತ್ತದೆ.

ಪ್ರಪಂಚದಲ್ಲಿ ಹೇಗೋ ಹಾಗೆ ಪರಮಾರ್ಥದಲ್ಲಿಯೂ ಸತಿಗೆ ಪತಿಯೂ, ಪತಿಗೆ ಸತಿಯೂ ಸದ್ಗತಿದಾತರಾಗಬಹುದೆಂಬುದನ್ನೂ ಪ್ರಪಂಚ ಸುಖದಲ್ಲಿ ಆಗುವಂತೆ ಪರಮಾರ್ಥ ಸುಖದಲ್ಲಿಯೂ ಸತಿಪತಿಗಳು ಸಮಭಾಗಿಗಳಾಗಬಲ್ಲರೆಂಬುದನ್ನೂ ಈ ದಿವ್ಯ ದಂಪತಿಗಳ ಐತಿಹ್ಯವು ವ್ಯಕ್ತಪಡಿಸುತ್ತದೆ.

ಅಗ್ನಿಸಾಕ್ಷಿಯಾಗಿ ವಿವಾಹವಾಗುವ ಪತಿಯು "ಧರ್ಮೇ ಚ ಅರ್ಥೇ ಚ, ಕಾಮೇ ಚ, ನಾತಿ ಚರಾಮಿ" "ಧರ್ಮಾರ್ಥಕಾಮಗಳಲ್ಲಿ ನಿನ್ನನ್ನು ಮೀರಿ ನಡೆಯುವುದಿಲ್ಲ" ಎಂದು ತನ್ನ ಪತ್ನಿಗೆ ಪ್ರತಿಜ್ಞಾಪೂರ್ವಕವಾದ ವಚನ ಕೊಡುವುದರಿಂದ, ಪ್ರವೃತ್ತಿಧರ್ಮದಲ್ಲಿ ಆಕೆಗೆ ಸಮಾನಾಧಿಕಾರವನ್ನು ಒಪ್ಪಿಕೊಂಡಂತೆ ಆಗುತ್ತದೆ. ಆದರೆ ವೈರಾಗ್ಯ ಪ್ರಧಾನವಾದ ನಿವೃತ್ತಿ ಮಾರ್ಗದಲ್ಲಿ ಸರ್ವಕರ್ಮ ಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯೇ (ನಾಲ್ಕನೆಯ ಪರಮಪುರುಷಾರ್ಥವಾದ) ಮೋಕ್ಷಕ್ಕೆ ಸಾಧನವಾಗುವುದರಿಂದ ಪತಿಯು ಪತ್ನಿಗೆ ಸಾಮಾನ್ಯವಾಗಿ ಯಾವ ಆಶ್ವಾಸನೆಯನ್ನೂ ಕೊಡಲಾರ. ಏಕೆಂದರೆ, ಧರ್ಮಾರ್ಥಕಾಮಗಳ ಸಾಧನೆಗೆ ಎಲ್ಲರಿಗೂ ಅಧಿಕಾರವಿರುವಂತೆ ಮೋಕ್ಷಕ್ಕೆ ಇರುವುದಿಲ್ಲ. ಮೋಕ್ಷಮಾರ್ಗದಲ್ಲಿ ವಿಶಿಷ್ಟವಾದ ಅಧ್ಯಾತ್ಮ ಸಂಸ್ಕಾರವೂ ವಿರಕ್ತಿಯೂ ಮುಮುಕ್ಷುತ್ವವೂ ಅವಶ್ಯವಾಗಿವೆ. ಆದರೆ ಅನುಭಾವಿಯಾದ ಪತಿಯಾಗಲೀ ಪತ್ನಿಯಾಗಲೀ ಸಾಧನ ಸಂಪನ್ನತೆಯುಳ್ಳ ತನ್ನ ಸಹಧರ್ಮಿಗೆ ಗುರುವಾಗಿ, ಜೀವನ್ಮುಕ್ತಿ ಸಂಪಾದನೆಗೆ ಸಹಾಯಮಾಡುವ ಆಶ್ವಾಸನೆಯನ್ನೂ ನೀಡಬಹುದೆಂಬುದನ್ನು ಮಹಾತ್ಮಳಾದ ಚೂಡಾಲೆಯ ಉದಾರ ಚಾರಿತ್ರ್ಯವು ಪ್ರಕಟಿಸುತ್ತದೆ.

ಪ್ರಾಪಂಚಿಕವಾದ ಕ್ಷಣಿಕ ಸುಖವೇ "ಪ್ರೇಯಸ್ಸು" ಎನಿಸುತ್ತದೆ. ಪಾರಮಾರ್ಥಿಕವಾದ ಶಾಶ್ವತ ಸುಖವೇ "ಶ್ರೇಯಸ್ಸು" ಎನಿಸುತ್ತದೆ. ಪ್ರೇಯಸ್ಸಿಗಿಂತಲೂ ಶ್ರೇಯಸ್ಸು ಕೋಟಿ ಕೋಟಿ ಗುಣದಿಂದ ಶ್ರೇಷ್ಠವೆನ್ನುವುದು ಸ್ಪಷ್ಟವೇ ಇದೆ. ಆದ್ದರಿಂದ ಶ್ರೇಯೋರೂಪವಾದ ಭೂಮಾನಂದದ ಪ್ರಾಪ್ತಿಗಾಗಿ, ಪ್ರೇಯೋರೂಪವಾದ ಸಾಮ್ರಾಜ್ಯವನ್ನೂ ಸರ್ವಸ್ವವನ್ನೂ ತ್ಯಾಗಮಾಡಿದರೂ ಅಲ್ಪವೇ ಆಗಿದೆ. ಆದರೆ, ವಿಷಯವಾಸನಾತ್ಯಾಗವೂ ಅಹಂಕಾರತ್ಯಾಗವೂ ಪ್ರಪಂಚವು ಸತ್ಯವೆನ್ನುವ ಭ್ರಮೆಯ ತ್ಯಾಗವೂ ನಿಜವಾದ ತ್ಯಾಗವೆನಿಸುತ್ತದೆ. ತ್ಯಾಗವಿಲ್ಲದೆ ಯೋಗವಿಲ್ಲ; ಅಧ್ಯಾತ್ಮಯೋಗವಿಲ್ಲದೆ ಮೋಕ್ಷವಿಲ್ಲ. ಯೋಗವೆಂದರೆ ನಿರ್ವಿಕಲ್ಪ ಚಿನ್ಮಾತ್ರಸ್ವರೂಪದಲ್ಲಿ ನೆಲೆನಿಲ್ಲುವದೇ ಆಗಿದೆ. ಇದೇ ಗೀತೆಯಲ್ಲಿ ಭಗವಂತನು ಹೇಳಿರುವ "ನಿಷ್ಠಾ ಜ್ಞಾನಸ್ಯ ಯಾ ಪರಾ" ಜ್ಞಾನದ ಪರಾನಿಷ್ಠೆ. ಇದು ಶಾಸ್ತ್ರ-ಗುರುಗಳ ಉಪದೇಶದಿಂದಲೂ ಶಮದಮಾದಿ ಸಾಧನಗಳಿಂದಲೂ ಶ್ರವಣ ಮನನಾದಿಗಳಿಂದಲೂ ಈಶ್ವರಾನುಗ್ರಹದಿಂದಲೂ ಲಭ್ಯವಾದ ಮೇಲೆ ಆ ಯೋಗೀಶ್ವರನಿಗೆ ತ್ಯಾಗಭೋಗಗಳೂ ರಾಗವಿರಾಗಗಳೂ ಸುಖದುಃಖಗಳೂ ಸಮವಾಗಿ ತೋರುತ್ತವೆ. ಆಗ ಅವನು ಪ್ರಾರಬ್ಧವಶದಿಂದ ಪ್ರಾಪ್ತವಾದ ವ್ಯವಹಾರವನ್ನು ಲೋಕಾನುಗ್ರಹಾರ್ಥವಾಗಿ ಮಾಡುತ್ತಾ, ತೈಲ ತೀರಿದ ದೀಪದಂತೆ ಆಯುಸ್ಸು ತೀರಲು, ಮೊದಲೇ ಅನುಭವಕ್ಕೆ ಬಂದಿದ್ದ ಭೂಮಾನಂದದಲ್ಲಿ ಆ ಮಹಾತ್ಮನ ಪ್ರಶಾಂತವಾದ ಮನಸ್ಸು ವಿಲೀನವಾಗಿ ಹೋಗುವುದೇ ವಿದೇಹ ಕೈವಲ್ಯವೆನಿಸುತ್ತದೆ. ಹೀಗೆ ಪ್ರವೃತ್ತಿ-ನಿವೃತ್ತಿ ಧರ್ಮಗಳ ಅಥವಾ ಪ್ರಪಂಚ–ಪರಮಾರ್ಥಗಳ ಹಾಗೂ ತ್ಯಾಗ–ಭೋಗಗಳ ಸಮನ್ವಯವೇ ಈ ಅಪೂರ್ವವಾದ ಆಖ್ಯಾನದ ಮುಖ್ಯ ಉಪದೇಶವಾಗಿದೆ.

ಪುಣ್ಯಾತ್ಮರೂ, ಪೂರ್ಣಾತ್ಮರೂ, ಧನ್ಯಾತ್ಮರೂ, ಅಮೃತಾತ್ಮರೂ
ಆದ ಚೂಡಾಲಾ–ಶಿಖಿಧ್ವಜ ದಿವ್ಯದಂಪತಿಗಳು
ನಮ್ಮೆಲ್ಲರಿಗೂ ತ್ಯಾಗ–ಯೋಗಗಳನ್ನೂ
ಭೋಗ–ಮೋಕ್ಷಗಳನ್ನೂ
ಅನುಗ್ರಹಿಸಲಿ!

ಜೈ ಭಗವಾನ್! ಜೈ ಭಗವತೀ ಚೂಡಾಲಾ!
ಜೈ ಚಿಚ್ಛಕ್ತಿ ಸ್ವರೂಪಿಣೀ!!

(ಕಥಾಸೂತ್ರ)

ರಾಗ: ಹಮೀರ್ ತ್ರಿತಾಲ್

ಭೇರಿ ಹೊಡಿs ಮನವ ಜಯಿಸಿ ಜೈ ।
ಚಿತ್ತಚಾಂಚಲ್ಯ ನಿಗ್ರಹಕೆ—ಗುರುಬೋಧ ಶಮದಮಾದಿಯ
ಭಜಿಸು ನೀ ॥ ಧ್ರು ॥

ಮಂಗಳ

ರಾಗ : ಮಾರುವಾ ತಾಳ : ಝಂಪೆ

ಮಂಗಳವ ಜಗಕೆಲ್ಲ । ಮಂಗಳಾತ್ಮನೆ ನೀಡು ।
ತುಂಗ ಭೂಮಾನಂದ । ಭೃಂಗ ಯೋಗೀಂದ್ರ ಗುರೋ ॥ ಧ್ರು ॥

ಮಮತೆ ಮೋಹವ ದೂಡಿ । ಭ್ರಮೆಯ ನಿರಸನ ಮಾಡಿ ।
ಶಮದಮಾದಿಯ ಕೂಡಿ । ಸಮತೆಯನು ಕಾಪಾಡಿ ॥ ೧ ॥

ದುಷ್ಟರನು ಶಿಕ್ಷಿಸುತೆ । ಶಿಷ್ಟರನು ರಕ್ಷಿಸುತೆ ।
ಭ್ರಷ್ಟಕರ್ಮವ ಕಳೆದು । ಶ್ರೇಷ್ಠಧರ್ಮವ ಬೆಳಗಿ ॥ ೨ ॥

ಮಳೆಬೆಳೆ ಸಮೃದ್ಧಿಯನು । ಕೆಳೆತನದ ವೃದ್ಧಿಯನು ।
ಒಳಿತೆನಿಪ ಬುದ್ಧಿಯನು । ಗೆಲುವು ಶ್ರದ್ಧೆಯ ಬೀರಿ ॥ ೩ ॥

ಚೂಡಾಲೆಯೊಲು ಸತೀ । ಚೂಡಾ ಮನೀಷಿಯರೆ ।
ನಾಡಿನಲಿ ನಲಿದೊಲಿದು । ಮೂಡಿ ಬೆಳೆಯುವ ತೆರದೆ ॥ ೪ ॥

ಹುಸಿಯಿಂದೆ ನಿಜದೆಡೆಗೆ । ನಿಶಿಯಿಂದೆ ಬೆಳಕಿನೆಡೆ ।
ಮೃತಿಯಿಂದೆ ಅಮೃತದೆಡೆ । ಅತಿಶಯದಿ ನಡೆವಂತೆ ॥ ೫ ॥

ಸಿದ್ಧಾಂತ ಅವಧೂತ ಚಿಂತನ ಶ್ರೀ ಗುರುದೇವ ದತ್ತ !

ಓಂ ತತ್‌ಸತ್

ಬ್ರಹ್ಮಾರ್ಪಣಮಸ್ತು

ಸಂಸ್ಕೃತ ಭಾಷಾ ಭಾಗ